ಆಸ್ತಿಕ

(ಕಾದಂಬರಿ)

ಲೇಖಕರು :

ಶ್ರೀ. ಸಾನೆ ಗುರುಜಿ

೧೯೪೭

ಮಿಂಚಿನಬಳ್ಳಿ ಕಾರ್ಯಾಲಯ

ಧಾರವಾಡ

ಬೆಲೆ ೪-೮-೦

೧೪ ನೆಯ ವರ್ಷದ ೪ ನೆಯ ಕುಂಡಿ

ಆಸ್ತಿಕ

ಲೇಖಕ : ಸಾನೆ ಗುರೂಜಿ, ಎಂ. ಎ.

ಅನುವಾದಕ : ಸ್ವಾತಂತ್ರ್ಯಪ್ರಿಯ

೧೧-೭-೫೨

ಮಿಂಚಿನ ಬಳ್ಳಿ ಚಾವಡಿ, ಧಾರವಾಡ.

ಉತ್ತಮ ಪ್ರತಿ	ಸಾದಾ ಪ್ರತಿ
೪—೮—೦	೩—೮—೦

ಎರಡು ಮಾತುಗಳು

ಶ್ರೀ. ಸಾನೇ ಗುರೂಜಿಯವರು **ಶ್ಯಾಮುಚಿ ಆಯಿ** ಎಂಬ ಕಾದಂಬರಿಯನ್ನು ಬರೆದು ಕಾದಂಬರಿಕಾರರೆಂದು ಪ್ರಸಿದ್ಧರಾಗಿದ್ದಾರೆ. ಅವರ ಅನೇಕ ಪ್ರಸಿದ್ಧ ಕಾದಂಬರಿಗಳಲ್ಲಿ ' **ಆಸ್ತಿಕವೂ** ' ಒಂದು.

"ಈ ಭವ್ಯ ಭಾರತದಲ್ಲಿ ಸರ್ವಧರ್ಮಗಳು ಸಂಸ್ಕೃತಿಗಳು ಹಾಗೂ ಮಾನವ ಜನಾಂಗಗಳು ಒಂದೆಡೆಯಲ್ಲಿ ಸೇರಿ ಪ್ರೇಮದಿಂದಲೂ ಆನಂದದಿಂದಲೂ ಬಾಳಬೇಕು. ಇದರಿಂದ ಮಾನವ ಜನಾಂಗವು ಮುನ್ನಡೆಯಬೇಕು. ಎಂಬುದೇ ಪರಮಾತ್ಮನ ಸಂಕಲ್ಪ. ಸರ್ವ ಸಂಸ್ಕೃತಿಗಳ ಸಂಗಮದಿಂದುಂ-ಟಾದ ದಿವ್ಯವೂ ತೇಜಸ್ವಿಯೂ ಸುಂದರವೂ ಆದ ನವಭಾರತವನ್ನು ಜಗತ್ತಿಗೆ ತೋರಿಸುವದೇ ಪರಮಾತ್ಮನ ಪರಮೋದ್ದೇಶವು" ಎಂದು ಗುರೂಜಿಯವರಿಗೆ ಮೇಲಿಂದ ಮೇಲೆ ಅನಿಸಹತ್ತಿತ್ತು. ರಾಷ್ಟ್ರದಲ್ಲಿಯ ಹಿಂದೂ ಮುಸ್ಲೀಮ ಜಗಳಗಳೂ ಸಂಸ್ಕೃತಿಗಳ ತಿಕ್ಕಾಟವೂ ಈ ಮೇಲಿನ ಧ್ಯೇಯಕ್ಕೆ ಮತ್ತಿಷ್ಟು ಚಾಲನೆಯನ್ನು ಕೊಟ್ಟವು. ಈ ತತ್ವವನ್ನೇ ಹಿನ್ನೆಲೆಯನ್ನಾಗಿ ಇಟ್ಟು ಕೊಂಡ ಈ ಕಾದಂಬರಿಯನ್ನು ೧೯೩೩ ರಲ್ಲಿ ಬರೆದಿದ್ದಾರೆ. ಇದರ ಅನೇಕ ಆವೃತ್ತಿಗಳು ಈಗಾಗಲೇ ಮರಾಠಿಯಲ್ಲಿ ಆಗಿ ಹೋಗಿವೆ.

ಅವರು ಕಥೆಯನ್ನೇ ಬರೆಯಲಿ, ಕಾದಂಬರಿಯನ್ನೇ ಚಿತ್ರಿಸಲಿ, ಪ್ರಬಂಧವನ್ನೇ ಬರೆಯಲಿ ಎಲ್ಲದರಲ್ಲಿಯೂ ಮೂಡುವದು **ಸಜೀವ ಭಾರತದ** ಒಂದೇ ಚಿತ್ರ. ಈ ಶಕ್ತಿಯೇ ಅವರನ್ನು ವಿವಿಧ ರಂಗಗಳಲ್ಲಿ ಕುಣಿಯ ಹಚ್ಚಿದೆ.

ಈ ಕಾದಂಬರಿಯಲ್ಲಿ ಮುಖ್ಯ ಪಾತ್ರವಾದ ಆಸ್ತಿಕರ ಕನಸು ನನಸಾಗುವ ಒಂದು ದಿನವು ಭಾರತದ ಭವಿಷ್ಯತ್ತಿನಲ್ಲಿದೆ ಎಂದು, ಅವರ ದೃಢವಾದ ಶ್ರದ್ಧೆಯಿದೆ.


ಇದರಲ್ಲಿ ಭಾಷೆಯ ದೋಷಗಳು ಏನಾದರೂ ಇದ್ದರೆ, ಅವು ಅನುವಾದಕರವು, ಎಂಬುದನ್ನು ವಾಚಕರು ಗಮನಿಸಬೇಕಾಗಿ ಬಿನ್ನಹ.

ಕನ್ನಡ ಜನಾಂಗವು ಅವರ ಆದರ್ಶವನ್ನು ತಿಳಿದುಕೊಂಡು ಯೋಗ್ಯವಿದ್ದುದನ್ನೆಲ್ಲ ಸ್ವೀಕರಿಸಬೇಕಾಗಿ ಬಿನ್ನಹ.

ತಮ್ಮ

ತಾರೀಖು : ೧೧-೬-೫೨.

ಬುರ್ಲಿ ಬಿಂದು ಮಾಧವ



ಶ್ರೀ: ಸಾನೆ ಗುರೂಜಿಯವರು

ಆಸ್ತಿಕ

೧

ಭಗವಾನ್ ನಾರಾಯಣನು ಧ್ಯಾನಮಗ್ನನಾಗಿದ್ದಾನೆ. ವಿಶ್ವ ವಿಕಾಸದ ವಿಚಾರದಲ್ಲಿ ತನ್ಮಯನಾಗಿದ್ದಾನೆ. ಪ್ರಯೋಗಪಟುವು ಅಕಸ್ಮಾತ್ತಾಗಿ ಬಂದು, "ದೇವದೇವಾ! ಪ್ರಯೋಗವು ಮುಕ್ತಾಯವಾಗುವ ಮೊದಲೇ ಅದೆಲ್ಲಿ ಕುಸಿದು ಬೀಳುವದೋ ಎಂದು ಭೀತಿಯು ಬರುತ್ತಿದೆ. ಎಂದು ಎಚ್ಚರಿಸಿದನು. ದೇವಾ! ಮೊದ ಮೊದಲು ಯಾವ ಧ್ಯೇಯದ ಸಲುವಾಗಿ ಈ ಭಾರತವನ್ನು ನೀನು ನಿರ್ಮಿಸಿದೆಯೋ, ಆ ಧ್ಯೇಯವು ಅಂಕುರಿಸಿ, ಬೇರು ಬಿಟ್ಟು ಭರದಿಂದ ಬೆಳೆಯುವದೆಂದು ನಾನು ನಂಬುತ್ತಲಿದ್ದೆ. ಈ ದೇಶದ ನಿರ್ಮಿತಿಗಾಗಿ, ಸಕಲ ಸೌಂದರ್ಯವನ್ನು ಎರಕ ಹೊಯ್ದಿರುವಿ! ಭಾರತದಲ್ಲೆಲ್ಲ, ಅನಂತತೆಯನ್ನು ಪಸರಿಸಿರುವಿ. ಶಿರೋಭಾಗದಲ್ಲಿ ಗಗನಭೇದಿಯಾದ ಹಿಮಧವಲ ರಾಜನು ನಿಂತಿದ್ದಾನೆ. ಉಳಿದ ಮೂರೂ ದಿಕ್ಕುಗಳಲ್ಲಿ ನಿನ್ನ ಕೀರ್ತಿಯನ್ನು ಘೋಷಿಸುವ, ಸರ್ವ ಪ್ರವಾಹಗಳನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳುವ, ಸರ್ವ ಪ್ರಾಣಿಗಳಿಗೂ ಆಶ್ರಯವನ್ನೀಯುವ, ರತ್ನಾಕರನು ಪಸರಿಸಿದ್ದಾನೆ. ಕಾಲ ಕೆಳಕ್ಕೂ ಬಾಹುಗಳ ಮಗ್ಗಲಿಗೂ ವಿಶಾಲ ಹೃದಯನಾದ ಸಮುದ್ರನಾಥನು. ಶಿರೋಭಾಗದಲ್ಲಿ ನಾಗಾಧಿರಾಜನಾದ ಹಿಮವತ್-ಪರ್ವತನು! ಕೈ ಕಾಲುಗಳು ನಾನಾಪ್ರಕಾರದ ಉದ್ಯೋಗಗಳಲ್ಲಿ ಶ್ರಮಿಸಲಿ, ಪ್ರಯತ್ನಿಸಲಿ, ಪ್ರಯೋಗವನ್ನು ಮಾಡಲಿ, ಎಂದಪೇಕ್ಷೆ ನಿನಗೆ. ಈ ಪ್ರಯೋಗಗಳ ಧೋರಣವೂ ನಿಶ್ಚಿತವಾಗಿರಲಿ, ತಲೆಯಲ್ಲಿ ಒಂದೇ

ವಿಚಾರವಿರಲಿ, ಚಂಚಲತೆಯು ಸೋಂಕದಿರಲಿ, ಒಂದೇ ಧ್ಯೇಯದತ್ತ ಎಲ್ಲ ಉದ್ದೇಶಗಳು ಬೆಳೆಯಲಿ, ಎಂಬುದನ್ನು ಭಾರತೀಯರಿಗೆ ಕಲಿಸುವದಕ್ಕಾಗಿಯೇ ಈ ಎರಡು ಮಹಾನ್ ಶಕ್ತಿಗಳನ್ನು ಭಾರತಕ್ಕೆ ದಯಪಾಲಿಸಿರುವೆ. ದೇವಾಧಿ ದೇವಾ! ಈ ದೇಶ ನಿರ್ಮಿಸುವಾಗ ಸರ್ವ ಕುಶಲತೆಯನ್ನೂ ಸೌಂದರ್ಯವನ್ನೂ ಉಪಯೋಗಿಸಿರುವಿ. ಎಲ್ಲ ಬಗೆಯ ಹವೆಗಳೂ ಈ ಪ್ರದೇಶದಲ್ಲಿ ಬೀಸುತ್ತಲಿವೆ. ಸರ್ವ ಪ್ರಕಾರದ ವನಸ್ಪತಿಗಳಿಗೂ ಇಲ್ಲಿ ಜನ್ಮವನ್ನಿತ್ತಿರುವೆ. ಅನಂತ ಪ್ರಕಾರದ ಫಲ ಪುಷ್ಪಗಳಿಗೆ, ತವರುಮನೆ ಈ ದೇಶ. ಚಿತ್ರ ವಿಚಿತ್ರವಾದ ಬಣ್ಣಗಳ ಪಶು ಪಕ್ಷಿಗಳ ವಿಹಾರ ಸ್ಥಾನವಿದು. ಪ್ರಾತಃಕಾಲ, ವಿಶೇಷತಃ ಸಾಯಂಕಾಲದ ನೀಲಾಕಾಶದಲ್ಲಿ ಅನಂತ ಬಣ್ಣಗಳ ಸೊಬಗು ರಾರಾಜಿಸುತ್ತದೆ. ಸೂರ್ಯ ಚಂದ್ರರ ಸ್ವಚ್ಛವಾದ ಪ್ರಕಾಶವನ್ನು ಈ ಪುಣ್ಯ ಭೂಮಿಗೆ ಇತ್ತಿರುವೆ. ಮಂಜು ಮುಸುಕಿದ ವಾತಾವರಣವನ್ನು ಯಾವಾಗಾದರೊಮ್ಮೆ ನಿರ್ಮಿಸುವೆ. ಎಷ್ಟೆಂದು ಹೇಳಲಿ, ಈ ಸೊಬಗನ್ನು. ದೇವಾ, ಇಲ್ಲಿಯ ಈ ವಿವಿಧತೆ ಹಾಗೂ ಸ್ವಚ್ಛತೆಯನ್ನು ನಿರ್ಮಿಸುವಲ್ಲಿ ನಿನ್ನ ಪವಿತ್ರವಾದ ಒಂದು ಉದ್ದೇಶವಿದೆ.

ಪ್ರಭುವೇ! ಮಾನವ ಜನಾಂಗವನ್ನು ನಿರ್ಮಿಸಿ, ದಶದಿಕ್ಕುಗಳಲ್ಲಿ ಹಬ್ಬಿಸಿದೆ. ಭಿನ್ನ ಭಿನ್ನ ಸ್ಥಳಗಳಲ್ಲಿ ಭಿನ್ನ ಭಿನ್ನ ರೀತಿಯಿಂದ, ಅವುಗಳನ್ನು ಬೆಳೆಯಿಸಿದೆ. ಅವೆಲ್ಲವುಗಳನ್ನು ಒಂದೆಡೆಯಲ್ಲಿ ನೋಡಬೇಕೆಂಬುದೇ ನಿನ್ನ ಇಚ್ಛೆಯಲ್ಲವೇ! ಬಗೆ ಬಗೆಯ ಹೂಗಳಿಂದ ಹೆಣೆದ ಹಾರವು ಸುಂದರ ಕಾಣುವದಿಲ್ಲವೇ! ಹಾಗೆಯೇ, ಭಿನ್ನ ಭಿನ್ನ ದೇಶಗಳಲ್ಲಿ ಭಿನ್ನ ಭಿನ್ನ ಪರಿಸ್ಥಿತಿಯಲ್ಲಿ ಬೆಳೆದ ಮಾನವ ಪ್ರವಾಹಗಳನ್ನು ಒಂದೆಡೆಯಲ್ಲಿ ತಂದು ಅವುಗಳ ಸುಮಧುರವಾದ ಐಕ್ಯದ ಸೌಂದರ್ಯವನ್ನು ನೋಡಬೇಕೆಂಬುದೇ ನಿನ್ನ ಉದ್ದೇಶ. ಈ ಪ್ರಯೋಗವನ್ನು ಯಾವ ಸ್ಥಳದಲ್ಲಿ ಮಾಡಬೇಕೆಂದು ನಿನ್ನ ಇಚ್ಛೆಯೋ ಆ ಸ್ಥಳವನ್ನು ಅನುಪಮ ರೀತಿಯಿಂದ ಮೊದಲೇ ಸಜ್ಜುಗೊಳಿಸಿರುವಿ. ಸರ್ವ ಪ್ರಕಾರದ ವೈವಿಧ್ಯದಿಂದ ಸುಶೋಭಿಸುವ ಈ ಭಾರತವೇ ಆ ರಂಗಭೂಮಿಯೆಂದು ನೀನು ನಿಶ್ಚಯಿಸಿರುವಿ.

ಪ್ರಭೋ! ರಂಗಭೂಮಿಯನ್ನು ನಿರ್ಮಿಸಿ, "ಪ್ರಯೋಗವನ್ನು ಪ್ರಾರಂಭಿಸು! ಪ್ರಯೋಗವು ಕೊನೆಯ ಮುಟ್ಟಕ್ಕೆ ಎಂದು ಮುಟ್ಟುವದೋ

ಆಗ ಮಹಾನ್ ದೃಶ್ಯವನ್ನು ನೋಡಲು ನನ್ನನ್ನು ಎಬ್ಬಿಸು!" ಎಂದು ಆಜ್ಞಾಪಿಸಿದಿ. ಅನಂತದ ಚಿಂತನೆಯಲ್ಲಿಯೂ, ಮನನ ದಲ್ಲಿಯೂ, ಪುನಃ ಮಗ್ನನಾದಿ.

ಆದರೆ, ದೇವದೇವಾ! ಪ್ರಯೋಗವು ಯಶಸ್ವಿಯಾಗುತ್ತ ನಡೆಯಿತು. ಬೀಜಕ್ಕೆ ಅಂಕುರ ಒಡೆಯಹತ್ತಿತು. ಕಾಲಾಂತರದಲ್ಲಿ ಈ ಬೀಜವೇ ಮಹಾನ್ ವೈಭವಶಾಲಿ ವೃಕ್ಷವಾಗುವದೆಂಬ ಸವಿಗನಸುಗಳನ್ನು ನಾನು ಹಾಗೂ ನನ್ನ ಸಹಕಾರಿಗಳು ಕಾಣಹತ್ತಿದೆವು. ಆದರೆ, ಒಂದು ದೊಡ್ಡ ವಿಪತ್ತು ಬರುತ್ತಲಿದೆ. ಈ ದೇಶದಲ್ಲಿ ಆರ್ಯ ಹಾಗೂ ನಾಗರನ್ನು ಒಂದೆಡೆ ತರಲಾಯಿತು. ಇಲ್ಲಿಯ ನಾಗ ಜಾತಿಯ ಮಾನವ ಪ್ರವಾಹದಲ್ಲಿ, ಪ್ರಬಲ ವಾದ ಆರ್ಯ ಜಾತಿಯ ಪ್ರವಾಹವು ಬಂದಪ್ಪಳಿಸಿತು. ಮೊದ ಮೊದಲು ಭಯಂಕರವಾದ ವಿರೋಧವು, ಉಂಟಾಯಿತು. ಒಂದನ್ನೊಂದು ಎದುರಿಸ ಹತ್ತಿದವು. ಎರಡೂ ಪ್ರವಾಹಗಳು ಕೂಡಲೊಲ್ಲವು. ಆದರೆ ಈ ವಿರೋಧದ ಸ್ಥಿತಿಯಲ್ಲಿಯೂ ಆಶೆಯು ಕಾಣುತ್ತಿದ್ದಿತು. ಈ ಮಹಾಪೂರದ ಕಲಕು ಕೆಳಕ್ಕೆ ಕೂಡಹತ್ತಿತು. ದೊಡ್ಡ ದೊಡ್ಡ ಜನರು ಹೋರಾಡುತ್ತಿದ್ದರೂ ಸಾಮಾನ್ಯ ಜನರು, ಒಬ್ಬರನ್ನೊಬ್ಬರು ಪ್ರೇಮದಿಂದ ಆಲಿಂಗಿಸುತ್ತಿದ್ದರು. ಒಬ್ಬರ ಸಂಗಡೊಬ್ಬರು ಜಗಳಾಡುತ್ತಿದ್ದರೂ ಕೂಡ ಪ್ರೇಮ ಸಂಬಂಧವು ಬೆಳೆಯ ಹತ್ತಿತು. ಆದರೆ, ದೇವಾ! ಈಗ ಎಲ್ಲ ಕಡೆಗೂ ಕ್ಷುದ್ರ ಮನೋವೃತ್ತಿಯೇ ಕಾಣಹತ್ತಿದೆ. ಈ ಮಹಾನ್ ವಿಭೂತಿಗಳು ಅಸ್ತಂಗತರಾಗಹತ್ತಿದ್ದಾರೆ. ಎಲ್ಲೆಡೆಯಲ್ಲಿ ಹುಡುಗಾಟಿಕೆ ನಡೆದಿದೆ. ಉದಾತ್ತ ಭಾವನೆಯೂ ಕೂಡ ಯಾರಿಗೆ ಸೋಂಕಿಲ್ಲವೋ ಅಂತಹ ಕ್ಷುದ್ರವ್ಯಕ್ತಿಗಳೇ ಈಗ ಭಾರತದಲ್ಲಿ ಕಾಣ ಹತ್ತಿದ್ದಾರೆ.

ಆಕಾಶದಲ್ಲಿಯ ಎತ್ತರದ ಮೇಲಿನ ಸ್ವಚ್ಛ ಹಾಗೂ ನಿರ್ಮಲವಾದ ಹವೆಯನ್ನು ಕ್ಷುದ್ರ ಪಕ್ಷಿಗಳು ಅಪೇಕ್ಷಿಸದೆ ಧೂಳಿನಿಂದ ತುಂಬಿದ ಹವೆಯಲ್ಲಿಯೇ, ಆನಂದ ಪಡುವಂತೆ, ಇಂದು ಭಾರತೀಯರಿಗೆ, ಉಚ್ಚ, ಉದಾತ್ತ ಧ್ಯೇಯವಾದವು ರುಚಿಸದಾಗಿದೆ. ಧ್ಯೇಯವಾದವು ಇಂದು ಚೇಷ್ಟೆಯ ವಿಷಯ ವಾಗಿದೆ. ಭೇದ ಭಾವದಲ್ಲಿಯೇ ಆನಂದಿತರಾಗಹತ್ತಿದ್ದಾರೆ. ಆರ್ಯ ಹಾಗೂ ನಾಗ ಜಾತಿಯ ತರುಣರು ಅಲ್ಲಲ್ಲಿ ಒಬ್ಬರನ್ನೊಬ್ಬರು ಸಮೂಲ ನಾಶ

ಮಾಡುವ ಸಂಕಲ್ಪದಿಂದ ಸಂಘಟಿತರಾಗಹತ್ತಿದ್ದಾರೆ. ಆಯಾ ಜಾತಿಗಳಲ್ಲಿಯ ಋಷಿಗಳೂ ಕೂಡ ದ್ವೇಷಧರ್ಮದ ಪುರಸ್ಕರ್ತರಾಗಹತ್ತಿದ್ದಾರೆ. ಯಾರು ಮಾರ್ಗದರ್ಶನ ಮಾಡಬೇಕೋ ಯಾರು ಧ್ಯೇಯದತ್ತ ಜನಾಂಗವನ್ನು ತಿರುಗಿಸಬೇಕೋ ಅವರೇ ಸ್ಖಲಿತ ಮತಿಗಳೂ ಧ್ಯೇಯಚ್ಯುತರೂ ಆಗಿದ್ದಾರೆ. ಇಂದಮೇಲೆ, ದೇವಾ! ಮುಂದೇನು ಗತಿ? ಈ ದ್ವೇಷಾಗ್ನಿಯು ಒಮ್ಮೆ ಹೊತ್ತಿತೆಂದರೆ, ಎಂತಹ ಅನರ್ಥವು ಸಂಭವಿಸುವದೋ ಏನೋ? ನಮ್ಮ ಆಶೆಯು ನಿರಾಶೆಯಾಗುವದು. ನಮ್ಮ ಪ್ರಯೋಗವು ಹಾಳಾಗುವದು: ಎರಡು ಮಾನವ ಜನಾಂಗಗಳು ಒಂದೆಡೆ ಸುಖದಿಂದ ಬಾಳಲು ಬರದಿದ್ದರೆ, ನೂರಾರು ಜನಾಂಗಗಳು ಒಂದೆಡೆಯಲ್ಲಿ ವಾಸಿಸುವದೆಂತು?

ಪ್ರಭೋ! "ಈ ಪವಿತ್ರ ಪ್ರಯೋಗದತ್ತ ಲಕ್ಷ್ಯವನ್ನೀಯಲು ನೀನು ಆಜ್ಞಾಪಿಸಿದೆ. ನಾನು ಬಹಳ ಎಚ್ಚರಿಕೆಯಿಂದ ಪ್ರಯೋಗವನ್ನು ಪ್ರಾರಂಭಿಸಿದೆ. ಆದರೆ ಧೈರ್ಯವು ಸಾಲಲೊಲ್ಲದು. ಆದುದರಿಂದಲೇ ನಿನ್ನನ್ನು ಎಬ್ಬಿಸಿರುವೆ. ದೇವಾ ಕ್ಷಮಿಸು. ಮುಂದೆ ಹೇಗೆ ಸಾಗಬೇಕೆಂಬದನ್ನು ನನಗೆ ಹೇಳು."

ಪ್ರಯೋಗಪತಿಯ ಮಾತುಗಳನ್ನು ಶಾಂತ ರೀತಿಯಿಂದ ಪ್ರಭುವು ಕೇಳಿದನು. ಅವನನ್ನು ಹತ್ತಿರ ಕರೆದು ಪ್ರಸನ್ನದೃಷ್ಟಿಯಿಂದ ಆತನ ಕಡೆಗೆ ನೋಡಿದನು. ಮಂಗಲಕರವಾದ ತನ್ನ ಹಸ್ತಗಳನ್ನು ಆತನ ಬೆನ್ನಮೇಲೆ ಆಡಿಸಿದನು. ತಲೆಯ ಮೇಲೆ ವರದ ಹಸ್ತವನ್ನಿಟ್ಟನು. ಪ್ರಭುವಿನ ಹಸ್ತಸ್ಪರ್ಶದಿಂದ ಪ್ರಯೋಗಪತಿಯ ನಿರಾಶೆಯು ಆಶೆಯಾಗಿ ಪರಿಣಮಿಸಿತು. ಸೂರ್ಯೋದಯವಾದೊಡನೆ ಮಂಜು ಉಳಿಯುವದೇ?

ಆಗ ದೇವ ದೇವನು "ವತ್ಸಾ ಅಂಜಬೇಡ, ನೀನು ಪ್ರಯೋಗವನ್ನು ಮುಂದರಿಸು. ಯಾವ ಕ್ಷಣದಲ್ಲಿ ಪ್ರಯೋಗವು ಕುಸಿಯುವದೆಂದೆನಿಸುವದೋ ಆ ಕ್ಷಣದಲ್ಲಿಯೇ ಅದು ಸಫಲವಾಗುವದೆಂದು ತಿಳಿ. ಅತ್ಯಂತ ಬೇಸಿಗೆ ಎನಿಸಹತ್ತಿದರೆ ಮಳೆಗಾಲವು ಸಮೀಪಿಸಿತೆಂದು ತಿಳಿಯಬೇಕು. ಚಳಿಗಾಲವು ಮಿತಿ ಮೀರಿ ಭಾಸವಾದರೆ ಬೇಸಿಗೆಯು ತಲೆಯೆತ್ತುವದೆಂದರಿಯಬೇಕು. ಅಮಾವಾಸ್ಯೆಯ ಕಗ್ಗತ್ತಲೆಯು ಹಬ್ಬಿದಂತೆ ಪ್ರಕಾಶಮಾನನಾದ ಚಂದ್ರನ ಉದಯವು ತೀರ ಸಮೀಪಿಸಿತೆಂದು ತಿಳಿಯಬೇಕು. ತಾಯಿಯು ಅತ್ಯಂತ

ವೇದನೆಯನ್ನು ಅನುಭೋಗಿಸಹತ್ತಿದೊಡನೆಯೇ ಆಕೆಗೆ ಮುದ್ದು ಮಗುವಿನ ಮುಖಕಮಲವನ್ನು ನೋಡುವ ಸಮಯವು ಸಮೀಪಿಸಿತೆಂದು ತಿಳಿಯಬೇಕು. ಅತ್ಯಂತ ವಿರೋಧದ ಹೊಟ್ಟೆಯಿಂದಲೇ ವಿಕಾಸವು ಹೊರಬೀಳುವದು." ಎಂದನು.

ದೇವಾ ನೀನು ಹೇಳುವದು ಅತ್ಯಂತ ಸತ್ಯ. ಚಿಕ್ಕ ಮಕ್ಕಳಿಗೆ ಹಾಲು ಹಲ್ಲುಗಳು ಬರುವಾಗ ಜ್ವರ ಬರುತ್ತವೆ. ಅನುಭವವಿಲ್ಲದ ತಾಯಿಯು ಗಾಬರಿಯಾಗುತ್ತಾಳೆ. ಅನುಭವಿಕಳಾದ ಅಜ್ಜಿಯು ಹಲ್ಲು ಬರುವಾಗ ಜ್ವರ ಬಂದೇ ಬರುತ್ತದೆ ಎಂದು ಸಮಾಧಾನ ಮಾಡುವಳು. ಕಪ್ಪು ಮೋಡಗಳು ಆಕಾಶದಲ್ಲಿ ಕವಿದಾಗಲೇ ನಿರ್ಮಲವಾದ ರಜತ ಸದೃಶ ಜೀವನ ಧಾರೆಯು ಜಗತ್ತಿಗೆ ದೊರೆಯುವದು. ಎಂದು ಪ್ರಯೋಗಪತಿಯು ಉತ್ತರಿಸಿದನು.

' ಅಹುದು! ನೀನು ಸರಿಯಾಗಿ ತಿಳಿದಿರುವಿ. ನಾಗ ಹಾಗೂ ಆರ್ಯರಲ್ಲಿ ದ್ವೇಷಾಗ್ನಿಯು ಹೊತ್ತುವದೆಂದು ನಿನಗನಿಸುತ್ತದೆ. ಆದರೆ ಈ ದ್ವೇಷವು ಬಾಳಲಾರದು. ಹೊಟ್ಟೆಯೊಳಗಿನ ವಿಷವು ಒಮ್ಮೆ ಹೊರಬಿದ್ದರೆ ಒಳ್ಳೇದು. ಕಾರಿಕೊಳ್ಳಲಿ ಒಮ್ಮೆ ದ್ವೇಷಾಗ್ನಿಯನ್ನು. ಆದರೆ ಈ ದ್ವೇಷದ ಪ್ರದರ್ಶನದೊಡನೆಯೆ ಪರಸ್ಪರರಲ್ಲಿ ಪ್ರೇಮ ಸಂಬಂಧವು ಬೆಳೆಯಬೇಕೆಂದು ಜನಸಾಮಾನ್ಯರು ಕಾತರಗೊಂಡಿದ್ದಾರೆ. ಸಾಮಾನ್ಯ ಆರ್ಯ ಹಾಗೂ ನಾಗರು ಸಂತೋಷದಿಂದಿರಲು ಇಚ್ಛಿಸುತ್ತಿದ್ದಾರೆ. ಅವರವರಲ್ಲಿ ಲಗ್ನಸಂಬಂಧಗಳಾಗಹತ್ತಿವೆ. ಪ್ರತಿಷ್ಠಿತ ಜನರು ಮಾತ್ರ ಬೇರೆ ಉಳಿಯಲು ಯತ್ನಿಸುತ್ತಿದ್ದಾರೆ. ಜನತೆಯ ಈ ಆಶೆ ಆಕಾಂಕ್ಷೆಗಳಿಂದಲೇ ಮಹಾನ್ ಶಕ್ತಿಯು, ತೇಜಸ್ಸು ಉತ್ಪನ್ನವಾಗುವದು. ದ್ವೇಷದ ಶಕ್ತಿಯು ಅತ್ಯಲ್ಪ! ಅಪಾರವಾದ ಕತ್ತಲೆಯನ್ನು ಒಂದೇ ಒಂದು ಪ್ರಕಾಶದ ಕಿರಣವು ಓಡಿಸುತ್ತದೆ. ಅದ್ಭುತವಾಗಿ ಹಬ್ಬಿದ ದ್ವೇಷವನ್ನು ಪ್ರೇಮ ಸೂರ್ಯನ ಒಂದು ಕಿರಣವು ನಷ್ಟ ಪಡಿಸುವದು. ಗಾಬರಿಗೊಳ್ಳಬೇಡ. ನಿರಾಶನಾಗಬೇಡ. ಧ್ಯೇಯದಲ್ಲಿ ಧೃಡವಾದ ಶ್ರದ್ಧೆಯನ್ನಿಡು. ಅತ್ಯುತ್ಕಟವಾದ ಶ್ರದ್ಧೆಯೇ ಇಂಥ ಸಂಕಟ ಸಮಯದಲ್ಲಿ ಉಪಯೋಗ ಬೀಳುವದು. ಧ್ಯೇಯವು ಎಷ್ಟು ದೊಡ್ಡದೋ ಅಷ್ಟೇ ಅದು ದೂರ ಮತ್ತು ಕಷ್ಟ ಸಾಧ್ಯ.

ನಾನು ಪುನಃ ಸಮಾಧಿಸ್ಥನಾಗುವೆ. ಪ್ರಯೋಗದ ಮೊದಲನೆಯ ಹೆಜ್ಜೆಯು ಯಶಸ್ವಿಯಾದೊಡನೆಯೆ ನನ್ನನ್ನು ಎಬ್ಬಿಸು. ಯಶವು ಕಟ್ಟಿಟ್ಟಿದ್ದು. ಅದು ನನಗೆ ಕಾಣುತ್ತದೆ. ಮೊದಲನೆಯ ಪಾವಟಿಗೆಯನ್ನು ಹತ್ತುವದೇ ಕಠಿಣ. ಆ ಹೆಜ್ಜೆಯೊಂದನ್ನು ಹಾಕಿದರೆ ಅವನು ನೂರಾರು ಗಾವುದಗಳನ್ನು ನಡೆಯುವನೆಂದು ತಿಳಿ. ಹಿಮಾಲಯವನ್ನು ಏರಿ ಆಕಾಶಕ್ಕೆ ಅವನು ಕೈ ಹಚ್ಚಬಹುದು. ತಿಳಿಯಿತೇ ? ನಾನು ಸಮಾಧಿಸ್ಥನಾಗಲೋ ? ಎಂದು ಪ್ರಭುವು ಪ್ರೇಮದಿಂದ ಕೇಳಿದನು.

ದೇವಾ! ಧ್ಯಾನಸ್ಥನಾಗು. ನಾನು ಪ್ರಯೋಗವನ್ನು ಪ್ರಾರಂಭಿಸುವೆ. ಚಿಕ್ಕ ಪುಟ್ಟ ತೊಂದರೆಗಳಿಗೆ ಬೆದರುವದಿಲ್ಲ. ಆರ್ಯ ಹಾಗೂ ನಾಗ ಜಾತಿಗಳಲ್ಲಿ ಮಧುರ ಬಾಂಧವ್ಯವು ಬೆಳೆದು ಸಂಗಮವಾದೊಡನೆಯೇ ನಿನ್ನನ್ನು ಎಬ್ಬಿಸುವೆ. ನನ್ನ ಪ್ರಯತ್ನಕ್ಕೆ ಬಂದ ಫಲವನ್ನು ತೋರಿಸುವೆ. ನಿನ್ನ ಆಶೀರ್ವಾದವನ್ನು ಪಡೆಯುವೆ. ಮತ್ತೆ ಮುಂದರಿಯುವೆ. ಈ ಭವ್ಯ ಭಾರತದಲ್ಲಿ, ಸಾಗರಗಳ ಸಾನ್ನಿಧ್ಯದಲ್ಲಿ, ಹಿಮಾಲಯದ ಛತ್ರದಲ್ಲಿ, ವಿವಿಧ ಪ್ರಕಾರದ ವನಸ್ಪತಿಗಳ ಮಧ್ಯದಲ್ಲಿ, ನಿರ್ಮಲವಾದ ನೀಲಾಕಾಶದ ಸುಂದರ ಪ್ರಕಾಶದಲ್ಲಿ, ವಿವಿಧ ಸಂಸ್ಕೃತಿಗಳ ಮಾನವರು ಆನಂದದಿಂದ ನಲಿಯುತ್ತಿರುವ ಮಂಗಲ ಸಮಯವೊಂದು ಬರಲಿರುವದು. ಎಂದು ಪ್ರಯೋಗಪತಿಯು ಅತ್ಯಂತ ಆಶೆಯಿಂದ ನುಡಿದನು.

೧

ವೃದ್ಧ ಸುಶ್ರುತೆಯೊಬ್ಬಳೇ ಮನೆಯಲ್ಲಿ ಚಿಂತಾಮಗ್ನಳಾಗಿ ಕುಳಿತಿದ್ದಳು. ಮುಖ ಲಕ್ಷಣವನ್ನು ನೋಡಿದರೆ, ಆಕೆ ಅನೇಕ ದುಃಖಗಳನ್ನನುಭೋಗಿಸಿ ದಂತೆ ಕಾಣುತ್ತಲಿತ್ತು. ಮಾನವರ ಮುಖ ಮುದ್ರೆಯು ಅವರ ಜೀವನ ಗ್ರಂಥ ಜೀವನದಲ್ಲಿಯ ಅನೇಕ ಅನುಭವಗಳ ಗೆರೆಗಳು ಮೋರೆಯ ಮೇಲೆ ಮೂಡಿರುತ್ತವೆ. ಅವುಗಳಲ್ಲಿ ಕೆಲವು ಸ್ಪಷ್ಟವಾಗಿಯೂ ಕೆಲವು ಅಸ್ಪಷ್ಟ ವಾಗಿಯೂ ಕಾಣುವವು. ಕಣ್ಣುಗಳೆಂದರೆ ಅವರ ಅನುಭವದ ಖಣಿಯೆಂದು ಹೇಳಬಹುದು.

‘ ಅಜ್ಜೀ ಸುಶ್ರುತಾ ಇಂದೇಕೆ ನೀನು ನಗುವದಿಲ್ಲ! ನಮ್ಮ ಮನೆಗೆ ಏಕೆ ಬಂದಿಲ್ಲ ? ನಾವು ಇಂದು ನದಿಗೆ ಹೋದಾಗ ದೊಡ್ಡ ಹೊಡೆದಾಟವಾಯಿತು. ಅದು ನಿನಗೆ ತಿಳಿಯಿತಷ್ಟೆ! ’ ಎಂದು ನೆರೆಮನೆಯ ಕಾರ್ತಿಕನು ವಿಚಾರಿಸಿದ.

‘ ಹೊಡೆದಾಟ ಯಾರೊಡನೆ ನಡೆಯಿತು ಕಾರ್ತಿಕ ? ನಿನ್ನೊಡನೆ ಯಲ್ಲವಷ್ಟೇ ? ಇಂತಹ ಚಿಕ್ಕ ಪುಟ್ಟ ಜಗಳಗಳಲ್ಲಿಯೇ ಯುದ್ಧದ ಕಿಡಿಗಳು ಹೊರ ಹೊಮ್ಮುವವು. ಊರು ಸುಡಲಿಕ್ಕೆ ಒಂದು ಕಿಡಿಯೇ ಸಾಕು’ ಎಂದಳು ಸುಶ್ರುತೆ.

‘ ನೀನು ಯುದ್ಧದ ಮಾತುಗಳನ್ನು ಎತ್ತಿದೊಡನೆಯೆ ನನಗೆ ಬಹಳ ಕೆಡಕೆನಿಸುತ್ತಿದೆ. ಒಮ್ಮೊಮ್ಮೆ ಸಿಟ್ಟು ಬರುತ್ತದೆ. ಅದನ್ನು ಕೇಳಿ ವೀರನಾಗ ಬೇಕೆಂದು ಅನಿಸುವದು. ನನಗೆ ವತ್ಸಲೆಯ ಅಜ್ಜನ ಕತ್ತಿಯನ್ನು ಕೊಡು ವಿಯಾ ? ಆಕೆಯ ತಂದೆಯ ಧನುಷ್ಯವನ್ನು ಕೊಡು ’ ಎಂದು ಕಾರ್ತಿಕನು ಹಿಂದಿನದನ್ನು ನೆನಪು ಮಾಡಿದನು.

"ಕಾರ್ತೀಕಾ! ನನಗೆ ಒಬ್ಬನೇ ಒಬ್ಬ ಮಗ, ಅವನು ಬಹು ಗುಣವಂತ. ಬೆಂಕಿಯಿಂದ ನಾಗರ ಮಕ್ಕಳನ್ನು ಉಳಿಸುವದಕ್ಕಾಗಿ ಯತ್ನಿಸಿ ಸುಟ್ಟುಕೊಂಡು ಸತ್ತ. ನಾಗರ ಒಂದು ಚಿಕ್ಕವಸತಿಗೆ ಆರ್ಯರು ಬೆಂಕಿ ಹಚ್ಚಿದರು. ವತ್ಸಲೆಯ ತಂದೆಯು ಬೇಟೆಗೆ ಹೋಗಿದ್ದನು. ಅವನು ಆರ್ತಸ್ವರವನ್ನು ಕೇಳಿ ಹೋಗಿ ನೋಡುತ್ತಾನೆ. ಊರೇ ಉರಿಯುತ್ತಲಿವೆ. ಒಂದು ಮನೆಯಲ್ಲಿ ಎರಡು ಎಳೆ ಮಕ್ಕಳು ಚೀರುತ್ತಲಿವೆ. ತಾಯಿಯು ಹೊರಗಡೆ ಬಡಕೊಳ್ಳುತ್ತಲಿದ್ದಾಳೆ. ಅಗ್ನಿ ನಾರಾಯಣನು ತನ್ನ ನಾಲಗೆಯನ್ನು ಚಾಚುತ್ತಲಿದ್ದಾನೆ. ತನ್ನ ಮಕ್ಕಳು ತನ್ನ ಎದುರಿಗೆ ಸುಡುವದನ್ನು ನೋಡಲಾರದೆ, ತಾಯಿಯು ಮೂರ್ಛೆ ಹೋದಳು. ಇದನ್ನು ಕಂಡು ಆತನು ಬೆಂಕಿಯಲ್ಲಿ ಹಾರಿದನು. ಮನೆಒಳ ಹೊಕ್ಕು ಆ ಎರಡೂ ಮಕ್ಕಳನ್ನು ಅರಿವೆಯಲ್ಲಿ ಸುತ್ತಿ ಹೊರತಂದು ತಾಯಿಗೆ ಒಪ್ಪಿಸಿದನು. ರತ್ನಾಕರನು ಮನೆಗೆ ಬಂದನು. ಆದರೆ ಅವನು ಬೆಂಕಿಯಲ್ಲಿ ಬೆಂದು ಹೋಗಿದ್ದನು. ಏನು ಉಪಾಯ ಮಾಡಿದರೂ ಅವನು ಬದುಕಲಿಲ್ಲ. ನಾನು ಪುತ್ರಹೀನಳಾದೆ. ಆದರೆ ಆತನು ಎರಡನೇ ತಾಯಿಗೆ ಆನಂದವನ್ನಿತ್ತನು. ಎರಡನೆಯ ತಾಯಿಯನ್ನು ಪೂಜಿಸುವವನೇ ನಿಜವಾದ ಮಾತೃಭಕ್ತ. ಎರಡನೇ ಧರ್ಮವನ್ನು ಆದರದಿಂದ ನೋಡುವವನೇ ನಿಜವಾದ ಧಾರ್ಮಿಕ. ರತ್ನಾಕರನು ಎಂದೂ ನಾಗರನ್ನು ನಿಂದಿಸುತ್ತಿರಲಿಲ್ಲ. ನಾಗ ಪೂಜೆಯ ವೇಳೆಯಲ್ಲಿ, ಅವರೊಡನೆ ಅವರ ಉತ್ಸವದಲ್ಲಿ ಭಾಗವಹಿಸುತ್ತಿದ್ದನು. ಆರ್ಯ ಜಾತಿಯವರು ಅವನನ್ನು ಕಂಡರೆ ಆಗುತ್ತಿರಲಿಲ್ಲ. ಅವನಿಗೆ ಹೆಸರು ಇಡುತ್ತಿದ್ದರು. ಆದರೆ ಅವನು ಶಾಂತನಾಗಿಯೇ ಇರುತ್ತಿದ್ದ. ಬಹಳ ಗುಣಿ" ಎಂದು ಸುಶ್ರುತೆಯು ಕಣ್ಣೀರು ಸುರಿಸಹತ್ತಿದಳು.

ಅಜ್ಜೀ! ವತ್ಸಲೆಯ ತಾಯಿಯನ್ನು ಸಾಯಲು ಏಕೆ ಬಿಟ್ಟೆ? ನಿನ್ನಂತೆಯೇ ಆಕೆಯೂ ಮಗಳನ್ನು ಜೋಪಾನ ಮಾಡುತ್ತ ಇರುತ್ತಿದ್ದಳು, ಎಂದನು ಕಾರ್ತೀಕ.

"ನನ್ನ ಗಂಡ ಕುರುಕ್ಷೇತ್ರದಲ್ಲಿ ಮಡಿದ, ಯುದ್ಧಕ್ಕೆ ಹೊರಡುವಾಗ ನಾನು ಬಸಿರಿದ್ದೆ. ಹೋಗುವ ಮುಂದೆ ಗಂಡನು "ನಾನು ಯುದ್ಧದಲ್ಲಿ ಸತ್ತರೆ, ನೀನು ಸತಿ ಹೋಗಬೇಡ. ನಿನಗೆ ಮಗುವಾಗುವದು. ಅದನ್ನು ರಕ್ಷಿಸು, ಅದರ ಸೇವೆಯೇ ನನ್ನ ಸೇವೆ. ಕುಲದ ತಂತುವನ್ನು ಹರಿದೊಗೆಯ

ಬೇಡ. ನಮ್ಮ ಪರಂಪರೆಯು ನಡೆಯಬೇಕು. ಇವರಿಂದಲೇ ಪಿತೃ ಋಣ ತೀರುವದು" ಎಂದರು. "ಹೀಗೇಕೆ ಅಮಂಗಲ ಮಾತನಾಡುವಿರಿ, ವಿಜಯಿಗಳಾಗಿ ತಿರುಗುವಿರಿ" ಎಂದೆ. ರಣದಿಂದ ಅವರು ಮರುಳಲಿಲ್ಲ, ಅವರ ಆಜ್ಞೆಯನ್ನು ನಾನು ಪಾಲಿಸಿದೆ. ಮಗುವು ಜನಿಸಿತು, ರತ್ನಾಕರನೆಂದು ಹೆಸರಿಟ್ಟೆ. ಅತ್ಯಂತ ಪ್ರೇಮದಿಂದ ಬೆಳೆಯಿಸಿದೆ. ಒಮ್ಮೆ ಅಂಗಳದಲ್ಲಿ ಮಗುವನ್ನು ಮಲಗಿಸಿದ್ದೆ. ಹೊರಬಂದು ನೋಡುತ್ತೇನೆ, ಹುಲಿ ಬಂದು ನಿಂತಿದೆ. ಎದೆಯೊಡೆಯಿತು. ಆದರೆ ಒಮ್ಮೊಮ್ಮೆ ಪಶುಗಳು ಕೂಡ ಮಾನವನು ತಲೆ ಬಾಗುವಂತೆ ವರ್ತಿಸುತ್ತವೆ. ಹಸಿವೆಯಾಗಿದ್ದರೆ ಮಾತ್ರ ಹುಲಿಯು ಬೇಟೆಯಾಡುತ್ತದೆ. ಸ್ವೈರನಾಗಿ ಹಿಂಸೆಮಾಡುವವನು ಮಾನವನೇ! ನಾನು ಹೊರಬಂದೆ. ಹುಲಿಯು ಹೊರಟುಹೋಯಿತು. ಮಗುವನ್ನೆತ್ತಿ ಮುದ್ದಿಟ್ಟೆ. ಅವನನ್ನು ಬೆಳೆಸಿದೆ. ಅವನು ಕುದುರೆ ಹತ್ತುವನು, ನೀರಲ್ಲಿ ಜಿಗಿಯುವನು ಗುರಿ ಹೊಡೆಯುವನು. ಹೀಗೆ ಎಲ್ಲದರಲ್ಲಿಯೂ ಬಲ್ಲಿದನಾದ, ಪರಾಕ್ರಮಿಯಾದ. ಒಬ್ಬ ನಾಗಕನ್ಯೆಯೊಡನೆ ಮದುವೆಯಾಗಲು ಅಪೇಕ್ಷಿಸಿದ. ಆದರೆ ನಾನು ಪಾಪಿ ಬೇಡವೆಂದೆ, ಬಿಟ್ಟುಬಿಟ್ಟ ಒಳ್ಳೇ ಮಾತೃ ಭಕ್ತ. ನಾನು ಇನ್ನೊಂದು ಹೆಣ್ಣು ತೆಗೆದು ಮದುವೆ ಮಾಡಿದೆ. ಆಕೆಯೊಡನೆ ಆನಂದದಿಂದ ಸಂಸಾರ ಮಾಡಿದ. ವತ್ಸಲಾ ಹುಟ್ಟಿದಳು. ಆದರೆ ರತ್ನಾಕರನು ಹೋದ. ಅವನೊಡನೆ ಆವನ ಪತ್ನಿಯೂ ಸತಿ ಹೋದಳು.

'ನನ್ನಂತೆಯೇ ಕೂಸನ್ನು ಜೋಪಾನ ಮಾಡಿಕೊಂಡಿರು' ಎಂದು ಬೇಕಾದಷ್ಟು ಹೇಳಿದೆ. 'ನೀವು ಇರುವಿರಲ್ಲ? ಜೋಪಾನ ಮಾಡಿರಿ. ಅವರನ್ನು ಬಿಟ್ಟು ಅರಗಳಿಗೆ ಕೂಡ ನಾನಿರಲಾರೆ' ಎಂದಳು. ಈ ಹುಡುಗೆಯನ್ನು ರಕ್ಷಿಸುವವರಾರು? ನಾನು ಮುದಿಕಿ ಎಂದೆ. ನಾವು ಮಾನವರು ಏನು ರಕ್ಷಿಸಬಲ್ಲೆವು? ಪಾಲನಕರ್ತನು ಆ ಜಗದೀಶ್ವರನು. ಯಾರು ಸಮುದ್ರವನ್ನು ತುಂಬಿರುವರೋ, ಪರ್ವತವನ್ನು ಸ್ಥಿರಗೊಳಿಸಿರುವರೋ ಅಂತರಿಕ್ಷದಲ್ಲಿ ಕೋಟ್ಯಾವಧಿ ನಕ್ಷತ್ರಗಳನ್ನು ಆಧಾರವಿಲ್ಲದೆ ನಿಲ್ಲಿಸಿರುವರೋ, ಕೋಕಿಲೆಗೆ ಕಂಠವನ್ನೀಯುವರೋ -ಆಕಳುಗಳಿಗೆ ವಾತ್ಸಲ್ಯವನ್ನು ಕೊಡುವರೋ ಆ ಪ್ರಭುವೇ ಸರ್ವರಕ್ಷಕನು. ಕ್ಷಣಭಂಗುರವಾದ ಈ ತಂದೆತಾಯಿಗಳೆಲ್ಲಿಯ

ಪಾಲಕರು? ಶಾಶ್ವತನಾದ ಅವನೇ ತಂದೆ ಅವನೇ ತಾಯಿ! ಆಕೆಯು ಹೋದಳು. ಅಮರಳಾದಳು, ಅಭಾಗಿನಿಯಾದ ನಾನು ಮಾತ್ರ ಉಳಿದಿರುವೆ. ಆದರೆ ನಾನು ವತ್ಸಲೆಯನ್ನು ಬೆಳೆಯಿಸಿದ್ದೇನೆ. ಆಕೆಯ ಸಂಸಾರವಾದರೂ ಸುಖಮಯವಾಗಲಿ. ನನ್ನ ಕೈಗುಣವೆಂತಹದೋ ಏನೋ! ನನ್ನ ಗಂಡ ಹೋದ, ಮಗ ಹೋದ, ಸೊಸೆಯೂ ಹೋದಳು, ಮೊಮ್ಮಗಳು ಮಾತ್ರ ಉಳಿದಿದ್ದಾಳೆ. ಈಕೆಯೂ ಹೋಗುವಳೋ ಏನೋ ಎಂಬ ವಿಚಾರಗಳು ಇಂದು ಬಂದವು, ದೇವಾ! ಈಕೆಯಾದರೂ ಅನುರೂಪನಾದ ಗಂಡನ ಮನೆಗೆ ಹೋಗಲಿ! ನಾನು ಸುಖದಿಂದ ಕಣ್ಣು ಮುಚ್ಚುವೆನು ಎಂದು ಪ್ರಾರ್ಥಿಸಿದೆ. ಕಾರ್ತಿಕಾ! ನಾನು ಒಬ್ಬಳೇ ಕುಳಿತೆನೆಂದರೆ, ನೂರಾರು ನೆನಪುಗಳು ಮನಸ್ಸಿನಲ್ಲಿ ಬರುತ್ತವೆ. ಈ ಕತ್ತಿ, ಈ ಢಾಲು, ಆ ಧನುಷ್ಯ, ಇವೆಲ್ಲ ನಿರ್ಜೀವ ವಸ್ತುಗಳೆಂದು ತಿಳಿಯಬೇಡ. ಇವು ಹಿಂದಿನ ಎಷ್ಟೆಷ್ಟೋ ಕಥೆಗಳನ್ನು ಹೇಳುವವು. ನಾನು ಒಂದು ನೆನಪನ್ನು ಹೇಳಲಾ! ಕುರುಕ್ಷೇತ್ರದ ಯುದ್ಧಕ್ಕೆ ಹೋಗುವ ಮುನ್ನಾದಿವಸ, ಅವರು ಅಡವಿಯಿಂದ ಸುಂದರವಾದ ಅಶೋಕ ಗುಚ್ಛವನ್ನು ತಂದು, "ಇದು ನೋಡು ಎಷ್ಟು ಅಂದವಾಗಿದೆ. ನಿಲ್ಲು, ನಿನ್ನ ಕಿವಿಯಲ್ಲಿ ಇದನ್ನು ಇರಿಸುವೆ" ಎಂದರು. ಆಗ ನಾನು ಬೇಡತಿಯಂತೆ ಕಾಣಿಸುವೆ. ಅಲ್ಲದೆ ಈ ಅಶೋಕಪುಷ್ಪವು ಕೊನೆಗೆ ಶೋಕದಲ್ಲಿ ಪರಿಣಮಿಸುವದು. ಸೀತೆಯ ನಿಟ್ಟುಸಿರಿನಿಂದಲೂ ಕಣ್ಣೀರಿನಿಂದಲೂ ಇದು ಬೆಳೆದಿದೆ ಎಂದೆ. ಅವರು ನಕ್ಕು ಹುಚ್ಚೀ! ಈ ಜಗತ್ತಿನಲ್ಲಿ ಅಶುಭವೆನ್ನುವದು ಯಾವುದೂ ಇಲ್ಲ. ನಾನು ರಣಾಂಗಣದಲ್ಲಿ ಮಡಿದರೂ ಅದೂ ಮಾಂಗಲ್ಯವೇ! ಇಲ್ಲದ್ದೊಂದು ಮನಸ್ಸಿನಲ್ಲಿ ತರುವಿ, ಈ ಹೂವನ್ನು ಕಿವಿಯಲ್ಲಿ ಹಾಕಿಕೋ ಎಂದರು. ನಾನು ಹಾಕಿಕೊಂಡೆ. ನೋಡಿ ನಗಹತ್ತಿದರು. ಚೇಷ್ಟೆ ಮಾಡಿದರು. ಇದೇ ಅವರ ಕೊನೆಯ ಪ್ರೇಮದ ಗುರುತಾಯಿತು. ಆ ಹೂವನ್ನು ನಾನು ಒಳ್ಳೇ ಜೋಪಾನದಿಂದ ಇಟ್ಟಿರುವೆ. ಅವರು ರಣದಿಂದ ಮರುಳಲಿಲ್ಲ. ಅಶೋಕಪುಷ್ಪವು ನನ್ನ ಪಾಲಿಗೆ ಶೋಕಕ್ಕೆ ಕಾರಣವಾಗಿಯೇ ಪರಿಣಮಿಸಿತು. 'ನಾನು ಸತ್ತರೂ ಶೋಕ ಮಾಡಬೇಡ' ಎಂಬ ಸಂದೇಶವನ್ನು ಕೊಡುವದಕ್ಕಾಗಿಯೇ ಈ ಅಶೋಕಪುಷ್ಪವನ್ನು

ಕೊಟ್ಟರೋ ಏನೋ! ಕರ್ತವ್ಯವನ್ನು ಮಾಡಬೇಕು, ಶೋಕ ಮಾಡಬಾರದು. ದುಃಖದಿಂದ ಕರ್ತವ್ಯವು ಮರೆಯುವದು. ಪ್ರೇಮವು ಕರ್ತವ್ಯದಲ್ಲಿ ಪರಿಣಿತ ವಾಗಬೇಕು. ಬೆಳೆದ ಕರ್ತವ್ಯವೇ ಪ್ರೇಮ. ಬೆಳೆದ ಪ್ರೇಮವೇ ಕರ್ತವ್ಯ. ಎಂಬುದೇ ಈ ಅಶೋಕ ಪುಷ್ಪದ ಮಾತವೇ ? ಸನ್ಯಾಸಿಯ ವೇಷದಿಂದ ಅದು ಶೋಭಿಸುವದು. ಅಶೋಕರಾಗಬೇಕಿದ್ದರೆ, ಆಸಕ್ತಿಯನ್ನು ತೊರೆಯಿರಿ ಎಂದೋ ಈ ಪುಷ್ಪದ ಹೇಳಿಕೆ? ಈ ಮಾತಿಗೆ ನಾಲ್ವತ್ತು ವರ್ಷಗಳಾದವು. ಆ ಹೂವೂ ಬಾಡಿರುವದು. ಆದರೆ ಈ ಚಂದನದ ಪೆಟ್ಟಿಗೆಯಲ್ಲಿ ಅದನ್ನು ಇಟ್ಟಿರುವೆ. ನಾನು ದುಃಖಸಾಗರದಲ್ಲಿ ಮುಳುಗಿದಾಗೆಲ್ಲ ಅದನ್ನು ಸ್ಮರಿಸುವೆ. ಅದು ನನಗೆ ದುಃಖಸಾಗರದಿಂದ ಪಾರುಮಾಡುವ ಹಸಗುಂಬಳವಾಗಿದೆ. ಇದೇ ನನಗೆ ಸೇತುವೆ. ಇದೇ ನನಗೆ ಆಧಾರ. ಇಕೋ! ನೋಡು ಇಲ್ಲಿಯೇ ನನ್ನ ಮುಸುಕಿನಲ್ಲಿದೆ. ಆ ಚಂದನದ ಪೆಟ್ಟಿಗೆ. ನೀನು ಬರುವ ಮೊದಲು ನನ್ನ ಮನವು ಅಲ್ಲೋಲ ಕಲ್ಲೋಲವಾಗಿತ್ತು. ನಾನು ಈ ಸಾವೆಯ ಸಹಾಯವನ್ನೇ ಪಡೆದೆ. ನೋಡು ಇದೇ ಆ ಪೆಟ್ಟಿಗೆ. ಈ ಸುಂದರವಾದ ಪೆಟ್ಟಿಗೆಯನ್ನು ಒಬ್ಬ ನಾಗಮಿತ್ರನು ರತ್ನಾಕರನಿಗೆ ಕೊಟ್ಟಿ ದ್ದನು. ರತ್ನಾಕರನು ನಾಗರನ್ನು ಪ್ರೀತಿಸುತ್ತಿದ್ದನು. ಅವನು ಜೀವಂತ ನಿರುವಾಗ ಅವನ ಹೃದಯವನ್ನು ನಾನು ತಿಳಿಯಲಿಲ್ಲ. ಈಗ ನಾನು ತಿಳಿಯ ಬಲ್ಲೆ. ಅವನ ವಿಚಾರಗಳು ಆ ಕಾಲದ ಜನರಿಗೆ ರುಚಿಸುತ್ತಿರಲಿಲ್ಲ. ತಿಳಿ ಯುತ್ತಲೂ ಇರಲಿಲ್ಲ. ನಾಗಮಿತ್ರರು ರತ್ನಾಕರನಿಗೆ ಕಾಣಿಕೆಯಾಗಿ ಕೊಟ್ಟ ಈ ಚಂದನದ ಪೆಟ್ಟಿಗೆಯಲ್ಲಿ ನಾನು ಪತಿಯ ಕಾಣಿಕೆಯನ್ನು ಇಟ್ಟಿದ್ದೇನೆ. ಈ ಪೆಟ್ಟಿಗೆಯ ಅಂತರ್ಬಾಹ್ಯದಲ್ಲಿ ನನ್ನ ಪತಿಯ ಹಾಗು ಮಗನ ಜೀವನವು ತುಂಬಿ ತುಳುಕುತ್ತಲಿದೆ. ಅಲ್ಲದೆ ಆರ್ಯ ಹಾಗು ನಾಗ ಜಾತಿಯ ಪ್ರೇಮವು ಇದರಲ್ಲಿ ಪ್ರತಿಬಿಂಬಿತವಾಗಿದೆ. ನನ್ನ ಜೀವನದ ಸರ್ವಸ್ವವೇ ಈ ಪೆಟ್ಟಿಗೆಯು." ಎಂದು ಆ ಚಂದನದ ಪೆಟ್ಟಿಗೆಯನ್ನು ತಲೆಯ ಮೇಲೆ, ಇಟ್ಟುಕೊಂಡಳು. ಕಣ್ಣು ಮುಚ್ಚಿದಳು. ಭಾರತದ ಧ್ಯೇಯ ಚಿಂತನೆಯನ್ನು ಮಾಡಹತ್ತಿದಳು.

ಕಾರ್ತಿಕನು ಎಲ್ಲವನ್ನು ಕೇಳುತ್ತಿದ್ದನು. ನೋಡುತ್ತಿದ್ದನು. ಆಕೆಯು ಸಮಾಧಿಸ್ಥಳಾದಳು. ಮೆಲ್ಲಮೆಲ್ಲನೆ ಎಚ್ಚರವಾದಳು. ಮಸ್ತಕದ ಮೇಲಿನ ಪೆಟ್ಟಿಗೆಯನ್ನು ಕೈಯಲ್ಲಿ ತೆಗೆದುಕೊಂಡಳು.

"ಗಂಧದ ಪರಿಮಳವು ಬರುತ್ತಿದೆ ಅಜ್ಜೀ" ಎಂದನು ಕಾರ್ತೀಕ.

ಆಗ ಅಜ್ಜಿಯು 'ಏನು ಗಂಧದ ಸುವಾಸನೆಯೋ? ನಾಗಬಂಧುಗಳ ಪ್ರೇಮದ ಪರಿಮಳವೋ, ಎಂದಳು. 'ಅಜ್ಜೀ! ಏನು ಹೇಳಲಿ! ನಾಗ ಹಾಗು ಆರ್ಯರ ಜಗಳವು ವಿಕೋಪಕ್ಕೆ ಹೋಗಿದೆ. ರತ್ನಾಕರನು ಈಗ ಜೀವಂತವಿದ್ದರೆ ಯಾವ ಪಕ್ಷವನ್ನು ಹಿಡಿಯುತ್ತಿದ್ದನೋ! ಏನು ಮಾಡ ಬೇಕು ತಿಳಿಯದಾಗಿದೆ. ನಾನಿರುವ ಆಶ್ರಮದಲ್ಲಿ, ನಾಗರ ದ್ವೇಷದ ಹೊರತು ಮತ್ತೊಂದು ಮಾತಿಲ್ಲ. ದಿನಾಲು ಅದೇ ಪಾಠ. ಅಲ್ಲಿರುವುದೇ ನನಗೆ ಬೇಸರವಾಗಿದೆ. ಆದರೆ ಮಾಡುವುದೇನು? ಹಿರಿಯರ ಆಗ್ರಹ. ಮನೆಯಲ್ಲಿಯೂ ಅದೇ! ನನ್ನ ತಮ್ಮನು ನಾಗರವಿರುದ್ಧವಾಗಿ ಅಖಂಡ ಮಾತಾಡುತ್ತಿದ್ದಾನೆ. ಏಕೆಂದರೆ ತಂದೆಯವರ ಶಿಕ್ಷಣವೇ ಇದು. ನಾಗರು ಕೆಡುಕು ಏಕೆ? ನೋಡಲು ಸ್ವಲ್ಪ ಕಪ್ಪು ಕಾಣುವರೆಂದು ಕೆಡುಕೋ? ಅವರಲ್ಲಿಯೂ ತ್ಯಾಗಿ ಗಳಿದ್ದಾರೆ, ವೀರರಿದ್ದಾರೆ, ಪ್ರೇಮಿಗಳಿದ್ದಾರೆ, ಗುಣಿಗಳಿದ್ದಾರೆ, ಅಂದ ಮೇಲೆ ಜಗಳವೇಕೆ? ಅಂದು ನದಿಯ ಮೇಲೆ ದೊಡ್ಡ ಹೊಡೆದಾಟ. ಆರ್ಯ ತರುಣನೊಬ್ಬನು ಈಸುತ್ತಲಿದ್ದ, ಅಲ್ಲಿ ನಾಗನೊಬ್ಬನು ಬಂದನು. ಅಲ್ಲಿ ನೀರು ಸ್ವಲ್ಪ ಆಳವಿದ್ದ ಮೂಲಕ, ಅಲ್ಲಿ ಈಸಲು ಮನಸ್ಸಿಗೆ ಉಲ್ಲಾಸ ಹೆಚ್ಚು. ಆದರೆ ಆರ್ಯಕುಮಾರನು ನಾಗನನ್ನು ಹೊರದೂಡಿದ. ಕೂಡಲೇ ನಾಗ ಕುಮಾರರ ಒಂದು ತಂಡವೇ ಬಂದು ಮುತ್ತಿತು. ಇಬ್ಬರೂ ಕೂಡಿದರು. ಸುರುವಾಯಿತು ಹೊಡೆದಾಟ! ಇಬ್ಬರಿಗೂ ಶಾಂತರಾಗಲು ಹೇಳಿದೆ. 'ನದಿಯಾದರೋ ಇಬ್ಬರಿಗೂ ಸ್ವಾಗತವೀಯುವದು. ಯಾರಿಗೂ ಬೇಡ ವೆನ್ನುವದಿಲ್ಲ, ಇಬ್ಬರ ಜಗಳವನ್ನು ನೋಡಿ ಆ ನದಿಗೆ ಏನೆನಿಸಬಹುದು? ಆಕೆಯು ಅಳಬಹುದು! ಎಂದು ನಾನೆಂದೆ. ಆದರೆ ಇಷ್ಟರಲ್ಲಿ ಮಳೆಹನಿ ಗಳು ಉದರಹತ್ತಿದವು. ಜಗಳವು ನಿಂತಿತು. ನಾನು ನಿಮ್ಮೆಲ್ಲರನ್ನು ನನ್ನ ಮುಸುಕಿನಲ್ಲಿ ತೆಗೆದುಕೊಳ್ಳಲು ಸಿದ್ಧವಿರಲು ನೀವೇಕೆ ಜಗಳವಾಡುವಿರಿ! ಎಂದು ಮೌನಾಕಾಶವು ಹನಿಗಳನ್ನುದುರಿಸಿ ನಮಗೆ ಕಲಿಸಿತೇ? ಅಜ್ಜೀ ಪರಿಸ್ಥಿತಿಯು ಕೈಮೀರುತ್ತಲಿದೆ. ನಾನು ನನ್ನ ಆಶ್ರಮವನ್ನು ಬಿಟ್ಟುಬಿಡಲಾ! ಆದರೆ ತಂದೆಯವರು ರೇಗುವರು. ಆಶ್ರಮವನ್ನು ಬಿಟ್ಟರೆ ಮನೆಯನ್ನೂ ಬಿಡಲು ಸಿದ್ಧನಾಗಬೇಕು" ಎಂದನು ಕಾರ್ತೀಕ.

"ಪೂರ್ಣ ವಿಚಾರಮಾಡಿ ಏನೆಂಬುದನ್ನು ನಿರ್ಣಯಿಸು" ಕಾರ್ತಿಕಾ! ಈ ವಿಶಾಲವಾದ ಜಗತ್ತಿನಲ್ಲಿ ಎಲ್ಲಿಯಾದರೂ ಕಾಯ ಕಷ್ಟಮಾಡಿ ಹೊಟ್ಟೆ ಹೊರೆಯಬಹುದು. ' ಎಂದು ಅಜ್ಜಿಯು ಉತ್ತರಿಸಿದಳು.

'ಅಜ್ಜೀ! ಹೊಟ್ಟೆಯ ಪ್ರಶ್ನೆಯೊಂದೇ ಇಲ್ಲ. ತಂದೆ ತಾಯಿಗಳ ಪ್ರೇಮಕ್ಕೂ ಎರವಾಗಬೇಕಾಗುತ್ತದೆ. ವತ್ಸಲೆಯು ತಾಯಿ ಇಲ್ಲವೆಂದು ಅಳುವದಿಲ್ಲವೇ! ಇದ್ದ ತಂದೆ ತಾಯಿಗಳನ್ನು ಕಳೆದುಕೊಳ್ಳಬೇಕೇ! ಎಂಬುವೇ ಪ್ರಶ್ನೆ ಅಜ್ಜೀ!

"ಕಾರ್ತಿಕಾ! ನಾನು ಹಾಗೆ ಹೇಳುವದಿಲ್ಲ. ಆದರೆ ತಂದೆ ತಾಯಿಗಳಿಗಿಂತಲೂ ಧ್ಯೇಯವು ದೊಡ್ಡದೆಂದೆನಿಸಹತ್ತಿದರೆ, ತಂದೆತಾಯಿಗಳ ಇಚ್ಛೆಗಿಂತಲೂ ಆತ್ಮನಕರೆಯು ಬಹು ಮಹತ್ವದ್ದೆಂದು ಅನಿಸಹತ್ತಿದರೆ, ಆಗ ಅವರ ತ್ಯಾಗವು ವಿಹಿತವೆನಿಸುವದು. ಆತ್ಮ ದರ್ಶನಕ್ಕಾಗಿ, ವಿಶ್ವದ ತ್ಯಾಗವನ್ನು ಕೂಡ ಮಾಡಬಹುದೆಂದು, ಜ್ಞಾನಿಗಳು ಹೇಳುತ್ತಾರೆ" ಎಂದು ಸುಶ್ರುತೆಯು ಗಂಭೀರವಾಗಿ ನುಡಿದಳು.

'ವತ್ಸಲೆಯು ಆಶ್ರಮದಿಂದ ಯಾವಾಗ ಬರುವಳು? ಆಕೆಯು ಇನ್ನೂ ಕಲಿಯುವಳೋ! ಆಕೆಯ ಭೆಟ್ಟಿಯಾಗದೆ ಎಷ್ಟೋ ದಿನಗಳಾದವು- ಇಲ್ಲಿಗೆ ಆಕೆ ಯಾವಾಗ ಬಂದಿದ್ದಳು ? ವಸಂತೋತ್ಸವಕ್ಕೆ ಕೂಡ ಆಕೆಯು ಬರಲಿಲ್ಲ. ಎಂದು ಕಾರ್ತಿಕನು ಉತ್ಸುಕತೆಯಿಂದ ವಿಚಾರಿಸಿದನು.

"ನಾನು ಕಲಿಯುವೆ, ಬ್ರಹ್ಮವಾದಿನಿಯಾಗುವೆ. ನನಗೆ ಲಗ್ನಬೇಡ, ಸಂಸಾರ ಬೇಡ. ನಾನು ವಿಶ್ವದ ಸಂಸಾರ ಮಾಡುವೆನು. ಚಿಕ್ಕಮಕ್ಕಳ ತಾಯಿಯಾಗುವದಕ್ಕಿಂತ: 'ವಿಶ್ವಮಾತೆಯಾಗುವೆ. ನನ್ನ ಈ ಜೀವನದಲ್ಲಿ ಈಶ್ವರನನ್ನು ನೋಡುವೆ. ನನ್ನ ಜೀವನದಲ್ಲಿ ಒಳಹೊರಗೆ ವ್ಯಾಪಿಸಿದ ಬ್ರಹ್ಮನ ಅನುಭವವನ್ನು ಪಡೆಯುವೆ." ಎಂದು ಆಕೆಯು ಮಾತನಾಡುತ್ತಾಳೆ. ತಾನು ಏನು ಮಾತನಾಡುತ್ತಿರುವೆ ಎಂಬುದು ಆಕೆಗೆ ತಿಳಿಯುತ್ತದೆಯೋ ಇಲ್ಲವೋ ಯಾರಿಗೆ ಗೊತ್ತು! ದೊಡ್ಡ ದೊಡ್ಡ ಮಾತುಗಳನ್ನಂತೂ ಆಡುವಳು. ನಾನಂತೂ ಆಕೆಯ ವಿರುದ್ಧ ಹೋಗುವದಿಲ್ಲ. ಲಗ್ನದ ಮಾತನ್ನು ನಾನೆಲ್ಲಿ ಎತ್ತುವೆನೋ ಎಂದು ಆಕೆಯು ಮನೆಗೆ ಬರುವದನ್ನೇ ಕಡಿಮೆ ಮಾಡಿದ್ದಾಳೆ. ಕಾರ್ತಿಕಾ!" ಎಂದಳು ಅಜ್ಜಿ.

'ಅಜ್ಜೀ! ವತ್ಸಲೆಯ ವಯವೆಷ್ಟು?' ಎಂದು ಮೆಲ್ಲನೆ ಕಾರ್ತೀಕನು ನುಡಿದ.

"ಪರೀಕ್ಷಿತ ರಾಜ, ಜನಮೇಜಯ, ಹಾಗು ವತ್ಸಲೆ ಒಂದೇ ದಿವಸ ಹುಟ್ಟಿದ್ದಾರೆ. ಆಕೆಗೆ ಇದೇ ೧೩ ವರ್ಷ. ಇನ್ನೂ ಚಿಕ್ಕ ಹುಡಿಗೆ. ಕಲಿಯಲಿ! ಕಲಿಯಲು ಬೇಸರಬಂದು, ಇನ್ನು ಮೇಲೆ ಸಂಸಾರ ಮಾಡಬೇಕೆಂಬ ಒಂದು ಕ್ಷಣವೂ ಬಾರಬಹುದು. ಆಗ ಆಕೆಗೆ ಚಿಕ್ಕ ಮಕ್ಕಳಲ್ಲಿ ಪರಮಾತ್ಮನ ಸಾನ್ನಿಧ್ಯವು ಹೆಚ್ಚಿಗಿರುವದೆಂದು ಅನಿಸಬಹುದು. ಅದು ನಿಜವೂ ಇದೆ. ದೇವರು ಎಲ್ಲೆಡೆ ವ್ಯಾಪಿರುವ. ಅಂದ ಮೇಲೆ ಅವನು ನನ್ನ ಮಕ್ಕಳಲ್ಲಿಲ್ಲವೆ? ನಮ್ಮ ಮಕ್ಕಳಲ್ಲಿಯೂ ಇರುವ. ನಾಗರ ಮಕ್ಕಳಲ್ಲಿಯೂ ಇರುವನು. ಇಬ್ಬರೂ ಬೆಳೆಯಲಿ. ನಗುತ್ತ, ನಲಿಯುತ್ತ, ಇಬ್ಬರೂ ಸುಖಿಗಳಾಗಲಿ. ಅಲ್ಲವೇ ಕಾರ್ತೀಕಾ! ನೀನು ತಿರುಗಿ ಆಶ್ರಮಕ್ಕೆ ಯಾವಾಗ ಹೋಗುವಿ? ನಿನ್ನ ಹುಟ್ಟಿದ ಹಬ್ಬವಂತೂ ಮುಗಿಯಿತು. ಏನೋ! ಇನ್ನೂ ಮನೆಯಲ್ಲಿ ತಿಂಡಿ ತಿನಿಸುಗಳು ಉಳಿದಿವೆಯೋ? ಎಂದು ಅಜ್ಜಿಯು ನಕ್ಕಳು.

'ವತ್ಸಲೆಯು ಬರುವಳೆಂದು ನನ್ನ ಕಿವಿ ಮೇಲೆ ಬಿತ್ತು. ಆಕೆಯ ಭೆಟ್ಟಿಗೆಂದು ನಿಲ್ಲುವವನಿದ್ದೆ. ಭೆಟ್ಟಿಯಾಗದೆ ಬಹಳ ದಿವಸವಾಯಿತು. ಬರುವವಳು ಇದ್ದಾಳೆಯೋ ಅಜ್ಜೀ?' ಎಂದು ಕುತೂಹಲ ಪೂರ್ಣವಾಗಿ ಕೇಳಿದನು.

'ಇಲ್ಲಪ್ಪಾ ಇಲ್ಲ,' ಎಂದಳು.

'ಅಜ್ಜೀ, ವತ್ಸಲೆಯು ನಾಗ ಜಾತಿಯವರನ್ನು ಪ್ರೀತಿಸುವಳೇ ಅಥವಾ ತಿರಸ್ಕರಿಸುವಳೇ?' ಈ ವಿಷಯದಲ್ಲಿ ಆಕೆಯ ಮತವೇನು?

"ಆಕೆಯು ಅವರನ್ನು ಪ್ರೀತಿಸುವಳು. ಆಕೆಯ ತಂದೆಯು ನಾಗ ಕನ್ಯೆಯನ್ನು ಮದುವೆಯಾಗುವವನಿದ್ದ, ಎಂಬ ಮಾತನ್ನು ಕೇಳಿ, ಆಕೆಯ ಜೀವನದಲ್ಲಿ ಕ್ರಾಂತಿ ಉಂಟಾಯಿತು. ಒಮ್ಮೆ ಆಕೆಯು 'ಅಜ್ಜೀ ನನಗೆ ಲಗ್ನವು ಬೇಡವೇ ಬೇಡ. ಎಂದಾದರೂ ಮಾಡಿಕೊಳ್ಳುವದೇ ಆದರೆ, ನಾಗ ಕುಮಾರನನ್ನೇ ಮಾಡಿಕೊಳ್ಳುವೆ. ನೀನು ವಿರೋಧ ಮಾಡುವದಿಲ್ಲವಷ್ಟೆ? ಏಕೆಂದರೆ ನಾಗ ಕನ್ಯೆಯೊಡನೆ ನನ್ನ ತಂದೆಗೆ ನೀನು ಲಗ್ನವಾಗಗೊಟ್ಟಿಲ್ಲ. ಮೊಮ್ಮಗಳಿಗಾದರೂ ಮಾಡಗೊಡುವಿಯಾ' ಎಂದು ನನ್ನನ್ನು ವಿಚಾರಿಸಿದಳು.

ಆಗ ನಾನು 'ಇಲ್ಲ ತಾಯಿ ನಾನು ವಿರೋಧಿಸುವದಿಲ್ಲ. ನಾಗರೇನು ಆರ್ಯರೇನು ಎಲ್ಲರೂ ಮನುಷ್ಯರೇ ಅಲ್ಲವೇ? ಗುಣವಿದ್ದರೆ ತೀರಿತು. ನಾನು ಮೊದಲು ಹುಚ್ಚಿ ಇದ್ದೆ. ಅಶಿಕ್ಷಿತಳಿದ್ದೆ. ಆದರೆ ನಿನ್ನ ತಂದೆಯು ಯಾವ ನಾಗರಿಗಾಗಿ ಅಗ್ನಿಯಲ್ಲಿ ಬೆಂದನೋ ಅಂತಹ ನಾಗರನ್ನು ನಾನು ಹೇಗೆ ದ್ವೇಷಿಸಲಿ? ನನ್ನ ಮಗನು ತನ್ನ ಬಲಿದಾನವನ್ನು ಕೊಟ್ಟು, ನನಗೆ ವೇದಾಂತವನ್ನೂ ಬ್ರಹ್ಮಜ್ಞಾನವನ್ನೂ ಕಲಿಸಿರುವನು. ಅವನು ಜೀವಂತನಿರುವಾಗ ನಾನು ಇದನ್ನು ಕಲಿಯಲಿಲ್ಲ. ಅವನ ಮರಣದಿಂದ ಇದನ್ನು ನಾನು ಕಲಿತಿದ್ದೇನೆ. ವತ್ಸಲೆ, ಲಗ್ನಮಾಡಿಕೊ ಹಾಗೆಯೆ ಇರಬೇಡ, ತಮ್ಮ ಕುಲವು ನಾಶವಾಗಬಾರದೆಂದು ನಿನ್ನ ಅಜ್ಜನು ಯಾವಾಗಲೂ ಇಚ್ಛಿಸುತ್ತಿದ್ದನು. ಆದುದರಿಂದಲೇ ಅವರು ನನಗೆ ಸತಿ ಹೋಗಗೊಡಲಿಲ್ಲ. ಲಗ್ನಮಾಡಿಕೊಳ್ಳುವಿಯಲ್ಲವೇ'? ವತ್ಸಲೆಯು ನಕ್ಕಳು. ನಾನು ಲಗ್ನವನ್ನು ಮಾಡಿಕೊಳ್ಳುವದಿಲ್ಲ. ನಾನು ದೇವರೊಡನೆ ಲಗ್ನವಾಗುವೆ, ಜ್ಞಾನದೊಡನೆ ಲಗ್ನವಾಗುವೆ. ಎಂದು ಪ್ರೇಮದಿಂದ ನಕ್ಕಳು. ನನ್ನ ತೊಡೆಯಮೇಲೆ ಮಲಗಿದಳು. ಆಕೆಯ ಧ್ವನಿ ಎಷ್ಟು ಮಧುರವಾದುದು! ಆಕೆಯು ಹಾಡನ್ನು ಕಲಿಯುತ್ತಿದ್ದಳು. ಎಲ್ಲ ವಿಷಯಗಳಲ್ಲಿಯೂ ಆಕೆಗೆ ಪ್ರೀತಿ. ಕತ್ತಿ ತಿರುವಲು ಕಲಿತಳು, ಈಸಲು ಕಲಿತಳು. ಆದರೆ ಮಹಾಪೂರದಲ್ಲಿ ಹೋಗಲು ಮಾತ್ರ ಅಂಜುತ್ತಿದ್ದಳು. ಒಮ್ಮೊಮ್ಮೆ ಗಿಡವನ್ನು ಹತ್ತುವಳು. 'ಅಜ್ಜೀ ನಾನು ಮಂಗ, ನಾನು ಗುಬ್ಬಿ, ನಾನು ಗಿಳಿ, ನಾನು ಮೈನಾಕ, ನಾನು ಕೋಕಿಲೆ' ಎಂದು ಎಲ್ಲ ಪಕ್ಷಿಗಳ ಹೆಸರನ್ನು ತೆಗೆದುಕೊಳ್ಳುತ್ತಿದ್ದಳು. 'ಅಜ್ಜೀ, ಗಿಡದ ಮೇಲಿಂದ ಆಕಾಶವು ಕೈಗೆ ಹತ್ತುವದಿಲ್ಲ. ಸುಮ್ಮನೆ ನಮಗೆ ಆಕಾಶವು ತೀರ ಕೆಳಕ್ಕಿರುವಂತೆ ಅನಿಸುವದು' ಹೀಗೆ ಎಂತಹ ಮಾತುಗಳು! ಎಂತಹ ಆಕೆಯ ನಗೆ! ಕಾರ್ತೀಕಾ "ಒಮ್ಮೆ ಆಕೆಯ ಸುಖದಸಂಸಾರ ನೋಡಿದೆನೆಂದರೆ ಮುಗಿಯಿತು. ನನಗೆ ಉಳಿದಾವ ಇಚ್ಛೆಯಿಲ್ಲ." ಎಂದು ಸುಶ್ರುತೆ ಹೇಳಿದಳು.

'ಅಜ್ಜೀ ನಾನು ಇಂದು ಬೆಳಿಗ್ಗೇ ಹೋಗಿಬರುವೆ. ತಿರುಗಿ ಭೆಟ್ಟಿಯಾಗಲಿಕ್ಕಿಲ್ಲ' ಎಂದು ಕಾರ್ತೀಕನು ಅಜ್ಜಿಗೆ ನಮಸ್ಕರಿಸಿದನು.

ಕಾರ್ತೀಕನು ಹೋದನು. 'ವತ್ಸಲೆಯ ಮೇಲೆ ಅವನ ಪ್ರೇಮವಿದೆಯೋ? ಅವನ ಅಂತಃಕರಣದಲ್ಲಿ ವತ್ಸಲೆಯು ಹೇಗೆ ಸೇರಿದಳು? ಹುಟ್ಟಿದ

ಹಬ್ಬಕ್ಕೆಂದು ಅವನು ಬಂದಿದ್ದನೇ ಅಥವಾ ವತ್ಸಲೆಯು ಆಕಸ್ಮಾತ್ತಾಗಿ ಭೆಟ್ಟಿಯಾಗುವಳೆಂದು ಬಂದಿದ್ದನೇ? ವತ್ಸಲೆಯು ಬರುವಳೆಂಬ ಸುದ್ದಿಯನ್ನು ಕೇಳಿ ಅವನೇಕೆ ಬಂದಿರಬಾರದು? ವತ್ಸಲೆಯು ಅವನನ್ನು ಪ್ರೀತಿಸುವಳೇ? ಅವನ ಮನೆಯಲ್ಲಾದರೋ ನಾಗರ ದ್ವೇಷ. ಅವರ ತಂದೆಯಂತೂ ನಾಗರನ್ನು ಬಾಗಿಲಮುಂದೆ ಕೂಡ ಹಾಯಗೊಡುವದಿಲ್ಲ. ವತ್ಸಲೆಯು ಇಂಥ ಮನೆಯಲ್ಲಿ ಹೇಗೆ ಇರುವಳು? ಆದರೆ ಕಾರ್ತೀಕನು ಹಾಗಿರುವದಿಲ್ಲ. ಅವನು ನಾಗ ಹಾಗೂ ಆರ್ಯ ತರುಣರಲ್ಲಿ ಹೊಡೆದಾಟವಾಗಗೊಡಲಿಲ್ಲ. ಅವನು ಸಮನ್ವಯವಾದಿ. ಆದರೆ ಅವನು ಆರ್ಯ. 'ಲಗ್ನವಾದರೆ ನಾಗತರುಣನನ್ನೇ ಆಗುವೆ' ಎಂಬ ವತ್ಸಲೆಯ ನಿಶ್ಚಯವನ್ನು ಕೇಳಿ ಅವನು ನಿರಾಶೆಯಾದ ಸಂಗತಿಯು ಸುಶ್ರೃತೆಯ ಲಕ್ಷದಲ್ಲಿ ಬಂದಿತ್ತು. ಆಗ ಆಕೆಯು ಕಾರ್ತೀಕನು ಸೌಮ್ಯ ವೃತ್ತಿಯ ತರುಣ, ಅವನಲ್ಲಿ ಚಪಲತೆಯು ಕಡಿಮೆ. ಧೈರ್ಯವೂ ಸ್ವಲ್ಪ ಕಡಿಮೆ. ಆದರೆ ಪ್ರಸಂಗವಿಶೇಷದಲ್ಲಿ ಅವನಲ್ಲಿ ತೇಜವು ಪ್ರಕಟವಾಗುವದು. ಆದರೆ ಅವನು ಕ್ರೂರ ಹೃದಯಿಯಲ್ಲ. ಚಿಕ್ಕಂದಿನಲ್ಲಿ ವತ್ಸಲೆ ಹಾಗೂ ಕಾರ್ತೀಕ ಇಬ್ಬರೂ ಕೂಡಿಯೇ ಆಡುತ್ತಿದ್ದರು. ಕೂಡಿಯೇ ಈಸಲು ಹೋಗುತ್ತಿದ್ದರು. ಸುಶ್ರೃತೆಯ ಮನೆಯಲ್ಲಿ ಇಬ್ಬರೂ ಎಷ್ಟೋಸಲ ಉಂಡಿದ್ದರು. ವತ್ಸಲೆಯು ಕಾರ್ತೀಕನ ಮನೆಯಲ್ಲಿ ಅನೇಕಸಲ ಊಟ ಮಾಡಿದ್ದಳು. ಆದರೆ ಇದೆಲ್ಲವೂ ಚಿಕ್ಕಂದಿನ ಚೆಲ್ಲಾಟ. ಚಿಕ್ಕಂದಿನಲ್ಲಿ ಇಬ್ಬರೂ ಕೂಡಿದ್ದರೆಂದು ದೊಡ್ಡವರಾದಮೇಲೆ ಕೂಡಬಹುದೇ! ಚಿಕ್ಕಂದಿನಲ್ಲಿ ಇಬ್ಬರೂ ಕೂಡಿ, ಉಂಡಿರುವರೆಂದು ಈಗಲೂ ಉಣ್ಣಬಹುದೇ? ಈ ಸಮಯದಲ್ಲಿ, ಇಬ್ಬರೂ ಕೂಡಿ ಇರಬಹುದೇ? ಅದರಲ್ಲಿಯೂ ಪತಿ-ಪತ್ನಿಯರೆಂದು ಇಬ್ಬರೂ ಜೀವಿಸಲು ಶಕ್ಯವಿದೆಯೇ? ಎಂಬ ವಿಚಾರಗಳು ಸುಶ್ರೃತೆಯ ತಲೆಯಲ್ಲಿ ಬಂದು ಹೋದವು.

ಸುಶ್ರೃತೆಯು ಒಂದು ದಿನ, ಒಂದು ತೊಡೆಯ ಮೇಲೆ ವತ್ಸಲೆಯನ್ನೂ ಇನ್ನೊಂದು ತೊಡೆಯ ಮೇಲೆ ಕಾರ್ತೀಕನನ್ನೂ ಮಲಗಿಸಿಕೊಂಡಿದ್ದಳು. ಅಂದು ಕಾರ್ತೀಕನ ತಂದೆಯು ಅವನನ್ನು ಹೊಡೆದಿದ್ದನು. ಅಳುವ ಕಾರ್ತೀಕನನ್ನು 'ಕಾರ್ತೀಕಾ! ನಿನ್ನ ತಂದೆ ಬಹಳ ಕ್ರೂರನಿರುವ. ನಡೆ ನಮ್ಮ ಮನೆಗೆ' ಎಂದು ಅವನನ್ನು ಸಮಾಧಾನ ಪಡಿಸಿ, ವತ್ಸಲೆಯು ಮನೆಗೆ ಅವನನ್ನು ಕರೆ

ತಂದಿದ್ದಳು. ಆವನು 'ನಿನಗೆ ತಂದೆಯಿಲ್ಲ ಎಷ್ಟು ಚೆನ್ನಾಗಿದೆ! ಏಕೆಂದರೆ ನಿನಗೆ ಹೊಡೆಯುವವರು ಯಾರೂ ಇಲ್ಲ' ಎಂದು ಆನ್ನುವಷ್ಟರಲ್ಲಿ ಸುಶ್ರುತೆಯು ಆವನ ಬಾಯಿಯ ಮೇಲೆ ಕೈಯಿಟ್ಟು ಹಾಗೆಲ್ಲ ಮಾತನಾಡಬಾರದು ಎಂದು ಸಮಾಧಾನ ಪಡಿಸಿದ್ದಳು. ಇಬ್ಬರನ್ನೂ ತನ್ನ ತೊಡೆಯ ಮೇಲೆ ಮಲಗಿಸಿ ಕೊಂಡಿದ್ದಳು. ಆ ದಿನ ಕಾರ್ತೀಕನು ಮನೆಗೆ ಹೋಗಲೇ ಇಲ್ಲ. ರಾತ್ರಿ ಸುಶ್ರುತೆಯ ಹತ್ತರವೇ ಮಲಗಿದ್ದನು. ಒಂದೆಡೆಗೆ ಕಾರ್ತೀಕ, ಒಂದೆಡೆಗೆ ವತ್ಸಲೆ.

ಈ ಎಲ್ಲ ಮಾತುಗಳು ಸುಶ್ರುತೆಗೆ ಒಂದರ ಹಿಂದೊಂದು ನೆನಪಾಗ ಹತ್ತಿದವು. ಆದರೆ ಅಂದಿನ ವತ್ಸಲೆಯು ಇಂದಿರಲಿಲ್ಲ. ಆಕೆಯು ಸ್ವತಂತ್ರ ವಿಚಾರದ, ತೇಜಸ್ವಿಕಲ್ಪನೆಗಳ ನವತಾರುಣ್ಯದಲ್ಲಿ ನಡೆಯುತ್ತಲಿದ್ದಾಳೆ. ಆಕೆಯು ಬಂಧನಕ್ಕೊಳಗಾಗಲು ಇಚ್ಛಿಸುವದಿಲ್ಲ. ಆಕಾಶದಲ್ಲಿ ಸ್ವತಂತ್ರ ಹಕ್ಕಿಯಂತೆ ಹಾರಾಡಲು ಇಚ್ಛಿಸುತ್ತಿರುವಳು. ದಿಕ್ಕಾಲಾತೀತವಾದ ತತ್ವದ ದರ್ಶನವನ್ನು ತೆಗೆದುಕೊಳ್ಳಲು ಅಪೇಕ್ಷಿಸುತ್ತಿರುವಳು. ಕೊನೆಗೆ ಆ ಹುಚ್ಚಿ ವತ್ಸಲೆಗೆ ಪರಬ್ರಹ್ಮನು ಒಂದು ಮೂರ್ತಿಯಲ್ಲಿಯೂ ಇರುವನು.ಒಬ್ಬರ ಸೇವೆಯಲ್ಲಿಯೇ ಆವನು ದೊರೆಯುವನು. ಒಬ್ಬರ ಕಟಾಕ್ಷದಲ್ಲಿಯೇ ಆವನಿರುವನು. ಅನಂತ ಕಾಲವು ಒಂದು ಕ್ಷಣದಲ್ಲಿಯೇ ಇದೆ. ಎಂಬ ಸಂಗತಿಯನ್ನು ಆಕೆಯು ಕಲಿಯಬಹುದು ಎಂದು ಸುಶ್ರುತೆಯು ನಗಹತ್ತಿದಳು. ಒಂದುದಿನ ಬಂಧನ ದಲ್ಲಿಯೇ ಮೋಕ್ಷವಿದೆಯೆಂದು ವತ್ಸಲೆಯು ತಿಳಿಯಬಹುದೆಂಬ ಕಲ್ಪನೆಯು ಬಂದೊಡನೆಯೇ ಸುಶ್ರುತೆಯು ದೊಡ್ಡ ದನಿಯಿಂದ ನಗಹತ್ತಿದಳು.

* * *

೩

ರಾಜಾ ಪರೀಕ್ಷಿತನು ಚಿತ್ರಶಾಲೆಯಲ್ಲಿ ಕುಳಿತಿದ್ದಾನೆ. ಆ ಚಿತ್ರ ಶಾಲೆಯು ಅತ್ಯಂತ ಸುಂದರವಾಗಿದೆ. ಸ್ವತಃರಾಜನೇ ಅದನ್ನು ಸಿದ್ಧಗೊಳಿಸಿದ್ದನು. ಅನೇಕ ಮಹತ್ವದ ಪ್ರಸಂಗಗಳ ಚಿತ್ರಗಳನ್ನು ಹೆಸರಾಂತ ಚಿತ್ರಗಾರರಿಂದ ಬರೆಯಿಸಿದ್ದನು. ಕೌರವ ಪಾಂಡವರ ಸೈನ್ಯಗಳೆರಡೂ ರಣ ಸನ್ನದ್ಧವಾಗಿ ರಣಾಂಗಣದಲ್ಲಿ ಎದುರು ಬದರು ನಿಂತಿವೆ. ಅರ್ಜುನನು 'ರಥವನ್ನುಹೊಡೆ' ಎಂದು ಶ್ರೀ ಕೃಷ್ಣನಿಗೆ ಹೇಳುತ್ತಿದ್ದಾನೆ. ರಥವನ್ನು ರಣ ಮಧ್ಯದಲ್ಲಿ ನಿಲ್ಲಿಸಿದೊಡನೆ ಅರ್ಜುನನು ರಥದಲ್ಲಿ ಎದ್ದುನಿಂತು, ಸುತ್ತು ಮುತ್ತಲೂ ನೋಡುತ್ತಾನೆ. ಅವನಿಗೆ ತನ್ನ ಕುಲಕ್ಷಯವು ಕಾಣಹತ್ತಿತ್ತು. 'ಯುದ್ಧಬೇಡ, ವೆಂದು ಅವನು ಅನ್ನಹತ್ತಿದನು. ಕೈಯಲ್ಲಿಯ ಗಾಂಡೀವಿ ಕಳಚಿ ಬಿದ್ದಿದೆ. ಇಂತಹ ಪ್ರಸಂಗದ ಒಂದು ಸುಂದರವಾದ ಚಿತ್ರವೊಂದಿತ್ತು. ಭೀಷ್ಮನು ಶರಪಂಜರದ ಮೇಲೆ ಮಲಗಿದ್ದಾನೆ, ಅವನಿಗೆ ನೀರಡಿಕೆಯಾಗಿದೆ, ಅರ್ಜುನನು ಬಾಣವನ್ನು ಹೊಡೆದು, ಪಾತಾಳ ಗಂಗೆಯನ್ನು ತಂದು ಆತನ ಬಾಯಿಯಲ್ಲಿ ಬಿಡುವ ಪ್ರಸಂಗವನ್ನು ಅಲ್ಲಿ ಚಿತ್ರಿಸಿದ್ದರು. ಒಂದು ಚಿತ್ರದಲ್ಲಿ ಭಗವಾನ್ ಶ್ರೀ ಕೃಷ್ಣನು ಗೋಕುಲದಲ್ಲಿ ದನಗಳನ್ನು ಮೇಯಿಸುತ್ತಿದ್ದಾನೆ. ಕೃಷ್ಣಶಿಷ್ಟಾಯಿಯ ಚಿತ್ರವೂ ಅಲ್ಲಿ ಚಿತ್ರಿಸಲ್ಪಟ್ಟಿತ್ತು. ಊರ್ವಶಿಯು ಅರ್ಜುನನ್ನು ಮೋಹದಲ್ಲಿ ಕೆಡವಿದ ಪ್ರೇಮದ ಚಿತ್ರ ಒಂದಿದ್ದಿತು. ವಿರಾಟನಗರದಲ್ಲಿ ರಾಜಾ ವಿರಾಟನು ಧರ್ಮರಾಜನ ತಲೆಗೆ ಪಗಡೆ ಒಗೆಯಲು ರಕ್ತಬಂದಿತು. ಆ ರಕ್ತವು ಕೆಳಗೆ ಬೀಳಬಾರದೆಂದು ಅದನ್ನು ಅಂಗೈಯಲ್ಲಿ ಹಿಡಿದ ಪ್ರಸಂಗವನ್ನು

ರಮಣೀಯವಾಗಿ ಚಿತ್ರಿಸಿದ್ದಾರೆ. ವೀರನಾದ ಅಭಿಮನ್ಯು ಒಬ್ಬನೇ ಕರ್ಣದ್ರೋಣರೊಡನೆ ಯುದ್ಧಮಾಡುವ ಸುಂದರ ಚಿತ್ರವು ಇದೆ. ಅರ್ಜುನನು ಖಾಂಡವವನವನ್ನು ದಹಿಸಿ ಅಗ್ನಿಯೆಂಬ ಋಷಿಗೆ ಅದನ್ನು ಅರ್ಪಿಸಿದನು. ಆಗ ಆ ಋಷಿಯು ಅರ್ಜುನನಿಗೆ "ವಿಜಯರಥ"ವನ್ನು ಪ್ರಸನ್ನನಾಗಿ ಕೊಡುವ ದೃಶ್ಯವನ್ನು ಬಹು ಸುಂದರವಾಗಿ ಚಿತ್ರಿಸಿದ್ದಾರೆ. ಈ ಚಿತ್ರಶಾಲೆಯು ಒಂದು ಚಿತ್ರಮಯ ಇತಿಹಾಸವೇ ಇದ್ದಿತು. ಈ ಚಿತ್ರಗಳ ದರ್ಶನದಿಂದ ವಿವಿಧ ಭಾವನೆಗಳು ಮನಸ್ಸಿನಲ್ಲಿ ಹುಟ್ಟುವವು. ಒಮ್ಮೆ ಕಾರುಣ್ಯವು ಉಕ್ಕೇರಿಬಂದು, ಅಶ್ರುಧಾರೆ ಸುರಿಯುತ್ತದೆ ಒಮ್ಮೆ ಮೈಮೇಲೆ ಮುಳ್ಳು ಏಳುತ್ತವೆ. ಒಮ್ಮೊಮ್ಮೆ ಮನದಲ್ಲಿ ವೀರರಸ ಸಂಚಾರವಾದರೆ, ಇನ್ನೊಮ್ಮೆ ಗಂಭೀರ ಭಾವನೆಯು ಹೃದಯವನ್ನು ತುಂಬುತ್ತದೆ. ಅನೇಕ ಮಹಾನ್‌ವಿಭೂತಿಗಳು ಕಣ್ಣೆದುರು ನಿಲ್ಲುತ್ತಾರೆ. ಸತ್ವಶೀಲನಾದ ಧರ್ಮರಾಜನು, ಪರಾಕ್ರಮಿಯಾದರೂ ಕೂಡ ಶಿಷ್ಟಾಯಿಗೆ ಹೋಗುವಾಗ 'ದೇವಾ! ಶಕ್ಯವಿದ್ದಷ್ಟು ಯುದ್ಧವನ್ನು ತಪ್ಪಿಸು, ಎಂದು ಹೇಳುವ ಉದಾರ ಹೃದಯಿಯಾದ ಭೀಮ, ವೀರ ಶಿರೋಮಣಿ ಅರ್ಜುನ, ಪ್ರೇಮಮೂರ್ತಿಗಳಾದ ನಕುಲ ಸಹದೇವರು, ತೇಜಸ್ವಿನಿಯೂ ಕಾರುಣ್ಯ ಮೂರ್ತಿಯೂ ಆದ ದ್ರೌಪದಿ, ಅಮರನಾದ ಅಭಿಮನ್ಯು, ಗಂಡನು ಕುರುಡನೆಂದು ತನ್ನ ಕಣ್ಣುಗಳನ್ನು ಕಟ್ಟಿಕೊಂಡು ಯಾವಾಗಲೂ ವ್ಯವಹರಿಸುತ್ತಿದ್ದ ಪತಿವ್ರತೆ ಗಾಂಧಾರಿ, ಸ್ವಾಭಿಮಾನಿಯಾದ ದುರ್ಯೋಧನ, ಭೀಮನ ಗದೆಯಿಂದ ತೊಡೆಮುರಿದು ರಣದಲ್ಲಿ ಮಲಗಿದ್ದರೂ ಕೂಡ, "ನನಗೇನು ಕೆಡುಕಾಗಿದೆ? ಕ್ಷತ್ರಿಯನಿಗೆ ಮರಣವು ನಿಶ್ಚಿತವು, ನಾನು ಸಾಮ್ರಾಜ್ಯವನ್ನು ಭೋಗಿಸಿದೆ. ಭೀಮನಂಥವನಿಗೆ ಕೈಯಲ್ಲಿ ಅಡಿಗೆಯ ಸವಟು ಹಿಡಿಸಿದೆ. ಅರ್ಜುನನಿಗೆ ಬೃಹನ್ನಳೆಯನ್ನಾಗಿ ಮಾಡಿದೆ. ಇನ್ನೇನು ನನಗೆ ಬೇಕು?" ಎಂಬ ದುರ್ಯೋಧನನ ಉದ್ಗಾರಗಳು! ಉದಾರ ಧೀರನಾದ ಕರ್ಣ, ಇಚ್ಛಾಮರಣಿಯಾದ ಭೀಷ್ಮ, ಯಮನಂತೆ ಯುದ್ಧಮಾಡುವ, ಆದರೆ ಮಗನ ಮರಣವಾರ್ತೆ ಕೇಳಿ ಮರಣವನ್ನಪ್ಪಿಕೊಳ್ಳಲು ಸಿದ್ಧನಾದ ಪ್ರೇಮಮೂರ್ತಿ ದ್ರೋಣ, ಕರ್ಮಯೋಗಿ ಶ್ರೀಕೃಷ್ಣ, ಅವನ ಗೆಳೆಯನಾದ ವಿದುರ, ಹಾಗು ಪಾಂಡವರು ಅರಣ್ಯದಲ್ಲಿರುವಾಗ, ವಿದುರನಲ್ಲಿ ದಾರಿದ್ರ್ಯದಲ್ಲಿ ಕಾಲಕಳೆಯುತ್ತಿದ್ದ ಸ್ವಾಭಿಮಾನಿ ಕುಂತಿ; ಎಲ್ಲರಿಗೂ ನಮಸ್ಕಾರಗಳು; ಎಲ್ಲ

ಸ್ತ್ರೀಪುರುಷರಿಗೆ ಪ್ರಣಾಮುಗಳು. ಎಂತಹ ವೈಭವಶಾಲಿ ಸಂತತಿಯಿದು. ಆದರೆ ಈ ಎಲ್ಲರೂ ಕುರುಕ್ಷೇತ್ರದಲ್ಲಿ ಸಂಹರಿಸಲ್ಪಟ್ಟರು. ಕಾರಣವೇನು? ಅಣ್ಣ ತಮ್ಮಂದಿರ ಜಗಳ! ಭಾರತ ವರ್ಷದಲ್ಲಿಯ ಲಕ್ಷಾವಧಿ ಕ್ಷತ್ರಿಯರು ಹೋರಾಡಿ ಧಾರಾತೀರ್ಥದಲ್ಲಿ ಮಡಿದರು. ಲಕ್ಷಾಂತರ ಸ್ತ್ರೀಯರು ವಿಧವೆಯರಾದರು. ಲಕ್ಷಾವಧಿ ಚಿಕ್ಕಮಕ್ಕಳು ಪಿತೃಹೀನರಾದರು.

ಪರೀಕ್ಷಿತನು ಮಹಾಭಾರತವನ್ನೇ ಬಣ್ಣ ಬಣ್ಣಗಳಲ್ಲಿ ಬರೆಯಿಸಿದ್ದನು. ಕಣ್ಣೀರು ಹಾಗು ರಕ್ತದಿಂದಲೇ ಈ ಭಾರತವು ಬರೆಯಲ್ಪಟ್ಟಿತ್ತು. ಮೂಕ-ಆಕೃತಿಗಳು ಮೂಕ—ಪ್ರಸಂಗಗಳು. ಆದರೆ ಆ ಮೂಕತನಕ್ಕೆ ಅನಂತ ನಾಲಗೆಗಳಿವೆ. ಪರೀಕ್ಷಿತನು ಬೇಸತ್ತಾಗ ಬಂದು, ಈ ಚಿತ್ರಶಾಲೆಯಲ್ಲಿ ಕೂಡುವನು. ಆನಂದಿಸುವನು. ವರ್ತಮಾನ ಕಾಲವನ್ನು ಮರೆತು, ಭೂತ ಕಾಲದಲ್ಲಿ ತನ್ಮಯನಾಗುವನು.

ಒಂದು ಚಿತ್ರದ ಎದುರು ನಿಂತಿದ್ದಾನೆ. ಅಶ್ರುಧಾರೆಯು ಸುರಿಯುತ್ತಲಿದೆ. ಅದನ್ನು ನೋಡಿಯೇ ನೋಡುತ್ತಿದ್ದಾನೆ. ತಾಯಿಯಾದ ಉತ್ತರೆಯು ಸತಿ ಹೋಗಬೇಕೆನ್ನುತ್ತಿದ್ದಾಳೆ. ಧರ್ಮ, ಭೀಮ, ಅರ್ಜುನ, ಸುಭದ್ರಾ, ಎಲ್ಲರೂ ಶೋಕಮಗ್ನರಾಗಿದ್ದಾರೆ. ಶ್ರೀ ಕೃಷ್ಣನು ಉತ್ತರೆಯನ್ನು ಸಮಾಧಾನಪಡಿಸುತ್ತಿದ್ದಾನೆ. ಪರಾವೃತ್ತಗೊಳಿಸುತ್ತಿದ್ದಾನೆ. ಇಂತಹ ಪ್ರಸಂಗದ ಚಿತ್ರವದು. ಪರೀಕ್ಷಿತನು ಅದನ್ನು ನೋಡುವದರಲ್ಲಿ ಮೈಮರೆತಿದ್ದನು.

ಮೆಲ್ಲಗೆ ಹೆಜ್ಜೆಯನ್ನಿಕ್ಕುತ್ತ ಒಬ್ಬನು ಒಳಗೆ ಬಂದನು: ಆವನ ಮುಖ ಮುದ್ರೆಯು ಪ್ರಸನ್ನವಿರಲಿಲ್ಲ. ಮೋರೆಯ ಮೇಲೆ ಮನುಷ್ಯತ್ವವೇ ಇದ್ದಿಲ್ಲ. ಉಗ್ರವಾಗಿ ಕಾಣುತ್ತಿದ್ದಾನೆ. ಈ ಕಪಟಿಯು ಯಾರು?

"ಪರೀಕ್ಷಿತ! ಅಂಥದೇನನ್ನು ನೋಡುವಿ ಆ ಚಿತ್ರದಲ್ಲಿ?" ಎಂದು ಬಂದವನು ವಿಚಾರಿಸಿದ.

"ಯಾರು ವಕ್ರತುಂಡನೇ, ಯಾವಾಗ ಬಂದಿ?, ಎಂದು ಪರೀಕ್ಷಿತನು ತಿರುಗಿ ನೋಡಿ ವಿಚಾರಿಸಿದನು.

"ಬಹಳ ಹೊತ್ತಾಯಿತು, ರಾಜನೀತಿಗೃಹದಲ್ಲಿ ನಿಮ್ಮ ದಾರಿಯನ್ನು ಕಾದೆ. ಕೊನೆಗೆ ಸೇವಕನಿಂದ ನೀವು ಇಲ್ಲಿರುವಿರಿ ಎಂದು ತಿಳಿಯಿತು. ಇಲ್ಲಿಗೆ

ಬಂದೆ, ನಿಮ್ಮ ಅನುಗ್ರಹದಿಂದ ಯಾರೂ ನನ್ನನ್ನು ತಡೆಯಲಿಲ್ಲ. ಯಾಕೆ ಇಂದು ನಿಮ್ಮ ಮೈಯಲ್ಲಿ ನೆಟ್ಟಗಿಲ್ಲವೆ? ಕಣ್ಣೀರು ಸುರಿಸುತ್ತಿರುವುದೇಕೆ? ಎಂದು ವಕ್ರತುಂಡನು ಸವಿಮಾತುಗಳ ಮಳೆಗರೆದನು.

'ವಕ್ರತುಂಡಾ! ಈ ಚಿತ್ರವನ್ನು ನಾನು ಮೇಲಿಂದ ಮೇಲೆ ನೋಡುತ್ತೇನೆ. ನನ್ನ ತಾಯಿಯು ಸತಿ ಹೋಗಿದ್ದರೆ, ನಾನು ಹುಟ್ಟುತ್ತಲೇ ಇರಲಿಲ್ಲ. ನಾನು ಹುಟ್ಟಿದ್ದೇನೋ ನಿಜ! ಆದರೆ ನನ್ನ ತಾಯಿಯ ಹಾಸ್ಯ ಮುಖವನ್ನು ಒಮ್ಮೆಯೂ ನಾನು ನೋಡಲಿಲ್ಲ. ಆಕೆಯು ಜೀವಂತವಿದ್ದರೂ ಮೃತಪ್ರಾಯಳಾಗಿದ್ದಳು. ಆಕೆಯ ಮನಸ್ಸು ಆಕೆಯದೇಹದಲ್ಲಿರಲಿಲ್ಲ. ಆಕೆಯ ವಿಚಾರಗಳು, ಆಕೆಯ ಭಾವನೆಗಳು, ಆಕೆಯ ಆತ್ಮಾ ಎಂದೋ ಹೊರಟು ಹೋಗಿದ್ದವು. ನನ್ನ ತಾಯಿಯು ಕ್ಷಣಕ್ಕೊ ಸತಿ ಹೋಗುತ್ತಿದ್ದಾಳೆ ಎಂದು ಭಾಸವಾಗುತ್ತಿತ್ತು. ನನ್ನ ಸಲುವಾಗಿ ಆಕೆಯು ಬದುಕಿದ್ದಳು. ನಾನು ದುರ್ಭಾಗ್ಯ! ತಾಯಿಯ ಹೊಟ್ಟೆಯಲ್ಲಿ ಬಂದೆ. ವೀರನಾದ ತಂದೆಯನ್ನು ಕೊಂದೆ. ನಾನು ಕರಿಗಾಲ, ಅಭದ್ರ! ಹುಟ್ಟುವಾಗಲೂ ಸತ್ತಂತೆಯೇ ಹುಟ್ಟಿದೆ. ಆದರೆ ಶ್ರೀ ಕೃಷ್ಣನು ಸಜೀವನನ್ನಾಗಿ ಮಾಡಿದನು. ಈ ಚಿತ್ರವೆಂದರೆ ನನ್ನ ಜನ್ಮದ ಕಥೆಯು. ಈ ಚಿತ್ರವೆಂದರೆ ನನ್ನ ಜನ್ಮ. ಆದರೆ ಹುಟ್ಟಿ ನಾನು ಮಾಡಿದ್ದೇನು. ?"

"ಏನೂ ಮಾಡಿರದಿದ್ದರೆ ಮಾಡು. ಏನಾದರೂ ಅಪೂರ್ವವಾದುದನ್ನು ಮಾಡು! ತೇಜಸ್ವಿಯಾದ ಕಾರ್ಯವನ್ನು ಮಾಡು. ನನ್ನ ತಲೆಯಲ್ಲಿ ಅನೇಕ ದಿನಗಳಿಂದ ಒಂದು ವಿಚಾರವು ಸುಳಿಯುತ್ತಲಿದೆ. ಆದರೆ ಅದು ಯಾರಿಗೂ ರುಚಿಸುವದಿಲ್ಲ. ನಾನು ಮಾತ್ರ ಪ್ರಚಾರ ಮಾಡುತ್ತಲೇ ಇರುವೆ. ರಾಜ್ಯಾಧಿಕಾರದ ಸಹಾಯವಿಲ್ಲದೆ ಅದು ಕಾರ್ಯಕಾರಿಯಾಗಲಾರದು. 'ಯಥಾ ರಾಜಾ ತಥಾ ಪ್ರಜಾ,! 'ರಾಜಾ ಕಾಲಸ್ಯ ಕಾರಣಂ, ಎಂಬುದು ನಿಜ ರಾಜನೆಂದರೆ ಪ್ರಜೆಗಳ ದೈವತ 'ಪ್ರಜೆಗಳ ಮಂಗಲವೆಲ್ಲ, ಪುಣ್ಯವೆಲ್ಲ ರಾಜನ ಕೈಯಲ್ಲಿದೆ, ಎಂದೆನ್ನುವದು ಒಂದು ದೃಷ್ಟಿಯಿಂದ ಸರಿಯಿದೆ. ಏಕೆಂದರೆ ಮೊದಲು ಪ್ರಜೆಗಳೇ ರಾಜನನ್ನು ನೇಮಿಸುತ್ತಿದ್ದರು. ರಾಜನೆಂದರೆ ನಮ್ಮ ಧ್ವನಿ, ರಾಜನೇ ನಮ್ಮ ಸಂಪತ್ತು,

ಆತನೇ ನಮ್ಮ ದೈವತವೆಂದು ಮುಂದೆ ಪ್ರಜೆಗಳು ಮನ್ನಿಸಹತ್ತಿದರು. ಸಮಾಜದ ಮೇಲೆ ರಾಜ ಶಾಸನದ ಪರಿಣಾಮವು ಬಹಳವಾಗುವದು. ರಾಜನ ಮನಸ್ಸಿನಲ್ಲಿರುವದನ್ನೇ ಅವನ ಜನರು ಮನ್ನಿಸುವರು. ಮಂತ್ರಿಗಳು, ಸೇನಾಪತಿಗಳು, ರಾಜದೂತರು, ಎಲ್ಲರೂ ರಾಜನಿಗೆ ಸೇರುವದನ್ನೇ ಮಾಡಹತ್ತುವರು. ಪ್ರಜೆಗಳಿಗೆ ಸಂಬಂಧ ಬರುವದು, ಈ ಅಧಿಕಾರಿ ವರ್ಗದ್ದೆ. ಆದುದರಿಂದ ಈ ಅಧಿಕಾರಿವರ್ಗದ ಕೃಪೆಯು ತಮ್ಮ ಮೇಲಿರಲಿ ಎಂದು ಪ್ರಜೆಗಳು ಬಯಸುವದು ಸ್ವಾಭಾವಿಕ; ಆದುದರಿಂದಲೇ ಪ್ರಜೆಗಳು ಅಧಿಕಾರಿಗಳ ಮನಸ್ಸಿನಂತೆ ನಡೆದುಕೊಳ್ಳುವರು. ಯಾರಾದರೂ ಈ ಅಧಿಕಾರಿಗಳ ವಿಚಾರದ ವಿರುದ್ಧ ನಡೆಯುವರೆಂದು ಕಂಡರೆ ಅಧಿಕಾರಿಗಳು ಕೂಡಲೇ ಅವರನ್ನು ದಂಡಿಸುವರು. ಅವರು ದೇಶ ಬಿಟ್ಟು ಹೋಗುವಂತೆ ಮಾಡುವರು. ದೇಹವನ್ನು ದಂಡಿಸುವರು. ಕೊನೆಗೆ 'ಹೇಗೆ ರಾಜನೋ ಹಾಗೆ ಪ್ರಜೆಗಳು, ಎಂಬ ಮಾತು ಸತ್ಯವಾಗುತ್ತಿದೆ. ನನ್ನ ವಿಚಾರಗಳು ಏಕೆ ಕಾರ್ಯಕಾರಿಯಾಗುವದಿಲ್ಲೆಂಬುವನ್ನು ನಿನಗೆ ಹೇಳಿಯೇ ಇದ್ದೇನೆ. ಈಗ ನಾಗ ಜಾತಿಯ ಉಚ್ಚಾಟನೆಯು ಆಗಲೇಬೇಕು. ನೀನು ಎಲ್ಲ ಆರ್ಯರಲ್ಲಿ ಇದನ್ನು ಪ್ರಚಾರ ಮಾಡು. ನಿನ್ನ ಮಾಂಡಲೀಕರಿಗೆಲ್ಲ ಇದನ್ನು ಉಪದೇಶಿಸು. ಅಲ್ಲದೆ ನಿನ್ನನ್ನು ಮನ್ನಿಸುವ, ನಿನ್ನ ಮಾತುಗಳನ್ನು ಕೇಳುವ ರಾಜರನ್ನೆಲ್ಲ ಈ ಸಂಘಟನೆಯಲ್ಲಿ ತೆಗೆದುಕೋ! ರಾಜಾ, ಆರ್ಯರ ರಕ್ತವು ಶುದ್ಧ ಉಳಿಯಲೇಬೇಕು. ಎಷ್ಟೋ ಆರ್ಯ ತರುಣರು ನಿಶ್ಶಂಕರಾಗಿ ನಾಗ ಕನ್ನೆಯರನ್ನು ಮದುವೆಯಾಗತೊಡಗಿದ್ದಾರೆ. ಅದೂ ಹೋಗಲಿ ಏನಿದು? ಆರ್ಯ ತರುಣಿಯರೂ ನಾಗ ತರುಣರೊಡನೆ ಲಗ್ನವಾಗತೊಡಗಿದ್ದಾರೆ! ಆದುದರಿಂದ ತಂದೆ ತಾಯಿಗಳು, ಮಕ್ಕಳು ಚಿಕ್ಕವರಿರುವಾಗಲೇ ಲಗ್ನ ಮಾಡಿಬಿಡಬೇಕೆಂದು, ನನಗೆ ಅನಿಸುವದು. ಅಂದರೆ ಮಾತ್ರ ಈ ಅವಿವೇಕವು ನಿಲ್ಲುವದು. ಆದರೆ ನನ್ನ ಈ ವಿಚಾರಗಳನ್ನು ಕೇಳಿ ಜನರು ನಗುವರು. ಅನೇಕ ಆಶ್ರಮಗಳಲ್ಲಿಯ ಕುಲಪತಿಗಳೊಡನೆ ಈ ವಿಚಾರವನ್ನು ಮಾಡಿದ್ದೇನೆ. ಅವರಿಗೆ ಈ ಬಾಲ ವಿವಾಹವು ಸರಿ ಎನಿಸಲೊಲ್ಲದು. 'ಲಗ್ನವೆಂದರೆ ಚೇಷ್ಟೆಯಲ್ಲ,ವೆಂದು ಅವರು ಅನ್ನುತ್ತಾರೆ. ಆದರೆ, ನನ್ನ ಮತ

ದಂತೆ ಈಗ ನಡೆದಿರುವದೇ’ ಚೇಷ್ಟೆಯಾಗಿದೆ. ಯಾರು ಬೇಕಾದವರು ಬೇಕಾದವರನ್ನು ಮದುವೆಯಾಗುವದು ಗಂಭೀರತನವೇ? ಸ್ವೈರಾಚಾರ. ಪರೀಕ್ಷಿತಾ! ಆರ್ಯ ಕನ್ಯೆಯರು ನಾಗರೊಡನೆ ಮದುವೆಯಾಗಕೂಡ ದೆಂದೂ ನಾಗ ತರುಣರು ಆರ್ಯ ಕನ್ಯೆಯರೊಡನೆ ಮದುವೆಯಾಗುವ ಸಾಹಸಕ್ಕೆ ಕೈ ಹಾಕಬಾರದೆಂದೂ ಒಂದು ರಾಜಾಜ್ಞೆಯನ್ನು ಹೊರಡಿಸು. ನನಗಂತೂ ಈ ಸಂಕರವು ಸಹನವಾಗಲೊಲ್ಲದು. ಆರ್ಯ ಸಂಸ್ಕೃತಿಯು ಉಚ್ಚವಾದುದು. ನಾಗರೊಡನೆ ಮಿಶ್ರವಾಗುವದರಿಂದ ಆರ್ಯ ಸಂಸ್ಕೃತಿಯು ಹಾಳಾಗುವದು. ಆರ್ಯ ಸಂಸ್ಕೃತಿಯ ಪ್ರಸಾರವಾಗಲೇಬೇಕು. ಅಲ್ಲಲ್ಲಿ ಆರ್ಯರ ವಸಹಾತುಗಳಾಗಬೇಕು. ನಮ್ಮ ಸಂಸ್ಕೃತಿಯ ಪ್ರಸಾರದ ಆಶ್ರಮಗಳು ಹೊರಡಬೇಕು. ಮೊದಲಾದರೋ ಈ ಉಚ್ಚ ಧ್ಯೇಯವನ್ನು ಕಾರ್ಯಕಾರಿ ಮಾಡಲು ಅನೇಕ ಜನರು ಇರುತ್ತಿದ್ದರು. ಆದರೆ ಏನು ಮಾಡುವದು? ಎಲ್ಲವೂ ಗೊಂದಲಮಯವಾಗಿದೆ. ಉದಾರತೆಯ ಹೆಸರಿನಲ್ಲಿ ಭ್ರಷ್ಟಾಕಾರವು ನಡೆದಿದೆ. ಈ ನಾಗರನ್ನು ಸುಟ್ಟುಹಾಕಬೇಕೆನಿಸುತ್ತದೆ. ಆದರೆ ನನ್ನೊಬ್ಬನ ಮನಸ್ಸಿನಲ್ಲಿ ಬಂದು ಉಪಯೋಗವೇನು?” ಎಂದು ವಕ್ರತುಂಡನು ನಿಟ್ಟುಸುರು ಬಿಟ್ಟನು.

“ವಕ್ರತುಂಡಾ! ಅನೇಕ ದಿನಗಳಿಂದ ನೀನು ಈ ಮಾತನ್ನು ಹೇಳುತ್ತಿರುವಿ. ಆದರೆ ನಿನ್ನ ವಿಚಾರಗಳು ನನಗೆ ರುಚಿಸಲೊಲ್ಲವು. ನನ್ನ ಅಜ್ಜನೇ ನಾಗಕನ್ಯೆಯೊಡನೆ ಮದುವೆಯಾಗಿರಲಿಲ್ಲವೇ? ಉಲೂಪಿ, ಹಾಗು ಚಿತ್ರಾಂಗದೆಯರು ನಾಗಕನ್ನೆಯರೇ ಅಲ್ಲವೇ! ಇಂಥಹ ವಿವಾಹಗಳು ನಿಷಿದ್ಧವೆಂದು ಅವರಿಗೆ ಅನಿಸಿದ್ದರೆ, ಅವರು ಲಗ್ನವಾಗುತ್ತಲೇ ಇರಲಿಲ್ಲ;” ಎಂದು ಪರೀಕ್ಷಿತನು ನುಡಿದನು.

‘ರಾಜಾ, ಅರ್ಜುನನು ನಾಗ ಕನ್ನೆಯರೊಡನೆ ಮದುವೆಯಾದುದು ನಿಜ. ಆದರೆ ಅವರನ್ನು ಇಂದ್ರಪ್ರಸ್ಥಕ್ಕೆ ಎಂದೂ ಕರೆತರಲಿಲ್ಲ. ಸುಭದ್ರೆ, ದ್ರೌಪದಿಯರಿಗಿದ್ದ ಮರ್ಯಾದೆಯನ್ನು ಅವರಿಗೆ ಎಂದೂ ಕೊಡಲಿಲ್ಲ. ಇಂತಹ ಸಂಬಂಧಗಳನ್ನು ಪ್ರಾಚೀನ ಆರ್ಯರು ಶ್ರೇಷ್ಠವೆಂದು ತಿಳಿಯುತ್ತಿದ್ದಿಲ್ಲ. ಅಶ್ವಮೇಧದ ಸಮಯದಲ್ಲಿ ಬಭ್ರುವಾಹನನು ಎದುರು ನಿಂತಾಗ ಅರ್ಜುನನು ಏನೆಂದು ಹೇಳಿದ? ನೆನಪುಂಟೇ! “ಆ ಅಭಿಮನ್ಯುವೊಬ್ಬನೇ

ನನ್ನ ಮಗ. ನನ್ನ ಮಗನೆಂದು ನೀನು ಹೇಳಿಕೊಳ್ಳಬೇಡ! ನರಿಯ ಮರಿಯು ಸಿಂಹದ ಮರಿಯಾಗಲು ವ್ಯರ್ಥವಾಗಿ ಯತ್ನಿಸಬಾರದು, ಎಂದು ಉದ್ಗಾರ ತೆಗೆದನು. ಆದನ್ನು ಕೇಳಿ ಬಭ್ರುವಾಹನನು ಸಂತಪ್ತನಾದನು. ಇದು ತಾಯಿಯ ಅಪಮಾನವೆಂದು ತಿಳಿದನು. ಇಬ್ಬರಲ್ಲಿಯೂ ತುಮುಲಯುದ್ಧವು ನಡೆಯಿತು. ಇದರಿಂದ ನಿನ್ನ ಅಜ್ಜನು ಇಂತಹ ವಿವಾಹಗಳಿಗೆ ಏನು ಬೆಲೆ ಕೊಡುತ್ತಿದ್ದ ನೆಂಬುದು ತಿಳಿಯುವದಿಲ್ಲವೇ! ಇಕೋ ಇಲ್ಲಿ ನೋಡು, ನಿನ್ನ ಅಜ್ಜನು ಖಾಂಡವವನವನ್ನು ದಹಿಸುತ್ತಿದ್ದಾನೆ. ನರ್ಮದೆಯ ತೀರದಲ್ಲಿ ತಕ್ಷಕುಲದ ನಾಗರ ದೊಡ್ಡ ವಸತಿಯಿದ್ದಿತು. ಆದರೆ ಮಹಾನ್ ಅಗ್ನಿಗೆ ಅಲ್ಲಿ ಆಶ್ರಮವನ್ನು ಸ್ಥಾಪಿಸಬೇಕಾಗಿದ್ದಿತು. ನದಿಗಳೆಂದರೆ ವಸಹಾತುಮಾಡಲು ಯೋಗ್ಯವಾದ ಸ್ಥಳ. ಎಲ್ಲ ನದಿಗಳ ತೀರದ ಮೇಲೆಯೂ ಆರ್ಯರ ಆಶ್ರಮಗಳಾಗಬೇಕೆಂದು, ಅಗ್ನಿ ಮಹರ್ಷಿಗೆ ಅನಿಸುತ್ತಿತ್ತು. ಆಶ್ರಮದ ಬೆನ್ನು ಹಿಂದೆಯೇ ಜನವಸತಿ ಹಬ್ಬುತ್ತಿತ್ತು. ಆಗ ನಿನ್ನ ಅಜ್ಜನು ನಾಗರವಸತಿಯನ್ನೆಲ್ಲ ಭಸ್ಮಮಾಡಿ, ಅಗ್ನಿಯನ್ನು ತೃಪ್ತಪಡಿಸಿದನು. ಆಗ ಆ ಮಹರ್ಷಿಯು 'ವಿಜಯ ರಥವನ್ನು ಅರ್ಜುನನಿಗೆ ಕೊಟ್ಟನು. ವಿಜಯರಥದ ಕಥೆಯಿದು. ನಿನ್ನ ಅಜ್ಜನ ಕಿರ್ತಿಯನ್ನೇ ನೀನು ತೀಡು. ರಾಜಾ! ಶ್ರೀ ಕೃಷ್ಣನು ಕೂಡ ವೃಂದಾವನ–ಮಥುರಾ ಮತ್ತು ಗಂಗಾ ಯಮುನೆಗಳ ಸಮೃದ್ಧ ಪ್ರದೇಶದಿಂದ, ನಾಗರನ್ನು ದೂರಹೋಗಲು ಹೇಳಲಿಲ್ಲವೇ? ಕಾಲಿಯಾನು ಹೋಗಲಿಲ್ಲ. ಅವನು ಬಲಾಢ್ಯನಿದ್ದನು. ಯಮುನೆಯ ಮಧ್ಯದಲ್ಲಿ ವಿಲಾಸ ಮಂದಿರವನ್ನು ಕಟ್ಟಿಕೊಂಡು ಇರುತ್ತಿದ್ದನು. ಶ್ರೀಕೃಷ್ಣನು ಅವನ ಎದೆಯ ಮೇಲೆ ಕುಳಿತು, ಅವನನ್ನು ಹಣ್ಣುಮಾಡಿ, ಅವನಿಗೆ ಜೀವದಾನವನ್ನಿತ್ತು, ಸಮುದ್ರ ತೀರಕ್ಕೆ ಹೋಗಲು ಆಜ್ಞಾಪಿಸಿದನು. ಆಗ ಕಾಲಿಯಾನು, ಅಲ್ಲಿ ಗರುಡನ ಹಾವಳಿ ಇದೆ, ಅವನು ನನ್ನನ್ನು ಕೊಲ್ಲುವನು ಎಂದು ಅನ್ನಲು, ಶ್ರೀಕೃಷ್ಣನು ನಾನು ಅವನಿಗೆ ಹೇಳುವೆನು, ನೀನು ಇಲ್ಲಿಂದ ಹೊರಡು, ಎಂದು ಆಶ್ವಾಸನವಿತ್ತನು. ಪರೀಕ್ಷಿತಾ! ಇದು ನಿನ್ನ ಪೂರ್ವಜರ ಇತಿಹಾಸವು. ನಾಗರನ್ನು ಓಡಿಸಿದ ಇತಿಹಾಸವೇ ನಿಮ್ಮದು. ನಿನ್ನ ಅಜ್ಜ ಹಾಗೂ ಶ್ರೀಕೃಷ್ಣನು ಮಾಡಿದ್ದನ್ನೇ ನೀನು ಮಾಡು. ಅದೇ ನಿನ್ನ ಜೀವನ ಕಾರ್ಯ, ಅದಕ್ಕಾಗಿಯೇ ನಿನ್ನ ಹುಟ್ಟು, ಹುಟ್ಟುವಾಗಲೇ ನೀನು ಸತ್ತು ಹುಟ್ಟಿರುವಿ. ನಾಗ

ಸಂಹಾರಕನಾಗು, ಒಮ್ಮೆ ನೀನು ಈ ವಿಷಯವನ್ನು ಮನಸ್ಸಿನ ಮೇಲೆ ತೆಗೆದುಕೊಂಡರೆ ಸಾಕು. ಮುಂದೆ ನೋಡು ಅದರ ಪರಿಣಾಮವನ್ನು. ಆಗ ಈ ಆಸ್ತಿಕನ ಕೈಕಾಲುಗಳು ನಡುಗುವವು. ಅವನು ಸಮನ್ವಯವಾದಿ, ಇರುವನು. ಸಂಗ್ರಾಹಕಮತದ ಸಮರ್ಥನೆಯನ್ನು ಮಾಡುವನು. ಸಂಗ್ರಾಹಕಮತ ! ಹೊಟ್ಟೆಗೆ ಏನು ಹಿತವೋ ಅದನ್ನೇ ಸೇವಿಸಬೇಕು. ಸಿಕ್ಕ ಸಿಕ್ಕದ್ದನ್ನು ಸೇವಿಸಬೇಕೆ ? ಅಹಿತವಾದದ್ದನ್ನು ತಿಂದರೆ ಮರಣವು ಸಿದ್ಧ. ಯಾವುದು ನಮಗೆ ಪೋಷಕವೋ ಅದನ್ನೇ ಸಂಗ್ರಹಿಸಬೇಕು. ನಮ್ಮ ಸಂಸ್ಕೃತಿಗೆ ಮಾರಕವಾದುದನ್ನು ತ್ಯಾಗಮಾಡಲೇಬೇಕು" ಎಂದು ವಕ್ರತುಂಡನು ಅತ್ಯಂತ ತ್ವೇಷದಿಂದ ಮಾತಾಡಿದನು.

'ನನ್ನ ಅಂತಃಕರಣದಲ್ಲಿ ಆಸ್ತಿಕನ ಬಗೆಗೆ ಅತ್ಯಂತ ಆದರವಿದೆ. ಅವನ ದರ್ಶನ ಮಾಡಿದೊಡನೆಯೇ ಪವಿತ್ರವಾದಂತೆ ಎನಿಸುವದು. ಒಮ್ಮೆ ನಾನು ಅವನ ಆಶ್ರಮಕ್ಕೆ ಹೋಗಿದ್ದೆ. ಅಲ್ಲಿಂದ ಮರಳಬಾರದೆಂದು ಅನಿಸಿತು. ರಾಜ್ಯವನ್ನು ಬಿಟ್ಟು ಅಲ್ಲಿಯೇ ವಾಸಿಸಬೇಕೆಂದೆನಿಸಿತು. ಆಗ ಅವರು "ರಾಜಾ ರಾಜನಿದ್ದು ಸನ್ಯಾಸಿಯಾಗು. ಸರ್ವರ ಕಲ್ಯಾಣವನ್ನು ಮಾಡು. ಮಾನವ ಧರ್ಮದ ಉಪಾಸಕನಾಗು. ನಮ್ಮ ಪೂರ್ವಜನೂ ನಮ್ಮ ಸಂಸ್ಕೃತಿಯ ಆದ್ಯ ಸಂಸ್ಥಾಪಕನೂ ಆದ ಭಗವಾನ್ ಮನುವು ತನ್ನ ಧರ್ಮ ಸೂತ್ರಗಳಿಗೆ ಮಾನವ ಧರ್ಮಸೂತ್ರಗಳೆಂದು ಹೆಸರಿಟ್ಟಿರುವನು" ಎಂದು ಆಸ್ತಿಕನು ಉಪದೇಶಿಸಿದ. ನನಗೆ ಆಶ್ಚರ್ಯವಾಗುತ್ತಿದೆ. ಆಸ್ತಿಕನ ಆಶ್ರಮಕ್ಕೆ ಹೋದರೆ, ಅವನಂತೆಯೇ ಅನಿಸುವದು. ನಿನ್ನ ಹತ್ತರ ಬಂದರೆ ನಿನ್ನದೇ ನಿಜವೆನಿಸುವದು. ಅನಾರ್ಯರ ಬಗೆಗೆ ಒಮ್ಮೊಮ್ಮೆ ನನಗೆ ತಿರಸ್ಕಾರವೆನಿಸುವದು. ಯಾರು ಪ್ರೇತಗಳನ್ನು ಪೂಜಿಸುವರು, ಯಾರು ಭೂತಗಳನ್ನು ಭಜಿಸುವರು. ಕೆಲವರು ಗಿಡಗಳಿಗೆ ಪ್ರದಕ್ಷಿಣೆ ಹಾಕುವರು, ಕೆಲವರು ಹಾವುಗಳನ್ನು ಪೂಜಿಸುವರು. ಕೆಲವರಂತೂ ಲಿಂಗ ಪೂಜಕರೇ ಇದ್ದಾರೆ. ಜನನೇಂದ್ರಿಯದ ಕಲ್ಲಿನ ಮೂರ್ತಿಯನ್ನು ಮಾಡಿ ಪೂಜಿಸುವರು, ಇವೆಲ್ಲವನ್ನು ನೋಡಿ ಮನಸ್ಸಿಗೆ ಹೇಸಿಕೆ ಬರುವದು. ನಾವು ಆರ್ಯರು ಕೂಡ ಅವರಂತೆಯೇ ಹುಚ್ಚುಚ್ಚು ಕುಣಿಯಹತ್ತಿದ್ದೇವೆ. ನಿಜವಾಗಿಯೂ ತೇಜಸ್ವಿಯಾದ

ಪವಿತ್ರವೇ ನಮ್ಮ ದೇವರು. ಜ್ಞಾನೋಪಾಸನೆಯೆ ನಮ್ಮ ಧರ್ಮ. 'ಜ್ಞಾನವೆಂದರೆ ದೇವರು' ಎಂದು ನಮ್ಮ ವಾಕ್ಯ. ಆದರೆ ನಮ್ಮ ಆರ್ಯ ಧರ್ಮವನ್ನು ಇಂದು ಮಣ್ಣುಗೂಡಿಸುವದೆ? ಅಮೃತತ್ವದ ಧ್ವಜವನ್ನು ಕೈಯ್ಯಲ್ಲಿ ಹಿಡಿದು ಉದಯವಾಗುವ ಉಷಾ ಪೂಜೆಯನ್ನು ಬಿಟ್ಟು, ಕಲ್ಲಿನ ಪೂಜೆಯನ್ನು ಮಾಡುತ್ತ ಕೂಡ್ರಬೇಕೋ? ಈ ವಿಷಯವಾಗಿ ನಾನು ಭಗವಾನ್ ಆಸ್ತಿಕರನ್ನು ವಿಚಾರಿಸುವವನಿದ್ದೇನೆ. ಎಂದು ಪರೀಕ್ಷಿತನು ಉದ್ಗಾರ ತೆಗೆದನು.

'ರಾಜಾ, ಅವನ ಆಶ್ರಮಕ್ಕೆ ಹೋಗಬೇಡ. ವಿಶ್ವ ಪ್ರೇಮದ ಅವನ ಸವಿ ಸವಿ ಮಾತುಗಳಿಗೆ ನಾವು ಮುಗ್ಧರಾಗಿ ಹೋಗುತ್ತೇವೆ. ಮನುಷ್ಯನ ತಲೆಯು ಆಕಾಶವನ್ನು ಭೇದಿಸಿದರೂ ಕಾಲುಗಳು ನೆಲದ ಮೇಲೆಯೇ ಇರುತ್ತವೆ. ವ್ಯವಹಾರವನ್ನು ನೋಡಬೇಕಾಗುತ್ತದೆ. ಜಗತ್ತಿನಲ್ಲಿ ನಮ್ಮ ಸಂಸ್ಕೃತಿಯನ್ನು ಉಳಿಸಬೇಕಾಗಿದೆ. ಸಂಸ್ಕೃತಿಯು ಚೆನ್ನಾಗಿ ವಿಕಾಸವಾಗಬೇಕೆಂದು ನಾವು ಬದುಕಲೇಬೇಕು. ಹೊಲದಲ್ಲಿ ಧಾನ್ಯವು ಚೆನ್ನಾಗಿ ಬರಬೇಕೆಂದು ಹುಲ್ಲನ್ನು ಕಿತ್ತೊಗೆಯುತ್ತೇವೆ. ಹುಲ್ಲಿನ ಮೇಲೆ ಪ್ರೇಮ ಮಾಡಿದರೆ ಮುತ್ತಿನಂತಹ, ಬಂಗಾರದಂತಹ ಧಾನ್ಯಗಳು ಸಿಗುವದುಂಟೆ? ಉಚ್ಚವಸ್ತುಗಳ ವಿಕಾಸಕ್ಕಾಗಿ ನೀಚವಾದುದನ್ನು ನಷ್ಟಮಾಡಲೇಬೇಕು. ಆರ್ಯರ ಸಂಸ್ಕೃತಿಯು ಬೆಳೆಯಬೇಕು. ಆರ್ಯರಸಮಾಜವು ಸರ್ವತ್ರ ಹಬ್ಬಬೇಕು. ಆರ್ಯರ ಮಕ್ಕಳಿಗೆ ಇರಲು ಒಳ್ಳೇ ಮನೆಗಳು ಬೇಕು. ಉತ್ಕೃಷ್ಟವಾದ ಹೊಲಗಳು ಗದ್ದೆಗಳು ಬೇಕು. ಆದಕಾರಣ ಅನಾರ್ಯರು ನಷ್ಟವಾಗಲೇಬೇಕು. ನಾವು ಎಂದೂ ನಮ್ಮಲ್ಲಿ ಅವರನ್ನು ಕೂಡಿಸಿಕೊಳ್ಳಲಾರೆವು. ಅವರ ಹಾಗು ನಮ್ಮಲ್ಲಿ ಎಳ್ಳುಕಾಳಿನಷ್ಟು ಸಹ ಸಾಮ್ಯವಿಲ್ಲ. ನಾವು ಅವರೊಡನೆ ಬೆರೆಯುವದೆಂದರೆ, ನಾವು ಕೆಳಗಿಳಿದಂತೆಯೇ. ಎರಡನೆಯವರನ್ನು ತೇಲಿಸುವವನು ಅವನೊಡನೆಯೆ ಮುಳುಗಿದರೆ, ಪ್ರಯೋಜನವೇನು? ನಾವು ಬೇರೆ ಉಳಿಯಲೇಬೇಕು. ರಾಜಾ, ಆ ಆಸ್ತಿಕನು ದೊಡ್ಡ ಬುಡುಬುಡುಕಿ ಇರುವನು. ಅವನು ಆರ್ಯ ಹಾಗೂ ನಾಗ ತರುಣರಿಗೆ ಪ್ರೇಮದ ಉಪದೇಶವನ್ನು ಮಾಡಹತ್ತಿರುವನು. 'ಒಂದೆಡೆಯಲ್ಲಿ ಸೇರಿರಿ, ಪರಸ್ಪರರ ಒಳ್ಳೇಯದನ್ನು ತೆಗೆದುಕೊಳ್ಳಿರಿ' ಎಂದು ಅವನು ಪ್ರಚಾರ

ಪ್ರಾರಂಭಿಸಿರುವನು. ಇದರಿಂದಲೇ ನಮಗೆ ಧಕ್ಕೆ ತಗಲುವದು. ಆಸ್ತಿಕ ವೆಂಬ ಹೆಸರನ್ನೇ ನೋಡು. ಅದರಲ್ಲಿ ಎಷ್ಟು ಮಹತ್ವವಿದೆ. ಅವನ ಮೂಲ ಹೆಸರು ಬೇರೆ ಇತ್ತೆಂದು ಹೇಳುವರು. ಆದರೆ ಅವನು ತನ್ನನ್ನು ಆಸ್ತಿಕ ನೆಂದು ಕರೆದುಕೊಳ್ಳುತ್ತಾನೆ. ಸರ್ವತ್ರದಲ್ಲಿಯೂ ಮಾಂಗಲ್ಯವನ್ನು ಮನ್ನಿಸುವವನೇ ಆಸ್ತಿಕನು. ನಾನು ಸರ್ವರಿಗೆ ಕಲ್ಯಾಣವಾಗಲೆಂದು ಅಪೇಕ್ಷಿಸುವೆ. ಆದುದರಿಂದ ನಾನು ಆಸ್ತಿಕ, ಉಳಿದವರು ನಾಸ್ತಿಕರು, ಎಂದು ಜಂಭಕೊಚ್ಚಿಕೊಳ್ಳುತ್ತಾನೆ. ರಾಜಾ, ಇಂಥವರ ನಾದಿಗೆ ಬೀಳ ಬೇಡ. ನಿನ್ನ ಹೃದಯದಲ್ಲಿಯ ಪ್ರೇರಣೆಯೆ ಸತ್ಯವೆಂದು ತಿಳಿ. ಕೋಟ್ಯಾ ವಧಿ ಆಸ್ತಿಕರಿಗಿಂತಲೂ ಅಂತ:ಕರಣದ ಪ್ರೇರಣೆಯೇ ಬಹಳ ದೊಡ್ಡದೆಂದು ತಿಳಿ. ಆ ಪ್ರೇರಣೆಯನ್ನು ಕೊಲ್ಲಬೇಡ' ಎಂದು ವಕ್ರತುಂಡನು ತನ್ನ ಉಪನಿಷತ್ತನ್ನು ಹೇಳಿದನು.

ಆಗ ಪರೀಕ್ಷಿತನು ಆಸ್ತಿಕನ ತಂದೆ ತಾಯಿಗಳೇ ಅವನಿಗೆ ಆಸ್ತಿಕನೆಂಬ ಹೆಸರನ್ನಿಟ್ಟಿದ್ದರು. ಅವನ ತಾಯಿಯು ನಾಗಕನ್ಯೆ. ತಂದೆ ಆರ್ಯ ಋಷಿ. ಯಾವ ವೇಳೆಯಲ್ಲಿ ಈ ಸಂಕರಸಂಭವನಿಗೆ ಆರ್ಯರು ಹೆಸರಿಡ ಹತ್ತಿದರೋ ಆಗ 'ಇವನು ಆಸ್ತಿಕನಿದ್ದಾನೆ. ಸರ್ವದಲ್ಲಿಯೂ ಮಾಂಗಲ್ಯವನ್ನು ನೋಡು ವನು. ಮತ್ತು ಎಲ್ಲರಿಗೂ ತೋರಿಸುವನು' ಎಂದು ಅವನ ತಂದೆಯು ಹೇಳಿ ದನು. ಅಂದಿನಿಂದ ಆಸ್ತಿಕನೆಂಬ ಹೆಸರು ಪ್ರಸಿದ್ಧವಾಗಿದೆ. ಏನೇ ಇರಲಿ. ಅವನಲ್ಲಿ ಅದ್ಭುತ ಸಾಮರ್ಥ್ಯವಿರುವದೆಂಬುದು ಮಾತ್ರ ನಿಜ. ಅವನ ತೇಜಸ್ವಿ ಕಣ್ಣುಗಳೆಂದರೆ ಪ್ರೇಮ ಸಮುದ್ರವೇ ಆಗಿಸುವದು. ನಮ್ಮ ಜೀವನದಲ್ಲಿಯ ಎಲ್ಲ ವಿರೋಧಗಳು ಅವನ ದರ್ಶನದಿಂದ ಮಾಯವಾಗು ವವು. ವಸಂತ ಗಾಳಿಯು ಬೀಸಿದೊಡನೆಯೆ ಒಣಗಿದ ಗಿಡಗಳೆಲ್ಲ ಚಿಗಿತು ಜೀವಂತ ಕಾಣುವವು. ಅದರಂತೆಯೆ ಆಸ್ತಿಕನ ಕೃಪಾಕಟಾಕ್ಷವು ಬಿದ್ದೊಡನೆಯೇ ನಮ್ಮ ಜೀವನದಲ್ಲಿಯ ಅಸಂತೋಷವು ನಷ್ಟವಾಗಿ, ಅಲ್ಲಿ ಜೀವನಕ್ಕೆ ಮೊಳಕೆಯೊಡೆದಂತೆಯೂ ತೋಟದಲ್ಲಿಯ ಬಳ್ಳಿಗಳಿಗೆ ಹೂ ಬಿಟ್ಟಂತೆಯೂ ಭಾಸವಾಗುವದು. ವಕ್ರತುಂಡಾ! ನಿಮ್ಮ ಪ್ರಚಾರವನ್ನು ನಿಮ್ಮ ನಿಮ್ಮ ಆಶ್ರಮಗಳಲ್ಲಿ ನಡೆಯಿಸಿರಿ. ಮೊದಲು ಋಷಿ ಮಹರ್ಷಿಗಳು ನಿಮ್ಮ ವಿಚಾರವನ್ನು ಒಪ್ಪಬೇಕು. ರಾಜನು ಒಮ್ಮೆಲೆ ಯಾವ ಪಕ್ಷವನ್ನೂ

ಹಿಡಿಯಕೂಡದು. ಜನತೆಯಲ್ಲಿ ಯಾವ ಪಕ್ಷದ ಗಾಳಿಯು ಬೀಸುವುದು ಎಂಬುದನ್ನು ರಾಜನು ನೋಡಬೇಕು ಎಂದನು.

ಆಗ ವಕ್ರತುಂಡನು ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ ' ರಾಜನು ನೋಡುವ ಕಾರಣವಿಲ್ಲ. ಅವನು ಮಾರ್ಗದರ್ಶನ ಮಾಡಬೇಕು. ತನಗೆ ಯಾವುದು ಯೋಗ್ಯವೆನಿಸುವದೋ ಅದನ್ನು ಜನತೆಗೆ ಮಾಡಲು ಹಚ್ಚ ಬೇಕು. ' ಎಂದು ಗರ್ಜಿಸಿದನು.

ಆಗ ಪರೀಕ್ಷಿತನು ' ಯೋಗ್ಯವು ಯಾವುದೆಂಬುದನ್ನು ನಿಶ್ಚಯಿಸು ವವರಾರು ? ಅದೇನು ಒಮ್ಮೆಲೇ ಹೇಳಲು ಬರುವಂತಹದೇ ? ಪ್ರಾಚೀನ ಕಾಲದಲ್ಲಿ ಇದಕ್ಕಾಗಿ ದೊಡ್ಡ ದೊಡ್ಡ ಚರ್ಚೆಗಳಾಗುತ್ತಿದ್ದವು. ವಿದ್ವತ್ ಸಭೆಗಳು ಕೂಡುತ್ತಿದ್ದವು. ಜನತೆಯು ಕೇಳಲು ಬರುತ್ತಿತ್ತು. ಸ್ತ್ರೀಯರೂ ವಾದಿಸುತ್ತಿದ್ದರು. ಅಂತಹ ವಿಚಾರ ಮಂಥನಗಳು ನಡೆಯಬೇಕು. ಅಂತಹ ವಿದ್ವತ್ ಪರಿಷತ್ತನ್ನು ನಾನು ಕರೆಯಲಾ ? ಆಸ್ತಿಕರಂತಹ ಮಹಾನ್ ಮಹಾನ್ ಆಚಾರ್ಯರಿಗೆ ಆಮಂತ್ರಣವನ್ನು ಕೊಡುವೆ. ಇದಕ್ಕೆ ನಿಮ್ಮ ಸಿದ್ಧತೆ ಇದೆಯೇ ? ಹೇಳಿರಿ. ' ಎಂದನು

' ರಾಜನೆ ಚರ್ಚೆಯು ನನಗೆ ರುಚಿಸುವದಿಲ್ಲ. ಅಲ್ಲಿ ತೌಡು ಕುಟ್ಟುವ ದಾಗುವದು. ಸತ್ಯವು ಚರ್ಚೆಯಲ್ಲಿ ಸಿಗುವದಿಲ್ಲ. ಅದು ಅವರವರ ಬುದ್ಧಿ ಯಲ್ಲಿಯೇ ಹುಟ್ಟುತ್ತದೆ. ನಾನು ಹೋಗಿಬರುವೆ, ಯೋಗ್ಯಕಾಲ ಬಂದೀತು! ಕಾಲವು ಅನಂತವಿದೆ. ಪೃಥ್ವಿಯು ವಿಪುಲವಿದೆ. ನನ್ನ ವಿಚಾರ ಸರಣಿಯ ದೃಷ್ಟಾರರು ಹುಟ್ಟಬಹುದು. ಅವರ ದಾರಿಯನ್ನು ಕಾಯುತ್ತ ಕೂಡ್ರು ವದು ಕೂಡ ಒಂದು ಸೇವೆಯೇ. ನೀನು ವಿಚಾರಮಾಡು. ನಿನ್ನ ಮಗ ನಾದ ಜನಮೇಜಯ ರಾಜನಾದರೂ ನನ್ನ ಉದ್ದೇಶವನ್ನು ಪೂರ್ತಿಗೊಳಿಸ ಬಹುದು. ಅವನು ರಾಜ್ಯಕ್ಕೆ ಬರುವನು. ನವ ಪೃಥ್ವಿಯನ್ನು ನಿರ್ಮಿಸು ವನು. ಇದರಲ್ಲಿ ನನಗೇನೂ ಸಂದೇಹವಿಲ್ಲ ' ಎಂದು ವಕ್ರತುಂಡನು ವಕ್ರವಾಗಿಯೇ ಮಾತನಾಡಿದನು.

' ಅಂದರೆ ನೀನು ನನ್ನ ಮರಣದ ದಾರಿಯನ್ನೇ ನೋಡುತ್ತಿರುವಿಯೋ ಏನು ? ನನ್ನ ವಧದ ಸಿದ್ಧತೆಯು ನಡೆದಿಲ್ಲವಷ್ಟೇ ?" ಎಂದು ಪರೀಕ್ಷಿತನು ನಗುತ್ತ ನುಡಿದನು.

'ನಾಗರು ಸಂಘಟನೆಯನ್ನು ಮಾಡುತ್ತಲಿದ್ದಾರೆ, ಅವರೇ ಒಂದು ದಿವಸ ನಿನ್ನನ್ನು ನುಂಗುವರು. ಹೀಗೆಯೇ ಎಚ್ಚರಿಲ್ಲದೇ ಇರು. ಸರ್ಪ ಪೂಜಕರಿಗೆ ಹೀಗೆಯೇ ಆಶ್ರಯವನ್ನು ಕೊಡು. ಹಾವು ಕಚ್ಚದೆ ಎಂದೂ ಬಿಡುವದಿಲ್ಲ. ನೀನು ನಾಗರನ್ನೇನೋ ಹತ್ತಿರ ಕರೆಯುವೆ. ಆದರೆ ನಾಗ ಕಡಿಯಲು ಮಾತ್ರ ಹತ್ತರ ಬರುವದು. ಅದು ದ್ವೇಷವನ್ನು ಎಂದೂ ಬಿಡುವದಿಲ್ಲ. ಸೇಡನ್ನು ತೀರಿಸಿಕೊಳ್ಳದೇ ಬಿಡುವದಿಲ್ಲ. ಖಾಂಡವ ವನದಲ್ಲಿ ಬದುಕಿದ ತಕ್ಷಕ ಕುಲದಲ್ಲಿಯ ಒಬ್ಬ ತರುಣನು ಕರ್ಣನ ಹತ್ತರ ಹೋಗಿ ಅರ್ಜುನನನ್ನು ಹೊಡೆಯುವಾಗ ನಾನು ನಿನಗೆ ಸಹಾಯವನ್ನು ನೀಡುವೆ ಎಂದು ಹೇಳಲಿಲ್ಲವೆ? ಆದರೆ ಕರ್ಣನು ಅದನ್ನು ತಿರಸ್ಕರಿಸಿದನು. ಹೀಗೆ ಈ ಜಾತಿಯೂ ಕುನಸಿನ ಮನಸ್ಸಿನದಿರುತ್ತದೆ. ಅದನ್ನು ಸಮೂಲ ನಾಶ ಮಾಡಲೇಬೇಕು. ನಿನಗೆ ಇದನ್ನು ಮಾಡಲು ಧೈರ್ಯವಿಲದಿದ್ದರೆ, ನಿನ್ನ ಮಗನು ಆ ಧೈರ್ಯವನ್ನು ತೋರಿಸುವನು. ಕೋಮಲ ವೃತ್ತಿಯವರಿಂದ ಕ್ರಾಂತಿಯು ಎಂದೂ ಆಗಲಾರದು. ಸಮಾಜದಲ್ಲಿ ಯಾವದೇ ಬಗೆಯ ಕ್ರಾಂತಿಕಾರಕ ಬದಲಾವಣೆಗಳನ್ನು ಅವರು ಮಾಡಲಾರರು. ಅವರ ಮನಸ್ಸಿನಲ್ಲಿ ಇಚ್ಛೆ ಇದ್ದರೂ ಕೂಡ ಅವರ ಕೈಗಳಿಂದ ಕಾರ್ಯವಾಗಲಾರದು. ಜನಮೇಜಯನ ಕೈಗಳು ಅಷ್ಟು ದುರ್ಬಲವಾಗಲಾರವು. ವಜ್ರಾಯುಧದಂತೆ ನಾಗರನ್ನು ನಾಶಮಾಡಲು ಅವನ ಕೈಗಳು ಪ್ರವೃತ್ತವಾಗುವವೆಂದು ನಾನು ತಿಳಿಯುತ್ತೇನೆ. ನನ್ನ ವಿಚಾರಗಳು ಅವನಿಗೆ ಮನಗಾಣುವವು. ನೀನೇ ಮನಗಂಡಿದ್ದರೆ, ಆ ಕಾರ್ಯವು ತೀವ್ರವಾಗಿ ಆಗುತ್ತಿತ್ತು. ಇರಲಿ, ನಾನು ಹೋಗಿಬರುವೆ. ಈ ಚಿತ್ರಶಾಲೆಯಲ್ಲಿಯ ಖಾಂಡವವನ ದಹನವನ್ನು ತೋರಿಸುವ ಚಿತ್ರವನ್ನು ಮಾತ್ರ ನೋಡುತ್ತ ಕೂಡ್ರು. ಆರ್ಯರ ವಿಜಯ ರಥವು ಈ ಮಾರ್ಗದಿಂದ, ಈ ದಿಕ್ಕಿನಿಂದ ಹೋಗಬೇಕು. ತಿಳಿಯಿತೇ ?' ಎಂದು ವಕ್ರತುಂಡನು ಹೊರಟು ಹೋದನು.

ಪರೀಕ್ಷಿತನು ಹೊರಗೆ ಬಂದು ನೋಡುತ್ತ ನಿಂತನು. ವಕ್ರತುಂಡನು ಗಟ್ಟಿಯಾಗಿ ಕಾಲುಗಳನ್ನಪ್ಪಳಿಸುತ್ತ ನಾಗರನ್ನು ಕಾಲಕೆಳಗೆ ತುಳಿಯುತ್ತಿರುವನೋ ಏನೋ ಎಂಬಂತೆ ಹೋಗುತ್ತಿದ್ದನು. ವಕ್ರತುಂಡನು ಹೋದನು. ಅರಮನೆಯ ಉಪವನದಲ್ಲಿ ಹಾದು ಹೋದ. ಅರಮನೆಯ ತೋಟಕ್ಕೆ

ಪರೀಕ್ಷಿತನು, ಬಂದನು. ಆಗ ಸೂರ್ಯನು ಮೇಘ ಮಂಡಲವನ್ನು ದಾಟುತ್ತ ಸಾಗಿಹೋಗಿದ್ದನು. ಪರೀಕ್ಷಿತನು ವಿಚಾರ ಮಗ್ನನಾಗಿ ನಿಂತಿದ್ದನು. ' ನನ್ನ ಆಯುಷ್ಯದಲ್ಲಿಯೇ ನಾನು ಭಯಂಕರವಾದ ದೃಶ್ಯವನ್ನು ನೋಡಬಹುದೇ ? ನನ್ನ ರಾಜ್ಯದಲ್ಲಿಯೇ ಯುದ್ಧವು ಪ್ರಾರಂಭವಾಗಬಹುದೇ ? ನನ್ನ ಮಗನೇ ಈ ದ್ವೇಷಾಗ್ನಿಯನ್ನು ಹೊತ್ತಿಸಲು ಕಾರಣನಾಗುವನೇ ? ಇದಾಗುವ ಮೊದಲೇ ನನ್ನ ಕಣ್ಣು ಮುಚ್ಚಿದರೆ ಎಷ್ಟು ಒಳ್ಳೇದಾದೀತು ' ಎಂಬ ವಿಚಾರಗಳು ಅವನ ಮನಸ್ಸಿನಲ್ಲಿ ಸುಳಿಯ ಹತ್ತಿದವು. ಅವನು ಆಕಾಶದ ಕಡೆಗೆ ಮೋರೆಮಾಡಿ, ಕೈಜೋಡಿಸಿ ' ದೇವಾ ನನ್ನನ್ನು ತೆಗೆದುಕೊಂಡು ಹೋಗು ' ಎಂದು ಪ್ರಾರ್ಥಿಸಿದನು.

೬

" ವತ್ಸಲಾ! ಏಳು- ನೀನು ನದಿಗೆ ಸ್ನಾನಕ್ಕೆ ಬರುವಿಯಲ್ಲವೇ! ಏಳು. ಹೊತ್ತು ಏರಿದೆ ನೋಡು! ಆಕಳುಗಳು ಅಡವಿಗೆ ಹೋದವು. ಹಕ್ಕಿಗಳು ಕಲಕಲ ಶಬ್ದ ಮಾಡುತ್ತಿರುವವು. ಎಲ್ಲರೂ ತಮ್ಮ ತಮ್ಮ ಅಂಗಳದಲ್ಲಿ ಥಳಿ, ರಂಗೋಲಿಗಳನ್ನು ಹಾಕಿರುವರು ನೋಡು! ಏಳು, ಏಳು, ಎದ್ದಿಯಾ!" ಎಂದು ಸುಶ್ರುತೆಯು ಪ್ರೇಮದಿಂದ ಎಬ್ಬಿಸಿದಳು.

" ಅಜ್ಜೀ! ನನಗೆ ಮಲಗಗೊಡು. ನನಗೆ ಏನೂ ಬೇಡ. ನನಗೆ ಸ್ನಾನಬೇಡ, ಜ್ಞಾನಬೇಡ, ನಾನು ಎದ್ದಿರುವೆ. ಜ್ಞಾನದ ವಿಚಾರವನ್ನು ಮಾಡುತ್ತಿರುವೆ. ಜ್ಞಾನವೆಂದರೆ ಶೂನ್ಯ. ಪರಬ್ರಹ್ಮವೆಂದರೆ ಸತ್ತೂ ಅಲ್ಲ ಅಸತ್ತೂ ಅಲ್ಲ. ಈ ಎರಡರ ಆಚೆ ಅವನಿರುವ. ಅವನು ದುಷ್ಟನೂ ಅಲ್ಲ ಸುಷ್ಟನೂ ಅಲ್ಲ. ಎಂದು ಅನ್ಸೃತಿಗಳು ಹೇಳುತ್ತಾರೆ. ಹೀಗಿದ್ದರೆ ನೀತಿಯ ಅರ್ಥವೇನು? ನಾವು ಒಳ್ಳೇರೀತಿಯಿಂದಲೇ ಏಕೆ ನಡೆಯಬೇಕು? ಕೆಟ್ಟ ರೀತಿಯಿಂದ ಏಕೆ ನಡೆಯಬಾರದು? ಹೀಗೇಕೆ? ಒಳ್ಳೇಯದು ಹಾಗೂ ಕೆಟ್ಟದು ಇವೆರಡೂ; ತತ್ವದ ದೃಷ್ಟಿಯಿಂದ ಒಂದೇ ಇದ್ದರೆ, ಮನುಷ್ಯನು ಮನಬಂದಂತೆ ನಡೆದರೆ, ತಪ್ಪೇನು? ಬೆಳಿಗ್ಗೆ ಸ್ನಾನ ಮಾಡಿದರೇನು? ಯಾವಾಗ ಮಾಡಿದರೇನು? ಅವನು ಬೆಂಕಿ ಹಚ್ಚಿದರೇನು? ಆರಿಸಿದರೇನು? ಮೇಲಿನ ಬ್ರಹ್ಮೋಪದೇಶದ ಅರ್ಥವನ್ನು, ಎಲ್ಲವೂ ವ್ಯರ್ಥವೆಂದು ನಾನು ತಿಳಿದಿದ್ದೇನೆ ನಾನು ಬಿದ್ದುಕೊಂಡಿರುವೆ. ನನ್ನನ್ನು ಎಬ್ಬಿಸಬೇಡ" ಎಂದಳು ವತ್ಸಲೆ.

" ಹಾಗಿದ್ದರೆ ಮಲಗಿಕೊ. ಇನ್ನಷ್ಟು ಹೊದ್ದುಕೊಳ್ಳು. ನಿನಗೇಕೆ ತೊಂದರೆ. ವಿಚಾರಮಾತ್ರ ಬಹಳ ಮಾಡಬೇಡ. ಎಲ್ಲಿಯಾದರೂ ತಲೆ ಕೆಟ್ಟೀತು?" ಎಂದು ಸುಶ್ರುತೆ ನುಡಿದಳು.

ಸುಶ್ರುತೆಯು ನದಿಗೆ ಹೋದಳು. ವತ್ಸಲೆಯು ಹಾಗೇ ಮಲಗಿದ್ದಳು. ಸ್ವಲ್ಪ ಸಮಯದಲ್ಲಿ ಕಾರ್ತಿಕನು ಅಲ್ಲಿಗೆ ಬಂದನು. "ಏಳು, ವತ್ಸಲಾ ಏಳು. ನೀನು ನದಿಗೆ ಈಸಲಿಕ್ಕೆ ಬರುವವಳಿದ್ದಿಯಲ್ಲವೇ? ನಾನು ನದಿಯ ಮೇಲೆ ನಿನ್ನ ದಾರೀ ನೋಡಿದೆನು. ಅಜ್ಜಿ, ಸುಶ್ರುತೆಯನ್ನು ವಿಚಾರಿಸಿದೆ. ಆಕೆ ಇನ್ನು ಮಲಗಿರುವಳು ಎಂದಳು. ಇಂದು ನದಿಯ ಮೇಲೆ ಎಷ್ಟು ಗದ್ದಲ! ಎಷ್ಟು ಹುಡುಗಿಯರು ಈಸು ಕಲಿಯಲು ಬಂದಿದ್ದಾರೆ? ನೀನೂ ಕಲಿಯುವಿಯಲ್ಲವೇ? ನಡೆ" ಎಂದು ಕಾರ್ತೀಕನು ನುಡಿದನು.

"ನಾನು ಬರುವದಿಲ್ಲ. ನೀನು ಹೋಗು" ಎಂದು ಮುಸುಕಿನಲ್ಲಿಯೇ ಹೇಳಿದಳು.

"ನೀನು ಎಂದೂ ನನ್ನ ಇಚ್ಛೆಯಂತೆ ನಡೆಯುವದಿಲ್ಲವೇ?" ಎಂದನು ಕಾರ್ತೀಕ.

"ನಾನು ಯಾರದಾದರೂ ದಾಸಿಯಿರುವೆನೇನು?" ಎಂದು ವತ್ಸಲೆಯು ರೇಗಿಗೆದ್ದಳು.

"ನೀನು ದಾಸಿಯಲ್ಲ. ಆದರೆ ನಾನು ಮಾತ್ರ ನಿನ್ನದಾಸ." ಎಂದನು ಕಾರ್ತೀಕ

"ದಾಸರು ಅಂಗಳದಲ್ಲಿರಬೇಕು. ಹೀಗೆ ಮನೆಯಲ್ಲಿ ಬಂದು, ಅಧಿಕಾರದಿಂದ ಮಾತನಾಡಬಾರದು. ಕಾರ್ತೀಕ ನೀನು ಮೂರ್ಖನಿರುವಿ. ಸ್ತ್ರೀಯರು ದಾಸ್ಯತ್ವವನ್ನು ಅಪೇಕ್ಷಿಸುತ್ತಾರೆ. ಅದು ಯಾರ ದಾಸ್ಯತ್ವವನ್ನು ಬಲ್ಲಿಯಾ? ಯಾರು ತಮ್ಮ ದಾಸರಾಗುವರೋ ಅವರ ದಾಸ್ಯತ್ವವನ್ನು ಅವರು ಎಂದೂ ವಹಿಸುವದಿಲ್ಲ. ಯಾವದು ಸಿಗುವದಿಲ್ಲವೋ ಆದರ ಬೆನ್ನು ಹತ್ತಬೇಕು. ಯಾವದು ಸಿಗುವದೋ ಅದನ್ನು ತಿರಸ್ಕರಿಸಬೇಕು. ಸಹಜವಾಗಿ ಸಿಗುವ ವಸ್ತುವಿಗೆ ಬೆಲೆಯಿಲ್ಲ. ನೀನು ನನ್ನನ್ನು ಏನೂ ಬೆಲೆಯಿಲ್ಲದಲೆ ದೊರಕಿಸಬೇಕೆಂದಿರುವಿಯಾ? ಆದರೆ ನಾನು ಯಾರ ಸಲುವಾಗಿ ನನ್ನ ಪ್ರಾಣವನ್ನೇ ಕೊಡಲು ಸಿದ್ಧಳಾಗುವೆನೋ ಅವನೇ ನನ್ನವನು. ನೀನು ನಿನ್ನ ಜೀವನಕ್ಕೆ ಏನು ಬೆಲೆ ಕೊಟ್ಟಿರುವಿ? ಸ್ವತಃ ನೀನು ಒಂದು ಕಾಸಿನ ಬೆಲೆಯನ್ನೂ ಇಟ್ಟುಕೊಂಡಿರುವದಿಲ್ಲ. ಬೆಲೆಯಿಲ್ಲದ ವಸ್ತುವು ವತ್ಸಲೆಗೆ ಬೇಡ" ವತ್ಸಲೆ ಎಂದಳು.

“ನನಗೂ ಕೂಡ ಬೆಲೆಯಿಲ್ಲದ ವಸ್ತುವು ಬೇಡ. ನೀನು ಬಹಳ ಬೆಲೆಯುಳ್ಳವಳೆಂದೇ ನಾನು ನಿನ್ನ ಬೆನ್ನುಹತ್ತಿದ್ದೇನೆ. ಈ ಜನ್ಮದಲ್ಲಿ ಇಲ್ಲದಿದ್ದರೂ ಮುಂದಿನ ಜನ್ಮದಲ್ಲಿ ಸಿಕ್ಕೇಸಿಗುವಿ. ನಾನು ಆಶಾವಾದಿಯಿರುವೆ.” ಎಂದನು ಕಾರ್ತೀಕ.

“ಮುಂದಿನ ಜನ್ಮವೇ? ಯಾರು ನೋಡಿದ್ದಾರೆ ಮುಂದಿನ ಜನ್ಮ? ಹೋದವರಾರೂ ಮರಳಿ ಬಂದಿಲ್ಲ. ಅವರು ಬಂದು ಏನೂ ಹೇಳಿಲ್ಲ” ಎಂದು ವತ್ಸಲೆಯು ನುಡಿದಳು.

“ದೂರದ ತೋಟದಲ್ಲಿರುವ ಅರಳಿದ ಹೂಗಳನ್ನು ನಾವು ನೋಡಿರದಿದ್ದರೂ ಅಲ್ಲಿಯ ಸುಗಂಧವು ಬಂದೊಡನೆಯೇ ಹೂಗಳು ಅರಳಿವೆಯೆಂದು ನಾವು ಅನ್ನುವದಿಲ್ಲವೇ? ಅದರಂತೆಯೇ ಜೀವನದಲ್ಲಿ ಅನೇಕ ಸಂಗತಿಗಳ ಅನುಭವಗಳು (ಸುಗಂಧ) ನಮಗೆ ಬರುತ್ತದೆ. ಆದರಿಂದ ನಾವು ಹೂಗಳು ಅರಳಿವೆಯೆಂದು ತಿಳಿಯುತ್ತೇವೆ. ಇಲ್ಲದಿದ್ದರೆ ಜೀವನದಲ್ಲಿ ಈ ಅನುಭವಗಳು ಯಾಕೆ ಬರಬೇಕು? ವತ್ಸಲೆ, ನಾವು ಯಾವನನ್ನಾದರೂ ನೋಡುತ್ತೇವೆ. ನೋಡಿದೊಡನೆಯೆ ಅವನ ಬಗೆಗೆ ಆತ್ಮೀಯತೆ ಎನಿಸಿಬಿಡುತ್ತದೆ. ಇದರಲ್ಲಿ ಏನೂ ಅರ್ಥವಿಲ್ಲವೇ? ಆದರೆ ನಾವು ಅದನ್ನು ಅನುಭವಿಸುತ್ತೇವೆ. ಅದನ್ನು ಸ್ವೀಕರಿಸುತ್ತೇವೆ. ಯಾವ ಯಾವ ವ್ಯಕ್ತಿಗಳು ಭೆಟ್ಟಿಯಾಗುವರೋ ಆಯಾ ವ್ಯಕ್ತಿಗಳ ಜೀವನದಲ್ಲಿಯ ಸುಗಂಧ ಕೋಶವು ಹೊರಬಂದು, ನಮ್ಮ ಜೀವನವನ್ನು ಅರಳಿಸುತ್ತದೆ.” ಎಂದು ಕಾರ್ತೀಕನು ಉದ್ಗಾರ ತೆಗೆದನು.

“ನಿನ್ನನ್ನು ನೋಡಿ, ನನ್ನ ಜೀವನವು ಚಿಗುರೊಡೆಯುವದಿಲ್ಲ. ನನ್ನ ಜೀವನಕ್ಕೆ ಚಿಗುರೊಡೆಸುವ ವಸಂತನು ಇನ್ನೂ ಬರಬೇಕಾಗಿದೆ. ನನ್ನ ಜೀವನದಲ್ಲಿ ಇನ್ನೂ ಶಿಶಿರವೇ ಇದೆ. ಹೂಗಳಿಲ್ಲ, ಕಾಯಿಗಳಿಲ್ಲ, ಕಮಲಗಳಿಲ್ಲ, ಭೃಂಗಗಳಿಲ್ಲ, ಏನೂ ಇಲ್ಲ ಕಾರ್ತೀಕಾ, ನೀನು ಹೋಗು. ನನಗೆ ಸಂತಾಪವನ್ನು ಕೊಡಬೇಡ” ಎಂದು ವತ್ಸಲೆಯು ನಿಟ್ಟುಸುರು ಬಿಟ್ಟಳು.

ನನ್ನ ಇರುವಿಕೆಯಿಂದ ನಿನಗೆ ತೊಂದರೆಯಾದರೂ ಆಗುವದು. ನನ್ನ ಅಸ್ತಿತ್ವದಿಂದ ನಿನಗೆ ಏನೂ ಪರಿಣಾಮವಾಗಬೇಂದಿಲ್ಲ ಇಂದು

ತೊಂದರೆಯಾಗುವದು, ಅದೇ ನಾಳೆ ಸುಂದರವಾದೀತು. ನಾನಂತೂ ಆಶಾವಾದಿ. ಹೋಗಿಬರುತ್ತೇನೆ" ಎಂದು ಕಾರ್ತಿಕನು ಹೊರಟನು.

ವತ್ಸಲೆಯು ಮತ್ತೆ ಹಾಸಿಗೆಯ ಮೇಲೆ ಹೊರಳಾಡಹತ್ತಿದಳು. ಒಮ್ಮೆ ಏಳುವಳು, ಮತ್ತೆ ಮಲಗುವಳು. ಹೀಗೆಯೇ ನಡೆಯಿತು ಕೆಲ ಹೊತ್ತು. ಆಕೆ ಇಂದು ಬಹಳ ಸುಂದಾಗಿದ್ದಳು. ಆಕೆಯ ಚಪಲತೆಯೆಲ್ಲ ಎಲ್ಲಿ ಹೋಗಿತ್ತೋ? ಆಕೆಯ ಉಲಕೋಚಿತನವು ಎಲ್ಲಿ ಅಡಗಿತ್ತೋ? ಆಕೆಯ ಮನಸ್ಸಿಗೆ ಏನು ಭಾರವಾಗಿತ್ತೋ? ಆಕೆಯ ಸ್ಫೂರ್ತಿಯನ್ನು ಏನು ಅಡಗಿಸಿತ್ತೋ? ಉನ್ಮಾದಿಸಿಯಂತೆ ಆಕೆಯು ನಗಹತ್ತಿದಳು. ದೊಡ್ಡ ದನಿಯಿಂದ ನಗಹತ್ತಿದಳು. ಪುನಃ ಕಣ್ಣು ಮುಚ್ಚಿದಳು, ಗಂಭೀರಳಾದಳು. ಸ್ವಲ್ಪ ಸಮಯದಲ್ಲಿಯೇ ಎದ್ದು ನದಿಗೆ ಹೋದಳು. ನದಿಯ ಮೇಲೆ ಗದ್ದಲವು ಬಹಳವಿದ್ದಿತು. ಸುಶ್ರುತೆಯು ಸ್ವಲ್ಪ ದೂರದಲ್ಲಿ ಒಗೆಯುತ್ತಲಿದ್ದಳು. ವತ್ಸಲೆಯು ಆಕೆಯ ಎದುರಿಗೆ ಹೋಗಿ ನಿಂತಳು.

"ಬಂದೆಯಾ! ಬಾ. ನಿನಗೆ ವೈಯಲ್ಲಿ ನೆಟ್ಟಗೆನಿಸದಿದ್ದರೆ ಸ್ನಾನ ಮಾಡಬೇಡ" ಎಂದು ಅಜ್ಜಿಯು ಹೇಳಿದಳು.

"ನದಿಯೆಂದರೆ ತಾಯಿ. ಈ ತಾಯಿಯ ಸಹಸ್ರ ತರಂಗಗಳು ನನ್ನ ಅಂಗಕ್ಕೆ ತಾಕಿ, ನನ್ನ ಉದಾಸೀನತೆಯು ದೂರವಾಗುವದು. ಈ ತಾಯಿಯ ಸಹಸ್ರಾರು ಕೈಗಳು ನನಗೆ ಸ್ನಾನಕ್ಕೆ ಹಾಕುವವು. ನನ್ನ ಮಾಲಿನ್ಯವನ್ನು ಕಳೆಯುವವು. ನಾನು ಜಿಗಿಯಲಾ?" ಎಂದು ಆಕೆಯು ವಿಚಾರಿಸಿದಳು.

"ಜಿಗಿಯಬೇಡ. ನಿನಗೆ ಈಸಲು ಚೆನ್ನಾಗಿ ಬರುವದಿಲ್ಲ. ಇಲ್ಲಿಯೇ ನಿಂತು ಮೈ ತೊಳೆದುಕೋ. ಈ ತಣ್ಣಗಿನ ನೀರಿನಲ್ಲಿ ಬಹಳ ವೇಳೆ ನಿಲ್ಲಬೇಡ" ಎಂದು ಸುಶ್ರುತೆಯು ಕಕ್ಕುಲತೆಯಿಂದ ನುಡಿದಳು.

"ನದಿಯು ಏಕೆ ಮುಳುಗಿಸುವಳು? ತಾಯಿಯ ಪ್ರೇಮಸಾಗರ ದಲ್ಲಿ ಮುಳುಗಿ, ಯಾರಾದರೂ ಮಡಿದಿರುವರೋ? ಅಮೃತಸಿಂಧುವಿನಲ್ಲಿ ಜಿಗಿಯಲು ಭೀತಿಯೇಕೆ? ಇಲ್ಲ! ಈ ಲೋಕಮಾತೆಯು ನನ್ನನ್ನು

ಮುಳುಗಿಸುವದಿಲ್ಲ ನಾನು ಹಾರುವೆ" ಎಂದು ವತ್ಸಲೆಯು ನಗುತ್ತ ನುಡಿದಳು.

"ವತ್ಸಲೇ, ಮುದುಕಿಯಾದ ನನ್ನ ಪರೀಕ್ಷೆಯನ್ನು ಮಾಡಬೇಡ. ನಿನ್ನ ಸಲುವಾಗಿ ನಾನು ಜೀವಿಸಿರುವೆ" ಎಂದು ಸದ್ಗದಿತಳಾಗಿ ಸುಶ್ರುತೆಯು ನುಡಿದಳು.

"ಒಳ್ಳೇದು, ನೀನು ಅಳಬೇಡ. ನಾನು ಈ ಕಲಕಾದ ನೀರಿ ನಲ್ಲಿಯೇ ಮೈ ತೊಳೆಯುವೆ" ಎಂದಳು.

ವತ್ಸಲೆಯು ಬಹಳ ಮುಂದೆ ಹೋದಳು. ಅಲ್ಲಿ ನೀರು ಹೆಚ್ಚಿರ ಲಿಲ್ಲ. ಆದರೆ ಸೆಳವು ಮಾತ್ರ ಬಹಳವಿತ್ತು.

"ಅಜ್ಜೀ, ನದಿಯು ನನ್ನನ್ನು ಎಳೆಯುತ್ತಿದೆ. ಬಾ ಎಂದು ಕರೆ ಯುತ್ತಿದೆ. ಒತ್ತಾಯಪಡಿಸುತ್ತಿದೆ." ಎಂದು ಚೇಷ್ಟೆಮಾಡುತ್ತ ವತ್ಸಲೆಯು ಮಾತನಾಡಿದಳು.

"ಇತ್ತ ಕಡೆಗೆ ಬಾ. ಅಲ್ಲಿ ಸೆಳವು ಬಹಳವಿದೆ. ಒಮ್ಮೆ ಕಾಲು ಜಾರಿದರೆ, ಸಾವರಿಸಿಕೊಳ್ಳಲು ಆಗಲಿಕ್ಕಿಲ್ಲ. ಮುಂದೆ ಮಡುವಿದೆ" ಎಂದು ಆಜ್ಜಿಯು ಒದರಿದಳು.

ಇಷ್ಟರಲ್ಲಿಯೇ ಸುಂಯ್ ಸುಂಯ್ ಎಂಬ ಸಪ್ಪಳವು ಕೇಳಬರ ಹತ್ತಿತು. ಏನು, ಇದು ಸಮುದ್ರದ ಸಪ್ಪಳವೇ? ನದಿಯು ಸಮುದ್ರದ ಕಡೆಗೇ ಹೋಗುತ್ತಿತ್ತು. ಏನು, ಆ ಚೋರನಾದ ಸಮುದ್ರನೇ ಆಕೆ ಯನ್ನು ಹಿಡಿಯಲು ಈ ಬಗೆಯಾಗಿ ಧ್ವನಿಗೈಯ್ಯುತ್ತಿರುವನೇ? ಅಥವಾ ನದಿಯ ತಂದೆಯಾದ ಪರ್ವತರಾಜನು ಸಿಟ್ಟಿಗೆದ್ದು, ಆಕೆಯನ್ನು ತಿರುಗಿ ಕರೆದುಕೊಂಡು ಹೋಗಬೇಕೆಂದು ಕೂಗುತ್ತಿರುವನೇ? ಎಲ್ಲಿಯದು ಈ ಸಪ್ಪಳ?

"ಅಜ್ಜೀ! ಕೇಳಿದಿಯಾ ಈ ಸುಂಯ್ ಸುಂಯ್ ಸಪ್ಪಳವನ್ನು. ನನ್ನ ಎದೆಯಲ್ಲಿಯೂ ಹಾಗೆಯೇ ಸಪ್ಪಳವಾಗುತ್ತಲಿದೆ. ಸಮುದ್ರವು ಬಿರುಗಾಳಿಯಿಂದ ಉಕ್ಕೇರುವಂತಿದೆ. ಏನಿದು? ಜೀವನದ ಈ ಧ್ವನಿಯು ಹೊರಗೆ ಕೇಳಿಸುತ್ತಿರುವದೇ! ಈ ಧ್ವನಿಯು ಮೋಜೆನಿಸಿದರೂ ಅಪ ಸ್ವರವಾಗಿದೆ. ಮೈಮೇಲೆ ಮುಳ್ಳುಬರುವಂತಹ ಸ್ವರವಿದು. ಮೈಯಲ್ಲಿ

ನಡುಗು ಹುಟ್ಟಿಸುವ ಸ್ವರವಿದು. ಆದರೆ ಅಜ್ಜೀ, ಈ ಸ್ವರವು ಉನ್ಮಾದವನ್ನುಂಟು ಮಾಡುತ್ತದೆ. ಎಂತಹ ಸ್ವರವಿದು!

ಓಡಿರಿ! ಓಡಿರಿ! ಪ್ರಚಂಡ ಮಹಾಪೂರವು ಬರತೊಡಗಿದೆ. ಓಡಿರಿ! ಎಲ್ಲರೂ ನೀರಿನಿಂದ ಹೊರಬನ್ನಿ! ಬನ್ನಿರಿ ಬೇಗನೆ! ಹುಡುಗರಿರಾ! ಹೆಣ್ಣುಮಕ್ಕಳೇ ಬೇಗಬನ್ನಿ, ನೋಡಿರಿ, ಹೊಲಸು ತೇಲಿಬರುತ್ತಲಿದೆ! ಪ್ರಚಂಡ ಮಹಾಪೂರವು ಬರುತ್ತದೆ, ನೀರು ಏರಹತ್ತಿತು. ಬಂದಿತು! ಬಂದಿತು!! ಸುಂಯ್ ಸಪ್ಪಳ ಮಾಡುತ್ತ ನೆರೆ ಬಂದಿತು! ಓಡಿರಿ, ಓಡಿರಿ!! ಎಂದು ಎಲ್ಲ ಕಡೆಗೂ ಗದ್ದಲ.

ಯಾರ ತಂಬಿಗೆಯು ಉಳಿಯಿತು, ಯಾರ ಸಾಮಾನಗಳು ಕಳಚಿ ಬಿದ್ದವು. ಬಟ್ಟೆಬರೆಗಳನ್ನೆಲ್ಲ ಬಿಟ್ಟೇ ಓಡಿದರು. ಜನ ಗಾಬರಿಗೊಂಡು ಓಡಹತ್ತಿತು. ನೀರಿನಲ್ಲಿ ಬೇಗನೆ ಓಡುವದು ಹೇಗೆ? ಯಾರು ಬಿದ್ದರು, ಎದ್ದರು, ಮುಂದೆ ನಡೆದರು. ಒಮ್ಮೆ ದಂಡೆಗೆ ಬಂದು ಹತ್ತಿದರು.

ಆದರೆ ವತ್ಸಲೆಯು ಎಲ್ಲಿದ್ದಳು? ನೀರಿನಲ್ಲಿಯೇ ಕುಣಿಯುತ್ತಿದ್ದಳು. ಆಕೆಗೆ ಬೆದರಿಕೆಗಿದರಿಕೆ ಇರಲಿಲ್ಲ. ಸಪ್ಪಳ ಹೇಗೆ ಕೇಳಿಸುತ್ತಿದೆ ನೋಡಿರಿ? ಒಳಗೂ ಹೊರಗೂ ಒಂದೇ ಶಬ್ದ! ಇದೇ ಸಮಾಧಿಯೇ! ಇದೇ ಏನು ಅನಾಹುತ ಧ್ವನಿ! ಇದು ಯಾರ ಧ್ವನಿಯು? ವಿಲಕ್ಷಣವಾದ ಧ್ವನಿಯು, ಎನ್ನುತ್ತ ಕುಣಿಯುತ್ತಿದ್ದಳು.

ಅಜ್ಜಿಯು ಗಾಬರಿಯಾಗಿ "ವತ್ಸಲೇ! ಬೇಗ ಬಾ! ನೀರು ಬಂದಿತು! ಹೀಗೇಕೆ ಕುಣಿಯುತ್ತೀ? ನಿನ್ನನ್ನು ಎಳೆತರಲು ನನಗೆ ಸಾಮರ್ಥ್ಯವಿಲ್ಲ. ನೀನು ಬರುವಷ್ಟರಲ್ಲಿಯೇ ನೀರು ಬರುವದು. ವತ್ಸಲೇ! ಏಳು ಬಾ! ಬೇಗ ಬಾ!,, ಎಂದು ಕೂಗುತ್ತಿದ್ದಳು. ಒದರುತ್ತಿದ್ದಳು. ಅಲ್ಲಿಗೆ ಕಾರ್ತೀಕನು ಬಂದನು. ಅವನು ಬಹಳ ಗಾಬರಿಯಾಗಿದ್ದಂತೆ ಕಾಣುತ್ತಿತ್ತು. 'ಕಾರ್ತೀಕಾ ಆ ಹುಡುಗೆಯನ್ನು ಎಳೆದುಕೊಂಡು ಬಾ! ಹೋಗು, ನೋಡುತ್ತೀ ಏನು? ನೋಡು ನೀರು ಏರಿತು! ಓಡು, ಎಂದು ಅಜ್ಜಿಯು ಹೇಳಿದಳು.

'ಕಾರ್ತೀಕನೇ ಬಾ! ಬೇಗ ಬಾ! ಈ ನೀರು ನನಗೆ ಮೇಲೆ ಬರಗೊಡಲೊಲ್ಲದು! ಇಲ್ಲಿ ಶೆಳವು ಬಹಳವಿದೆ. ನನ್ನ ಕಾಲುಗಳು ನಿಲ್ಲ

ಲೊಲ್ಲವು. ಬೇಗ ಬಾ! ಹಿಡಿ ನನ್ನ ಕೈಯನ್ನು. ಎಂದು ವತ್ಸಲೆಯು ಒದರಹತ್ತಿದಳು.

“ಕಾರ್ತೀಕಾ ಹೋಗಬೇಡ, ನೀರು ಬಂದಿತು ನೋಡು. ನೀನೂ ಸಾಯುವಿ, ನೀನೂ ಮುಣುಗುವಿ,, ಎಂದು ಯಾರೋ ಹೇಳಿದರು.

‘ಬಾ! ಕಾರ್ತೀಕಾ! ಬಾ! ಕೈ ಕೈ ಹಿಡಿಯೋಣ ಬಾ! ನದಿಯು ಉಕ್ಕೇರಿ ಬರುತ್ತಲಿದೆ. ನೀನೂ ಉಕ್ಕೇರಿ ಬಾ! ನನ್ನ ಹೃದಯದಲ್ಲಿ ಸುಂಯ್ ಎಂಬ ಧ್ವನಿಯಾಗುತ್ತಿದೆ. ನಿನಗೆ ಅನಿಸುವದಿಲ್ಲವೇ?’ ಎಂದು ವತ್ಸಲೆಯು ಕೂಗಿದಳು.

ಭಯಂಕರವಾದ ನೆರೆ ಬಂದಿತು. ಅಪಾರವಾದ ನೀರು, ಕೆಂಪು ನೀರು, ಕಾರ್ತೀಕನು ಬೆದರಿ ಹಿಂದೆ ಸರಿದನು. ಆದರೆ ವತ್ಸಲೆ? ಎಲ್ಲಿರುವಳು ವತ್ಸಲೆ?

“ಅಯ್ಯೋ ನನ್ನ ವತ್ಸಲಾ! ಯಾರಾದರೂ ಉಳಿಸಿರಿ, ಆ ಹುಚ್ಚು ಹುಡಿಗೆಯನ್ನು. ಯಾರಾದರೂ ನೀರಲ್ಲಿ ಧುಮಿಕಿರಿ. ಯಾರೂ ಇಲ್ಲವೇ ಇಲ್ಲಿ? ಕಾರ್ತೀಕಾ! ನೀನು ಮುಂದಕ್ಕೆ ಏಕೆ ಹೋಗಲಿಲ್ಲ? ಆಕೆಯನ್ನು ಎಳೆತರುತ್ತಿದ್ದಿ: ಆಕೆಯು ನಿನ್ನನ್ನು ಕರೆಯುತ್ತಿದ್ದಳು. ನೀನು ಆಕೆಯನ್ನು ತರಬಲ್ಲೆಯಾ! ಯಾರನ್ನಾದರೂ ಕರೆ. ಕೂಗು ಕೂಗು! ನೋಡು! ನೋಡು! ಆಕೆಯು ಹೋಗುತ್ತಿದ್ದಾಳೆ! ಅಯ್ಯೋ! ಅಯ್ಯೋ! ಒಬ್ಬಳೇ ಒಬ್ಬ ಮೊಮ್ಮಗಳು! ಯಾರಾದರೂ ಉಳಿಸಿರಿ! ಹಾಯ್, ದೇವಾ! ಆಕೆಯನ್ನು ಉಳಿಸುವವರು ಯಾರೂ ಇಲ್ಲವೇ? ಎಲ್ಲರೂ ಹೇಡಿಗಳೇ? ಎಲ್ಲರೂ ಷಂಢರೇ? ಯಾರೂ ತರುಣರಿಲ್ಲವೇ? ಅಯ್ಯೋ ನೋಡಿರಿ. ಯಾರಾದರೂ ಹೋಗಿ ಆಕೆಯ ಕೈಗಳನ್ನು, ಹಿಡಿಯಿರಿ? ಅದು ಆಕೆಯ ಶೆರಗು. ಎಳೆಯಿರಿ ಅದನ್ನು ಹಿಡಿದು. ಆಕೆಯ ಕೂದಲನ್ನು ಹಿಡಿದು ಎಳೆಯಿರಿ! ಯಾರಾದರೂ ಹೋಗಿರಿ! ಹಾರಿರಿ, ನೀರಿನಲ್ಲಿ, ಅಯ್ಯೋ! ವತ್ಸಲೆ ಹೋದಳು! ಹೋದಳು!! ಎಂದು ಸುಶ್ರುತೆಯು ಅಳಹತ್ತಿದಳು.

‘ನಾಗನನ್ನೆ ಮದುವೆಯಾಗುವೆ, ಎಂದು ಹೇಳುವ ಈಕೆ ಸಾಯಲಿ. ಯಾವನಾದರೂ ನಾಗನಿದ್ದರೆ ತೆಗೆದಾನು ಆಕೆಯನ್ನು! ಆರ್ಯಕುಮಾರರಾದ ನಾವು ಯಾಕೆ, ನೀರಲ್ಲಿ ಧುಮುಕಬೇಕು? ನಾಗರನ್ನು ಉಳಿಸಲು

ಹೋಗಿ ಇವಳ ತಂದೆ ತಾನೇ ಸತ್ತ. 'ನಾಗರನ್ನೇ ಮದುವೆಯಾಗುವೆ, ಎಂದೆನ್ನುವ ಈಕೆಯೂ ನಡೆದಳು ನದಿಯಲ್ಲಿ ತೇಲುತ್ತ. ಆರ್ಯರು ನಾಗರಿಂದ ದೂರವಿರಬೇಕೆಂದೇ ಈ ಸೃಷ್ಟಿಯ ಸಂದೇಶವಲ್ಲವೇ ಇದು!' ಎಂದು ನಾಗದ್ವೇಷಿಗಳು ಮಾತನಾಡಿದರು.

"ಜಗಳಕ್ಕೆ ಇದು ಸಮಯವೇ? ಆಯ್ಯೋ! ಗುಣಿಯಾದ ಆ ನನ್ನ ಮಗ ಹೋದ! ಯಾರಾದರೂ ಇಲ್ಲಿ ನಾಗರಿರುವಿರಾ! ಮನುಷ್ಯತ್ವವಿದ್ದ ಆರ್ಯರಾರಾದರೂ ಇರುವಿರಾ! ಉದಾರಚರಿತರಾದ ಆರ್ಯರಾರೂ ಇಲ್ಲವೇ? ನೋಡಿರಿ, ಅವೇ ಆಕೆಯ ಕೂದಲು, ಹಾರಿರಿ ಯಾರಾದರು?" ಎಂದು ಸುಶ್ರುತೆಯು ಅಳಹತ್ತಿದ್ದಳು.

ನೋಡ ನೋಡುತ್ತ ಯಾರೋ ಓಡಿಬಂದು ನೀರಲ್ಲಿ ಧುಮುಕಿದರು. ಉಕ್ಕೇರುತ್ತಿರುವ ಆ ಪ್ರಚಂಡ ಪ್ರವಾಹದಲ್ಲಿ ಧುಮುಕಿದರು. ವತ್ಸಲೆಗೆ ಆಧಾರವಾಗಬೇಕೆಂದು ತಮ್ಮ ದೇಹವನ್ನು ಪ್ರವಾಹದಲ್ಲಿ ಎಸೆದರು. ನದಿಯು ನೊರೆಯ ಹಾರವನ್ನು ಈ ಸಾಹಸಿಗೆ ಹಾಕಿತು. ಮಾರುಗೈಗಳನ್ನು ಹಾಕುತ್ತ ವೇಗದಿಂದ ನಡೆದ, ಆದರೇನು? ಅವನೂ ಕಾಣದಂತಾದ? ಅವನೂ ಮುಣುಗಿದನೇ? ಮತ್ತೆ ಮೇಲೆ ಬಂದನು. ನಡೆದನು ಮುಂದೆ. ನದಿಯು ಅಪಹರಿಸಿದ ಸ್ತ್ರೀರತ್ನವನ್ನು ಇವನು ತಿರುಗಿ ತರುವನೇ? ಆ ನದಿಯು ನಿರ್ಮಲವಾದ ಜೀವರತ್ನವನ್ನು ಒಯ್ದು, ಪ್ರಿಯಕರನಾದ ರತ್ನಾಕರನಿಗೆ ಅರ್ಪಿಸುವವಳಿದ್ದಳು. ಆದರೆ, ಈ ತರುಣನು ಅದನ್ನು ನಿಷ್ಫಲಗೊಳಿಸುವನೇ?

ದಂಡೆಯಮೇಲೆ ಜನ ನೋಡುತ್ತಲಿತ್ತು. ನದಿಗುಂಟ ಜನ ಓಡುತ್ತಿತ್ತು. 'ಅಲ್ಲಿ ನೋಡಿರಿ ಆಕೆ ಕಾಣುತ್ತಿದ್ದಾಳೆ! ಎಂದು ಹುಡುಗರು ಓಡುತ್ತಿದ್ದರು. ಅತ್ತ ನೀರಿನ ಪ್ರವಾಹ. ಇತ್ತ ಜನರ ಪ್ರವಾಹ.

ಆ ತರುಣನು ನದಿಯ ಪ್ರವಾಹದ ಸಂಗಡ ಹೋರಾಡುತ್ತಿದ್ದನು. ತನ್ನ ಗುರಿಯನ್ನು ಸಾಧಿಸಲು ಧಡಪಡಿಸುತ್ತಿದ್ದನು. ಅವನು ಒಮ್ಮೆಲೆ ದೊಡ್ಡ ಮಾರುಗೈಯ್ಯನ್ನು ಹಾಕಿದನು. ಆದರೆ ಅದು ಆಕೆಯ ಕೂದಲವಲ್ಲ. ಒಂದು ಬಳ್ಳಿಯಿದ್ದಿತು. ಮೋಸವಾಯಿತು. ಮತ್ತೆ ನೀರಲ್ಲಿ ಮುಳುಗಿದನು. ಏನು ಸಿಕ್ಕಿತು? ಸೀರೆಯ ಸೆರಗೋ ಅಲ್ಲ. ಅದು ಹಾವಸೆ. ಅವನಿಗೆ

ರತ್ನವು ಸಿಗುವದಿಲ್ಲವೇ? ಸಿಕ್ಕಿತು, ಸಿಕ್ಕಿತು, ಏನೋ ಸಿಕ್ಕಿತು. ನೋಡಿರಿ, ಹಿಡಿಯುತ್ತಿದ್ದಾನೆ. ಆಹುದು, ವತ್ಸಲೆಯೇ ಆಕೆ. ಆಕೆಯ ತಲೆಯನ್ನು ಹಿಡಿದು ತರುತ್ತಿದ್ದಾನೆ. ಒಂದೇ ಕೈಯಿಂದ ತೆರೆಗಳೊಡನೆ ಹೋರಾಡುತ್ತಿದ್ದಾನೆ. ಅವನದು ಒಂದೇ ಕೈ? ಸಿಟ್ಟಿಗೆದ್ದ ನದಿಯು ಸಹಸ್ರಾರು ಕೈಗಳು. ಆದರೆ ಅದೊಂದೇ ಕೈಯು, ನದಿಯ ಸಹಸ್ರಾರು ಕೈಗಳಿಗೆ ಭಾರಿಯಾಗಿದೆ. ನಿಸ್ವಾರ್ಥ ಸೇವೆಯ ಶಕ್ತಿಯು ಅದರಲ್ಲಿ ತುಂಬಿತ್ತು. 'ಅಹೇತುಕ ಪ್ರೇಮ ಶಕ್ತಿಯು ಆ ಕೈಯಲ್ಲಿ ಸಂಚಾರವಾಗಿತ್ತು. ಜಗತ್ತಿನ ಸಲುವಾಗಿ ಹಾಲಾಹಲವನ್ನು ಕುಡಿಯುವ ಶಂಕರನ ಜಟೆಯಲ್ಲಿಯ ಒಂದು ಕೂದಲು, ಕುಬೇರನ ಸರ್ವಸಂಪತ್ತಿಗಿಂತಲೂ ಹೆಚ್ಚು ಬೆಲೆಯುಳ್ಳದ್ದೂ ಭಾರವುಳ್ಳದ್ದೂ ಅಲ್ಲವೇ? ರುಕ್ಮಿಣಿಯ ಒಂದು ತುಳಸೀ ಪತ್ರವು ಸತ್ಯಭಾಮೆಯ ಅಪಾರ ಸಂಪತ್ತಿನಗಿಂತಲೂ ಹೆಚ್ಚಲ್ಲವೇ? ಭಾರವು ವಸ್ತುವಿನದಿರದೆ, ಆ ವಸ್ತುವಿನಲ್ಲಿರುವ ಭಾವದಲ್ಲಿದೆ. ಆ ತರುಣನ ಕೈಯೇನೋ ಸಾದಾ ಕೈ. ನದಿಯ ಶಕ್ತಿಯ ಮುಂದೆ ಅದು ಅಶಕ್ತವೇ ಸರಿ. ಆದರೆ ಆ ಕೈಯು ಈಗ ಮಂತ್ರಿಸಲ್ಪಟ್ಟಿತ್ತು. ಅಪಾರ ಸಾಮರ್ಥ್ಯವು ಅದರಲ್ಲಿ ಸಂಚಾರವಾಗಿತ್ತು. ಈ ದೊಡ್ಡ ತ್ಯಾಗದ ಮುಂದೆ, ನದಿಯು ಬಾಗಿತು. ನಾಚಿತು, ವೇಗವನ್ನು ಕಡಿಮೆ ಮಾಡಿತು. ನೋಡಿರಿ! ಆ ತರುಣನು ದಂಡೆಯ ಕಡೆಗೆ ವೇಗವಾಗಿ ಬರುತ್ತಿದ್ದಾನೆ. ಎಲ್ಲ ಶಕ್ತಿಯನ್ನುಪಯೋಗಿಸಿ ಅವನು ಬರುತ್ತಿದ್ದಾನೆ. ಬಂದನು, ಬಂದನು, ಅಚೇತನಳಾದ ವತ್ಸಲೆಯನ್ನು ತೆಗೆದುಕೊಂಡು ಬಂದನು. ಈಗ ಅವನ ಕಾಲುಗಳು ನೆಲಕ್ಕೆ ಹತ್ತಿವೆ. ಈಗ ಅವನು ಆಕೆಯನ್ನು ಬೆನ್ನಮೇಲೆ ಹೊತ್ತನು. ಆಕೆಯ ಕಣ್ಣು ಮುಚ್ಚಿದ ಚೇತನರಹಿತವಾದ ಶರೀರವು ಅವನ ಹೆಗಲಮೇಲಿದ್ದಿತು.

ದಂಡೆಯ ಮೇಲೆ ಶಹಾಬಾಸ! ಶಹಾಬಾಸ! ಎಂದು ಸಾವಿರಾರು ಕಂಠಗಳು ಜಯಘೋಷವನ್ನು ಮಾಡಿದವು. ನಾಗದ್ವೇಷಿಗಳು ಮಾತ್ರ ಮನಸ್ಸಿನಲ್ಲಿ ಬೆಂದು ಕುದಿಯಹತ್ತಿದರು. ದಣಿದ ಆ ತರುಣನಿಗೆ ಸಹಾಯ ನೀಡಲು ಕಾರ್ತಿಕನು ಮುಂದೆ ಬಂದನು.

"ನಿಲ್ಲು, ನಾನು ಆಕೆಯನ್ನು ಎತ್ತಿಕೊಳ್ಳುವೆ. ನೀನು ದಣಿದಿರುವಿ." ಎಂದನು ಕಾರ್ತಿಕ.

“ ಆಹುದು ನಾನು ದಣಿದಿರುವೆ. ಆಕೆಯನ್ನು ತೆಗೆದುಕೊ ” ಎಂದು ಆ ತರುಣನು ನುಡಿದನು.

ಕಾರ್ತೀಕನು ವತ್ಸಲೆಯನ್ನೆತ್ತಿಕೊಂಡು ದಂಡೆಗೆ ಬಂದನು.

“ ಕಾರ್ತೀಕಾ ! ಆಕೆಯ ಹೃದಯವು ಹಾರುತ್ತಿದೆಯೇ ” ಎಂದು ಸುಶ್ರುತೆಯು ಕೇಳಿದಳು.

“ ಆಕೆಯನ್ನು ಕುಂಬಾರನ ಚಕ್ರದಮೇಲೆ ಹಾಕುವಾ ” ಎಂದನು ಕಾರ್ತೀಕ.

ಕಾರ್ತೀಕನು ವತ್ಸಲೆಯನ್ನು ತೆಗೆದುಕೊಂಡು ಕುಂಬಾರನ ಕಡೆಗೆ ಹೋದನು. ಸಂಗಡ ಸುಶ್ರುತೆಯಿದ್ದಳು. ಉಳಿದ ಜನರೂ ಇದ್ದರು. ಅಲ್ಲಿ ಜನ ಕೂಡಿತು. ಕುಂಬಾರನು ಚಕ್ರವನ್ನು ಗರಗರನೆ ತಿರುಗಿಸಿದನು. ಹೊಟ್ಟೆಯೊಳಗಿಂದ ನೀರು ಹೊರಬಿದ್ದಿತು. ವತ್ಸಲೆಯು ಉಸುರಾಡಿಸ ಹತ್ತಿದಳು. ಕಣ್ಣುಗಳನ್ನು ಆಕೆಯು ತೆರೆದಳು.

ವತ್ಸಲೆಯನ್ನು ಮನೆಗೆ ಕರೆದುಕೊಂಡು ಬಂದರು. ಉಣ್ಣೆಯ ವಸ್ತ್ರಗಳನ್ನು ಹೊಚ್ಚಿದರು. ಬಿಸಿನೀರನ್ನು ಕುಡಿಯಲು ಕೊಟ್ಟರು. ಸುಶ್ರುತೆಯು ಆಕೆಯ ಹತ್ತರವೇ ಕುಳಿತಿದ್ದಳು. “ ಆದರೆ ಆ ಪ್ರಾಣದಾತನಾದ ತರುಣನೆಲ್ಲಿ ? ಆ ತ್ಯಾಗಿಯೆಲ್ಲಿ ? ಏನು, ಎಲ್ಲರೂ ಅವನನ್ನು ಮರೆತು ಬಿಟ್ಟರೋ ? ಹದವಿದ್ದಾಗ ಕದ ತೆಗೆ ಎಂಬುದೇ ಜಗತ್ತಿನ ರೀತಿ. ‘ ಕಾರ್ತೀಕಾ ಆ ತರುಣನು ಎಲ್ಲಿ ? ಪಾಪ, ಆವನು ತನ್ನ ಪ್ರಾಣವನ್ನು ಸಂಕಟದಲ್ಲಿ ನೂಕಿ, ವತ್ಸಲೆಯನ್ನುಳಿಸಿದ. ಪ್ರಚಂಡ ಪ್ರವಾಹದಲ್ಲಿ ಧುಮುಕಿ, ಆಕೆಯನ್ನು ಮೇಲೆ ತೆಗೆದುಕೊಂಡುಬಂದ. ಎಂಥಹ ಸಾಹಸ. ಆವನು ಯಾರು ? ಎಲ್ಲಿಂದ ಬಂದ ? ಹೋಗು. ಆವನನ್ನು ಬೇಗನೆ ಕರೆದುಕೊಂಡು ಬಾ ’ ಎಂದಳು. ಸುಶ್ರುತೆ.

ಕಾರ್ತೀಕನು ನದಿಗೆ ಹೋದನು. ಅಲ್ಲಿ ಯಾರೂ ಇರಲಿಲ್ಲ. ನದಿಯು ಮಾತ್ರ ತುಂಬಿ ಹರಿಯುತ್ತಿತ್ತು. ಅಷ್ಟರಲ್ಲಿ ದೂರದಲ್ಲಿ ಒಬ್ಬ ಮನುಷ್ಯನು ಕಂಡ. ಅವನೇ ಆ ತರುಣ. ಆ ಕೆಂಪು ನೀರಿನಿಂದ ತುಂಬಿ ಹರಿಯುವ ನದಿಯ ಕಡೆಗೆ ನೋಡುತ್ತ ಆ ತರುಣನು ನಿಂತಿದ್ದನು. ಯಾವ ನದಿ

ಯೊಡನೆ ಅವನು ಹೋರಾಡಿದ್ದನೋ ಆ ನದಿಯನ್ನೇ ನೋಡುತ್ತ ನಿಂತಿದ್ದನು. ಕಾರ್ತೀಕನು ಓಡುತ್ತ ಅವನೆಡೆಗೆ ಹೋದ.

"ಏನು ಮಾಡುತ್ತಿರುವಿ ಇಲ್ಲಿ? ನೀನು ಬಹಳ ದಣಿದಿರುವಿ" ಎಂದನು.

" ಅಹುದು ನಾನು ದಣಿದಿದ್ದೇನೆ. ನನಗೆ ವಿಶ್ರಾಂತಿಯು ಬೇಕಾಗಿದೆ. ವಿಶ್ರಾಂತಿಯನ್ನು ತೆಗೆದುಕೊಳ್ಳಲು ಹೋಗಬೇಕೆಂದಿದ್ದೇನೆ. " ಎಂದನು ಆ ತರುಣ.

" ನಡೆ, ವಿಶ್ರಾಂತಿಯನ್ನು ತೆಗೆದುಕೊಳ್ಳಲಿಕ್ಕೆ. ಅಜ್ಜಿ ಸುಶ್ರುತೆಯು ನಿನ್ನನ್ನು ಕರೆದಿದ್ದಾಳೆ. ನೀನು ಯಾವ ಹುಡುಗೆಯನ್ನು ಬದುಕಿಸಿದೆಯೋ, ಆಕೆಯ ಅಜ್ಜಿಯೇ ಅವಳು. ಹುಡುಗೆಯು ಬದುಕಿದಳು. ಬೇಗನೆ ಆಕೆಗೂ ಗುಣವಾಗುವದು. ಬೆಚ್ಚಗಿನ ವಸ್ತ್ರಗಳಲ್ಲಿ ಆಕೆಯನ್ನು ಇಟ್ಟಿದ್ದಾರೆ. ನಡೆ, ಹೋಗುವಾ. ಅಲ್ಲಿಯೇ ವಿಶ್ರಾಂತಿಯನ್ನು ತೆಗೆದುಕೊಳ್ಳುವಿಯಂತೆ " ಎಂದನು ಕಾರ್ತೀಕ.

" ಅದೇನು ಕ್ಷಣಹೊತ್ತಿನ ವಿಶ್ರಾಂತಿ. ಅದರಿಂದ ನನಗೆ ಸಮಾಧಾನವಿಲ್ಲ. ನನಗೆ ಸ್ಥಿರವಾದ ವಿಶ್ರಾಂತಿಯು ಬೇಕಾಗಿದೆ. ಈ ನದಿಯು ಅದನ್ನು ಕೊಡುವಳು. ಆಕೆಯ ವಸ್ತುವೊಂದನ್ನು ನಾನು ಕಸಿದು ತಂದಿದ್ದೇನೆ. ಅದರ ಬದಲು ಇನ್ನೊಂದನ್ನು ಆಕೆಗೆ ಕೊಡುವೆ. ಬೆಲೆಯುಳ್ಳ ವಸ್ತುವನ್ನು ತಂದಿರುವೆ, ಬೆಲೆಯಿಲ್ಲದ್ದನ್ನು ಆಕೆಗೆ ಕೊಡುವೆ. " ಎಂದನು ಆ ತರುಣ.

" ನಿನ್ನ ಜೀವವು ಕ್ಷುದ್ರವೆ ? " ಎಂದು ಕಾರ್ತೀಕನು ವಿಚಾರಿಸಿದನು.

" ಯಾವ ಜೀವನವು ಜಗತ್ತಿಗೆ ಉಪಯೋಗವಿಲ್ಲವೋ ಆ ಜೀವನವು ಕ್ಷುದ್ರವಲ್ಲವೇ ? ನನ್ನ ಜೀವನದ ಅವಶ್ಯಕತೆ ಯಾರಿಗಿದೆ ? ನನಗೆ ತಂದೆ ತಾಯಿಗಳಿಲ್ಲ, ಅಣ್ಣನಿಲ್ಲ, ಅಕ್ಕನಿಲ್ಲ, ಗೆಳೆಯರೂ ಇಲ್ಲ. ನಾನು ಯಾರ ಸಲುವಾಗಿ ಬದುಕಬೇಕು ? " ಎಂದು ಆ ತರುಣನು ಉತ್ತರಿಸಿದನು.

" ಮುಳುಗುವವರನ್ನು ಉಳಿಸುವದಕ್ಕಾಗಿ, ಸಾಯುವವರನ್ನು ಬದುಕಿಸುವದಕ್ಕಾಗಿ " ಎಂದನು ಕಾರ್ತೀಕ.

ಆ ತರುಣನು ಏನೂ ಮಾತನಾಡಲಿಲ್ಲ. ಕಾರ್ತೀಕನೇ ಅವನ ಕೈ ಹಿಡಿದನು. ಅವನು ಇನ್ನೂ ಒದ್ದೆಯಲ್ಲಿಯೇ ಇದ್ದನು. ಅವನ ಅರಿವೆಗಳಿಂದ ನೀರು ಬಸಿಯುತ್ತಿತ್ತು. ಕೂದಲುಗಳಿಂದ ನೀರು ಇಳಿಯುತ್ತಿತ್ತು. ಏನು! ಅವನ ಹೃದಯದಲ್ಲಿಯ ಕರುಣವೇ ಹೊರಹರಿಯುತ್ತಿತ್ತೋ ?

"ಇವನೇ ಉಳಿಸಿದವನು. ಇವನೇ ನೀರಲ್ಲಿ ಧುಮುಕಿದನು. ಹೇಗೆ ಕಾಣುತ್ತಾನೆ ನೋಡಿರಿ. ಎಷ್ಟು ಸರಳವಾದ, ಸುಂದರವಾದ ಮೂಗು. ಎಂತಹ ತೇಜಸ್ವಿಯಾದ ಕಣ್ಣುಗಳಿವು? ಶ್ರೀ ಕೃಷ್ಣ ಪರಮಾತ್ಮನು, ಹೀಗೆಯೇ ಕಾಣಿಸುತ್ತಿರಬೇಕಲ್ಲವೇ ?" ಎಂದು ಹೆಣ್ಣುಮಕ್ಕಳು ಬಾಗಿಲುಗಳಲ್ಲಿಯೂ ಕಿಡಿಕಿಗಳಲ್ಲಿಯೂ ನಿಂತು ಮಾತನಾಡುತ್ತಿದ್ದರು. ಎಷ್ಟೋ ಹುಡುಗಿಯರು, ಅವನ ಮೇಲೆ ಹೂ ಮಳೆಗರೆದರು. ಅವನು ಮೇಲೆ ನೋಡಿದನು.

"ನಾನು ನಾಗ, ಆರ್ಯನಲ್ಲ ಸುಮ್ಮನೆ ಏಕೆ ಹೂ ಮಳೆಗರಿಯುವಿರಿ ?" ಎಂದನಾ ತರುಣ.

"ಆರ್ಯ ಕನ್ಯೆಯರಾದ ನಾವು, ಈ ಭೇದವನ್ನು ಮನ್ನಿಸುವದಿಲ್ಲ. ಉದಾರತೆಯನ್ನೂ ತ್ಯಾಗವನ್ನೂ ನಾವು ನೋಡುವೆವು. ಇಂದು ನೀನು ಈ ಊರಲ್ಲಿಯ ಸರ್ವ ಆರ್ಯರಿಗಿಂತಲೂ ದೊಡ್ಡವನಿರುವಿಯೆಂಬುದನ್ನು ತೋರಿಸಿಕೊಟ್ಟಿರುವಿ ನಿನ್ನ ಪೂಜೆಯನ್ನು ನಮಗೆ ಮಾಡಗೊಡು. ತೆಗೆದುಕೋ ಈ ಹೂಗಳನ್ನು" ಎಂದು ಒಬ್ಬ ಹುಡುಗಿಯು ಹೂಗಳನ್ನು ಅರ್ಪಿಸಿದಳು. ಯಾರಾದರೂ ಈ ಧೈರ್ಯವನ್ನು ತೋರಿಸುವ ಅವಶ್ಯಕತೆ ಇದ್ದಿತು. ಬೀದಿ ಬೀದಿಗಳಲ್ಲೆಲ್ಲ ಹುಡುಗ ಹುಡುಗಿಯರೆಲ್ಲರೂ ಅವನಿಗೆ ಮಾಲೆಯನ್ನು ಹಾಕಿದರು. ಅವನ ಮೇಲೆ ಹೂಗಳನ್ನು ತೂರಿದರು. ನಾಗದ್ವೇಷಿಗಳು ಮನಸ್ಸಿನಲ್ಲಿಯೇ ಇದನ್ನು ಕಂಡು ಕಳವಳಗೊಳ್ಳುತ್ತಿದ್ದರು. ಆದರೆ ಆ ಪ್ರಸಂಗವೇ ಅಂತಹ ಅಪೂರ್ವವಾದುದು. ದ್ವೇಷಭಾವನೆಯು ಹೊರಬರಲು ನಾಚುತ್ತಿತ್ತು. ಮಳೆಗಾಲದಲ್ಲಿ ಹೊಲಗಳಿಗೆ ಜವುಳು ಒಡೆಯುವದು. ಕಲ್ಲುಗಳೂ ಮೃದುವಾಗುವವು. ಹಸಿ ಎನಿಸುವವು. ವತ್ಸಲೆಯು ಮಲಗಿದ್ದಳು. ಕಾರ್ತೀಕನು ಆ ಪ್ರಾಣದಾತೃವನ್ನು ಕರೆದು

ಕೊಂಡು ಬಂದನು. ಸುಶ್ರುತೆಯು ಬಾಗಿಲಲ್ಲಿಯೇ ಅವನನ್ನು ಸ್ವಾಗತಿಸಿದಳು. ಆಕೆಯ ಕಂಠವು ತುಂಬಿಬಂದಿತು.

"ಈಕೆಯನ್ನು ನೀನು ಬದುಕಿಸಿದೆ. ನನ್ನವರೆಲ್ಲ ಹೋಗಿದ್ದಾರೆ. ಉಳಿದವಳೆಂದರೆ ಈಕೆಯೊಬ್ಬಳೇ. ಈಕೆಯೂ ಇಂದು ಹೊರಟಿದ್ದಳು. ಆದರೆ ಮೃತ್ಯುಂಜಯನಾದ ನೀನು ಭೆಟ್ಟಿಯಾದೆ. ಅಮೃತವನ್ನು ಕೊಟ್ಟೆ. ಬಾ, ಕುಳಿತುಕೊ. ನಿನ್ನ ಉಪಕಾರವನ್ನು ಹೇಗೆ ತೀರಿಸಲಿ? ಹೇಗೆ ಮುಕ್ತಳಾಗಲಿ. ಬಾ, ಕೂಡು. ನೀನು ಬಹಳ ದಣಿದಿರುವಿ. ಆಕೆಯನ್ನು ಎಚ್ಚರಿಸುವ ಭರದಲ್ಲಿ ನಿನ್ನನ್ನು ಮರೆತುಬಿಟ್ಟೆ. ಆದರೆ ಕಾರ್ತೀಕನಿಗೆ ನಿನ್ನನ್ನು ಕರೆದು ತರಲು ಹೇಳಿದೆ. ತಾವು ಬಂದಿರಿ. ಈ ಮನೆಯು ನಿಮ್ಮದೇ ಇದೆ. ವಿಶ್ರಾಂತಿಯನ್ನು ಪಡೆಯಿರಿ. ಹಾಸಿಕೊಳ್ಳಲು ಕೊಡಲೋ? ಮೊದಲು ಈ ಬಿಸಿಯಾದ ಹಾಲನ್ನು ಕುಡಿಯಿರಿ. ನಾನು ಕಾಸಿ ಇಟ್ಟಿರುವೆ. ಮೊದಲು ಒಣ ವಸ್ತ್ರಗಳನ್ನು ಉಟ್ಟುಕೊಳ್ಳಿರಿ. ತೆಗೆದುಕೊಳ್ಳಿರಿ ಈ ವಸ್ತ್ರಗಳನ್ನು" ಎಂದು ಸುಶ್ರುತೆಯು ಸ್ವಚ್ಛವಾದ ಒಣ ವಸ್ತ್ರಗಳನ್ನು ಕೊಟ್ಟಳು. ಆ ತರುಣನು ಒಣ ವಸ್ತ್ರಗಳನ್ನುಟ್ಟು ಮೈಮೇಲೆ ಹೊತ್ತುಕೊಂಡು, ವ್ಯಾಘ್ರಾಸನದ ಮೇಲೆ ಕುಳಿತುಕೊಂಡನು. ಬಿಸಿ ಬಿಸಿ ಹಾಲನ್ನು ಕುಡಿದನು. ಊಟ ಮಾಡಿ ಮಲಗಿಕೊಂಡನು.

"ಅಜ್ಜೀ, ಇನ್ನೂ ಇವರು ಏಕೆ ಏಳಲೊಲ್ಲರು? ಏನಾದರೂ ಅಪಾಯವಾಗಿದೆಯೇ? ಅತಿ ಶ್ರಮದಿಂದ ಗ್ಲಾನಿ ಬಂದಿದೆಯೇ? ಇಲ್ಲವೆ ಸುಮ್ಮನೆ ನಿದ್ರೆಮಾಡುತ್ತಿರುವರೇ?" ಎಂದು ವತ್ಸಲೆಯು ಕೇಳಿದಳು.

"ಈಗ ಏಳಬಹುದು. ಸಾಯಂಕಾಲದ ತಂಪು ಗಾಳಿಗೆ ಎಚ್ಚರವಾಗಬಹುದು. ಅವನ ಉಪಕಾರವೆಷ್ಟು?" ಎಂದಳು ಸುಶ್ರುತಾ.

"ಅಜ್ಜೀ, ಅವರ ಎದೆಯನ್ನು ನೋಡು, ಎಷ್ಟು ವಿಶಾಲವಿದೆ! ಇದು ಭಾಗ್ಯದ ಲಕ್ಷಣವೆಂದು ತಿಳಿಯುವದಿಲ್ಲವೇ?" ಎಂದು ವತ್ಸಲೆಯು ವಿಚಾರಿಸಿದಳು.

“ಯಾರು ತಮ್ಮ ಪ್ರಾಣವನ್ನು ಪರರಿಗೋಸ್ಕರವಾಗಿ ಸಂಕಟದಲ್ಲಿ ನೂಕುವರೋ ಅವರಿಗಿಂತ ಹೆಚ್ಚಿನ ಭಾಗ್ಯವಂತರಾರು? ನಿಜವಾಗಿಯೂ ಅವರೇ ಮಹಾತ್ಮರು”; ಎಂದಳು ಸುಶ್ರುತೆ.

“ಅವರ ಹೆಗಲಮೇಲೆ ಎಂತಹ ಚಿನ್ಹವದು? ಸುಟ್ಟ ಕಲೆಯೋ ಅಥವಾ ಮತ್ತೇನಾದರೂ ಹತ್ತಿರಬಹುದೋ? ಈ ಕಲೆಯನ್ನು ನೋಡು. ಸತ್ಯವಲ್ಲವೇ?” ಎಂದು ವತ್ಸಲೆಯು ಮೆಲ್ಲನೆ ನೋಡುತ್ತ, ತೋರಿಸುತ್ತ ಮಾತನಾಡಿದಳು.

“ಅವನು ನಿನ್ನನ್ನು ನೀರಿನಿಂದ ಉಳಿಸಿದನು. ಮತ್ತೊಬ್ಬರನ್ನು ಬೆಂಕಿಯಿಂದ ಉಳಿಸಿರಬಹುದು. ಅದು ವೀರರಿಗೆ ಭೂಷಣ” ಎಂದಳು ಸುಶ್ರುತೆ.

ಆ ತರುಣನು ಎಚ್ಚತ್ತನು. ಒಮ್ಮೆಲೆ ಎದ್ದು ಕುಳಿತನು. “ನೀವು ಸುಖವಾಗಿರುವಿರಾ?” ಎಂದು ಸುಶ್ರುತೆಯು ವಿಚಾರಿಸಿದಳು.

“ಆಹುದು.” ಎಂದು ಅವನು ಉತ್ತರಿಸಿದನು.

“ಆಕಸ್ಮಾತ್ತಾಗಿ ತಾವು ಎಲ್ಲಿಂದ ಬಂದಿರಿ? ದೇವರೇ ನಿಮ್ಮನ್ನು ಕರೆತಂದನು. ತಮ್ಮ ಊರು ಯಾವದು? ತಮ್ಮ ಹೆಸರೇನು?” ಎಂದು ಸುಶ್ರುತೆಯು ವಿಚಾರಿಸಿದಳು.

“ನನಗೆ ಊರು ಇಲ್ಲ. ನಾನು ಎಲ್ಲಿ ಹೋಗುವನೋ ಅದೇ ನನ್ನ ಊರು. ನಾನು ಒಬ್ಬನೇ ಇರುವೆ. ಜಗತ್ತಿನಲ್ಲಿ ಪ್ರೇಮವೆಲ್ಲಿರುವದೆಂಬದನ್ನು ನೋಡುತ್ತ, ತಿರಗುತ್ತಲಿರುವೆ. ಎಲ್ಲೆಡೆಯಲ್ಲಿ ದ್ವೇಷ ಹಾಗೂ ಮತ್ಸರಗಳು ತುಂಬಿ ತುಳುಕುತ್ತಿವೆ. ಆರ್ಯ ಹಾಗೂ ನಾಗರಲ್ಲಿ ಪ್ರಚಂಡ ಕಲಹಾಗ್ನಿಯು ಹೊತ್ತುತ್ತಲಿದೆ. ಬೇರೆ ಬೇರೆ ಸ್ಥಳಗಳಲ್ಲಿ ನಾನು ಅದನ್ನು ನೋಡುತ್ತಲಿದ್ದೇನೆ. ಆರ್ಯ ತರುಣರಲ್ಲಿ ದ್ವೇಷದ ಸಂಘಟನೆಯು ನಡೆದಿದೆ. ನಾಗರಲ್ಲಿಯೂ ನಡೆದಿದೆ. ನನಗೆ ದ್ವೇಷದ ಹವೆಯು ಮಾನಿಸುವದಿಲ್ಲ. ನನಗೆ ಸಂಕಟವಾಗುತ್ತಲಿದೆ. ನಾನು ಎಲ್ಲಿ ಹೋಗುವೆನೋ ಅಲ್ಲಿ ಈ ದ್ವೇಷವು ನನಗೆ ಕಾಣುತ್ತಲಿದೆ. ಈ ಊರ ಕಡೆಗೆ ನಾನು ಬಂದೆ. ನದಿಯ ಮೇಲೆ ನಿಂತಿದ್ದೆ. ಸುಂಯ್ ಎಂಬ ಸಪ್ಪಳ ಕೇಳಿದೆ.

ದೇವರ ಕರೆ ಬಂದಂತೆ ಭಾಸವಾಯಿತು. ಅನಂತ ಜೀವನವು ಕರೆಯುತ್ತಿದೆ. ಇಷ್ಟರಲ್ಲಿ ಗದ್ದಲವು ಕೇಳಿಸಿತು. ನೀರಲ್ಲಿ ಹಾರಿದೆ. ಬದುಕಿದರೆ ಇರ್ವರೂ ಬದುಕುವಾ. ಇಲ್ಲದಿದ್ದರೆ ನಾನೂ ಹೋಗಲು ಉತ್ಸುಕನಿದ್ದೆ. ಸುಂಯ್ ಎಂಬ ಸಪ್ಪಳವು ನನ್ನನ್ನು ಕರೆಯುತ್ತಲೇ ಇತ್ತು." ಎಂದನು ಆ ತರುಣ.

"ಆಸ್ತಿಕ ಋಷಿಯ ಆಶ್ರಮಕ್ಕೆ ನೀವು ಎಂದಾದರೂ ಹೋಗಿದ್ದಿರಾ ? ಅವರು ನವಸಂಸ್ಕೃತಿಯ ನಿರ್ಮಾತೃ. ನಾಗ ಹಾಗೂ ಆರ್ಯರಲ್ಲಿ ಐಕ್ಯವಾಗಬೇಕೆಂದು ಅವರು ಪ್ರಯತ್ನಿಸುವರು. ಅವರಿಗೆ ನಾವು ಸಹಾಯವನ್ನು ಮಾಡೋಣ! ಎಲ್ಲಿ ಎಲ್ಲಿ ದ್ವೇಷವು ಹಬ್ಬಿಸಲ್ಪಡುತ್ತಿದೆಯೋ ಆ ಸ್ಥಳಗಳಲ್ಲೆಲ್ಲ ಪ್ರೇಮದ ಪ್ರಸಾರ ಮಾಡುವಾ. ಪ್ರೇಮಧ್ವಜವನ್ನು ಹಿಡಿದುಕೊಂಡು, ನಾರದರಂತೆ ಬ್ರಹ್ಮವೀಣೆಯನ್ನು ಬಾರಿಸುತ್ತ, ಐಕ್ಯದ ಗೀತವನ್ನು ಹಾಡುತ್ತ, ನಿರ್ಮಲ ವಾಯುವಿನಂತೆ, ಸಂಚರಿಸಬೇಕೆಂದು ಒಮ್ಮೊಮ್ಮೆ ಅನಿಸುತ್ತದೆ. ಸ್ನೇಹದ ಸಂದೇಶವನ್ನು ಬೀರುತ್ತ, ನಿರ್ಮಲವಾದ ಝರಿಯಂತೆ ಎಲ್ಲ ಕಡೆಗೂ ಹೋಗಬೇಕೆನಿಸುವದು. ಆದರೆ ನನ್ನ ವಿಚಾರಗಳು ಮನಸ್ಸಿನಲ್ಲಿಯೇ ಉಳಿಯುತ್ತವೆ. ಸಮಾನಧರ್ಮಿ ಯಾರಾದರೂ ದೊರೆತರೆ ಮಾತ್ರ ಅವುಗಳಿಗೆ ಮೂರ್ತಸ್ವರೂಪವು ಬರುವದು. ಆಶ್ರಮದಲ್ಲಿಯ, ಸತ್-ಅಸತ್‌ಗಳ ಆಚೆಗಿರುವ ಬ್ರಹ್ಮನ ಬಗೆಗೆ ನನಗೆ ಬೇಸರ ಬಂದಿದೆ ಪ್ರತ್ಯಕ್ಷ ಅನುಭೂತಿಗಾಗಿ ನಾನು ಹಾತೊರೆಯುತ್ತಿದ್ದೇನೆ. ಇಂದು ನೀವು ಅನುಭೋಗಿಸಿದಂತೆ! ಎರಡನೆಯವರ ಜೀವನದಲ್ಲಿ ಬೆರೆಯುವದೇ ಅನುಭೂತಿ," ಎಂದು ವತ್ಸಲೆಯು ಮಾತನಾಡಿ ಸುಮ್ಮನಾದಳು.

'ನಾನಿನ್ನು ಹೋಗಿಬರುವೆ. ನನಗೆ ಇನ್ನು ಅಪ್ಪಣೆ ಕೊಡಿ, ಎಂದನು ಆ ತರುಣ.

'ಈಗ ಎಲ್ಲಿಗೆ ಹೋಗುವಿರಿ. ? ಈ ಊರಲ್ಲಿ ಯಾರ ಪರಿಚಯವೂ ನಿಮಗಿಲ್ಲ. ರಾತ್ರಿ ಎಲ್ಲಿ ಹೋಗುವಿರಿ ? ಇಲ್ಲಿಯೇ ಇರ್ರಿ. ಊಟಮಾಡಿರಿ. ಹೋಗುವದಾದರೆ ಬೆಳಿಗ್ಗೆ ಹೋಗುವಿರಂತೆ. ಒಲ್ಲೆವೆನ್ನಬೇಡಿರಿ' ಎಂದು ಸುಶ್ರುತೆ ಆಗ್ರಹ ಪಡಿಸಿದಳು.

"ನನಗೆ ಭಯವಿಲ್ಲ. ನಾನು ರಾತ್ರಿಯೂ ಸಂಚರಿಸುವೆ. ನಾಗರಿಗೆ ಭಯವೆಲ್ಲಿಯದು ? ಘೋರಾರಣ್ಯದಲ್ಲಿ ನಾನೊಬ್ಬನೇ ಕಲ್ಲು ಬಂಡೆಯ ಮೇಲೆ, ರಾತ್ರಿ ಮಲಗುವೆ. ನನಗೆ ಮನೆ ಸೇರುವದಿಲ್ಲ. ಮನೆಯು

ಸಂಕುಚಿತವೆನಿಸುತ್ತದೆ. ಮನೆಯಕೊಂಡವಾಡೆಯು ಮನಸ್ಸನ್ನು ಮುದುಡುವದು. ನಾವು ಮನೆಮಾರುಗಳನ್ನು ಮಾಡಹತ್ತಿದರೆ, ದ್ವೇಷ, ಮತ್ಸರಗಳು ಬೆಳೆಯಹತ್ತುತ್ತವೆ. ಆಸಕ್ತಿಯು ಬೆಳೆಯುತ್ತದೆ. ಆರ್ಯರು ಮನೆಮಾರುಗಳ ಬೆನ್ನುಹತ್ತಿ, ನಾಗರನ್ನು ಓಡಿಸಹತ್ತಿದ್ದಾರೆ. ಒಳ್ಳೇ ಭೂಮಿಗಳೆಲ್ಲ ತಮಗೇ ಬೇಕೆಂದು ಅವರಹಟ. ಇಂದು ನಾಗರೊಡನೆ ಜಗಳಾಡುವರು. ನಾಳೆ ತಮ್ಮತಮ್ಮಲ್ಲಿಯೇ ಹೊಡೆದಾಡುವರು. ಕುರುಕ್ಷೇತ್ರದಲ್ಲಿ ಹೋರಾಡಿಲ್ಲವೇ! ಹೊಡೆದಾಡಿದರು, ಮಡಿದರು. ಒಮ್ಮೆ ಜಗಳದ ಚಟ ಬಿದ್ದರೆ, ಜಗಳವಾಡುವವರು ಯಾರಾದರೂ ಬೇಕೇ ಆಗುತ್ತದೆ. ಸರ್ವರೂ ಒಂದೆಡೆಯಲ್ಲಿ ನಮ್ರರಾಗಿ ಒಬ್ಬರನ್ನೊಬ್ಬರು ಕೂಡಿಕೊಂಡು ಇರಬೇಕೆಂದು ಮಾನವ ಜನಾಂಗಕ್ಕೆ ಒಂದು ದಿವಸ ಅನಿಸದೇ ಇರದು. ಸ್ವತಃ ಬದುಕಬೇಕು, ಎರಡನೆಯವರಿಗೂ ಬದುಕಗೊಡಬೇಕು. ಸಹಕರಿಸಬೇಕು. ಆದರೆ ಅಂತಹ ಪವಿತ್ರದಿನವು ಯಾವಾಗ ಬರುವದು ? " ಎಂದು ಭವಿಷ್ಯದ ಕಡೆಗೆ ನೋಡುತ್ತ ಆ ತರುಣನು ಮಾತನಾಡಿದನು.

" ದೊಡ್ಡ ದೊಡ್ಡ ಮರಗಳು, ಕ್ಷಣದಲ್ಲಿ ಬೆಳೆಯಲಾರವು. ಕ್ಷಣದಲ್ಲಿಯೇ ಹುಟ್ಟುವಂಥವು, ಕ್ಷಣದಲ್ಲಿಯೇ ಸಾಯುವವು. ನಿಮಿಷಾರ್ಧದಲ್ಲಿ ಹುಟ್ಟುವ ಜೀವ ಜಂತುಗಳು, ಸಾಯುವದು ಕೂಡ ನಿಮಿಷಾರ್ಧದಲ್ಲಿಯೇ. ದೊಡ್ಡಧ್ಯೇಯ, ದೊಡ್ಡವಿಚಾರ, ಬೆಳೆಯಲು ಬಹಳ ಸಮಯವು ಬೇಕು. ಇದು ಸೃಷ್ಟಿಯ ನಿಯಮ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾವು ಧೈರ್ಯದಿಂದ ನಡೆಯಬೇಕು. " ಎಂದು ಸುಶ್ರುತೆಯೆಂದಳು.

" ಅಜ್ಜೀ, ಹೊರಗೆ ನೋಡು, ಎಂತಹ ಸುಂದರ ಪ್ರಕಾಶ ಬಿದ್ದಿದೆ. ಹಳದಿಯ ಪ್ರಕಾಶ. ಇಂತಹದನ್ನು ನಾನು ಎಂದೂ ನೋಡಿಲ್ಲ. ಆಕಾಶಕ್ಕೆಲ್ಲ ಬಂಗಾರದ ನೀರನ್ನುಣಿಸಿದಂತಾಗಿದೆ. ಆ ದಿವ್ಯ, ಭವ್ಯ ನೋಟವನ್ನು ನೋಡಲು ಹೊರ ಅಂಗಳಕ್ಕೆ ನಡೆ. ಮೋಡಗಳು ಎಲ್ಲಿಯೂ ಕಾಣಿಸುವದಿಲ್ಲ. ಈ ಗಿಡಗಳು ಎಷ್ಟು ಚಂದ ಕಾಣುತ್ತಿವೆ. ಏನು ಬಂಗಾರದ ಮಳೆಯೇ ಆಗುತ್ತಿದೆಯೇ ? ಎಂದೂ ನಾನು ಇಂತಹ ದೃಶ್ಯವನ್ನು ನೋಡಿರಲಿಲ್ಲ" ಎಂದು ವತ್ಸಲೆಯು ಕುಣಿಯುತ್ತ ಚಪ್ಪಾಳೆಯನ್ನು ಬಾರಿಸಹತ್ತಿದಳು.

“ನಾನು ಹಿಮಾಲಯದಲ್ಲಿ ಇಂತಹ ದೃಶ್ಯವನ್ನೊಮ್ಮೆ ನೋಡಿದ್ದೆ. ಕೆಳಗೆ ಶುಭ್ರವಾದ, ಸ್ವಚ್ಛವಾದ ಬರ್ಫ. ಮೇಲೆ ಹಳದಿಯ ಬಣ್ಣದ ಅನಂತ ಆಕಾಶ. ಕೆಳಗೆ ಬೆಳ್ಳಿಯ ಶಿಖರ, ಮೇಲೆ ಬಂಗಾರದ ಛತ್ರಿ” ಎಂದನಾ ತರುಣ.

“ನಾವು ನದಿಗೆ ಹೋಗೋಣ. ಅಲ್ಲಿ ಈ ದೃಶ್ಯವು ಬಹಳ ರಮಣೀಯವಾಗಿ ಕಂಡೀತು. ನದಿಯಲ್ಲಿ ಅದರ ಪ್ರತಿಬಿಂಬವು ಬಿದ್ದಿದ್ದೀತು. ನದಿಯು ಬಂಗಾರದ್ದೇ ಆಗಿರಬೇಕು. ಥಳಥಳ ಹೊಳೆಯುತ್ತಿರಬೇಕು. ನೀವು ಬರುವಿರಾ? ಅಜ್ಜೀ, ಬರುತ್ತೀಯಾ?” ಎಂದು ಉತ್ಸುಕಳಾಗಿ ವತ್ಸಲೆಯು ವಿಚಾರಿಸಿದಳು

“ನೀವು ಹೋಗಿರಿ, ನಾನು ಅಡಿಗೆಯನ್ನು ಮಾಡುವೆ. ಕತ್ತಲೆಯಾಗುವ ಮೊದಲೇ ಬನ್ನಿರಿ.” ಎಂದು ಸುಶ್ರುತೆ ಹೇಳಿದಳು.

“ಇವರಿಗಂತೂ ಕತ್ತಲೆಯ ರೂಢಿಯೇ ಇದೆ. ಅವರು ಕತ್ತಲೆಯಲ್ಲಿಯೇ ತಿರುಗಾಡುವವರು. ಕತ್ತಲೆಯಲ್ಲಿಯೂ ಇವರು ಬೆಳಕು ಕೊಡುವರು. ಬೀಳುವವರಿಗೆ ಆಧಾರವನ್ನೀಯುವರು. ಕತ್ತಲೆ ಬಿದ್ದರೆ ಕೈ ಹಿಡಿಯುವಿರಲ್ಲವೇ?” ಎಂದು ನಗುತ್ತ ವತ್ಸಲೆ ನುಡಿದಳು.

“ನೀರಲ್ಲಿ ಮುಳುಗುವಾಗ ಎತ್ತಿರುವೆ. ಕತ್ತಲೆಯಲ್ಲಿ ಬಿದ್ದರೆ ಎತ್ತುವೆ. ಬೇಗನೆ ನಡೆ. ಇಲ್ಲದಿದ್ದರೆ ಆ ದೃಶ್ಯವು ಮಾಯವಾದೀತು. ಇಂತಹ ಬಂಗಾರದ ವರ್ಣವು ಬಹಳ ಸಮಯ ಇರುವದಿಲ್ಲ. ದೈವೀ ಕ್ಷಣವು ಕೂಡಲೇ ಹೋಗುವದು. ಕ್ಷಣ ಹೊತ್ತು ಮಾತ್ರ, ದೇವನು ಇಂತಹ ವೈಭವವನ್ನು ತೋರಿಸುವನು. ಮಾನವರಿಗೆ ತನ್ನ ವೈಭವದ ಕಲ್ಪನೆಯನ್ನು ತಂದು ಕೊಡವನು. ಮಾನವರಿಗೆ ತಮ್ಮ ಬೆಳ್ಳಿ, ಬಂಗಾರದ ಮೇಲಿನ ಗರ್ವವು ಕಡಿಮೆಯಾಗಲೆಂದು ಸೃಷ್ಟಿಯು, ಇಂತಹ ಭವ್ಯದರ್ಶನವನ್ನು ಮಾಡಿಸುತ್ತದೆ. ಆಕಾಶದಲ್ಲಿ ಎಲ್ಲ ಮೋಡಗಳು ಸುವರ್ಣಘಟ್ಟಿಯಂತೆ ಕಾಣುತ್ತವೆ. ಭವ್ಯ ಬಂಗಾರದ ವರ್ಣದಿಂದ ಆಕಾಶವೇ ಬಳಿಯಲ್ಪಟ್ಟಿದೆ. ಮಹಾನ್ ವಸ್ತುಗಳ ಮುಂದೆ ವಿರೋಧವು ಅಡಗುತ್ತದೆ. ನಮಗೂ ಅದರೊಡನೆ ಬೆರೆಯ ಬೇಕೆನಿಸುತ್ತದೆ. ಇಲ್ಲದಿದ್ದರೆ ನಾವು ನಗೆಗೀಡಾಗುವೆವು. ಈ ಬಂಗಾರದಂತಹ ಆಕಾಶ

ದಲ್ಲಿ ಒಂದು ಕಪ್ಪು ಮೋಡವು ಬೇರೆಯಾಗಿದ್ದರೆ ಅದು ನಮಗೆ ರುಚಿಸುತ್ತಿರಲ್ಲಿಲ್ಲ" ಎಂದನಾ ತರುಣ.

"ತಮ್ಮ ಸ್ವತಃಹದ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕೆನ್ನುವವರ ಗತಿಯೇನು? ಅವರಿಗೆ ನಿಮ್ಮ ಬಂಗಾರಕ್ಕಿಂತಲೂ ತಮ್ಮ ಜೀವನದ ಮಣ್ಣೇ ಮೇಲೆನಿಸಿದರೆ ತಪ್ಪು ಏನು? ನಿಜವಾಗಿಯೂ ವಿಚಾರ ಮಾಡಿದರೆ, ಬಂಗಾರವೂ ಮಣ್ಣೇ ಅಲ್ಲವೇ? ಮಣ್ಣಿನ ಶುದ್ಧ ವಿಕಾಸವೇ ಬಂಗಾರ. ಒಂದೇ ಬಣ್ಣವು ಕಾಣಲಿ ಅಥವಾ ಅನೇಕ ಬಣ್ಣಗಳಾಗಿ ಕಾಣಲಿ ಅದರ ಮೂಲದಲ್ಲಿರುವ ವಸ್ತುವು ಒಂದೇ. ಆಕಾಶದಲ್ಲಿ ಈ ಬಣ್ಣವು ಬದಲಾಗಬಹುದು. ಆದರೆ ಮೂಲವಾದ ನೀಲ ಬಣ್ಣವು ಮಾತ್ರ ಎಂದೂ ಬದಲಾಗುವದಿಲ್ಲ. ಅಲ್ಲವೇ? ಓ ಹೋ! ನದಿ ಬಂದಿತು. ನಮ್ಮ ಹಿಂದೆ ಮಕ್ಕಳೂ ಬರುತ್ತಿದ್ದಾರೆ" ಎಂದಳು ವತ್ಸಲೆ.

ಇಬ್ಬರೂ ನದಿಯ ದಂಡೆಯ ಮೇಲೆ ನಿಂತಿದ್ದಾರೆ. ಮಾತು ದಣಿದಿದೆ. ಚಿಕ್ಕಮಕ್ಕಳು ಕುಣಿಯುತ್ತಿದ್ದಾರೆ. ಅವರ ಕಾವ್ಯ ಶಕ್ತಿಯು ಜಾಗೃತವಾಗಿತ್ತು. ಮಕ್ಕಳ ಪ್ರತಿಭೆಯು ಅಪ್ರತಿಹತವಿರುತ್ತದೆ. ಅವರ ಕಲ್ಪನೆಯು ಒಮ್ಮೆ ಮಿಂಚುತ್ತದೆ, ಮಾಯವಾಗುತ್ತದೆ. ದೇವದೂತರ ಚಿತ್ರಗಳನ್ನು ಚಿಕ್ಕಮಕ್ಕಳಂತೆ ತೆಗೆಯುತ್ತಾರೆ. ಆದರೆ ಅವರಿಗೆ ಪಕ್ಕೆಗಳಿರುತ್ತವೆ. ಪಕ್ಕವುಳ್ಳ ಮಕ್ಕಳೆಂದರೆ ದೇವದೂತರು. ಮಕ್ಕಳು ಹುಟ್ಟಿದಾಗ ಅವರಿಗೆ ಪಕ್ಕಗಳಿರುತ್ತವೆ. ಬರಬರುತ್ತ ಮೆಲ್ಲನೆ ಅವುಗಳನ್ನು ಕತ್ತರಿಸುತ್ತಾರೆ. ಆಕಾಶಕ್ಕೆ ಹಾರುವ ಮಕ್ಕಳ ಮನಸ್ಸು ನೆಲದ ಮೇಲೆಯೇ ಉಳಿಯುತ್ತದೆ. ವತ್ಸಲೆ ಹಾಗೂ ಆ ತರುಣ ಇಬ್ಬರೂ ಮೌನವಾಗಿದ್ದರು. ಇಬ್ಬರ ಅಂತಃಕರಣವೂ ಉಕ್ಕೇರುತ್ತಿತ್ತು. ಬೊಂಬೆಯಂತೆ ಸ್ಥಿರವಾಗಿ ಕುಣಿಯುತ್ತಿದ್ದರು. ಮಾತಿಲ್ಲದೆ ಮಾತಾಡುತ್ತಿದ್ದರು. ಚಿತ್ರದಂತೆ ಅವರಿಬ್ಬರು ತೋರುತ್ತಿದ್ದರು. ಚಿತ್ರದಲ್ಲಿ ಭಾವಗಳ ಮೂಕ ದರ್ಶನವಾಗುತ್ತದೆ ಹೃದಯದಲ್ಲಿಯ ಭಾವಗಳ ದರ್ಶನವು ಅವರ ಮುಖಮುದ್ರೆಯ ಮೇಲೆ ಆಗುತ್ತಿತ್ತು. ಅವರ ಆನಂದವು ಹಾಡುವದರಲ್ಲಿಯೂ ಕುಣಿಯುವದರಲ್ಲಿಯೂ ಪರಿಣಮಿಸಿತು. ಮಕ್ಕಳಿಗೆ ಹೊಟ್ಟೆಯಲ್ಲಿಟ್ಟುಕೊಳ್ಳುವದಾಗುವದಿಲ್ಲ. ಅವರು ಪ್ರಕಟಿಸುತ್ತಾರೆ. ಕೇಳಿರಿ ಮಕ್ಕಳ ಗಾಯನವನ್ನು. ನೋಡಿರಿ ಅವರ ಕುಣಿತವನ್ನು.

ಆಯಿತು ಬಾನು ಹೊನ್ನೋ ಹೊನ್ನು !
ಯಾರದು ಯಾರದು ಮೆರೆವೀ ಬಾನು ?
ಆಯಿತು ಬಾನು ಹೊನ್ನೋ ಹೊನ್ನು !
ದೇವರಾಯನದು ಮೆರೆವೀ ಬಾನು !

ಸುರಿಯುತಿದೆ ಹಾ ! ಚಿನ್ನದ ಸರಿಯು !
ಸಲ್ಲದು ನನಗೀ ಸೆಡವಿನ ಪರಿಯು !
ಸರಿಯುತಿದೆ ಹಾ ! ಚಿನ್ನದ ಸರಿಯು !
ಸಲ್ಲದು ನನಗೀ ತಿರುಪೆಯ ಪರಿಯು !

ಒಂದು ಹಾಡು ಮತ್ತೊಂದು ಹಾಡಿಗೆ ಜನ್ಮವೀಯಿತು. ದೀಪವು ದೀಪವನ್ನು ಹೊತ್ತಿಸುವದು. ಒಂದು ದೀಪ ಹತ್ತಿದರೆ, ಲಕ್ಷಾಂತರ ದೀಪಗಳು ಹತ್ತುವವು. ಒಂದು ನಕ್ಷತ್ರ ಕಂಡೊಡನೆಯೇ ಅನಂತ ನಕ್ಷತ್ರಗಳು ಕಾಣುವವು. ಎಲ್ಲವೂ ಒಂದೇ ರೀತಿ.

ಎರಡನೆಯ ಹಾಡನ್ನು ಮಕ್ಕಳು ಹಾಡುತ್ತಲಿದ್ದಾರೆ. ಅವರಿಬ್ಬರ ಸುತ್ತಲೂ ಕುಣಿಯುತ್ತಲಿದ್ದಾರೆ. ನೋಡಿರಿ, ಎಷ್ಟು ಮಧುರವಿದೆ ಆ ಹಾಡು!

ಬಂಗಾರದ ಬೆಳೆ

ಬಂತು ಬಂಗಾರದ ಬೆಳೆ
ಬಂತು ಬಂಗಾರದ ಬೆಳೆ
ಅದ ಕೊಯ್ಯಲು ಕಲಿ ಮಗಳೆ
ಅದ ನಾಯಲು ಕಲಿ ಮಗಳೆ

ಹೊಂಬಣ್ಣವು ತುಂಬಿ ಬಂತು
ತನುವೆಲ್ಲಾ ಪೀತವಾಯ್ತು
ಹೊಂಬಣ್ಣವು ತುಂಬಿ ಬಂತು
ಕುಣಿ ಕುಣಿ ಮೈಯ ಮರೆತು

ಹೊಂಬಣ್ಣವು ತುಂಬಿ ಬಂತು
ಆಡು ಆಡು ಮೈಯ ಮರೆತು
ಸಾಕು ಬಿಡು, ಆಟ ಬೇಡ
ಮನೆ ಸೇರಲಾಯ್ತು ತಡ

ತಾಯಿಯೆನ್ನ ಕರೆಯುತಿಹಳು
ಎಂಬ ಭೀತಿ ಮನಕೆ ಮಿಗಿಲು
ಇಲ್ಲಿ ಹೊನ್ನಹೊಳೆಯ ಪೂರ
ನಮ್ಮ ಮನೆಯೋ—ದೂರ ದೂರ

ಮನೆ ದೂರ ಇರಲೇಳಿ
ಹೊನ್ನರಾಸಿ ಸೂರೆಗೊಳ್ಳಿ
ಹೊನ್ನರಾಸಿ ಸೂರೆಗೊಳ್ಳಿ
ಜನುಮಕಾಗುವ ಹೊನ್ನಿದು ಮಗಳೆ

ಅಡಗಿತು ಅಕೋ ಬಾನೊಳಗಿನ ಚಿನ್ನ
ಒಡನೇ ನಿಂತಿತು ನಮ್ಮಯ ಗಾನ

ಆಕಾಶದಲ್ಲಿಯ ಆ ಸುಂದರದೃಶ್ಯವು ಕ್ಷಣಾರ್ಧದಲ್ಲಿ ಅದೃಶ್ಯವಾಯಿತು. ಬಂಗಾರದ ವರ್ಣವು ಕಾಣದಂತಾಯಿತು. ಮಕ್ಕಳ ಹಾಡೂ ಮುಗಿಯಿತು. ಎಲ್ಲಿಯ ವರೆಗೆ ಬಂಗಾರವ್ರೋ ಅಲ್ಲಿಯ ವರೆಗೆ ಹಾಡು. ಆದರೆ ಆ ತರುಣನು ಒಮ್ಮೆಲೇ ಕುಣಿಯಹತ್ತಿದನು. ಹಾಡಹತ್ತಿದನು. ಆ ಮಕ್ಕಳ ಚರಣಗಳನ್ನೇ ಅನ್ನುತ್ತಾ ಕುಣಿಯಹತ್ತಿದನು.

ಸುರಿಯುತಿದೆ ಹಾ ! ಚಿನ್ನದ ಸರಿಯು !
ಸಲ್ಲದು ನಿನಗೀ ಸೆಡವಿನ ಪರಿಯು !
ಸರಿಯುತಿದೆ ಹಾ ! ಚಿನ್ನದ ಸರಿಯು !
ಸಲ್ಲದು ನಿನಗೀ ತಿರುಪೆಯ ಪರಿಯು !

" ನಾವೆಲ್ಲರೂ ಕುಣಿಯೋಣ ಬನ್ನಿ, ಎಲ್ಲ ಮಕ್ಕಳೂ ಬನ್ನಿ " ಎಂದು ವತ್ಸಲೆಯು ಕರೆದಳು.

"ನೀವಿಬ್ಬರೂ ನಡುವೆ ನಿಲ್ಲಿರಿ" ನಿಮ್ಮ ಸುತ್ತಲೂ ನಾವು ತಿರುಗುವೆವು. ನೀವು ಚಿಗಿತ ಮಾಮರವಾಗಿರಿ, ನಾವು ಗುಂಯಿ ಗುಂಯಿ ಧ್ವನಿಗೈಯುವ ಮಧುಕರಗಳಾಗುವೆವು. ನೀವು ಕಮಲ, ನಾವು ಭೃಂಗ" ಎಂದರು ಮಕ್ಕಳು.

"ನಾವು ನಡುವೆ ನಿಲ್ಲುವೆವು. ನೀವು ಕುಣಿಯಿರಿ, ಹಾಡಿರಿ" ಎಂದಳು ವತ್ಸಲೆ.

ಮಕ್ಕಳ ಉತ್ಸಾಹ ಉಕ್ಕೇರಿತು. ಆ ತರುಣ ಹಾಗು ವತ್ಸಲೆ ನಡುವೆ ನಿಂತರು. ಮಕ್ಕಳ ತಾಳದಂತೆ, ಅವರೂ ತಾಳ ಹಾಕುತ್ತಿದ್ದರು. ತರುಣನು ವತ್ಸಲೆಯ ಕೈಹಿಡಿದಿದ್ದನು. ಅವರಿಬ್ಬರೂ ಕುಣಿಯಹತ್ತಿದರು. ನದಿಯ ನೀರೂ ಕುಣಿಯುತ್ತಿದ್ದಿತು. ಆಕಾಶದಲ್ಲಿಯ ಬೆಳದಿಂಗಳೂ ಕುಣಿಯ ಹತ್ತಿತು. ದೂರದಲ್ಲಿ ದೀಪಗಳು ಕುಣಿಯಹತ್ತಿದವು. ಮಕ್ಕಳು ದಣಿದರು. ಆಟವು ನಿಂತಿತು. ನಿಂತಿತೋ ಅಥವಾ ಪ್ರಾರಂಭವಾಯಿತೋ ? ಕುಣಿತವು ನಿಂತಿತು. ನಿಂತಿತೋ ಅಥವಾ ಸುರುವಾಯಿತೋ ? ಇಬ್ಬರ ಕೈಗಳು ದೂರ ಸರಿದವು. ಸರಿದವೋ ಅಥವಾ ಸ್ಥಿರವಾಗಿ ಬೆರೆತವೊ ?

ಎಂತಹ ಮೋಜು ! ಎಂತಹ ಚಂದ ! ಅವನೆಷ್ಟು ಚೆನ್ನಾಗಿ ಕುಣಿಯುತ್ತಿದ್ದ ? ಗೋಕುಲದಲ್ಲಿಯ ಕೃಷ್ಣನಂತೆ ಕಾಣುತ್ತಿದ್ದ ! ಕೃಷ್ಣನೂ ಹೀಗೆಯೇ ಕುಣಿಯುತ್ತಿರಬೇಕು" ಹೀಗೆ ಮಾತನಾಡುತ್ತ ಮಕ್ಕಳು ಮನೆಗೆ ನಡೆದರು. ಆದರೆ ಅಲ್ಲಿ ದೂರ ನಿಂತವರು ಯಾರು? ಇಂತಹ ನೃತ್ಯದಲ್ಲಿ ಅವನೇಕೆ ಭಾಗ ವಹಿಸಲಿಲ್ಲ ? ಅವನಿಗೆ ಸ್ಫೂರ್ತಿಯೇ ಆಗಲಿಲ್ಲವೇ ?

'ಯಾರು ಕಾರ್ತೀಕನೇ ! ಹೀಗೇಕೆ ನಿಂತಿರುವಿ. ಇಂದು ಬಂಗಾರದ ಮಳೆಯಾಯಿತು. ಅದನ್ನು ಸವಿಯದವನೇ ದುರ್ಭಾಗ್ಯ. ನೀನೇಕೆ ಕುಣಿಯಲು ಬರಲಿಲ್ಲ ? ಎಂದು ವತ್ಸಲೆಯು ವಿಚಾರಿಸಿದಳು

'ನಾಗರಂತೆ ಆರ್ಯರು ಕುಣಿಯುವವರಲ್ಲ' ಎಂದನು ಕಾರ್ತೀಕ.

'ನಾಗರು ನೃತ್ಯಪ್ರಿಯರು. ನಾಗರದೇವರೂ ಕೂಡ ಗಾನಪ್ರಿಯ. ನೃತ್ಯಪ್ರಿಯ. ನಾಗದೇವರ ಯಾತ್ರೆಯಲ್ಲಿ ದೇವರ ಮುಂದೆ, ನೃತ್ಯ ಗಾಯನಗಳು ನಡೆಯುತ್ತವೆ. ಆಗ ನಾಗಗಳೂ ಕೂಡ ಬಂದು ತಲೆದೂಗುತ್ತವೆ. ಎಂದು ಆ ತರುಣ ಉತ್ತರಿಸಿದನು.

'ಕಾರ್ತೀಕ ! ಆರ್ಯನಾದ ಅರ್ಜುನನಂತೂ ಊರ್ವಸಿಯ ಬಳಿಯಲ್ಲಿ ನೃತ್ಯ ಕಲಿತನು. ಶ್ರೀ ಕೃಷ್ಣನಂತೂ ನಟ ಸಾರ್ವಭೌಮ, ನೃತ್ಯವು ಕೇಳು ಏಕೆ? ಇಡೀ ಸೃಷ್ಟಿಯೇ ಕುಣಿಯುತ್ತಲಿದೆ. ಬಿರುಗಾಳಿಯು ಬಂದೊಡನೆ, ಎಲೆಗಳು ಕುಣಿಯ ಹತ್ತುತ್ತವೆ. ಬಳ್ಳಿಗಳು ತಲೆಹಾಕುತ್ತವೆ. ನೀರು ಉಕ್ಕೇರುತ್ತದೆ. ಈ ಪೃಥ್ವಿಯು ಕೂಡ ಸೂರ್ಯನ ಸುತ್ತಲೂ ಕುಣಿಯುತ್ತಿದೆ. ಚಂದ್ರನು ಪೃಥ್ವಿಯ ಸುತ್ತಲೂ ಕುಣಿಯುತ್ತಿದ್ದಾನೆ. ಶಿವ-ಪಾರ್ವತಿಯರ ನೃತ್ಯವಂತೂ ನಡೆದೇ ಇದೆ. ಎಂದು ಆಶ್ರಮದ ಆಚಾರ್ಯರು ಹೇಳುತ್ತಾರೆ. ಇದೆಲ್ಲವೂ ಬಂಧನದ ಆಟ ! ಪೃಥ್ವಿಗೆ ಸೂರ್ಯನು ಸಿಕ್ಕುವದಿಲ್ಲ. ಚಂದ್ರನಿಗೆ ಪೃಥ್ವಿಯು ಸಿಗುವದಿಲ್ಲ. ನಡೆದಿದೆ ಪ್ರದಕ್ಷಿಣೆ" ಎಂದಳು ವತ್ಸಲೆ.

' ಈ ಪ್ರದಕ್ಷಿಣೆಯು ವ್ಯರ್ಥವಲ್ಲ. ಪೃಥ್ವಿಗೆ ಪ್ರಕಾಶ ದೊರೆಯುತ್ತದೆ. ಚಂದ್ರನಿಗೆ ಶೋಭೆಯುಂಟಾಗುತ್ತದೆ. ಪ್ರೇಮದ ಪ್ರದಕ್ಷಿಣೆಯು ಜೀವನಕ್ಕೆ ಪ್ರಕಾಶವೀಯುವದು.' ಎಂದನಾ ತರುಣ.

ಪ್ರಕಾಶದ ಹಿಂದೆ ಕತ್ತಲೆಯು ಬಂದೇ ಬರುವದು. ಆದುದರಿಂದ '' ನನಗೆ ಪ್ರಕಾಶವೂ ಬೇಡ, ಕತ್ತಲೆಯೂ ಬೇಡ" ಎಂದನು ಕಾರ್ತೀಕ.

'ಎಲ್ಲಿ ಪ್ರಕಾಶವಿಲ್ಲವೋ ಅಲ್ಲಿ ಕತ್ತಲೆಯೂ ಇಲ್ಲವೆಂದು' ನಿನ್ನ ಅಭಿಪ್ರಾಯವೇ ? ಎಂದು ವತ್ಸಲೆ ಪ್ರಶ್ನಿಸಿದಳು.

' ಪರಬ್ರಹ್ಮನು ದ್ವಂದ್ವಾತೀತನಿರುವನು' ಎಂದನು ಕಾರ್ತೀಕ

'ಆ ನಿರ್ದ್ವಂದ್ವ ಬ್ರಹ್ಮನ ಬೇಸರ ಬಂದಿದೆ ನನಗೆ. ಈ ಕುಣಿಯುವ ಬ್ರಹ್ಮನಲ್ಲಿಯೇ ಆನಂದವಿದೆ. ನೀನು ಎಂದಾದರೂ ಈ ಆನಂದವನ್ನು ಸವಿದಿರುವಿಯಾ ಕಾರ್ತೀಕ! ಎಂದು ವತ್ಸಲೆಯು ನುಡಿದಳು.

'ವಿಷವನ್ನು ಎಲ್ಲರೂ ಸೇವಿಸುವ ಅವಶ್ಯಕತೆಯಿಲ್ಲ' ಎಂದನು ಕಾರ್ತೀಕ.

' ಆದರೆ ಒಮ್ಮೊಮ್ಮೆ ತಿಳಿಯದೆ, ಒಳ್ಳೇ ಫಲವನ್ನು ಕೂಡ ಕೊಳಕು ಎಂದು ಒಗೆದುಬಿಡಬಹುದು. ಆ ಬುದ್ಧಿವಂತನು ಮಾತ್ರ ಅದಕ್ಕೆ ಎರವಾಗುವನು. ಆದರೆ ಒಬ್ಬ ಭಿಕ್ಷುಕಳು ಅದನ್ನು ಸವಿಯಬಹುದು, ಎಂದಳು ವತ್ಸಲೆ.

‘ ನೀನು ನನ್ನ ಸಂಗಡ ಕುಣಿಯುವಿಯಾ? ನೋಡಲು ಈಗ ಮಕ್ಕಳಿಲ್ಲ. ಅವರಿರುವಾಗ ಕುಣಿಯಲು ನಾನು ನಾಚಿದೆ. ಬಾ, ಹಿಡಿ ನನ್ನ ಕೈಯನ್ನು. ಕುಣಿಯೋಣ!’ ಎಂದು ಕಾರ್ತೀಕನು ತಾನಾಗಿಯೇ ಬಾಯಿ ತೆಗೆದ.

‘ ಈಗ ಬೇಡ, ಹೊತ್ತಾಯಿತು. ಅಜ್ಜಿಯು ಬೇಗ ಬರಲು ಹೇಳಿರುವಳು. ಕತ್ತಲೆಯಾಗುವದು, ನಡೆ ಹೋಗುವಾ.’ ಎಂದಳು ವತ್ಸಲೆ.

‘ ನಿನ್ನ ಕೈ ಹಿಡಿಯುವೆ. ಎಲ್ಲಿಯಾದರೂ ಬಿದ್ದಿಗಿದ್ದಿ,! ಎಂದನು ಕಾರ್ತೀಕ.

‘ ಕುಣಿಯುವವರ ಕಾಲು ತಪ್ಪುವದಿಲ್ಲ. ಅವರಿಗೆ ಚೆನ್ನಾಗಿ ಹೆಜ್ಜೆ ಹಾಕಲು ಬರುವದು. ಹಿಡಿಯುವದಿದ್ದರೆ, ಅವರ ಕೈ ಹಿಡಿ. ಈ ಊರಿಗೆ ಅವರು ಹೊಸಬರು, ಅವರಿಗೆ ದಾರಿ ಗೊತ್ತಿಲ್ಲ. ಎಂದಳು ವತ್ಸಲೆ.

‘ ನಾನೀ ಊರಿಗೆ ಹೊಸಬನಲ್ಲ. ಈ ಜಗತ್ತಿನಲ್ಲಿ ಈ ಊರಿನಷ್ಟು ಪರಿಚಯ ನನಗೆ ಮೊತ್ತೊಂದೂರಿಲ್ಲ. ಈ ನದಿಯಷ್ಟು ಪರಿಚಯವಿದ್ದ ಬೇರೊಂದು ನದಿಯಿಲ್ಲ. ಈ ದಿನ್ನೆಯಷ್ಟು ಪರಿಚಿತ ಇನ್ನೊಂದಿಲ್ಲ, ಎಂದು ತರುಣನು ಅನ್ನುವಷ್ಟರಲ್ಲಿಯೇ ಈ ಹುಡುಗಿಯಷ್ಟು ಪರಿಚಯವು ಇನ್ನೊಬ್ಬಳದಿಲ್ಲವೆಂದು ಕಾರ್ತೀಕನು ದನಿಗೂಡಿಸಿದನು.

‘ ನಿನ್ನ ಮಾತು ನಿಜ. ನನ್ನ ಪರಿಚಯವು ಯಾರಿಗೂ ಇಲ್ಲ. ನಾನು ಕ್ಷಣಹೊತ್ತುಕೂಡ, ಯಾವ ಸ್ಥಳದಲ್ಲಿಯೂ ಇರುವದಿಲ್ಲ. ನಾನು ಯಾವ ಊರಲ್ಲಿಯೂ ಒಂದು ದಿವಸವೂ ಕೂಡ ಇಲ್ಲ. ನನ್ನ ಜೀವನದಲ್ಲಿ ಅಮರವಾಗುವ ಊರೆಂದರೆ ಇದೊಂದೇ ಎಂದನು.’ ಆ ತರುಣ.

“ ನಿಮ್ಮ ಹೆಸರೇನು ? ನಿಮ್ಮ ಊರು ಎಲ್ಲಿಯೂ ಇರದೆ ಇದ್ದರೂ ನಿಮಗೆ ಹೆಸರಾದರೂ ಇರಬೇಕಷ್ಟೇ ? ಹೇಳಿರಿ ನಿಮ್ಮ ಹೆಸರನ್ನು. ಆ ಹೆಸರು ನನ್ನ ಜೀವನದಲ್ಲಿ ಅಮರವಾಗಲಿ ” ಎಂದಳು ವತ್ಸಲೆ.

“ ನನ್ನ ಹೆಸರು ನಾಗಾನಂದ. ” ಎಂದನು ತರುಣ.

“ ನಾಗಾನಂದನು ವತ್ಸಲಾನಂದನೂ ಇರುವನು. ನಾಗಾನಂದ ! ಎಂಥಹ ಸುಂದರ ಹೆಸರು ! ಇದರಲ್ಲಿ ಎಲ್ಲ ಕಾವ್ಯವೂ ತುಂಬಿದೆ ! ಸರ್ವ

ಸಂಗೀತವೂ ಇದರಲ್ಲಿ ಅಡಕವಾಗಿದೆ! ಹೆಸರಿನಲ್ಲಿ ಎಷ್ಟು ಸವಿ ಇದೆ ನೋಡು ಕಾರ್ತೀಕಾ!" ಎಂದು ವತ್ಸಲೆಯು ತಲೆಬಾಗಿ ನುಡಿದಳು.

"ಯಾವುದು ನಮಗೆ ಸೇರುವದೋ ಅದು ಸವಿ ಇರುತ್ತದೆ." ಎಂದನು ಕಾರ್ತೀಕ.

"ಕಾರ್ತೀಕ ಎಂಬುದು ಎಷ್ಟು ಸುಂದರ ಹೆಸರು! ಕೃತ್ತಿಕಾ ನಕ್ಷತ್ರದ ಪುಂಜವು, ಕಾರ್ತೀಕ ತಿಂಗಳಲ್ಲಿ ಎಷ್ಟು ರಮಣೀಯವಾಗಿ ಕಾಣುವದು? ಅದೇನು, ಮುತ್ತುಗಳ ಗುಂಪೋ, ಅಥವಾ ಮಾಣಿಕಗಳ ಖಣಿಯೋ? ಎನಿಸುವುದು. ಕೃತ್ತಿಕಾ ನಕ್ಷತ್ರವನ್ನು ನೋಡುವದರಲ್ಲಿ ನನಗೆ ಬಹಳ ಆನಂದ. ಆಶ್ರಮದಲ್ಲಿರುವಾಗ ನಾನು ಬೆಳಗ್ಗೆ ಸ್ನಾನಕ್ಕೆ ಹೋಗುತ್ತಿದ್ದೆ. ಮತ್ತು ಸ್ನಾನ ಮಾಡುತ್ತಿರುವಾಗ ಆ ಕೃತ್ತಿಕಾ ನಕ್ಷತ್ರಪುಂಜದ ಕಡೆಗೆ ನೋಡುತ್ತಲಿದ್ದೆ! ಪುಣ್ಯವಂತ ಆತ್ಮಗಳ ಸಭೆಯೇ ಸೇರಿದಂತೆ ಆ ನಕ್ಷತ್ರ ಪುಂಜವು ಕಾಣುತ್ತಲಿತ್ತು. ಮೊದಲು ನನಗೆ ಆ ನಕ್ಷತ್ರ ಪುಂಜದ ಹೆಸರು ಗೊತ್ತಿದ್ದಿಲ್ಲ. ಆದರೆ ಆಚಾರ್ಯರು ಅದನ್ನು ಹೇಳಿದರು." ಎಂದನು ನಾಗಾನಂದ.

"ನೀವು ಆಶ್ರಮದಲ್ಲಿ ಇದ್ದಿರಾ? ಆಶ್ರಮದಲ್ಲಿಗುವದು ನಾಗರಿಗೆ ಸೇರುತ್ತದೆಯೇ?" ಎಂದು ಕಾರ್ತೀಕನು ವಿಚಾರಿಸಿದ.

"ಸುಗಂಧವುಳ್ಳ ಪವಿತ್ರವುಳ್ಳ ಮತ್ತು ಸ್ವಚ್ಛವಾದ ಪದಾರ್ಥಗಳೆಲ್ಲ ನಾಗರಿಗೆ ಸೇರುತ್ತವೆ. ನಾಗರು ಸೌಂದರ್ಯೋಪಾಸಕರೂ, ಸಂಗೀತ ಪ್ರಿಯರೂ ಮತ್ತು ಸತ್ಯ ಪೂಜಕರೂ ಇರುತ್ತಾರೆ" ಎಂದನು ನಾಗಾನಂದ.

"ತಾವು ಆಶ್ರಮದಲ್ಲಿ ಎಷ್ಟು ದಿನಗಳವರೆಗೆ ಇದ್ದಿರಿ?" ಎಂದು ವತ್ಸಲೆ ವಿಚಾರಿಸಿದಳು

"ಕೆಲವು ದಿವಸ ಇದ್ದೆ. ಆ ಮೇಲೆ ಬಿಟ್ಟು ಬಿಟ್ಟೆ" ಎಂದ, ಅವನು.

"ಯಾಕೆ ಬಿಟ್ಟಿರಿ?" ಎಂದು ಕಾರ್ತೀಕನು ವಿಚಾರಿಸಿದ.

"ಸಂಪೂರ್ಣ ಜ್ಞಾನದ ಗುಟ್ಟು ತಿಳಿಯಿತೆಂದು" ಅವನೆಂದನು.

"ಆ ಗುಟ್ಟು ಯಾವದು?" ಎಂದು ವತ್ಸಲೆಯು ವಿಚಾರಿಸಿದಳು.

"ಪ್ರೇಮಮಯ ಸೇವೆಯೇ ಆ ಗುಟ್ಟು" ಎಂದು ಅವನು ಉತ್ತರ ವಿತ್ತನು.

"ಪ್ರೇಮಮಯ ಸೇವೆ ಅಂದರೇನು ?" ವತ್ಸಲೆ ವಿಚಾರಿಸಿದಳು.

"ಪೃಥ್ವಿಯ ಜ್ಞಾನವು ಆಗಬೇಕಾಗಿದ್ದರೆ, ಅದರ ಹೃದಯದಲ್ಲಿ ಸೇರಬೇಕು. ಪ್ರಥ್ವಿಯನ್ನು ಅಗಿದು ನೋಡು. ಗಿಡಗಳ ಜ್ಞಾನವು ಆಗ ಬೇಕಾಗಿದ್ದರೆ, ಅವುಗಳಿಗೆ ನೀರುಣಿಸಬೇಕು. ಅಂದರೆ ಅವುಗಳ ಜೀವನದಲ್ಲಿಯ ಸೌಂದರ್ಯವು ತಿಳಿದೀತು. ನಕ್ಷತ್ರಗಳ ಜ್ಞಾನವು ಆಗಬೇಕಾಗಿದ್ದರೆ, ಹಗಲಿರುಳು ಪ್ರೇಮದಿಂದ ಅವುಗಳ ಕಡೆಗೆ ನೋಡಬೇಕು. ಮನುಷ್ಯರ ಅಂತರಂಗವನ್ನು ತಿಳಿದುಕೊಳ್ಳಬೇಕಾಗಿದ್ದರೆ, ಪ್ರೇಮದಿಂದ ಅವರಿಗೆ ಉಪಕಾರ ಮಾಡಬೇಕು. "ಮಣ್ಣಿನಿಂದ ಭೂಮಿಯ ಕಸುವನ್ನು ತಿಳಿಯಬೇಕು. ಸಹವಾಸದಿಂದ ಮಾನವನ ಸ್ವಭಾವವನ್ನು ಅರಿಯಬೇಕು" ಎಂದು ನಾಗರ ನಾಣ್ಣುಡಿ ಇದೆ. ಭೂಮಿಯು ಒಳ್ಳೇಯದೇ ಅಥವಾ ಕೆಟ್ಟದಿದೆಯೇ ಎಂಬುದನ್ನು ತಿಳಿಯ ಬೇಕಾದರೆ ಅದನ್ನು ಸಾಗುಮಾಡಿದ ನಂತರವೇ ತಿಳಿಯುತ್ತದೆ. ಮನುಷ್ಯನು ಒಳ್ಳೆಯವನೇ ಅಥವಾ ಕೆಟ್ಟವನೇ ಎಂಬುದನ್ನು ತಿಳಿದುಕೊಳ್ಳಬೇಕಾಗಿದ್ದರೆ ಅವನ ಸಾನ್ನಿಧ್ಯದಲ್ಲಿ ವಾಸಿಸಬೇಕು. ಅಂದರೆ ಗೊತ್ತಾಗುತ್ತದೆ. ಕೇವಲ ಸಾನ್ನಿಧ್ಯದಲ್ಲಿದ್ದರೆ ಸಾಲದು, ಸ್ನೇಹಮಯ ಸಾನ್ನಿಧ್ಯವು ಬೇಕು. ಅಂದರೇನೇ ಅಂತರಂಗವು ತಿಳಿಯುತ್ತದೆ." ಎಂದನು ನಾಗಾನಂದ.

"ನಿನಗೆ ಏನೇನು ಬರುತ್ತದೆ ?" ಎಂದು ಕಾರ್ತೀಕನು ವಿಚಾರಿಸಿದ.

"ನಾನು ಮಹಾಪೂರದಲ್ಲಿ ಈಸಲು ಬಲ್ಲೆ, ಬಾಣಗಳನ್ನು ಬಿಡಬಲ್ಲೆ, ಭಾಲೆಯನ್ನು ಒಗೆಯಬಲ್ಲೆ, ಒಕ್ಕಲತನವನ್ನು ಮಾಡಬಲ್ಲೆ, ಕೊಳಲೂದಲು ಬಲ್ಲೆ, ಹೂಗಳನ್ನು ಅರಳಿಸಬಲ್ಲೆ, ಬಳ್ಳಿಗಳ ಹಾಗೂ ಹುಲ್ಲಿನ ಸುಂದರ ಬುಟ್ಟಿಗಳನ್ನು ಹೆಣೆಯಬಲ್ಲೆ, ಆಶ್ರಮದಲ್ಲಿರುವಾಗ ನಾನು ಸುಂದರವಾದ ಹುಲ್ಲಿನಿಂದ ಹೆಣೆದ ಒಂದು ಬುಟ್ಟಿಯನ್ನು ಗುರುದೇವನಿಗೆ ಅರ್ಪಿಸಿದ್ದೆ. ಎಷ್ಟು ಸೊಗಸಾದ ಎಳೆಯ ಹುಲ್ಲು ಅದು !" ಎಂದನು ನಾಗಾನಂದ.

"ನಿನಗೆ ಬುಟ್ಟಿಯನ್ನು ಹೆಣೆಯಲು ಯಾರು ಕಲಿಸಿದರು ?" ಎಂದನು ಕಾರ್ತೀಕ.

" ನನ್ನ ತಾಯಿ " ಎಂದನು ಆ ತರುಣ.

" ನಿಮ್ಮ ತಾಯಿಯು ನಿನಗೆ ಮತ್ತೇನು ಕಲಿಸಿರುವಳು ? ಎಂದು ಕಾರ್ತಿಕನು ಪ್ರಶ್ನಿಸಿದನು.

" ಆಕೆಯು ನನಗೆ ಎರಡನೆಯವರ ಸಲುವಾಗಿ ಸಾಯಲು, ಎರಡನೆಯವರ ಸಲುವಾಗಿ ದುಡಿಯಲು ಕಲಿಸಿರುವಳು. " ಎಂದು ನಾಗನಂದನು ಹೇಳಿದ.

" ನಿಮ್ಮ ತಾಯಿಯು ಎಲ್ಲಿರುವಳು?" ಎಂದು ವತ್ಸಲೆಯು ಕೇಳಿದಳು.

" ನಾಗಲೋಕಕ್ಕೆ ಹೋದಳು. ದೇವರ ಸನ್ನಿಧಾನಕ್ಕೆ ಹೋದಳು " ಎಂದನು ನಾಗಾನಂದ.

" ಏನಾಗಿ ಸತ್ತಳು ? " ಎಂದು ಅತಿಶಯ ಕಳಕಳಿಯಿಂದ ವತ್ಸಲೆ ಪ್ರಶ್ನಿಸಿದಳು.

" ಸಿಡಿಲು ಬಡಿದು ಸತ್ತಳು. " ಒಮ್ಮೆ ಮಳೆಗಾಲವಿತ್ತು. ಒಬ್ಬ ಹೆಣ್ಣುಮಗಳು, ನಮ್ಮ ಊರಲ್ಲಿ ಬೇನೆ ಬಿದ್ದಿದ್ದಳು. ಆಕೆಗೆ ಭಯಂಕರ ಜ್ವರ ಬಂದಿದ್ದವು. ನಾವು ಶೀತಳಾದೇವಿಯ ಹಾಡನ್ನು ಹಾಡಿದೆವು. ಆದರೆ ಜ್ವರ ಕಡಿಮೆಯಾಗಲಿಲ್ಲ. ಆಕೆಗೆ ತಾನು ಸಾಯುವೆನೆಂದು ಅನಿಸಹತ್ತಿತು. ಆಕೆಯ ಮಗನು ಪರವೂರಲ್ಲಿದ್ದನು. ಮಗನನ್ನು ಭೆಟ್ಟಿಯಾಗಬೇಕೆಂದು ಬಯಸಿದಳು. ಆದರೆ ಅವನನ್ನು ಕರೆತರುವವರಾರು ? ನನ್ನ ತಾಯಿಗೆ ತನ್ನ ಇಚ್ಛೆಯನ್ನು ತಿಳಿಸಿದಳು. ನೀನೂ ತಾಯಿ ಇರುವೆ, ತಾಯಿಯ ಹೃದಯವು ನಿನಗೆ ಗೊತ್ತು. ನನ್ನ ಮಗನನ್ನು ಕರೆದುಕೊಂಡು ಬರಬಾರದೇ ? ಎಂದು ಬೇಡಿಕೊಂಡಳು. ನನ್ನ ತಾಯಿ ಹೊರಟಳು. ನಾನೊಬ್ಬನೇ ಮನೆಯಲ್ಲಿ ಮಲಗಿದ್ದೆ. ತಾಯಿಯು ನನ್ನನ್ನು ಎಬ್ಬಿಸಲಿಲ್ಲ. ಮಧ್ಯ ರಾತ್ರಿಯಲ್ಲಿಯೇ ಹೊರಟು ಹೋದಳು. ಮಳೆಯು ಭಯಂಕರವಾಗಿ ಸುರಿಯುತ್ತಲಿತ್ತು. ಆಕಾಶವು ಭೂಮಿದೇವಿಗೆ ನಮಸ್ಕರಿಸಲು ಕೆಳಗೆ ಬಾಗಿತ್ತು. ಪೂರ್ಣವಾಗಿ ಅಪ್ಪಿಕೊಳ್ಳಲು ಅದು ಗರ್ಜಿಸುತ್ತಿತ್ತು. ಅಳುತ್ತಿತ್ತು. ಆ ತಾಯಿಯ ಸಲುವಾಗಿ ನನ್ನ ತಾಯಿಯು ಹೋದಳು. ಕತ್ತಲೆಯಲ್ಲಿ ದಾರಿಯನ್ನು ತೋರಿಸಲು ಮಿಂಚನ್ನು ಕೇಳುತ್ತಲಿದ್ದಳು. ಬೆಳಗ್ಗೆ ಎದ್ದೆ. ತಾಯಿಯು ಇರಲಿಲ್ಲ.

ಜ್ವರ ಬಂದ ತಾಯಿಯ ಕಡೆಗೆ ಹೋದೆ. ಆಕೆಯು ಎಲ್ಲ ಸಂಗತಿಯನ್ನು ಹೇಳಿದಳು. ಬಹಳ ವೇಳೆಯಾದರೂ ತಾಯಿ ಬರಲಿಲ್ಲ. ಅದರಿಂದ ನನಗೆ ಸಮಾಧಾನ ಉಳಿಯಲಿಲ್ಲ. ಇಷ್ಟರಲ್ಲಿ ಬೇನೆ ಬಿದ್ದವಳ ಮಗನು ಬಂದನು. ಓಡುತ್ತ ಬಂದನು. ಅವನ ತಾಯಿಯು ಎದ್ದು ಕುಳಿತು ಅವನನ್ನು ಹತ್ತರ ಕೂಡಿಸಿಕೊಂಡಳು. ಆದರೆ ನನ್ನ ತಾಯಿಯೆಲ್ಲಿದ್ದಳು ? ನನ್ನನ್ನು ಹತ್ತರ ಕರೆಯುವ ನನ್ನ ತಾಯಿ ಎಲ್ಲಿ ? "ನಾವಿಬ್ಬರೂ ಕೂಡಿ ಬರುತ್ತಿದ್ದೆವು. ಕತ್ತಲೆಯಲ್ಲಿ ದಾರಿ ತಪ್ಪಿತು. ಮಳೆಯು ಬರುತ್ತಿತ್ತು. ನಾನು ಒಂದೆಡೆ ನಿಂತು ಅವಳನ್ನು ಒದರಿದೆ, ಆದರೆ ಉತ್ತರವು ದೊರೆಯಲಿಲ್ಲ. ಹಿಂದಿನಿಂದ ಬರುವಳೆಂದು ನಾನು ಮುಂದೆ ಬಂದೆ" ಎಂದು ಅವನು ಹೇಳಿದನು. ನಾನು ಕಕ್ಕಾವಿಕ್ಕಿಯಾದೆ. ಆ ಹುಡುಗ ಮತ್ತು ನಾನು ಅವಳನ್ನು ನೋಡಲು ಹೊರಟೆವು. ಮಳೆ ನಿಂತಿತ್ತು. ದಾರಿಯುದ್ದಕ್ಕೂ ಗಿಡಗಳು ಬಿದ್ದಿದ್ದವು. ಒಂದೆಡೆಗೆ ನನ್ನ ತಾಯಿಯ ದೇಹ ಬಿದ್ದಿತ್ತು. ಆದರೆ ಆಕೆಯ ಪ್ರಾಣವು ಹೋಗಿತ್ತು. ನಾನು ಆಕೆಯನ್ನು ಅಪ್ಪಿಕೊಂಡೆ. ಆದರೆ ಆಕೆಯು ನಗಲಿಲ್ಲ, ಏಳಲಿಲ್ಲ, ಮಾತನಾಡಿಸಲಿಲ್ಲ. ಆಗ ಸಿಡಿಲು ಬಡಿದು ಸತ್ತಿರುವಳೆಂದು ತಿಳಿದೆವು. ಎರಡನೆಯ ಒಬ್ಬ ತಾಯಿಗೆ ಆನಂದವನ್ನು ಕೊಡಲು, ನನ್ನ ತಾಯಿಯು ಮರಣವನ್ನು ಹೊಂದಿದಳು. ಆ ಪ್ರಳಯ ಕಾಲದ ರಾತ್ರಿಗೂ ಅವಳು ಬೆದರಲಿಲ್ಲ. ಅಂತಃಕರಣದಲ್ಲಿ ಅಪಾರ ಸೇವಾಭಾವವು ತುಂಬಿದ್ದರೆ, ಅವರಿಗೆ ಎಲ್ಲಕಡೆಗೂ ಮಿತ್ರರೇ ಕಾಣುವರು. ಕತ್ತಲೆಯು ಸಹ ಮಿತ್ರನಂತಾಗುವದು. ಮುಳ್ಳುಗಳು ಹೂವಿನಂತೆ ಅನಿಸುವವು. ಸಂಕಟವು ಗೆಳೆಯನಾಗುವದು. ತಾಯಿಯೇ! ತಾಯಿಯೇ! ಮತ್ತೆ ನೀನೆಂದು ದರ್ಶನವನ್ನು ಕೊಡುವಿ ! " ಎಂದು ನಾಗಾನಂದನು ಕರುಣಾಪೂರ್ಣ ಹೃದಯನಾದನು.

ಕ್ಷಣ ಹೊತ್ತು ಎಲ್ಲರೂ ಸ್ತಬ್ಧರಾದರು.

"ಶೀತಳಾದೇವಿಯ ಹಾಡನ್ನು ಹಾಡುವದೆಂದರೆ ಏನು ಮಾಡುವಿರಿ ?" ಎಂದು ವತ್ಸಲೆಯು ವಿಚಾರಿಸಿದಳು.

" ನಾವು ಚಿಗುರೆಲೆ ತರುವೆವು. ದೊನ್ನೆಗಳನ್ನು ಹಚ್ಚಿ ನೀರನ್ನು ತುಂಬುವೆವು. ಆ ಮೇಲೆ ಹಾಡುತ್ತ ಹಾಡುತ್ತ ಬೇನೆಬಿದ್ದವರ ಸುತ್ತಲೂ ತಿರು

ಗಾಡುವೆವು. ಆ ದೊನ್ನೆಯಲ್ಲಿಯ ನೀರನ್ನು ಆಕೆಗೆ ಸಿಂಪಡಿಸುವೆವು " ಎಂದು ನಾಗಾನಂದನು ಉತ್ತರಿಸಿದನು.

" ಆದರಲ್ಲಿಯ ಒಂದು ಹಾಡನ್ನು ಹಾಡುವಿಯಾ?" ಎಂದು ಆಗ್ರಹ ಪೂರ್ವಕವಾಗಿ ವತ್ಸಲೆ ಅಂದಳು.

ನಾಗಾನಂದನು ಹಾಡಹತ್ತಿದನು. ವತ್ಸಲೆ ಹಾಗೂ ಕಾರ್ತೀಕರು ಕೇಳಹತ್ತಿದರು. ಶಾಂತವಾಗಿ ಹರಿಯುವ ನದಿಯೂ ಕೇಳುತ್ತಲಿತ್ತು. ಆ ದಿನ್ನಿಯ ಮೇಲಿದ್ದ ನಿಸ್ತಬ್ಧ ಶಾಂತತೆಯೂ ಅದನ್ನು ಕೇಳುತ್ತಲಿತ್ತು.

ತಂಪಿನ ತಾಯಿ

ತಂಪಿನ ತಾಯಿ, ಬಾರಮ್ಮ ||
ಉರಿಯಿಂದೊರಲುವ ಜೀವಜಾತಗಳ |
ಸಲುಹಲು ತ್ವರಿತದಿ ಬಾರಮ್ಮ || ಪಲ್ಲ ||

ಹಿಮಗಿರಿ ಮಂದಿರವಾಸವ ತೊರೆದು |
ಸಾಗರ-ನದಿ-ನಿರ್ಝರಗಳ ಮರೆದು |
ವೃಕ್ಷ-ವಲ್ಲಿ-ವಾಟಿಕೆಗಳ ಜರೆದು |
ತಡಮಾಡದೆ ಬಳಿ ಸಾರಮ್ಮ ||

ವಾರಿತುಷಾರ-ತರಂಗಗಳಿಂದ !
ಚಂದನ-ತೃಣಪರ್ಣದ ಗೂಡಿಂದ ।
ಕಗ್ಗಾಡಿನ ಕಾಣದ ಬೀಡಿಂದ |
ಇಳೆಗಿಳಿದೊಡನೆಯೆ ಬಾರಮ್ಮ ||

ಅಣುಕದಿಂ ಬಾ, ಗಿರಿದರಿಯಿಂ ಬಾ |
ಅಮೃತ ಶಿಲೆಯಿಂದೊಸರುತ ಬಾ! ಬಾ! |
ಇಬ್ಬನಿಯಿಂ ಬಾ, ಕೆನೆವೊಸರಿಂ ಬಾ |
ಸ್ಫಲಿಂಗ ಬೀರುತ ಬಾರಮ್ಮ ||

ರೋಗಿಯ ತಳಮಳ ತಣಿಸಲು ಬಾರೌ ! |
ಉರಿಯನ್ನಾರಿಪ ಕೈಯನು ತಾರೌ ! |
ಬೇಡುವುದೆಲ್ಲವ ಸಲಿಸೆವು ನಿನಗೌ ! |
ಸದ್ಭಕ್ತರ ಬಳಿ ಬಾರಮ್ಮ ! |

ಬಂದಳು ತಾಯಿ, ಗಾಳಿಯು ಬೀಸಿರಿ ! |
ಬಂದಳು ಅಕೋ, ಜಲಧಾರೆಯ ಸೂಸಿರಿ ! |
ಅರೆಚಣದಲ್ಲಾರುವುದೀ ದಳ್ಳುರಿ ! |
ತಂಪಿನ ತಾಯಿಯೂ ಹರಸಮ್ಮ ! |

' ತಂಪು ಪದಾರ್ಥಗಳಲ್ಲಿಯ ತಂಪನ್ನೆಲ್ಲ ಇಲ್ಲಿ ಆವ್ಹಾನಿಸಲಾಗಿದೆ. ವೇದದಲ್ಲಿಯೂ ಕೂಡ ಇಂತಹ ಮಂತ್ರಗಳಿವೆ. ' ಎಂದನು ಕಾರ್ತೀಕ.

' ಮಾನವ ಸ್ವಭಾವವು ಒಂದೆ. ಮೇಲಿನ ತೊಗಲು ಕಪ್ಪು, ಕೆಂಪು' ಇದ್ದರೂ ಒಳಗಿನ ಭಾವವು ಒಂದೇ ಇರುವದು. ಆಶೆ, ಆಕಾಂಕ್ಷೆಗಳು, ನಾನಾ ಕಲ್ಪನೆಗಳು, ಎಲ್ಲವೂ ಸಾಮಾನ್ಯವಾಗಿ ಸಮಾನವಿರುತ್ತವೆ, ಎಂದನು ನಾಗಾನಂದ.

' ನಾವು ಇಲ್ಲಿಯೇ ನಿಂತೆವು. ಮನೆಗೆ ಹೋಗಬೇಕೆಂದು ಹೊರಟವರು ಇನ್ನೂ ಇಲ್ಲಿಯೇ ಇದ್ದೇವೆ. ಅಜ್ಜಿಯು ಹಾದೀ ಕಾಯುತ್ತಿರಬಹುದು' ಎಂದು ವತ್ಸಲೆಯು ನುಡಿದಳು.

' ಕಳ್ಳರ ಸಂಗಡ ಓಡಿ ಹೋದರೇ ? ' ಎಂದು ಅಜ್ಜಿಗೆ ಸಂಶಯ ಬರಬಹುದು, ಎಂದನು ಕಾರ್ತೀಕ.

' ನಾನು ಇಲ್ಲಿಂದ ಓಡಿ ಹೋಗುವವನೇ ಇರುವೆ' ಎಂದನು ನಾಗಾನಂದ.

' ನನ್ನ ಅಜ್ಜಿಯ ಆಣೆಯಾಗಿದೆ, ನನ್ನ ಆಣೆ. ಓಡಿಹೋಗಬೇಡಿರಿ, ಎಂದಳು ವತ್ಸಲೆ. ಮೂವರೂ ಮರಳಿದರು.

‘ ನಿಲ್ಲಿರಿ, ಎಲ್ಲಿಯಾದರೂ ಬಿದ್ದೀರಿ’ ಎಂದು ವತ್ಸಲೆಯು ನಾಗಾನಂದನ ಕೈಯನ್ನು ಹಿಡಿದಳು. ಎರಡನೇ ಕೈಯಿಂದ ಕಾರ್ತೀಕನನ್ನು ಹಿಡಿದಳು.

‘ ನೀವಿಬ್ಬರೂ ನನ್ನನ್ನು ಎರಡೂ ಕಡೆಗೆ ಎಳೆಯ ಬೇಡಿರಿ. ನಾನು ನಿಮ್ಮನ್ನು ಎಳೆದೊಯ್ಯುವೆ. ನೀವು ಸುಮ್ಮನೆ ಬನ್ನಿ, ನೀವಿಬ್ಬರೂ ಈಗ ನನ್ನ ವಶದಲ್ಲಿ. ಇಬ್ಬರು ಕಳ್ಳರನ್ನು ಹಿಡಿದಿರುವೆ ” ಎಂದು ಚೇಷ್ಟೆ ಮಾಡಿದಳು.

‘ ಕಳ್ಳನು ಓಡಲು ಹವಣಿಸುತ್ತಾನೆ. ಸುಮ್ಮನೆ ಬರುವದಿಲ್ಲ.’ ಎಂದನು ನಾಗಾನಂದ.

‘ ಸಡಿಲು ಬಿಟ್ಟರೆ ಓಡಲು ನೋಡುವ. ಘಟ್ಟಿಯಾಗಿ ಕಟ್ಟಿ ಒಯ್ದರೆ, ಯಾವ ಗೊಂದಲವೂ ಇಲ್ಲ. ಕಾರ್ತೀಕನು ಪೂರ್ಣ ಕೈದಿಯಾಗಿದ್ದಾನೆ. ಅವನನ್ನು ಹಿಡಿಯದಿದ್ದರೂ ಬೆನ್ನುಹಿಂದೆ ಬಂದೇ ಬರುವ. ನಿಮ್ಮನ್ನು ಮಾತ್ರ ಘಟ್ಟಿಯಾಗಿ ಹಿಡಿದುಕೊಂಡು ಹೋಗುವೆ. ನಿಮ್ಮೆರಡೂ ಕೈಗಳನ್ನು ಹಿಡಿದುಕೊಂಡು ಒಯ್ಯುವೆ.’ ಎಂದಳು

‘ ಸ್ತ್ರೀಯರ ಒಂದೇ ಕೈಯಲ್ಲಿ, ಪುರುಷರ ಎರಡೂ ಕೈಗಳನ್ನು ಹಿಡಿಯುವಷ್ಟು ಸಾಮರ್ಥ್ಯವು ಎಲ್ಲಿರುವದು ? ” ಎಂದು ನಾಗನಂದನು ನಗುತ್ತ ನುಡಿದನು.

‘ ಇರುವದು. ಒಂದು ಸುಂದರವಾದ ಹೂವು, ಮಹಾನ್ ನಾಗನನ್ನು ಕೂಡ ಮುಗ್ಧಗೊಳಿಸುತ್ತದೆ. ಆ ಚಿಕ್ಕ ಹೂವಿನ ಸುಗಂಧಕ್ಕೆ ನಾಗನ ಹೆಡೆಯನ್ನು ಬಾಗಿಸುವ ಸಾಮರ್ಥ್ಯವಿರುತ್ತದೆ. ಅದನ್ನು ನೀವು ನೋಡಿರಬಹುದು ಎಂದು ಕೈ ಅಮುಕುತ್ತ ವತ್ಸಲೆ ನುಡಿದಳು.

‘ ನೋಡಿದ್ದೇನೆ. ಈಗ ನಾನು ಅನುಭವಿಸುತ್ತಿದ್ದೇನೆ.’ ಎಂದನು ನಾಗಾನಂದ.

‘ ಕಾರ್ತೀಕನೆಲ್ಲಿರುವ ? ಕಾರ್ತೀಕನು ಹೋದಂತೆ ಕಾಣುತ್ತದೆ. ಅವನು ತಂದೆಗೆ ಬಹಳ ಅಂಜುವನು. ನನಗೆ ಅಂಜಬುರುಕರು ಸೇರುವದಿಲ್ಲ. ನನಗೆ ಬೆಂಕಿಯೊಡನೆ ಹೋರಾಡುವವರು ಸೇರುತ್ತಾರೆ. ಅಂದು ನದಿಗೆ ಪೂರ

ಬರುತ್ತಲಿತ್ತು. ನಾನು ಕಾರ್ತೀಕನನ್ನು ಒದರುತ್ತಲಿದ್ದೆ. ಮರಣದೊಡನೆ ಹೋರಾಡುತ್ತಾ ನದಿಯ ಒಡಲೊಳಗೆಹೊಕ್ಕು ಹೊರಬರುತ್ತಿದ್ದೆನು. ಆದರೆ ಕಾರ್ತೀಕನು ಹೆದರಿದ. ನೀವು ಮಾತ್ರ ಧುಮುಕಿದಿರಿ! ಜೀವನವನ್ನು ಸಂಕಟ ದಲ್ಲಿ ನೂಕಿದಿರಿ ! ಜೀವಗಳ್ಳರು ಬೇಡ ನನಗೆ.'' ಎಂದಳು ವತ್ಸಲೆ.

' ಆದರೆ ವತ್ಸಲೇ ! ನೀನು ಮೆಲ್ಲಗೆ ನನ್ನ ಕೈಯಿಂದ ಜಾರುತ್ತಿರುವಿ.' ಎಂದನು ನಾಗಾನಂದ.

' ಮಾತಿನಲ್ಲಿ ಮರೆತೆ. ನಾಗವು ಕೈಗೆ ಸುತ್ತಿದರೆ ಅದನ್ನು ಕಡಿದೇ ಬಿಡಿಸಬೇಕಾಗುವದಂತೆ. ಹಾಗೆ ಗಟ್ಟಿಯಾಗಿ ಹಿಡಿಯುವೆ. ವತ್ಸಲೆಯ ಈ ವಜ್ರಮುಷ್ಟಿಯನ್ನು ಯಾರು ಬಿಡಿಸುವರು ನೋಡೋಣ.' ಎಂದಳು ವತ್ಸಲೆ.

ಇಬ್ಬರೂ ಮನೆಗೆ ಬಂದರು. ಅಜ್ಜಿಯು ಅಂಗಳದಲ್ಲಿ ದಾರೀ ಕಾಯು ತ್ತಿದ್ದಳು.

' ಅಜ್ಜೀ, ಬಂದೆವು. ಕತ್ತಲೆಯಲ್ಲಿ ತೊಂದರೆಯಾಯಿತು. ಇವರು ಎತ್ತೋ ಹೋದರು. ಹುಡುಕಿಕೊಂಡು ಬಂದೆ. ನೀನು ಬಹಳ ಹಾದೀ ನೋಡಿರಬಹುದು ' ಎಂದು ವತ್ಸಲೆಯು ನುಡಿದಳು.

“ ನೀವು ಬಂಗಾರವನ್ನು ಸುಲಿಯಲು ಹೋಗಿದ್ದಿರಷ್ಟೇ ! ಅದು ನಿಮಗೆ ಭಾರವಾಗಿರಬಹುದು. ಸ್ವಲ್ಪ ತಂದರೆ ಭಾರವಾಗುವದಿಲ್ಲ. ದೇವರು ಕೊಟ್ಟ ನೆಂದು ಅತಿಬುರುಕರಾಗಬೇಕೆ ? ಹೆಚ್ಚು ಹೊತ್ತರೆ, ಜೋಳಿಗೆಯೂ ಹರಿ ದೀತು. ಎಲ್ಲವೂ ಮಣ್ಣುಪಾಲಾದೀತು. ಬಹಳ ಸೂರೆಗೊಂಡಿಲ್ಲವಷ್ಟೇ?'' ಎಂದು ಅಜ್ಜಿ ಚೇಷ್ಟೆ ಮಾಡಿದಳು.

' ಅಜ್ಜೀ, ಬಂಗಾರವು ಕಾಣುತ್ತದೆ, ಆದರೆ ಮಾಯವಾಗುತ್ತದೆ ' ಎಂದನು ನಾಗಾನಂದ.

' ಆದರೆ ಅದರ ನೆನಪು ಮಾತ್ರ ಕೊನೆಯ ವರೆಗೂ ಉಳಿಯುತ್ತದೆ ' ಎಂದಳು ಅಜ್ಜಿ.

' ಅಜ್ಜೀ, ಇಂದು ಹಸಿವೆಯು ಬಹಳವಾಗಿದೆ, ನನಗೆ ಇಷ್ಟು ಹಸಿವೆ ಎಂದೂ ಆಗಿರಲಿಲ್ಲ. ನನ್ನ ಶರೀರಕ್ಕೆ ಹಸಿವೆಯಾಗಿದೆ. ಕಣ್ಣಲ್ಲಿ ಹಾಕು

ತುತ್ತು, ಕಿವಿಯಲ್ಲಿ ಹಾಕು ತುತ್ತು, ಬಾಯಿಯಲ್ಲಿ ಹಾಕು ತುತ್ತು, ಅಗ್ನಿಯು ಪ್ರಜ್ವಲಿತವಾಗಿದೆ. ಇಷ್ಟು ಹೊತ್ತಿನವರೆಗೆ ನನಗೆ ಅದರ ಅರಿವೇ ಇದ್ದಿಲ್ಲ. ಬೇಗ ಬಡಿಸು, ಇಲ್ಲದಿದ್ದರೆ ನಿನ್ನನ್ನು ತಿನ್ನುವೆನು' ಎಂದು ವತ್ಸಲೆಯು ಹುಚ್ಚಿಯಂತೆ ಬಡಬಡಿಸಹತ್ತಿದಳು.

"ಏ ಹುಚ್ಚೀ, ಹಾಗೆಲ್ಲ ಮಾತನಾಡಬಾರದು. ನಡೆ ಒಳಕ್ಕೆ. ನೀವೂ ನಡೆಯಿರಿ. ಈಕೆಯು ಹೀಗೆಯೇ ಮಾತನಾಡುತ್ತಾಳೆ. ಒಮ್ಮೊಮ್ಮೆ ಸುಮ್ಮನೆ ಕೂಡುತ್ತಾಳೆ. ಒಮ್ಮೊಮ್ಮೆ ಹೀಗೆಯೇ ಪುರಾಣ ಬಿಚ್ಚುತ್ತಾಳೆ. ಹುಚ್ಚು ಹುಡುಗಿ, ಆಶ್ರಮದಲ್ಲಿದ್ದೂ ಹೀಗಾಗಿದ್ದಾಳೆ ಹುಚ್ಚಿ." ಎಂದಳು ಸುಶ್ರುತೆ.

"ಆಶ್ರಮದಲ್ಲಿದ್ದು ಹುಚ್ಚರೇ ಆಗುತ್ತಾರೆ. ಜಗತ್ತಿನ ಆಶ್ರಮದಲ್ಲಿದ್ದು ಬುದ್ಧಿವಂತರಾಗುತ್ತಾರೆ" ಎಂದನು ನಾಗಾನಂದ.

"ಬುದ್ಧಿವಂತಿಕೆಯನ್ನು ಕಲಿಸುವ ಆಶ್ರಮವು ಒಂದೇ ಇದೆ" ಎಂದಳು ಸುಶ್ರುತೆ.

"ಅದು ಎಲ್ಲಿದೆ?" ಎಂದು ವತ್ಸಲೆ ಕೇಳಿದಳು.

"ಅದರ ಹೆಸರು ಏನು?" ಎಂದು ನಾಗಾನಂದನು ವಿಚಾರಿಸಿದನು.

"ಆಗ ಸುಶ್ರುತೆಯು ಗಂಭೀರಳಾಗಿ "ಗೃಹಸ್ಥಾಶ್ರಮ" ಎಂದಳು.

೫

ಆಸ್ತಿಕ ಮಹರ್ಷಿಯು, ಒಂದುದೊಡ್ಡ ಆಲದಮರದ ಕೆಳಗೆ ಬಂಡೆಗಲ್ಲಿನ ಮೇಲೆ ಕುಳಿತಿದ್ದಾನೆ. ಆ ವಟ ವೃಕ್ಷವು ಕೂಡ, ಒಬ್ಬ ತಪೋಧನನಂತೆ ಶೋಭಿಸುತ್ತಿದ್ದಿತು. ಅದರ ನೂರಾರು ಬೇರುಗಳು ಜೋತಾಡುತ್ತಲಿದ್ದವು. ಅವುಗಳಲ್ಲಿ ಎಷ್ಟೋ ನೆಲದಲ್ಲಿ ಸೇರಿ ಮತ್ತೆ ಚಿಗಿತು, ಹೆಮ್ಮರವಾಗಿ ಬೆಳೆಯುತ್ತಿದ್ದವು. ಹೀಗೆಯೇ ಹಬ್ಬುತ್ತ ನಡೆದ್ದಿತ್ತು ಆ ವೃಕ್ಷ. ಅದು ಕಾರ್ತಿಕ ಮಾರ್ಗಶಿರ್ಷ ಮಾಸ. ವಟ ವೃಕ್ಷವು ಫಲಭರಿತವಾಗಿತ್ತು. ಹಸುರೆಲೆಗಳ ಮಧ್ಯದಲ್ಲಿ, ಕೆಂಪು ಫಲಗಳಿಂದ ಶೋಭಿಸುವ ಆ ವೃಕ್ಷವು ರುದ್ರಾಕ್ಷಿಯನ್ನು ಧರಿಸಿದಂತೆ ಕಾಣುತ್ತಿದ್ದಿತು. ಅದೇ ಸೂರ್ಯೋದಯವಾಗಿತ್ತು. ಆಶ್ರಮದ ಕುಮಾರರು ಕಸಗೂಡಿಸುವ ಮೊದಲೇ ಸೂರ್ಯನಾರಾಯಣನು ಕತ್ತಲೆ ರೂಪವಾದ ಹೊಲಸನ್ನೆಲ್ಲ ಉಡುಗಿ ತೆಗೆದಿದ್ದನು. ಔಷಧಕ್ಕೂಕೂಡ ಕತ್ತಲೆಯು ಅಲ್ಲಿ ಉಳಿದಿರಲಿಲ್ಲ. ಸೂರ್ಯನು ಕತ್ತಲೆಯನ್ನು ಹೊಡೆದೋಡಿಸಿದ್ದರೆ, ವಾಯುವು ಬೆಳಗಿನ ಜಾವದಲ್ಲಿಯೇ ಆಶ್ರಮದಲ್ಲಿಯ ಕಸಕಡ್ಡಿಗಳನ್ನು ಹಾಗು ಬಿದ್ದ ತರಗೆಲೆಗಳನ್ನೆಲ್ಲ ದೂರ ಸಾಗಿಸಿದ್ದನು. ಮಂಜು ಥಳಿಯನ್ನು ಹಾಕಿತ್ತು. ಹೂಗಳ ಮಕರಂದವು ಹಬ್ಬಿ ಪಾವಿತ್ರ್ಯ ಹಾಗು ಪ್ರಸನ್ನತೆಯನ್ನುಂಟು ಮಾಡಿತ್ತು, ಹಕ್ಕಿಗಳು ಉದಯಗೀತಗಳನ್ನು ಹಾಡುತ್ತಿದ್ದವು. ನಿರ್ಮಲವಾದ ಆಶ್ರಮವು ಪ್ರಸನ್ನವಿದ್ದಿತು. ವಟುಗಳು ಸ್ನಾನ ಮಾಡಿ ಶುಚಿರ್ಭೂತರಾಗಿ ಪಾಠಕ್ಕೆ ಬಂದು ಕುಳಿತಿದ್ದಾರೆ. ಎದುರಿಗೆ, ಆಸ್ತಿಕರು ಕುಳಿತಿದ್ದಾರೆ.

"ಓಂ ಅಸತೋಮಾ ಸದ್ಗಮಯ.
ಓಂ, ತಮಸೋಮಾ ಜ್ಯೋತಿರ್ಗಮಯ.
ಓಂ, ಮೃತ್ಯೋಮಾ ಅಮೃತಂ ಗಮಯ"

ಎಂಬ ಚಿಕ್ಕ ಹಾಗು ಅರ್ಥಗರ್ಭಿತವಾದ ಪ್ರಾರ್ಥನೆಯು ಶಾಂತಿ ಮಂತ್ರದ ಪಠಣದೊಡನೆ ನಡೆಯಿತು. ಆಸ್ತಿಕರು ಮಾತನಾಡ ಹತ್ತಿದ್ದರು.

"ನಾನಿಂದು ತೀರ ಸ್ವಲ್ಪ ಹೇಳುವವನಿರುವೆ. ಆ ಮೇಲೆ ನೀವು ನಿಮ್ಮ ನಿಮ್ಮ ಕಾರ್ಯಗಳಿಗೆ ಹೋಗಬಹುದು. ನಾನು ನಿಮಗೆ ಹೇಳುತ್ತಿರುವದೆಲ್ಲ ನಿಮ್ಮ ಜೀವನವನ್ನು ಉದ್ದೇಶಿಸಿಯೇ! ಪ್ರತಿಯೊಬ್ಬರ ಜೀವನಕ್ಕೂ ಉಪ ಯುಕ್ತವಾದ ಸಂಗತಿಗಳನ್ನೇ ನಾನು ಹೇಳುವೆ. ನೀವೆಲ್ಲರೂ ಬಿಲ್ಲು ವಿದ್ಯೆ ಯಲ್ಲಿ ಬಲ್ಲಿದರಾಗುವದಿಲ್ಲ. ಎಲ್ಲರೂ ಗಾಯಕರಾಗುವದಿಲ್ಲ. ನೀವೆಲ್ಲ ರಾಜಕಾರಣಿಗಳಾಗುವದಿಲ್ಲ. ಬ್ರಹ್ಮಜ್ಞಾನಿಗಳಾಗುವದಿಲ್ಲ. ಆದರೆ ನಾನು ಪ್ರಾರ್ಥನೆಯ ಸಮಯದಲ್ಲಿ ಹೇಳುವ ಉಪದೇಶವು, ನೀವು ಎಲ್ಲಿಯೇ ಇರಲಿ, ಯಾವ ಕೆಲವನ್ನೇ ಮಾಡುತ್ತಿರಲಿ, ನಿಮಗೆ ಉಪಯುಕ್ತವಾಗುವದು.

'ಅಜಿತಾ! ಒಂದು ಅತ್ತಿಯ ಹಣವನ್ನು ತೆಗೆದುಕೊಂಡು ಬಾ' ನೋಡೋಣ. ಅಜಿತನು ಕೂಡಲೆ ತಂದನು.

'ಒಂದನ್ನು ಒಡೆ' ಎಂದನು ಆಸ್ತಿಕ.

'ಒಡೆದೆ'

'ನಿನಗೆ ಅದರಲ್ಲಿ ಏನು ಕಾಣಿಸುವದು ?'

'ಒಳಗೆ ನೂರಾರು ಬೀಜಗಳು ಒಂದಕ್ಕೊಂದು ಹೊಂದಿಕೊಂಡು ಲಕಲಕ ಹೊಳೆಯುತ್ತಿವೆ. ಬಹು ಸುಂದರವಾದ ದೃಶ್ಯ ಇದು. ಆದರಲ್ಲಿರುವ ಹುಳಗಳನ್ನು ನೋಡಿರಿ, ಹಾಗು ಅದರಲ್ಲಿರುವ ಪದರುಗಳನ್ನು ನೋಡಿರಿ, ಎಂದು ಅಜಿತನು ಉತ್ತರಿಸಿದನು.

'ಈ ಒಂದೇ ಹಣ್ಣಿನಲ್ಲಿ, ನೂರಾರು ಬೀಜಗಳು ಆನಂದದಿಂದಿವೆ. ಸಹಕಾರದಿಂದ ಕೂಡಿಕೊಂಡಿವೆ. ಈ ಭೂತಲದಲ್ಲಿ ನೀವೆಲ್ಲರೂ ಕೂಡಿ ಕೊಂಡು ಆನಂದದಿಂದ ವಾಸಿಸಿರಿ. ನಾಗ ಹಾಗು ಆರ್ಯರು ಜಗಳವಾಡ ಬೇಡಿರಿ. ಪರಸ್ಪರರು ಸಹಕಾರಿಗಳಾಗಿ ಜೀವಿಸಿರಿ, ತಿಳಿಯಿತೆ? ಎಂದನು. ಆಸ್ತಿಕ.

'ನನ್ನ ತಂತ್ರಿಯೂ ಇದನ್ನೇ ಹೇಳುತ್ತದೆ' ಎಂದನು ಸುಹಾಸ.

'ನಿನ್ನ ತಂತ್ರಿಯಲ್ಲಿ ಏನಿದೆ ? ಎಂದು ಕೇಳಿದ ಆಸ್ತಿಕ.

" ಅನೇಕ ತಂತಿಗಳು, ಆದರೆ ಎಲ್ಲವುಗಳ ಸಹಕಾರದಿಂದ, ಸಂಯಮೀಜೀವನದಿಂದ, ಮಧುರ ಸಂಗೀತವು ನಿರ್ಮಾಣವಾಗುವದು." ಎಂದನು ಸುಹಾಸ.

ಎಲ್ಲೆಡೆಯಲ್ಲಿಯೂ ಇದೇ ನಿಯಮ. ಈ ಆಶ್ರಮದಲ್ಲಿ ಅನೇಕ ವೃಕ್ಷ ಗಳಿವೆ. ಅವೆಲ್ಲವೂ ಆನಂದದಿಂದ ಇವೆ. ಅನೇಕ ಹೂ ಬಳ್ಳಿಗಳಿವೆ ಅವು ಜಗಳವಾಡುವದಿಲ್ಲ. ತದ್ವಿರುದ್ಧವಾಗಿ ಆನಂದವನ್ನೀಯುತ್ತವೆ. ನದಿಯಲ್ಲಿ ತೆರೆಗಳು ಒಂದನ್ನೊಂದು ಅಪ್ಪುತ್ತವೆ. ಒಂದರಮೇಲೊಂದು ಬೀಳುತ್ತವೆ. ಕುಣಿಯುತ್ತವೆ. ಆದರೆ ನೋಡಲು ಅದೆಷ್ಟು ಚಂದ! ಎಂದನು ಇನ್ನೊಬ್ಬನು.

' ವಾಮನಾ, ನೀನೊಂದು ಸಸಿಯನ್ನು ಕಿತ್ತುಕೊಂಡು ಬಾ ನೋಡೋಣ.' ಎಂದರು ಗುರುಗಳು.

ವಾಮನನು ಸಸಿಗಳನ್ನು ಕಿತ್ತುಕೊಂಡು ಬಂದನು.

' ಎಲಾ, ನಾನು ಒಂದೇ ತರಲು ಹೇಳಿದ್ದಿಲ್ಲವೇ? ಇರಲಿ. ಅವರಲ್ಲಿ ಒಂದನ್ನು ಕೈಯಲ್ಲಿ ತೆಗೆದುಕೋ! ಅದಕ್ಕೆ ಬೇರು ಇವೆಯೋ?'

' ಬೇರು ಇಲ್ಲದೆ ಅದು ಇರುವದು ಹೇಗೆ?.' ಎಂದನು ವಾಮನ.

' ಎಷ್ಟು ಇವೆ?'

' ಅನೇಕ ಇವೆ?'

' ಅವು ಯಾವ ದಿಕ್ಕಿಗೆ ಇವೆ?;

' ಎಲ್ಲ ದಿಕ್ಕುಗಳಿಗೆ'

' ಇದರ ಅರ್ಥವೇನು ಗೊತ್ತಾಗಿದೆಯೋ ನಿಮಗೆ? ಈ ಸಸಿಯನ್ನು ಕಿತ್ತುತರಲು ಏಕೆ ಹೇಳಿದೆ? ಯಾರಿಗಾದರೂ ಇದು ಹೊಳೆದಿದೆಯೋ?' ಎಂದನು ಗುರುದೇವ!

ಶುದ್ಧಮತಿಯು ' ನಾನು ಹೇಳುವೆ' ಎಂದಳು.

' ಹೇಳು ಹಾಗಾದರೆ.' ಎಂದರು ಗುರುಗಳು.

' ಗಿಡವು ಯಾವ ರೀತಿಯಿಂದ ತನ್ನ ಬೇರುಗಳನ್ನು ಎಲ್ಲಕಡೆಗೆ ಹಬ್ಬಿಸಿ, ಸತ್ವವನ್ನು ಹೀರಿಕೊಂಡು, ತನ್ನ ಬೆಳವಣಿಗೆಯನ್ನು ಮಾಡಿ ಕೊಳ್ಳುವದೋ, ಹಾಗೆಯೇ ಮಾನವನೂ ಎಲ್ಲೆಲ್ಲಿ ಬೆಳಕು ಸಿಗುವದೋ,

ಒಳ್ಳೇದೆಂದು ತೋರುವದೋ ಅದೆಲ್ಲವನ್ನು ಸ್ವೀಕರಿಸಿ, ಸ್ವತಃದ ವಿಕಾಸ ವನ್ನು ಮಾಡಿಕೊಳ್ಳಬೇಕು. ಯಾವದು ತನ್ನ ಬೇರುಗಳನ್ನು ದೂರದ ವರೆಗೆ, ಹಬ್ಬಿಸುವದೋ ಅದು ದೃಢವಾಗಿ ಬಾಳುತ್ತದೆ. ಇದೇ ಅಲ್ಲವೇ ನಿಮ್ಮ ಅಭಿಪ್ರಾಯ ? ,,

' ಅಹುದು, ಆರ್ಯರು ನಾಗರಲ್ಲಿಯ ಒಳ್ಳೇ ಗುಣಗಳನ್ನೆಲ್ಲ ಸ್ವೀಕರಿಸ ಬೇಕು. ನಾಗರು ಆರ್ಯರ ಗುಣಗಳನ್ನು ಸ್ವೀಕರಿಸಬೇಕು. ಏನೂ ಗುಣವಿಲ್ಲದ ವಸ್ತುವಿಲ್ಲ, ಮನುಷ್ಯನಿಲ್ಲ. ಈ ಸೃಷ್ಟಿಯಲ್ಲಿ. ವಿಷದಲ್ಲಿಯೂ ಕೂಡ ಅಮೃತವಿದೆ. ಎಷ್ಟೋ ವಿಷಗಳು ಅಪ್ರತಿಮ ಔಷಧಿಗಳಿವೆ. ಉಪ ಯೋಗಿಸಿಕೊಳ್ಳುವವನ ಕೌಶಲವನ್ನು ಎಲ್ಲವೂ ಅವಲಂಬಿಸಿದೆ. ನಾವು ಎಲ್ಲ ವಸ್ತುಗಳ ಉಪಯೋಗವನ್ನು ಮಾಡಿಕೊಳ್ಳುವೆವು. ಆದರೆ ಮಾನ ವರ ಉಪಯೋಗವನ್ನು ಮಾಡಿಕೊಳ್ಳಲು ಆಗದಿರುವದು ಆಶ್ಚರ್ಯದ ಸಂಗತಿಯು ! ಈ ಆಶ್ರಮದಿಂದ ಹೊರಬೀಳುವ ತರುಣರಾದರೂ ಮಾನ ವರ ಉಪಾಸನೆಯನ್ನು ಮಾಡುವವರಾಗಬೇಕು.

ಈಗ ಎಲ್ಲ ಕಡೆಗೆ ಆರ್ಯ ಹಾಗು ನಾಗರಲ್ಲಿ ದ್ವೇಷಾಗ್ನಿಯನ್ನು ಹೊತ್ತಿಸುವ ಕಾರ್ಯವು ಪ್ರಕಟವಾಗಿಯೇ ನಡೆದಿದೆ. ಅಪ್ರತ್ಯಕ್ಷವಾಗಿಯೂ ನಡೆದಿದೆ. ದ್ವೇಷಸಂವರ್ಧನೆಯ ಸಂಘಗಳೂ, ಆಶ್ರಮಗಳೂ, ಶಾಲೆಗಳೂ ಪ್ರಾರಂಭವಾಗಿವೆ. ಇಂತಹ ಜಗತ್ತಿನಲ್ಲಿ ಶಾಂತಿಯ ದೂತರಾಗಿ ಹೊರ ಬೀಳಿರಿ,, ಎಂದು ಆಸ್ತಿಕನು ಗಂಭೀರವಾಗಿ ನುಡಿದನು.

" ಆದರೆ ಕೆಲವು ಜನರು ದುಷ್ಟರೇ ಇರುತ್ತಾರೆ ' ದುರ್ಜನಃ ಪರಿ ಹರ್ತವ್ಯಃ, " ಬೋಧಾಯನ ನೆಂದನು.

" ದುಷ್ಟತನವೆಂದರೆ ತೊಗಟೆ ಇದ್ದಂತೆ. ಯಾವದಾದರೊಂದು ಗಡ್ಡೆಯು ನೋಡಲು ಚನ್ನಾಗಿರದ್ದರೆ ಅದನ್ನು ನಾವು ಕೂಡಲೇ ಒಗೆದು ಬಿಡುವದಿಲ್ಲ. ಅದನ್ನು ಹೆಚ್ಚಿ ನೋಡುತ್ತೇವೆ. ಚೆನ್ನಾಗಿದ್ದಷ್ಟನ್ನು ಸ್ವೀಕರಿಸುತ್ತೇವೆ. ನಾವು ಈಗ ಒಂದು ವಿನೋದದ ಪ್ರಯೋಗವನ್ನು ಮಾಡುವಾ. ನಿಮ್ಮೆಲ್ಲರಲ್ಲಿ ನಿದ್ದೆಬಡಕರಾರಿದ್ದಾರೆ ? " ಎಂದು ನಕ್ಕು ಗುರುದೇವನು ವಿಚಾರಿಸಿದನು.

" ನಾಗೇಶ "ಎಂದು ಆರ್ಯವ್ರತನು ಹೇಳಿದನು.

" ಎಂದು ನೋಡಿರುವಿ ? ಆರ್ಯವ್ರತನೇ ಸೋಮಾರಿಯಾಗಿದ್ದಾನೆ " ಎಂದು ನಾಗೇಶನು ಸಿಟ್ಟಿನಿಂದ ನುಡಿದನು.

" ಸೋಮಾರಿಯೆಂದರೆ ನಿದ್ದೆಬಡಕನಲ್ಲ. ನಾನು ಬಿದ್ದುಕೊಂಡಿದ್ದರೂ ಎಚ್ಚರವಾಗಿಯೇ ಇರುವೆ " ಎಂದು ಆರ್ಯವ್ರತನು ಉತ್ತರಿಸಿದನು.

" ಆದಂತೂ ಬಹಳ ಕೆಟ್ಟದ್ದು. ನನಗೆ ನಿದ್ದೆಹತ್ತಿರುತ್ತದೆ. ನಾನು ಸುಮ್ಮನೆ ಆಡ್ಡಾಗುವದಿಲ್ಲ " ನಾಗೇಶನೆಂದನು.

" ಅಂದರೆ ನಿನಗೆ ನಿದ್ದೆ ಬಹಳವೆಂಬುದನ್ನು ನೀನೇ ಒಪ್ಪಿದಂತಾಯಿತು. " ಎಂದನು ಆಸ್ತಿಕ. ಹುಡುಗರೆಲ್ಲ ನಗತೊಡಗಿದರು.

" ನಿದ್ದೆ ಮಾಡುವದು ಕೆಡುಕೇ" ನಾಗೇಶನು ವಿಚಾರಿಸಿದ.

" ಅಲ್ಲ ! ಅವನು ಹೆಚ್ಚು ಅನ್ನಕ್ಕೆ ಆಶ್ರಯವನ್ನೀಯುತ್ತಾನೆ. ಅವನು ಅನ್ನಬ್ರಹ್ಮದ ಉಪಾಸಕನಾಗುತ್ತಾನೆ. " ಪ್ರದ್ಯುಮ್ನನೆಂದನು.

" ಬಹಳ ಉಣ್ಣುವವನು ಕೆಡುಕನೆ ?" ನಾಗೇಶನು ವಿಚಾರಿಸಿದನು.

" ಏನೂ ಇಲ್ಲ. ಹೊಡೆದಾಟದಲ್ಲಿ ಪ್ರಮುಖನಾಗುವನು. ಎಲ್ಲರನ್ನು ಆಳಿಸುವನು" ಎಂದನು ಹಲಧರ

" ಬರಲೇನು ಆಳಿಸಲಿಕ್ಕೆ, ಗುದ್ದೇನು ! " ನಾಗೇಶನೆಂದನು.

" ಆದರೆ ನಾಗೇಶನು ಅತ್ಯುತ್ತಮ ಸೇವಕನಿದ್ದಾನೆ. ಅಂದು ಪ್ರವಾಸಿಕರ ನಾವು ನದಿಯಲ್ಲಿ ತಿರುವಿ ಬಿದ್ದಿತು. ಹಾಹಾಕಾರ ವೆದ್ದಿತು ಅಂದು ನಾಗೇಶನು ಎಷ್ಟು ಜನರನ್ನು ಉಳಿಸಿದನು, ಬಲವು ಕೆಡುಕಲ್ಲ, ಬಲದ ಹಿಂದೆ ಪವಿತ್ರ ಉದ್ದೇಶವಿರಬೇಕು ಇಷ್ಟೇ ! ನಾಗೇಶಾ. ಒಮ್ಮೆ ನಗು ನೋಡೋಣ! ಸಿಟ್ಟು ಇಳಿಯಿತೇ ? ಈಗ ಒಂದು ಪ್ರಯೋಗವನ್ನು ಮಾಡುವಾ. ಇಲ್ಲಿ ನೀನು ಮಲಗು. ನಿನ್ನ ಮೇಲೆ ಬಹಳ ಕಂಬಳಿಗಳನ್ನು ಹೊಚ್ಚುತ್ತೇವೆ. ನಿದ್ದೆಹತ್ತಿದರೂ ಸರಿಯೆ. ನಿದ್ದೆ ಹತ್ತಿಯೇ ತೀರ ಬೇಕೆಂದೇನೂ ಇಲ್ಲ. ಮತ್ತು ಆರ್ಯವ್ರತ ನೀನೂ ಬಾ, ನಿನ್ನ ಮೇಲೆಯೂ ಅಷ್ಟೇ ಕಂಬಳಿಗಳನ್ನು ಹೊಚ್ಚುತ್ತೇವೆ.

ಇಬ್ಬರೂ ಮಲಗಿರಿ. ನಗುತ್ತೀರೇನು ? ಮಲಗಿರಿ" ಎಂದನು ಆಸ್ತಿಕ. ಆ ಇಬ್ಬರೂ ಹುಡುಗರು ಮಲಗಿದರು.

"ನಾನು ನನ್ನ ಕೊಳಲು ಬಾರಿಸುತ್ತೇನೆ. ಅಂದರೆ ಇವರಿಗೆ ನಿದ್ದೆ ಹತ್ತೀತು" ಎಂದನು ಮುರಲೀಧರ.

"ನಾನು ಹಾಡುತ್ತೇನೆ. ಸಾಮವೇದದಲ್ಲಿಯ ಮಂತ್ರವನ್ನು ಅನ್ನುತ್ತೇನೆ" ಜ್ಞಾನಶ್ರುತಿಯೆಂದನು.

ಅಲ್ಲಿ ಒಂದು ದೊಡ್ಡ ಪ್ರಯೋಗವು ನಡೆಯಿತು. ಎಲ್ಲರೂ ಶಾಂತರಾಗ ಹತ್ತಿದ್ದರು. ಸಂಗೀತವು ನಡೆದಿತ್ತು. ಕೊಳಲು ಬಾರಿಸುತ್ತಿದ್ದರು. ವೇದ ಮಂತ್ರವನ್ನು ಅನ್ನುತ್ತಿದ್ದರು. ಅದೋ ನೋಡಿರಿ! ನಾಗೇಶನ ಕಣ್ಣುಗಳು ಮುಚ್ಚತೊಡಗಿದವು, ಸ್ವಲ್ಪ ತೆರೆದಿವೆ, ಮುಚ್ಚಿದವು ಮುಚ್ಚಿದವು. ಮತ್ತು ಆರ್ಯವ್ರತನಿಗೂ ನಿದ್ದೆಹತ್ತತೊಡಗಿತು. ಕಣ್ಣು ಮುಚ್ಚಿ ಮಲಗಿಕೊಂಡರು.

"ಇಬ್ಬರೂ ಮಲಗಿದರಲ್ಲವೇ ?" ಎಂದು ಆಸ್ತಿಕನು ಕೇಳಿದನು.

"ನಾಗೇಶನಂತೂ ಯಾವಾಗಲೋ ಮಲಗಿದ್ದಾನೆ. ಮಲಗು ಅಂದರೆ ಸಾಕು, ಆವನು ಮಲಗುತ್ತಾನೆ." ಎಂದನು ಹೃಷಿಕೇಶ.

"ಆದರೆ ಏಳು ಎಂದರೆ ಮಾತ್ರ ಏಳುವದಿಲ್ಲ. ಅವನು ಅರ್ಜುನನ ಬಂಧುವಾಗಿದ್ದಾನೆ. ಅರ್ಜುನನಿಗೆ 'ಗುಡಾಕೇಶ' ನೆಂದು ಹೆಸರು. ನಿದ್ರೆಯು ಆವನ ವಶದಲ್ಲಿತ್ತು. ಮಲಗಬೇಕೆಂದೆನಿಸಿದರೆ ಮಲಗುವನು, ಏಳಬೇಕೆನಿಸಿ ದರೆ ಏಳುವನು. ಇಚ್ಛಾಮರಣವೆಂದರೆ ಒಂದು ಪ್ರಕಾರದ ಇಚ್ಛಾಜೀವನವೇ. ನಾವೀಗ ಒಂದು ಮೋಜನ್ನು ಮಾಡುವಾ. ನೀವೆಲ್ಲರೂ ನೋಡಿರಿ" ಎಂದನು ಆಸ್ತಿಕ.

ಆಸ್ತಿಕನು ಆರ್ಯವ್ರತನ ಬಳಿಗೆ ಹೋದನು. ಆವನ ಮೈಮೇಲಿ ಹೊಚ್ಚಿದ ಹೊದಿಕೆಗಳನ್ನು ತೆಗೆಯ ಹತ್ತಿದನು. ಎರಡು ಹೊದಿಕೆಗಳನ್ನು ತೆಗೆಯುವಷ್ಟರಲ್ಲಿ, ಅವನು ಎಚ್ಚತ್ತನು. ಆಮೇಲೆ ಆಸ್ತಿಕನು ನಾಗೇಶನ ಕಡೆಗೆ ತಿರುಗಿದನು. ಅವನ ಮೈಮೇಲಿನ ಹೊದಿಕೆಗಳನ್ನೆಲ್ಲ ತೆಗೆದರೂ ಸಹ, ಆವ ನಿಗೆ ಎಚ್ಚರವಾಗಲಿಲ್ಲ. "ನಾಗೇಶ, ನಾಗೇಶ" ಎಂದು ಮೆಲ್ಲಗೆ ಒದರಿದನು. ಆದರೂ ಎಚ್ಚರಿಯಲಿಲ್ಲ. ಕಡೆಗೆ "ನಾಗೇಶ, ನಾಗೇಶ" ಎಂದು ಗಟ್ಟಿ

ಯಾಗಿ ಒದರಿ ಅವನನ್ನು ಅಲುಗಾಡಿಸಿದ ಮೇಲೆ ಅವನು ಕಣ್ಣನ್ನು ಸ್ವಲ್ಪ ತೆರೆದನು. ಆಮೇಲೆ ಗಟ್ಟಿಯಾಗಿ ಅಲುಗಾಡಿಸಿದ ನಂತರ ಅವನು ಎದ್ದನು.

"ಆರ್ಯವೃತನಿಗೆ ಬೇಗನೆ ಎಚ್ಚರಿಕೆಯಾಯಿತು. ನಾಗೇಶನಿಗೆ ಹಿಂದುಗಡೆ ಎಚ್ಚರವಾಯಿತು. ಆದರೆ ಇಬ್ಬರೂ ಎಚ್ಚರಾದರು. ಒಬ್ಬರಿಗೆ ಬೇಗ, ಒಬ್ಬರಿಗೆ ತಡ. ಹಾಗೆಯೇ ಮಾನಸಿಕ ಹಾಗೂ ಬೌದ್ಧಿಕ ಜಾಗೃತಿಯ ಸ್ಥಿತಿ ಕೆಲವರಿಗೆ ಬೇಗನೆ ತಿಳಿಯುತ್ತದೆ, ಕೆಲವರಿಗೆ ತಡವಾಗಿ ತಿಳಿಯುತ್ತದೆ. ಕೆಲವರಿಗೆ ಕೆಲವು ಸಂಗತಿಗಳು ಬೇಗನೆ ತಿಳಿದರೆ, ಬೇರೆ ಕೆಲವರಿಗೆ ಬೇರೆ ಕೆಲವು ಸಂಗತಿಗಳು ತಿಳಿಯುತ್ತವೆ. ಆದುದರಿಂದ ಮನೋಬುದ್ಧಿಗಳಿಗೆ ಸಂಸ್ಕಾರವಾಗುವಂತೆ ನಾವು ವಾತಾವರಣವನ್ನು ನಿರ್ಮಿಸಬೇಕು. ರೋಗಿಯ ಹತ್ತರ ಇನ್ನೊಬ್ಬ ರೋಗಿಯನ್ನೇಕೆ ನಿಲ್ಲಿಸಬೇಕು? ಅವನ ಹತ್ತರ ಹೂಗಳನ್ನೂ ಸುಗಂಧ ದ್ರವ್ಯವನ್ನೂ ಇಡಬೇಕು. ಅವನ ಮನಸ್ಸಿಗೆ ಉಲ್ಹಾಸ ಎನಿಸುವಂತೆ ಪ್ರಕಾಶ ಹಾಗೂ ಸ್ವಚ್ಛತೆಯನ್ನು ಕಾಯಬೇಕು. ಅಂದರೆ ಅವನಿಗೆ ಒಳ್ಳೆಯದಾಗುವದು. ಹಾಗು ಅವನ ಸೇವೆಯನ್ನು ಮಾಡಿದಂತಾಗುವದು. ಆದುದರಿಂದ ಯಾರ ಮನಸ್ಸು ದೋಷಯುಕ್ತವೆಂದು ನಮಗೆ ಅನಿಸುವದೋ, ಅಲ್ಲಿ ಸುಗುಣಗಳನ್ನು ಬೀರುವ ವಸ್ತುಗಳನ್ನೂ, ಪ್ರೇಮವನ್ನೂ ಅವನೆದುರಿಗಿಟ್ಟು ಅವುಗಳ ಉಗ್ರತೆಯು ಕಡಿಮೆಯಾಗುವಂತೆ ಪ್ರಯತ್ನಿಸುವದು ಆವಶ್ಯವಾಗಿದೆ. ಗಾಯಕರ ಮನೆಯ ನಾಯಿಯೂ ಹಾಡುವದಂತೆ. ಹಾಗೆಯೇ ಸುಂದರವಾದ ವಾತಾವರಣವನ್ನು ನಿರ್ಮಿಸುವದೂ, ನಮ್ಮನ್ನೇ ಕೂಡಿದೆ. ಆರ್ಯರು ಸೇವಾಮಯ, ಸಹಕಾರ್ಯಮಯ, ಪ್ರೇಮಮಯ ಜೀವನವನ್ನು ನಾಗರೊಡನೆ ನಡೆಯಿಸಿದರೆ, ನಾಗರೂ ಇದೇ ಬಗೆಯ ಜೀವನವನ್ನೂ ಆರ್ಯರೊಡನೆ ಸಾಗಿಸಿದರೆ, ಪ್ರೇಮಸಾಗರವು ನಿರ್ಮಾಣವಾಗಲಿಕ್ಕಿಲ್ಲವೇ? ಇದರಿಂದ ಹೊಸ ವಾತಾವರಣವೇ ನಿರ್ಮಾಣವಾಗಬಹುದು. ಇಬ್ಬರಲ್ಲಿಯೂ ಸ್ನೇಹಮಯ ಜೀವನವು ಉತ್ಪನ್ನವಾಗಬಹುದು. ಇದೇ ಬಗೆಯಾಗಿ ಭಾರತದಲ್ಲಿಯ ಮಾನವ ಜಾತಿಗಳೆಲ್ಲ ಒಂದೆಡೆ ಸ್ನೇಹದಿಂದಲೂ ಪ್ರೇಮದಿಂದಲೂ ಬಂಧು ಭಾವದಿಂದಲೂ ನೆಲೆಸುವಂತೆ ಮಾಡುವಾ! ತಿಳಿಯಿತೇ. ಇದರಿಂದ ಪಾಪದ ಕವಚವು ಕಳಚೀತು? ಪ್ರೇಮವು ಎಲ್ಲರನ್ನೂ

ಬಂಧಿಸೀತು. ಸರ್ವರಲ್ಲಿಯ ಒಳಗಿನ ಸೌಂದರ್ಯವು ಎಲ್ಲರಿಗೂ ಕಂಡೀತು ! ಈ ದೃಷ್ಟಿಯಿಂದ ತಾವು ಇಲ್ಲಿಂದ ಹೊರಬೀಳಬೇಕು. ದ್ವೇಷ ದೃಷ್ಟಿಯುಳ್ಳ ನಮ್ಮ ಬಂಧುಗಳ ದೃಷ್ಟಿಯನ್ನು ಈ ಅಮೃತ ಕಲಶದಿಂದ ಪ್ರೇಮಮಯ ವಾಗಿ ಮಾಡಬೇಕು. ನಿಮಗೆ ರುಚಿಸುವ ವಿಷಯಗಳನ್ನು ಕಲಿಯಲು ಹೋಗಿರಿ. ಶಾಂತರೀತಿಯಿಂದ ನಡೆಯಿರಿ. ನಾಗೇಶನನ್ನು ರೇಗಿಸಬೇಡಿರಿ. ಇಲ್ಲದಿದ್ದರೆ ಅವನು ನಿಮ್ಮನ್ನು ಹೊಡೆಯಬಹುದು" ಎಂದು ನಗುತ್ತ ಆಸ್ತಿಕನು ಹೇಳಿದನು.

ಎಲ್ಲ ವಿದ್ಯಾರ್ಥಿಗಳು ಹೋದರು. ಆನಂದದಿಂದ ಬಿಚ್ಚು ಮನಸ್ಸಿನಿಂದ ಚರ್ಚಿಸುತ್ತ ನಡೆದರು. ಪಕ್ಕಬಲಿತ ಹಕ್ಕಿಯಂತೆ ಮನಬಂದಲ್ಲಿ ಹೋದರು. ಭಗವಾನ್ ಆಸ್ತಿಕನು ಎಲ್ಲಿಗೆ ನಡೆದನು ? ಎಲ್ಲೆಲ್ಲಿ ವಿದ್ಯಾರ್ಥಿಗಳು ಹೋಗಿದ್ದರೋ ಅಲ್ಲಲ್ಲಿ ಹೋಗಿ ಅವರ ಮೇಲೆ ಪ್ರೇಮ ವೃಷ್ಟಿಯನ್ನು ಸುರಿಸಲಿಕ್ಕೆ. ಸ್ಮಿತಮಯ ಆಶೀರ್ವಾದವನ್ನು ಮಾಡಲಿಕ್ಕೆ.

೭

"ಅಜ್ಜೀ, ನಾಗಾನಂದರು ಯಾವಾಗ ಬರುವರು? ಅವರು ಬರಬಹುದೇ? ಗಾಳಿಯಂತೆ ಅವರು ತಿರುಗುತ್ತಲೇ ಇರುವರೇನು? ನನ್ನನ್ನು ನೀರಿನಿಂದ ಯಾಕೆ ಉಳಿಸಿದರು? ನೀರಿನಿಂದ ಹೊರಬಿದ್ದ ಮೀನಿನಂತೆ ನಾನು ತಳಮಳಿಸುತ್ತಿದ್ದೇನೆ. ನಾಗರು ನಿಜವಾಗಿ ದುಷ್ಟರೇ? ಅವರಿಗೆ ಅಂತಃಕರುಣವಿಲ್ಲವೆ? ಆದರೆ ಅವರು ದುಷ್ಟರೇ ಆಗಿದ್ದರೆ, ನನ್ನ ಸಲುವಾಗಿ ತಮ್ಮ ಜೀವನವನ್ನು ಸಂಕಟದಲ್ಲಿ ಏಕೆ ಹಾಕುತ್ತಿದ್ದರು? ಅವರ ಈ ದಯೆಯೇ ಈಗ ನನ್ನನ್ನು ದಹಿಸುತ್ತಿರುವದು. ಅವರು ಯಾಕೆ ಹೋದರು? ನೀನು ಅವರನ್ನು ಹೋಗಗೊಟ್ಟಿಯೇಕೆ? ಬಕುಳ ಪುಷ್ಪದ ಹಾರವನ್ನು ರಚಿಸಿ, ಅವರ ಕೊರಳಲ್ಲಿ ಹಾಕಬೇಕೆಂದು ನಾನು ಬೇಗನೆ ಎದ್ದು ಹೋಗಿದ್ದೆ. ಅವರು ಇತ್ತ ಹೋಗಿಬಿಟ್ಟರು. ಅಲ್ಲಿ ನೋಡು, ಗೂಟಕ್ಕೆ ಹಾಕಿದ ಬಕುಳ ಪುಷ್ಪದ ಹಾರವು ಒಣಗಿ ಹೋಗಿದೆ. ಅಜ್ಜೀ ನಿನ್ನ ಹತ್ತರ ಒಣಗಿದ ಅಶೋಕ ಪುಷ್ಪವು ಮತ್ತು ನೊಮ್ಮಗಳ ಹತ್ತರ ಒಣಗಿದ ಬಕುಳ ಪುಷ್ಪವು. ಈ ಒಣಗಿದ ಪುಷ್ಪಗಳನ್ನು ನೋಡುತ್ತಾ, ನಾವು ನಮ್ಮ ಆಯುಷ್ಯವನ್ನು ಸಾಗಿಸಬೇಕೇ? ಅವರನ್ನು ನೀನು ತಡೆಯಲಿಲ್ಲವೇಕೆ? ನಾನಿದ್ದರೆ ಕಟ್ಟಿಹಾಕುತ್ತಿದ್ದೆ. ನನ್ನ ಬಂಗಾರ! ಆ ದಿವಸ ಸಿಕ್ಕ ಜೀವಂತ ಬಂಗಾರ. ಸಾದುಕಪ್ಪಿನ ನಗೆ ಮುಖದ ಸುಂದರ ಬಂಗಾರ! ಅದನ್ನು ನೀನು ಕಳೆದೆ. ಅಂತಹ ಸುವರ್ಣ ದಿನವು ಎಂದು ಬರುವದು? ಒಂದೊಂದು ಕ್ಷಣವು ಯುಗವಾಗತೊಡಗಿದೆ. ಎಲ್ಲಿ ಹೋಗಲಿ? ಎಲ್ಲಿ ನೋಡಲಿ? ಕ್ಷಣಹೊತ್ತು ಕಂಡರು, ಮಾಯವಾದರು. ನಾಗಾನಂದ! ಆದರೆ ನನಗೆ ದಃಖವನ್ನು ಕೊಡುತ್ತಿರುವರು. ಅವರ

ನೆನಪುಗಳು ಮರೆಯಲು ಕೂಡ ಬರಲೊಲ್ಲವು. ಯಾವುದನ್ನು ನಾನು ಮರೆಯಬೇಕೆನ್ನುವೆನೋ ಅದರೊಡನೆ ಘುತ್ತಿಸ್ಟು ತನ್ಮಯಳಾಗುವೆನು. ನಾನು ನನ್ನನ್ನು ಮರೆಯಬಹುದು. ಆದರೆ ಅವರನ್ನು ಮರೆಯಲಾರೆ. ಅವರು ಯಾವಾಗ ಬರಬಹುದು ? ಬರಲೊಲ್ಲರೇಕೆ ? ಅವರಿಗೆ ಇಲ್ಲಿ ಸಂಕೋಚವೆನಿಸುವದೇ ? ಅವರಿಗೆ ಇಲ್ಲಿ ಆನಂದವಾಗಲಿಲ್ಲವೇ ? ಮನಸ್ಸು ರಮಿಸಲಿಲ್ಲವೇ ? ನಾನದರೋ ನಾಗರನ್ನು ದ್ವೇಷಿಸುವವಳಲ್ಲ ಈ ಊರಲ್ಲಿಯ ನನ್ನ ಗೆಳತಿಯರು ನಾಗರನ್ನು ದ್ವೇಷಿಸುವದಿಲ್ಲ. ಅವರು ಇವರ ಮೇಲಂತೂ ಪುಷ್ಪವೃಷ್ಟಿಯನ್ನೇ ಕರೆದರು. ಮಕ್ಕಳು ಹಾರಗಳನ್ನು ಹಾಕಿದರು. ಇಂತಹ ಊರು ಅವರಿಗೆ ಎಲ್ಲಿ ಸಿಕ್ಕೀತು ? ಮನವೇ ಹೋಗು! ಅವರನ್ನು ಹುಡುಕಲು ಹೋಗು! ನವಖಂಡ ಸೃಷ್ಟಿಯನ್ನು ಸುತ್ತಾಡು. ಕೊನೆಗೆ ಅವರನ್ನು ಹುಡುಕಿ ಕೊಂಡು ಬಾ. ಅಜ್ಜೀ, ನನ್ನ ಮನಸ್ಸು ಹಾರಿಹೋದರೆ, ನಾನು ಉನ್ಮನ ಸ್ಥಿತಿಯಲ್ಲಿ ಇರಬಹುದೋ. ಇಲ್ಲವೇ ಸಮಾಧಿಸ್ಥಳಾಗಬಹುದೇ? ನೀನೇಕೆ ಮಾತಾಡಲೊಲ್ಲೆ? ಅಜ್ಜೀ, ನಿನ್ನ ಪ್ರೇಮವೂ ಇಲ್ಲವೇ ನನ್ನ ಮೇಲೆ ? ನಿನ್ನ ಮೇಲೆ ಸಿಟ್ಟಾಗಲು ನನಗೆ ಅಧಿಕಾರವಿಲ್ಲವೇ ? ನಾನು ಯಾರಮೇಲೆ ಸಿಟ್ಟಾಗಲಿ ? ಯಾರಮೇಲೆ ಪ್ರೇಮಮಾಡಲಿ ? ಯಾರಮೇಲೆ ರೇಗಿಗೇಳಲಿ ? ಯಾರನ್ನು ನೋಡಿ ನಗಲಿ ? ಕಾರ್ತೀಕನ ಮೇಲೆ ಸಿಟ್ಟಾಗಲು ಕೂಡ ನನಗೆ ಅಧಿಕಾರವಿಲ್ಲ. ನಾಗಾನಂದನು ಬಂದರೆ ಅವನ ಮೇಲೆ ಸಿಟ್ಟಾಗುವೆ. ಕೆಂಪು ಕಣ್ಣುಗಳಿಂದ ಅವನನ್ನು ನೋಡುವೆ. ಆದರೆ ಅವನು ಬಂದಾದರೂ ಬರಲಿ. ಅಜ್ಜೀ, ಅವನು ಬರುವನೇ ? ಸವಿಮಾತುಗಳನ್ನಾಡು ಅಜ್ಜೀ ? ನನ್ನೊಡನೆ ಮಾತಾಡು. " ಎಂದು ಅಜ್ಜಿಯ ಕೊರಳಿಗೆ ಬಿದ್ದಳು.

" ವತ್ಸಲೇ ನಾನಾದರೂ ಏನು ಹೇಳಲಿ ? ಅವನಿಗೆ ಇಲ್ಲಿ ಇರಬೇಕೆನಿಸಿದ್ದರೆ ಅವನು ಇರುತ್ತಿದ್ದ. ಸುಮ್ಮನೆ ಇಲ್ಲಿ ಇರುವದರಲ್ಲಿ ಏನು ಅರ್ಥವಿದೆ ? ಆಗ್ರಹಪಡಿಸುವದರಲ್ಲಿಯೂ ಏನು ಸ್ವಾರಸ್ಯ ? ನಾನು ಅವನನ್ನು ಹೋಗಗೊಟ್ಟೆ. ಅವನಿಗೆ ಇಲ್ಲಿ ಇರಲು ಪ್ರಶಸ್ತವೆನಿಸಲಿಲ್ಲ. ಏಕೆಂದರೆ ಮನೆಯಲ್ಲಿ ಯಾರೂ ಗಂಡಸರಿಲ್ಲ. ಅಲ್ಲದೆ ಅವನು ನಾಗ, ನಾವು ಆರ್ಯರು. ಆಹುದೋ ಅಲ್ಲವೋ " ಎಂದಳು ಅಜ್ಜಿ.

"ಆರ್ಯ ಹಾಗೂ ನಾಗ, ನಾಗ ಹಾಗೂ ಆರ್ಯ ಇದನ್ನು ತಕ್ಕೊಂಡು ನನಗೇನು ಮಾಡುವದಿದೆ?" ಎಂದು ಸಿಟ್ಟಿಗೆದ್ದಳು ವತ್ಸಲೆ.

"ಸಮಾಜಕ್ಕೆ ಅಂಜಬೇಕಾಗುತ್ತದೆ. ಸಮಾಜದಲ್ಲಿಯ ಚಳವಳಿಯನ್ನು ತೀರ ಉಪೇಕ್ಷಿಸಿ ಉಪಯೋಗವಿಲ್ಲ." ಎಂದು ಅಜ್ಜಿಯು ನುಡಿದಳು.

"ಸಮಾಜದ ಚಳವಳಿಯ ಮೇಲೆಯೇ ನಾವು ಅವಲಂಬಿಸಿಗೊಂಡಿರಬೇಕೇ? ಹಾಗಾದರೆ ಈ ಆಂದೊಲನವನ್ನು ನಾವು ಎದುರಿಸಬೇಕು. ಆಂದೋಲನವನ್ನು ಬೇರೆಯವರು ಮಾಡಬೇಕು. ನಾವು ಸುಮ್ಮನೆ ಇರಬೇಕು. ಅದನ್ನು ನಾವು ಮೋರೆ ತಗ್ಗಿಸಿಕೊಂಡು ಸಹನ ಮಾಡಬೇಕು. ಇದೆಲ್ಲಿಯ ನ್ಯಾಯ? ನಾವೂ ಆಂದೋಲನವನ್ನು ಮಾಡೋಣ. ಕ್ರಿಯೆಗೆ ಪ್ರತಿಕ್ರಿಯೆ. ಆಂದೋಲನಕ್ಕೆ ಪ್ರತ್ಯಾಂದೋಲನ. ಕ್ರಾಂತಿಗೆ ಪ್ರತಿಕ್ರಾಂತಿ. ಒಂದು ಪಾವಟಿಗೆಯು ತಲೆಯ ಮೇಲೆ ಮತ್ತೊಂದು ಪಾವಟಿಗೆ" ಎಂದಳು ವತ್ಸಲೆ.

"ಆದರೆ ಎಲ್ಲ ಪಾವಟಿಗೆಗಳೂ ಮೇಲಕ್ಕೆ ಒಯ್ಯುವವಲ್ಲವೇ? ಪಾವಟಿಗೆಗಳು ಸರಳವಿರಲಿ, ಸುತ್ತು ಸುತ್ತಾಗಿರಲಿ, ಎಲ್ಲವು ಮೇಲಕ್ಕೊಯ್ಯುವವು" ಎಂದಳು ಸುಶ್ರುತೆ.

"ಸರಳ ಹಾಗೂ ಎತ್ತರ ಪಾವಟಿಗೆಗಳಿಗಿಂತಲೂ ಸುತ್ತುಸುತ್ತಿನ ಪಾವಟಿಗೆಗಳೇ ಲೇಸು. ಸರಳ ಪಾವಟಿಗೆಗಳು ತಲೆತಿರುಗಿಸುತ್ತವೆ. ಸುತ್ತಿನ ಪಾವಟಿಗೆಗಳು ಸಹಜವಾಗಿ ಮೇಲಕ್ಕೊಯ್ಯುತ್ತವೆ. ನಾಗರ ಕಟ್ಟಡಗಳಿಗೆಲ್ಲ ಹಾವಿನಂತಹ ಪಾವಟಿಗೆಗಳೇ ಇರುತ್ತವೆ. ಆರ್ಯರು, ನಾಗರ ಈ ಪದ್ಧತಿಯನ್ನು ತೆಗೆದುಕೊಂಡಿದ್ದಾರೆ. ಆ ಮಯಾಸುರನೇನು ಆರ್ಯನಿದ್ದಿಲ್ಲ. ಅಜ್ಜೀ? ಆದರೆ ಅವನ ಕಲೆ ಎಂತಹದು! ಅದನ್ನು ನೋಡಿ ಆರ್ಯರೂ ಬಟ್ಟುಕಚ್ಚುತ್ತಿದ್ದಾರೆ." ಎಂದು ವತ್ಸಲೆಯು ನುಡಿದಳು.

"ಆ ಮಯಾಸುರನ ಸಭೆಯನ್ನು ನೋಡಲು ಹೋದಾಗ, ನಾನು ಚಿಕ್ಕವಳಿದ್ದೆ. ನೀರು ಇದೆಯೆಂದು ಉಟ್ಟದ್ದನ್ನು ಮೇಲಕ್ಕೆತ್ತಿದರೆ, ಅಲ್ಲಿ ನೀರಿಲ್ಲ. ಎಲ್ಲಿ ನೀರಿಲ್ಲವೆಂದು ನಾವು ಸುಮ್ಮನೆ ನಡೆದರೆ, ಅಲ್ಲಿ ನೀರು.

ಬಹಳ ದೊಡ್ಡ ಕಲಾವಂತ. ನಮ್ಮ ಫಜೀತಿಯಾಯಿತು. ಆದರೆ ಇದನ್ನು ನೋಡಿ ನಕ್ಕು ನಕ್ಕು ಹೊಟ್ಟೆ ಹುಣ್ಣಾಯಿತು" ಎಂದಳು ಅಜ್ಜೀ.

"ನಾಗರು, ಕೆಟ್ಟ ಜನರಲ್ಲ. ನಿನ್ನ ಮತವೇನು ಅಜ್ಜೀ ?" ಎಂದು ವತ್ಸಲೆಯು ಪ್ರಶ್ನಿಸಿದಳು.

"ಒಳ್ಳೇ ಹಾಗು ಕೆಟ್ಟ ಜನರು ಎಲ್ಲರಲ್ಲಿಯೂ ಇರುವರು. ಯಾರು ಕೆಟ್ಟ ಜನರಿರುವರೋ ಅವರನ್ನು ಸುಧಾರಿಸಬೇಕು. ಇದೇ ನಿಜವಾದ ಮಾನವ ಧರ್ಮ." ಎಂದು ಸುಶ್ರುತೆಯು ನುಡಿದಳು.

"ಅಜ್ಜೀ, ನನ್ನ ತಂದೆಯು ಹಾವು ಚೇಳುಗಳನ್ನು ಕೊಲ್ಲುತ್ತಿರಲಿಲ್ಲ ವಂತೆ. ನಿಜವೇ" ಎಂದು ವತ್ಸಲೆಯು ಕೇಳಿದಳು.

"ಅಹುದು, ಶಕ್ಯವಿದ್ದಷ್ಟು ಕೊಲ್ಲುತ್ತಿರಲಿಲ್ಲ. ಅವುಗಳನ್ನು ಹಿಡಿದು, ದೂರ ಬಿಟ್ಟು ಬರುತ್ತಿದ್ದನು. ಒಮ್ಮೆ ಕಾರ್ತೀಕನ ಮನೆಯಲ್ಲಿ ದೊಡ್ಡದೊಂದು ಹಾವು ಬಂದಿತ್ತು. ಅದು ಭುಸುಗುಡುತ್ತಿತ್ತು. ಆದರೆ ನಿನ್ನ ತಂದೆಯು ಹೂಗಳು ತುಂಬಿದ ಒಂದು ಬುಟ್ಟಿಯನ್ನು ತೆಗೆದುಕೊಂಡು ಅದರ ಹತ್ತಿರ ಹೋದನು. ಅಲ್ಲಿಯ ಜನರಿಗೆಲ್ಲ ದೂರ ಸರಿಯಲು ಹೇಳಿದನು. ಆ ಹೂವಿನ ಬುಟ್ಟಿಯನ್ನು ಅದರ ಎದುರಿಗೆ ಕೋಲಿನಿಂದ ಸರಿಸಿದನು. ಹೂಗಳ ಮಕರಂದವು ಎಲ್ಲೆಡೆಗೆ ವ್ಯಾಪಿಸಿತು. ಆ ಹಾವು,ಹೂವಿನ ಬುಟ್ಟಿಯನ್ನು ಹೊಕ್ಕಿತು. ಕೂಡಲೇ ಅದರ ಮೇಲೆ ಬಟ್ಟೆಯನ್ನು ಮುಚ್ಚಿ, ಅದನ್ನು ತೆಗೆದುಕೊಂಡು ಹೋಗಿ ಅಡವಿಯಲ್ಲಿ ಬಿಟ್ಟುಬಿಟ್ಟನು. ನಿನ್ನ ತಂದೆಯು ನಾಗರ ಮನಸ್ಸನ್ನು ನೋಯಿಸುತ್ತಿದ್ದಿಲ್ಲ. ಅವನ ಇಂತಹ ಕೃತಿಗಳಿಂದ ಊರಲ್ಲಿ ಜಗಳಗಳಾಗುತ್ತಿದ್ದಿಲ್ಲ. ಎರಡೂ ಸಮಾಜಗಳು ಆನಂದದಿಂದಿದ್ದವು. ನಾಗರ ಪಂಚಮಿಯ ದಿವಸ ನಾವೂ ಜಾಗರಣೆಯನ್ನು ಮಾಡುತ್ತಿದ್ದೆವು. ಅವರ ಸಂಗಡ ಕುಣಿಯುತ್ತಿದ್ದೆವು. ಅವರ ಹಾಡುಗಳನ್ನು ಹಾಡುತ್ತಿದ್ದೆವು. ಆದರೆ ನಿನ್ನ ತಂದೆಯು ಹೋದನಂತರ ಅವೆಲ್ಲವೂ ಹಿಂದೆ ಬಿದ್ದಿದೆ. ಇಲ್ಲಿಯ ನಾಗರೆಲ್ಲ ಬೇರೆ ಕಡೆಗೆ ವಾಸಿಸಲು ಹೋದರು. ನಾಗರ ಹೆಣ್ಣುಮಕ್ಕಳು ಆನಂದಿಗಳೂ, ನಾನಾ ಪ್ರಕಾರದ ಆಟಗಳನ್ನಾಡುವರು. ಸುಂದರವಾಗಿ ಹಾಡುವರು. ಅಂದವಾಗಿ

ಕುಣಿಯುವರು. ಆದರೆ ಅಂದಿನ ಆನಂದ ಇಂದು ನಮಗೆ ಉಳಿದಿಲ್ಲ." ಎಂಬಳು ಸುಶ್ರುತೆ.

"ಅಂದಿನ ರಾತ್ರಿ ನಾಗಾನಂದನು ಹೇಗೆ ಕುಣಿದ? ಅವನೊಡನೆ ನಾನೂ ಕುಣಿದೆ. ಅವನು ನನಗೆ ಕಲಿಸುತ್ತಿದ್ದಂತೆ ತೋರಿತು. ಒಳಗೆ ಹೃದಯವು ಕುಣಿಯುತ್ತಿತ್ತು, ಹೊರಗೆ ದೇಹವು ಕುಣಿಯುತ್ತಿತ್ತು. ಕೈ ಕೈ ಹಿಡಿದು ನಾವು ಕುಣಿದೆವು. ಒಮ್ಮೆ ಕೂಡುತ್ತಿದ್ದೆವು. ಒಮ್ಮೆ ಏಳುತ್ತಿದ್ದೆವು. ಒಮ್ಮೆ ಗಿರಕಿ ಹೊಡೆಯುತ್ತಿದ್ದೆವು. ಒಮ್ಮೆ ಕೈ ಮೇಲೆತ್ತುತ್ತಿದ್ದೆವು! ಒಮ್ಮೆ ಕೆಳಗೆ ಮಾಡುತ್ತಿದ್ದೆವು. ಏನು ಹೇಳಲಿ ಆ ಅಂದವನ್ನು! ಹುಡುಗರಿಗೂ ಕೂಡ ಉನ್ಮಾದವೇರಿತು. ನಮ್ಮ ಸುತ್ತುಮುತ್ತು ಹುಡುಗರು, ಹುಡುಗರ ಸುತ್ತುಮುತ್ತು ನಾವು ಕುಣಿಯುತ್ತಿದ್ದೆವು. ನಾಗರು, ಕಲಾವಂತರು. ಸೃಷ್ಟಿಯ ಸಾನ್ನಿಧ್ಯದಲ್ಲಿದ್ದು ಕಲೆಯನ್ನು ಕಲಿತಿದ್ದಾರೆ ಅವರು! ಅಜ್ಜೀ, ನಾಗಾನಂದನಿಗೆ ಎಲ್ಲವೂ ಬರುತ್ತದೆ. ಅವನಿಗೆ ಹೂದೋಟವನ್ನು ಮಾಡಲು ಬರುತ್ತದೆ, ಒಕ್ಕಲುತನವನ್ನು ಮಾಡಲು ಬರುತ್ತದೆ. ಕೊಳಲೂದಲು ಬರುವದು. ಬುಟ್ಟಿ ಹೆಣೆಯಲು ಬರುವದು. ಅವನು ಬಂದನೆಂದರೆ ಅವನ ಕೈಯಿಂದ ಒಂದು ಸುಂದರವಾದ ಬುಟ್ಟಿಯನ್ನು ಮಾಡಿಸಿಕೊಳ್ಳುವೆ. ಅದರಲ್ಲಿ ಹೂಗಳನ್ನು ತರುವೆ. ಆದರೆ ಅಜ್ಜೀ ಅವನು ಬರುವನೇ? ಅವನು ನಮ್ಮ ಕಡೆಗೆ ಏಕೆ ಬಂದಾನು? ನಮ್ಮ ಹತ್ತರ ಏನಿದೆ? ನಮ್ಮ ಹತ್ತರ ಹಣವಿಲ್ಲ, ಸಂಪತ್ತಿಲ್ಲ. ಅರಮನೆಯಿಲ್ಲ, ಐಶ್ವರ್ಯವಿಲ್ಲ. ಸಹಸ್ರಾರು ಗೋಧನವಿಲ್ಲ, ನೂರಾರು ಎಕರೆ ಭೂಮಿಯಿಲ್ಲ. ನಮ್ಮ ಹತ್ತರ ಏನು ಇದೆ? ಒಂದೇ ಒಂದು ಹೊಲವಿದೆ." ಎಂದು ವತ್ಸಲೆಯು ನಿಟ್ಟುಸಿರು ಬಿಟ್ಟಳು.

ದಿನಗಳು ಹೋಗುತ್ತಿದ್ದವು. ವತ್ಸಲೆಯ ಆನಂದವೆಲ್ಲ ಕಳಚಿ ಹೋಗಿತ್ತು. ಖಿನ್ನಳಾಗಿದ್ದಳು. ಆವಳ ಮೋರೆಯ ಮೇಲಿನ ಕಳೆಯೆಲ್ಲ ಹೋಗಿತ್ತು. ಆಕೆಯ ಪ್ರಾಣವನ್ನಾರೋ ತೆಗೆದುಕೊಂಡು ಹೋಗಿದ್ದರು. ಆಕೆಯು ನದಿಯ ದಂಡೆಗೆ ಹೋಗುವಳು. ಅಲ್ಲಿ ಕುಳಿತು, ಅಳುವಳು. ಆ ನದಿಯ ಹೆಸರು ಕಪೋತಾಕ್ಷಿಯೆಂದು. ತಾಯೀ ಕಪೋತಾಕ್ಷಿ, ನನ್ನನ್ನು ಏಕೆ ಬಿಟ್ಟಿ? ಏಕೆ ಹೊರಗೊಗೆದೆ? ನೀನು ನನ್ನನ್ನು ಒಡಲೊಳಗೇಕಿಟ್ಟುಕೊಳ್ಳಲಿಲ್ಲ?

ನನಗೆ ಸ್ಥಿರವಾದ ನಿದ್ರೆಯನ್ನೇಕೆ ಹಚ್ಚಿಸಲಿಲ್ಲ ? ನಿನ್ನ ವೇದಗೀತಗಳನ್ನು ಕೇಳುತ್ತ, ನಾನು ಸ್ಥಿರವಾಗಿಯೇ ನಿನ್ನ ಮಗ್ಗುಲಲ್ಲಿ ಮಲಗುತ್ತಿದ್ದೆ. ಆದರೆ ಮಾಡುವದೇನು ? ಅವನು ಈ ದಿಕ್ಕಿನಿಂದಲೇ ಓಡಿ ಬಂದ. ಇಲ್ಲಿಂದಲೇ ಅವನು ನೀರಿನಲ್ಲಿ ಧುಮುಕಿದ. ಈ ಅಭಾಗಿನಿಯ ಸಲುವಾಗಿ ನೀರಿನಲ್ಲಿ ಜಿಗಿದ. ನನ್ನನ್ನು ಉಳಿಸಿದವನೇ ಇಂದು ನನ್ನನ್ನು ಕೊರೆಯುತ್ತಿದ್ದಾನೆ. ಇದು ಯಾರಿಗಾದರೂ ಕಲ್ಪನೆ ಬರಬಹುದೇ ? ನನ್ನನ್ನು ಉಳಿಸಿದ ಕೈಯೇ ನನಗೆ ಬೆಂಕಿಯನ್ನು ಹಚ್ಚುವದು ಎಂದು ಅವನಿಗಾದರೂ ಕಲ್ಪನೆ ಇದ್ದಿತೇ ? ಜಗತ್ತಿನಲ್ಲಿ ಎಲ್ಲವೂ ವಿರೋಧವಾಗಿದೆ. ಆನಂದ ಬಡುವ ಕಣ್ಣುಗಳೇ ದುಃಖಾಶ್ರುಗಳನ್ನು ಸುರಿಸುವವು. ಅದು ಅಸಹ್ಯವಂತೂ ಆಗುವದು. ಅದು ಆಗಬಾರದೆಂದು ಅನಿಸುವದು. 'ವತ್ಸಲೆ, ಅಳು, ಅಳು. ಈ ಕಪೋತಾಕ್ಷಿಯ ಪ್ರವಾಹದಲ್ಲಿ ನಿನ್ನ ಹೃದಯದಲ್ಲಿಯ ಪ್ರವಾಹವನ್ನು ಬೆರೆಯಿಸು. ಸಮುದ್ರಕ್ಕೆ ಕೂಡುವ ಈ ನದಿಯಲ್ಲಿ ನಿನ್ನ ಹೃದಯದಲ್ಲಿಯ ದುಃಖವನ್ನೆಲ್ಲ ಹರಿಸಿ ಬಿಡು' ಎಂದು ತನ್ನಷ್ಟಕ್ಕೆ ತಾನೇ ಮಾತನಾಡುವಳು.

ಒಂದು ತುಂಬಿದ ಬಾವಿಯ ಹತ್ತರ ಹೋಗಿ 'ಬಾವಿಯೇ ನೀನೇನೋ ತುಂಬಿರುವಿ. ಆದರೆ ನನ್ನದು ? ನನ್ನ ಜೀವನದ ಬಾವಿಯು ಎಂದು ತುಂಬುವದು?" ಸುಂದರವಾದ ತೋಟದ ಎದುರಿಗೆ ನಿಂತು, ಉಪವನವೇ ! ನೀನೇನೋ ಫಲಭರಿತಳಾಗಿ ಶೋಭಿಸುವೆ. ಆದರೆ ನಾನು? ನನ್ನ ತೋಟವು ಹೀಗೆಯೇ ಪಡ ಬೀಳಬೇಕೆ? ನನಗೆ ತೋಟಿಗನು ಸಿಕ್ಕಲಾರನೇ ? ನನ್ನ ತೋಟಿಗ ? ತೋಟ ಒಣಗ ಹತ್ತಿದೆ. ತೋಟಿಗನು ಬಂದೊಡನೆ, ಚಿಗಿಯುವದು, ಅರಳುವದು, ಹೂ ಕಾಯಿಗಳನ್ನು ಬಿಡುವದು. ಆದರೆ ಅವನ ದರ್ಶನ ಯಾವಾಗ?" ಊರಲ್ಲಿಯ ಹುಡುಗಿಯರು ಒಂದೆಡೆ ಹೂವಿನ ಹಾರವನ್ನು ಕಟ್ಟುತ್ತ ಕುಳಿತಿರುತ್ತಾರೆ. ಒಮ್ಮೆಲೆ ಅಲ್ಲಿಗೆ ಹೋಗುವಳು. 'ಈ ಹಾರವನ್ನು ಯಾರಿಗೆ ಹಾಕುವಿರಿ ? ಗೆಳತಿಯರೇ ! ಹೇಳಿರಿ. ಈ ಹಾರವು ಯಾರ ಕೊರಳಿಗೆ ಶೋಭಿಸುವದು ? ನಿಮಗೆ ಯಾರಾದರೂ ಭೆಟ್ಟಿಯಾಗಿರುವರೇ ? ನಿಮ್ಮ ದಾರಿಯನ್ನು ಯಾರಾದರೂ ಕಾಯುತ್ತಿರುವರೇ ? ಏನು ! ನಿಮ್ಮ ಕೊರಳಲ್ಲಿ ನೀವೇ ಹಾಕಿಕೊಳ್ಳುವಿರೇ ! ಇವೇನು ತಮ್ಮ

ಪೂಜೆ ! ನಮ್ಮನ್ನು ನಾವೇ ಪೂಜಿಸಿಕೊಳ್ಳುವದರಲ್ಲಿ ಅರ್ಥವೇನಿದೆ ? ಎರಡನೇಯವರು ನಮ್ಮ ಪೂಜೆಯನ್ನು ಮಾಡಬೇಕು. ಅದರಲ್ಲಿಯೇ ಸುಖವಿದೆ. ನಾನು ನನ್ನ ಕೊರಳಲ್ಲಿ ಎಂದೂ ಹಾರವನ್ನು ಹಾಕಿಕೊಳ್ಳುವದಿಲ್ಲ ! ನಾನು ಹೆಣೆದುದನ್ನು ಅವರ ಕೊರಳಿಗೆ ಹಾಕುವೆ. ದಿನಾಲು ಮಾಲೆ ಕಟ್ಟುವೆ. ನದಿಯ ಪ್ರವಾಹದಲ್ಲಿ ಬಿಟ್ಟುಬಿಡುವೆ. ಏಕೆಂದರೆ ಅದು ಬಾಡಬಾರದೆಂದು. ಅವರು ಹೋಗಿ ಎಷ್ಟೋ ದಿನಗಳಾದವು ? ದಿನಾಲು ಕುಂಬಿಯ ಮೇಲೆ ಒಂದೊಂದು ಗಂಧದ ಬೊಟ್ಟು ಇಡುತ್ತೇನೆ. ನಾನು ಅವುಗಳನ್ನು ನೋಡಹತ್ತಿದೊಡನೆ, ನನ್ನ ಕಣ್ಣುಗಳು ನೀರು ಸುರಿಸುವವು. ” ಎಂದು ಉನ್ಮಾದಿನಿಯಂತೆ ಮಾಡಹತ್ತಿದಳು.

ಒಂದು ದಿನ ಬಕುಳದ ಮರವನ್ನು ಏರಿ ಕುಳಿತಿದ್ದಾಳೆ. ಅಜ್ಜಿಯು ಹುಡುಕುತ್ತಿದ್ದಾಳೆ. ವತ್ಸಲೇ ಎಂದು ಕೂಗುತ್ತಿದ್ದಾಳೆ. ವತ್ಸಲೆಯು ಹಾಡಹತ್ತಿದಳು.

ಎಲ್ಲಿರುವನವ । ಎಲ್ಲಿರುವನವ ॥
ಕಲ್ಲೆದೆಯ ಕಳ್ಳ ಕೃಷ್ಣಾ ॥

ಎಂದು ಹಾಡಹತ್ತಿದಳು. ಅಜ್ಜಿಯು ಧ್ವನಿಯನ್ನು ಕೇಳಿ, ವತ್ಸಲೇ ಕೆಳಗೆ ಬಾ ! ಅಜ್ಜಿಗೆ ದುಃಖವನ್ನು ಕೊಡಬೇಡ ! ಎಂದು ಅಜ್ಜಿಯು ಕಣ್ಣೀರು ಸುರಿಸಹತ್ತಿದಳು.

‘ ಅಜ್ಜೀ, ನಾನು ಕೆಳಗೆ ಏಕೆ ಬರಲಿ ? ಇಲ್ಲಿಂದ ಕೂಡಲೇ ಮೇಲೆ ಹೋಗಲು ಬರುವದು. ದೇವರೆಡೆಗೆ ಹಾರಿ ಹೋಗುವೆ. ಅಳಬೇಡ ಅಜ್ಜೀ. ನಾನು ಇಲ್ಲಿಯೇ ಕುಳಿತಿರುವೆ. ಹೇಳಲೋ ? ಆ ಕಳ್ಳ ಒಮ್ಮೆಲೆ ಬರಬಹುದು. ಗಿಡದ ಮೇಲೆ ಇದ್ದರೆ, ನನಗೆ ಕಾಣಬಹುದು. ಅವರನ್ನು ನೋಡಿದೊಡನೆಯೇ ಸಿಳ್ಳು ಹಾಕುವೆ. ಅವರು ಗುರುತಿಸಬಹುದು. ಅಂದು ಬಂಗಾರವನ್ನು ತರುವಾಗ ನಾನು ಸಿಳ್ಳುಹಾಕುತ್ತಿದ್ದೆ. ಅದು ಅವರಿಗೆ ಬಹಳ ರುಚಿಸಿತು. ಸಿಳ್ಳನ್ನು ಕೇಳಿ ಅವನು ಇತ್ತಕಡೆಗೆ ಬರಬಹುದು. ಗಿಡದ ಬುಡಕ್ಕೆ ಬಂದೊಡನೆ ಅವರ ಮೇಲೆ ಹೂಗಳ ಮಳೆಗರೆಯುವೆ. ಕಣ್ಣುಗಳಿಂದ ಹೂ ಮಳೆ ಸುರಿಸುವೆ. ಇವುಗಳಲ್ಲಿ ತಮಗೆ ಯಾವುದು

ಸೇರುವದೆಂದು ವಿಚಾರಿಸುವೆ. ಬಕುಳದ ಹೂಗಳೋ ಅಥವಾ ಕಣ್ಣು ಹೂಗಳೋ ಎಂದು. ಅಜ್ಜೀ ಮೇಲೆಯೇ ನೋಡಬೇಡ! ನಿನ್ನ ಗೋಣು ನೊಂದೀತು? ನಾನು ಕೆಳಗೆ ಜಿಗಿಯುಲಾ! ನನ್ನನ್ನು ಹಿಡಿಯುವಿಯಾ! ಶರಗನ್ನೊಡ್ಡಿ ಕರೆದುಕೊಳ್ಳುವಿಯಾ! ಬೇಡ, ನಾನೇ ಕೆಳಗೆ ಇಳಿಯುವೆ. ಮನೆ ಸೇರಿದರೆ ಇನ್ನು ನಾನು ಹೊರಬೀಳುವದೇಯಿಲ್ಲ. ಆದರೆ ಅದೂ ನಿನಗೆ ಸೇರುವದಿಲ್ಲ. ವತ್ಸಲಾ ಸ್ವಲ್ಪ ತಿರುಗಾಡಿ ಬಾ! ಬೇಕಾದರೆ ನಾನು ಬರುವೆ ನಿನ್ನ ಸಂಗಡ ಎನ್ನುವಿ; ಎಂದು ಗುಣಗುಟ್ಟುತ್ತ ವತ್ಸಲೆಯು ಕೆಳಗಿಳಿದಳು.

ವತ್ಸಲೆಯು ತೀರ ಸೊರಗಿದ್ದಳು. ಆಕೆಗೆ ಅನ್ನವು ಹೋಗದಂತಾಯಿತು. ಹಾಲು ಹೇಸಿಗೆ ಬರಹತ್ತಿತು. ಸುಶ್ರುತೆಯು ಚಿಂತೆಗೊಳಗಾದಳು.

"ವತ್ಸಲಾ, ನಿನ್ನ ಸಲುವಾಗಿ ಜೇನುತುಪ್ಪವನ್ನು ತಂದಿದ್ದೇನೆ. ಚಿಕ್ಕವಳಿರುವಾಗ ಅದು ನಿನಗೆ ಬಹಳ ಸೇರುತ್ತಿತ್ತು. ಅದನ್ನು ತೆಗೆದುಕೋ. ಅದರಿಂದ ನಿನ್ನ ಅಶಕ್ತತೆಯು ದೂರವಾಗುವದು. ಶಕ್ತಿಯು ಬರುವದು ಅನ್ನದಲ್ಲಿ ಜೇನುತುಪ್ಪವನ್ನು ಹಾಕಿ, ಹಾಲನ್ನು ಸೇರಿಸಿ ಊಟಮಾಡು. ಉಂಡಾದರೂ ನೋಡು, ಅದು ಹೇಗಿದೆ ಎಂಬುದನ್ನು. ಏನು! ತೆಗೆದು ಕೊಳ್ಳುವಿಯಲ್ಲವೆ?" ಎಂದನು ಕಾರ್ತೀಕ.

"ಕಾರ್ತೀಕಾ, ನನ್ನ ಮಧುವಿನ ಕೊಡವು ಬೇರೆ ಇದೆ. ನೀನು ಹುಚ್ಚನಿರುವಿ. ನೀನು ಈ ಕೊಡದ ಬದಲು ಆ ಜೀವಂತ ಕೊಡವನ್ನು ತೆಗೆದುಕೊಂಡು ಬಾ. ಇದನ್ನು ತುಂಬಿಸಲು ಬರುವದೇ? ಅವನು ಬಂದರೆ ಮಣ್ಣು ಕೂಡ ನನಗೆ ಸವಿಯೆನಿಸೀತು. ಅವನು ಇಲ್ಲದಿದ್ದಲ್ಲಿ ಅಮೃತವು ಕೂಡ ವಿಷವಾಗುವದು. ಉಪನಿಷತ್ತುಗಳಲ್ಲಿ ಹೇಳಿಲ್ಲವೆ. ಅವನೊಬ್ಬನನ್ನು ತಿಳಿದರೆ, ಎಲ್ಲವೂ ತಿಳಿಯುವದೆಂದು. ಅವನ ಸವಿಯನ್ನು ಸವಿದರೆ, ಎಲ್ಲವೂ ಸವಿ ಹತ್ತುವದೆಂದು. ಅದರ ಅನುಭವವನ್ನು ತೆಗೆದು ಕೊಳ್ಳುತ್ತಲಿದ್ದೇನೆ. ಬಾಹ್ಯಜ್ಞಾನವು ನಿರುಪಯೋಗವೆಂಬುದನ್ನು ನಾನು ಬಲ್ಲೆ. ಈ ಕೊಡವನ್ನು ಇಟ್ಟುಬಿಡು. ಕಾರ್ತೀಕಾ ಅಳಬೇಡ. ನಿನ್ನ ಸಲುವಾಗಿ ನಾನು ಬೇಕಾದ್ದನ್ನು ಮಾಡುವೆ." ಎಂದಳು

" ಈ ಜನ್ಮದಲ್ಲಿ ಏನೂ ಬೇಡ. ನಾನು ತಪಶ್ಚರ್ಯವನ್ನು ಮಾಡುವೆ. ತಪಶ್ಚರ್ಯ ಮಾಡಪೆ ಏನೂ ಅಪೇಕ್ಷಿಸಕೂಡದು " ಎಂದು ನೊಂದ ಮನಸ್ಕನಾಗಿ ಕಾರ್ತೀಕನು ಹೇಳಿದನು.

" ಜಗತ್ತು ಹೀಗೆಯೇ ಇದೆ. ನಾನು ಒಬ್ಬರ ಸಲುವಾಗಿ ಅಳಬೇಕು. ಎರಡನೆಯುವರು ನನ್ನ ಸಲುವಾಗಿ ಅಳಬೇಕು. " ಎಂದಳು ವತ್ಸಲೆ.

" ಆನರೆ ಆ ಎರಡನೆಯುವರ ಸಲುವಾಗಿ ಯಾರು ಅಳುತ್ತಾರೆ. ತನ್ನ ಸಲುವಾಗಿ ಯಾರೂ ಅಳದಂತಹ ಅಭಾಗಿನಿಯು ಅವನಿರಬೇಕು." ಎಂದನು ಕಾರ್ತೀಕ.

" ಅವನ ಸಲುವಾಗಿ ಚರಾಚರ ಸೃಷ್ಟಿಯು ಅಳುತ್ತಿರಬಹುದು. ಅವನ ಸಲುವಾಗಿ ನದಿ ಅಳುತ್ತದೆ. ಮೋಡಗಳು ಅಳುತ್ತವೆ. ಇಬ್ಬನ್ನಿಯು ಅಳುತ್ತವೆ. ಹೀಗೆ ಅಜ್ಞಾತವಾದ ಅನಂತ ಅಶ್ರುಗಳಿವೆ. ಕಾರ್ತೀಕಾ, ನಾನು ಬದುಕಲಾರೆ. ನಾನು ಸಾಯುವೆ. ಸಾವು ಏನು ಕೆಡುಕೇ ? ಕೆಡುಕು ಇಂಥಹ ವಯಸ್ಸಿನಲ್ಲಿ ಸಾಯುವದು ಕೆಡುಕೇ ? ಪ್ರಜ್ವಲಿತವಾದ ಅಗ್ನಿಯಲ್ಲಿ ಸುಟ್ಟುಕೊಂಡು ಸಾಯುವದು ಕೆಡುಕು. " ವತ್ಸಲೆಯು ದುಂಖದಿಂದ ಮಾತನಾಡಿದಳು.

" ನಿನ್ನ ಬ್ರಹ್ಮಜ್ಞಾನವು ಎಲ್ಲಿ ಹೋಯಿತು ? ಎಂದ ಕಾರ್ತೀಕ.

" ಅದು ಗಿಳಿಪಾಠ ವಿದ್ದಿತು. ಅದೆಲ್ಲವೂ ಸುಟ್ಟು ಹೋಯಿತು. ಈ ಅಗ್ನಿಯಿಂದ ದಾಟಿದನಂತರ ಸಿಗುವ ಜ್ಞಾನವೇ ನಿಜವಾದ ಜ್ಞಾನ " ಎಂದಳು ವತ್ಸಲೆ.

ಸುಶ್ರುತೆಯು ಹೊರಗೆ ಹೋಗಿದ್ದಳು. ವತ್ಸಲೆಯು ಬಾಳೆಯ ಕಂಬ ವನ್ನು ಅಪ್ಪಿಕೊಂಡಿದ್ದಳು. ಅದು ಬಹಳ ತಣ್ಣಗಿತ್ತು ಅದನ್ನು ಅವಳು ಹಣೆಗೆ ಹಚ್ಚಿಕೊಂಡಳು. ಎದೆಗೆ ಹಚ್ಚಿಕೊಂಡಳು. ಗಲ್ಲಗಳಿಗೆ ಒತ್ತಿಕೊಂಡಳು. ಕೈಗಳಿಗೆ ಹಚ್ಚಿಕೊಂಡಳು. ಆದರೆ ಅವಳ ಹೊಟ್ಟೆಯಲ್ಲಿಯ ಉರಿಯು ಕಡಿಮೆ ಯಾಗುವದೆಂತು ?

ಓಹೊ. ಅಲ್ಲಿಯಾರು ಬಂದರು ! ಸಂಕೋಚದಿಂದ ಒಳಗೆ ಬಂದರು. ಒಳಗೆ ಬಂದು ನಿಂತರು. ಅವರು ಥರಥರ ನಡಗುತ್ತಿದ್ದರು. ಅವರ

ಒಮ್ಮೆಲೇ ದೊಪ್ಪನೇ ಬಿದ್ದರು. ವತ್ಸಲೆಯು ಗಾಬರಿಯಾದಳು. ಹತ್ತರ ಹೋಗಿ ನೋಡಿದಳು.

“ ಓಹೋ ! ಬಾಗಿಲಲ್ಲಿ ಬಂದು ಬಿದ್ದರು. ನಾನು ದುರ್ದೈವಿ. ನನ್ನ ಭೆಟ್ಟಿಗೋಸ್ಕರ ದೂರಿಂದ ಬಂದರು. ಉಪವಾಸ ವನವಾಸ ಬಟ್ಟು ಬಂದರು. ಕೈಯಲ್ಲಿ ಜೀವವನ್ನು ಹಿಡಕೊಂಡು ಬಂದರು ! ಕೋಮಲ ಮನಸ್ಸಿನ ನನ್ನ ರಾಜರು ! ದೇವಾ, ಎಚ್ಚರಾಗಿರಿ. ಕಣ್ಣು ತೆರೆಯಿರಿ. ” ಎಂದು ವತ್ಸಲೆಯು ಅವರ ತಲೆಯನ್ನು ತನ್ನ ತೊಡೆಯಮೇಲಿಟ್ಟುಕೊಂಡು ಅಳಹತ್ತಿದಳು. ಅವಳ ಕಣ್ಣುಗಳಿಂದ ಸುರಿಯುತ್ತಿರುವ ಕಣ್ಣೀರು ಅವನ ಮುಖ ಕಮಲದ ಮೇಲೆ ಬೀಳುತ್ತಿದ್ದವು. ಅವಳು ತನ್ನ ಕೈಯಿಂದ ಅವನ ಕೂದಲನ್ನು ಸರಿಪಡಿಸುತ್ತಿದ್ದಳು. ಅವನ ತಲೆಯನ್ನು ತಟ್ಟುತ್ತಿದ್ದಳು. ಅವಳು ಮೌನಿಯಾಗಿದ್ದಳು. ಅವಳು ಕಣ್ಣು ಮುಚ್ಚಿದ್ದಳು. ಆದರೆ ಕಣ್ಣೀರು ಮಾತ್ರ ಸುರಿಯುತ್ತಿದ್ದವು. ಒಮ್ಮೆಲೆ ಅವಳ ಮುಖಕಮಲವು ಅರಳಿತು. ಅವನು ಕಣ್ಣು ತೆರೆದು ಅವಳ ಕಡೆಗೆ ನೋಡಿದನು.

ವತ್ಸಲೇ ಅಳಬೇಡ ”

“ ಅಳದಿದ್ದರೆ ಏನು ಮಾಡಲಿ ? ನಿಮಗೆ ಸ್ವಸ್ಥವೆನಿಸುವದೇ ? ” ಎಂದು ಅವಳು ನಡುಗುವ ಧ್ವನಿಯಿಂದ ಕೇಳಿದಳು.

“ ಅಹುದು. ಹೋದ ಜೀವ ಮತ್ತೆ ಬಂದಿತು. ಚೈತನ್ಯವು ಹುಟ್ಟಿತು. ಶಕ್ತಿಯು ಬಂದಿತು. ನೀನು ಅಳಬೇಡ ”

“ ಒಮ್ಮೆ ನೀವು ಹಸನ್ಮುಖರಾದರೆ, ನಾನು ಅಳುವದಿಲ್ಲ. ”

“ ನಾನು ನಗುತ್ತೇನೆ. ಆದರೆ ನನ್ನ ತಲೆಯನ್ನು ಕೆಳಗಿಡು. ನೀನು ಸ್ವಲ್ಪ ದೂರ ಕೂತುಕೋ ”

“ ನಾಗರಿಗೆ ದೂರದಲ್ಲಿರುವದೇ ಸೇರುವದೇನು ? ಅಡವಿಯಲ್ಲಿರುವ ಚಿಕ್ಕದಾದ ಹೊದರಗಳಲ್ಲಿರುವದೇ ಸೇರುವದೇ ? ದೂರ ಕೂಡುವದಕ್ಕಾಗಿಯೇ ಇಲ್ಲಿಗೆ ಬಂದಿರೇನು ? ದೂರಿಂದ ನಗೆಸಲು ಬಂದಿರೇನು ? ದೂರವಿರುವದು ಶೂರತನವೇನೂ ಅಲ್ಲ. ನೀವು ಅಂಜುವಿರೇಕೆ ? ಆರ್ಯರಿಗೆ ಅಂಜುವಿರೇನು ? ” ಎಂದು ಅವಳು ವಿಚಾರಿಸಿದಳು.

" ಅಂಜಿಕೆಯೆಂದರೆ ನನಗೆ ಗೊತ್ತೇ ಇಲ್ಲ. "

" ಹಾಗಿದ್ದರೆ "

" ನಾಗರು ಮೊದಲು ನೂರಾರುಸಲ ವಿಚಾರ ಮಾಡುವರು. ಕಾಡಿ ಕೂಡುವರು, ಕೂಡಿ ಬಿಡುವವರಲ್ಲ ಅದು ವಜ್ರದ ಬೆಸಿಗೆ "

" ಆರ್ಯರೇನು ಸಂಬಂಧವನ್ನು ಬಿಡುವರೇ ? "

" ನಾನು ನಾಗರ ಬಗ್ಗೆ ಹೇಳಿದೆ. ಆರ್ಯರದು ನಿನಗೆ ಗೊತ್ತು. "

" ಆರ್ಯರೂ ಧೃಢಪ್ರತಿಜ್ಞರಿರುತ್ತಾರೆ. ಸ್ಫೂರ್ತಿದಾಯಕವಾದ ಸಾವಿತ್ರಿಯ ಕಥೆಯನ್ನು ನಾಗರು ಕೇಳಿಲ್ಲವೇನು ? "

" ಕೇಳಿದ್ದಾರಷ್ಟೇ ಅಲ್ಲ, ವಟಸಾವಿತ್ರಿಯ ವೃತವನ್ನು ಸಹ, ನಾಗ ಸ್ತ್ರೀಯರು ಆಚರಿಸುತ್ತಾರೆ. ಒಳ್ಳೆಯದನ್ನೆಲ್ಲ ನಾಗರು ತಕ್ಕೊಳ್ಳುತ್ತಾರೆ. ಅದು ಆರ್ಯರದೇ ಇರಲಿ, ಇನ್ನಾರದಾದರೂ ಇರಲಿ. ಅದರ ವಿಚಾರವನ್ನು ಅವರು ಮಾಡುವದಿಲ್ಲ. "

" ತಿರುಕನು ಸಿಕ್ಕದ್ದನ್ನು ತಕ್ಕೊಳ್ಳುವನು. ಆದರೆ ಶ್ರೀಮಂತನು ಉತ್ತಮವಾದ ವಸ್ತುಗಳನ್ನಷ್ಟೇ ಸಂಗ್ರಹಿಸುವನು. "

" ತಿರುಕರಾರು, ಶ್ರೀಮಂತರಾರು ? ನಾವೆಲ್ಲರೂ ತಿರುಕರೂ ಹೌದು, ಶ್ರೀಮಂತರೂ ಹೌದು. ಕೆಲವು ವಿಷಯಗಳಲ್ಲಿ ಆರ್ಯರು ಬಲ್ಲಿದರಿದ್ದರೆ, ಬೇರೆ ಕೆಲವು ವಿಷಯಗಳಲ್ಲಿ ನಾಗರು ಮಿಗಿಲಾಗಿದ್ದಾರೆ. ಎಲ್ಲವನ್ನೂ ಬಲ್ಲವರಾರೂ ಇಲ್ಲ. ಅಹಂಕಾರಿಗಳಾಗಬಾರದೆಂದೇ, ದೇವರು ಎಲ್ಲರನ್ನು ಅಪೂರ್ಣವಾಗಿ ಇಟ್ಟಿದ್ದಾನೆ. ಇದು ಮಾನವನಿಗೆ ಎಂದು ತಿಳಿಯುವದೋ ಅದೇ ಸುದಿನವು "

" ಆರ್ಯರ ವಿವಾಹನೀತಿಯು ಸ್ಥಿರವಾದದ್ದಲ್ಲವೇನು ? " ಎಂದು ವತ್ಸಲೆಯು ಪುನಃ ಪ್ರಶ್ನಿಸಿದಳು.

" ನಾನು ಹಾಗೆ ಹೇಳಲಿಲ್ಲ. ಎಲ್ಲೆಲ್ಲಿ ನಾಗರಿಗೂ ಆರ್ಯರಿಗೂ ಸಂಬಂಧ ಬಂದಿದೆಯೋ ಅಲ್ಲೆಲ್ಲ, ಹೀಗಿಯೇ ಕಾಣಿಸುತ್ತದೆ. ಶ್ರೇಷ್ಠರಾದ ಆರ್ಯರೇ ಈ ಪ್ರಕಾರ ಮಾಡಿದ್ದಾರೆ. ಅವರು ನಾಗಕನ್ನೆಯರನ್ನು ಕ್ಷಣಕಾಲ ಭೋಗಿಸಿ, ಚಿಟ್ಟುಬಿಡುತ್ತಾರೆ. ದುರ್ದೈವಿಗಳಾದ ಆ ನಾಗಕನ್ನೆಯರು

ಆ ಕ್ಷಣಕಾಲದ ಸುಖವನ್ನೇ ನೆನೆಯುತ್ತ, ತಮ್ಮ ಜೀವನವನ್ನು ಕಳೆಯುತ್ತಿದ್ದಾರೆ. ಆರ್ಯರು ತಾವು ಜೇತೃಗಳೂ ಶ್ರೇಷ್ಠರೂ ಎಂದು ಬಗೆದು, ಆ ಭಾವನೆಯಿಂದಲೇ ನಾಗರ ಸಂಗಡ ವರ್ತಿಸುತ್ತಿದ್ದಾರೆ. ನಾಗಕನ್ಯೆಯರು ಭಾವಶೂನ್ಯವಾದ ವಸ್ತುವೆಂದೂ, ಕೇವಲ ವಿಲಾಸದ ವಸ್ತುವೆಂದೂ ಬಗೆಯುತ್ತಾರೆ. ಇದಕ್ಕಿಂತ ಹೆಚ್ಚಾಗಿ ಬೆಲೆಯನ್ನು ಅವರಿಗೆ ಕೊಡರು. ಆಸ್ತಿಕ ಋಷಿಯ ತಂದೆಯು ಮಾತ್ರ ಅಸಾಧಾರಣ ಧೈರ್ಯವನ್ನು ತೋರಿಸಿದನು. ಅವನು ನಾಗಕನ್ಯೆಯೊಡನೆ ಲಗ್ನವಾದನು. ಆದರಿಂದಲೆ ಆಸ್ತಿಕನು ಧ್ಯೇಯವಾದಿಯಾಗಿದ್ದಾನೆ. ತಂದೆಯ ಧ್ಯೇಯವಾದವು ಅವನಿಗೆ ಬಲವನ್ನೀಯುತ್ತದೆ. ಆದರೆ ವತ್ಸಲೆ, ನಿನ್ನ ಮಾತೇ ಬೇರೆಯಾಗಿದೆ. ನೀನು ಆರ್ಯಕನ್ಯೆ ಇರುವಿ. ಇನ್ನೂ ಆರ್ಯಕನ್ಯೆಯರು ಹೆಚ್ಚಾಗಿ ನಾಗರೊಡನೆ ಮದುವೆಯಾಗಿಲ್ಲ. ಜೇತೃಗಳೆಂದು ತಿಳಿದ ಆರ್ಯರಿಗೆ, ನಾಗರೊಡನೆ ಮದುವೆಯಾಗುವದು ಕೀಳುತನ ವೆನಿಸುತ್ತದೆ. ಯಾರಾದರೊಬ್ಬ ಆರ್ಯಕನ್ಯೆಯು ನಾಗನೊಡನೆ ವಿಹಾಹ ಮಾಡಿಕೊಂಡರೆ, ಆರ್ಯರು ಆ ಕುಟುಂಬವನ್ನೇ ಪೀಡಿಸುತ್ತಾರೆ. ಆದಕಾರಣ ನೀನು ಇನ್ನೂ ವಿಚಾರಮಾಡು. ಅವಸರದಿಂದ ಮಾಡಿದ್ದೆಲ್ಲವೂ ಕೆಡುವದು. ಯಾಕೆ? ನಿನ್ನ ಮೋರೆಯು ಹೀಗೇಕೆ ಕಪ್ಪಿಟ್ಟಿತು. ! ನಗಲು ನನಗೆ ಹೇಳಿದೆ, ಈಗ ನೀನೇ ನಗಬಾರದೇ"

"ಮೈಮೇಲೆ ಬೆಂಕಿಯ ಮಳೆಯನ್ನು ಸುರುವಿ, ನಗು ಎನ್ನುವಿರಾ"

"ಹಾಗಾದರೆ ನಾನು ಏನು ಮಾಡಲಿ ? ಕಾರ್ತೀಕನಿದ್ದಾನೆ. ಒಳ್ಳೆಯುವನಿದ್ದಾನೆ, ಶಾಂತವೃತ್ತಿಯುವನೂ ಪ್ರೇಮ ಸ್ವಭಾವದವನೂ ಇದ್ದಾನೆ. ಏಕೆ ? ಕಾರ್ತೀಕನು ಚನ್ನಾಗಿಲ್ಲವೇ ?"

"ಕಾರ್ತೀಕ ಕೆಡುಕಲ್ಲ. ಶ್ರಾವಣ ಕೆಟ್ಟಿಲ್ಲ ಮಾಘವೂ ಕೆಟ್ಟಿದ್ದಲ್ಲ. ಫಾಲ್ಗುಣವೂ ಏನು ಕೆಟ್ಟ ? ಎಲ್ಲವೂ ಚನ್ನಾಗಿವೆ. ಆದರೆ ಕೋಕಿಲೆಗೆ ಧ್ವನಿಯು ಬರಬೇಕಾದರೆ ವಸಂತನೇ ಬೇಕು. ನಿಮಗೆ ನಿಜ ಸಂಗತಿಯನ್ನು ತಿಳಿಸಲಾ!" ನಮ್ಮ ಅಣ್ಣ ತಮ್ಮಂದಿರು ನಮ್ಮ ವಿರುದ್ಧವಾಗಿ ಎದ್ದರೂ ಕೂಡ, ನಾವೇನು ನಾಗರೊಡನೆ ಮದುವೆಯಾಗದೆ ಬಿಡುವವರಲ್ಲ, ಎಂದು ಆರ್ಯಕನ್ಯೆಯರು ಬಂಡು ಹೂಡುವವರಿದ್ದಾರೆ. ಕುರುಕ್ಷೇತ್ರದ ಯುದ್ಧದಿಂದ

ಆರ್ಯರಲ್ಲಿ ಗಂಡು ಸಂತತಿಯು ಕೊರತೆಯಾಗಿದೆ. ಹೆಣ್ಣು ಸಂತತಿಯು ಹೆಚ್ಚಾಗಿದೆ. ಹೆಚ್ಚಾದ ಈ ಯುವತಿಯರ ಗತಿಯೇನು ? ನನ್ನ ಅಜ್ಜಿಯನ್ನು ಕೇಳಿರಿ. ಆ ಕಾಲದಲ್ಲಿ ಸಹಸ್ರಾರು ಆರ್ಯಕನ್ನೆಯರು ನಾಗರನ್ನು ಮದುವೆಯಾದರು. ಅದನ್ನು ಕಂಡು ವೃದ್ಧ ವಕ್ರತುಂಡನು? ಚಡಪಡಿಸುತ್ತಿದ್ದಾನೆ. ನೀವು ಅವನ ಹೆಸರನ್ನು ಕೇಳಿರಬಹುದು. ನಾಗರ ದ್ವೇಷದ ಉಪದೇಶವನ್ನು ಗೈಯ್ಯುವದಕ್ಕಾಗಿ ನಾನಿದ್ದ ಆಶ್ರಮಕ್ಕೆ ಒಮ್ಮೆ ಆವನು ಬಂದಿದ್ದ. ನಾನು ಅವನ ಬಾಯಿ ಮುಚ್ಚಿಸಿದೆ. ಅವನು ಕಿಡಿಕಾರುತ್ತ ಹೊರಟು ಹೋದನು. ಗುರುದೇವನು ನನ್ನನು ಹೊಗಳಿದನು. ಆ ಸಾವಿರಾರು ಆರ್ಯಕನ್ನೆಯರ ಸಂತತಿಯನ್ನು ಹೀನವೆಂದು ಭಾವಿಸಬೇಕೆ ? ದೂರವಿದ್ದ ಸೃಷ್ಟಿಯನ್ನು ಹತ್ತಿರದಲ್ಲಿ ತರುವವರೇ ನಾವು, ಸ್ತ್ರೀಯರು. ಆ ವಕ್ರತುಂಡನ ವಿರುದ್ಧವಾಗಿ ಅನೇಕ ಆರ್ಯಮಾತೆಯರು ಪ್ರಚಾರಕ್ಕೆ ಹೊರಡುವವರಿದ್ದಾರೆ. ಮಕ್ಕಳ ಕುತ್ತಿಗೆ ಕೊಯ್ಯುವದು ಆದಾವ ತಾಯಿಯ ಕೈಯಿಂದಾದೀತು ? ತಾಯಂದಿರು ಹಾಗು ಅಕ್ಕತಂಗೆಯರು ಮನಸ್ಸು ಮಾಡಿದರೆ,ಜಗತ್ತಿನ ದ್ವೇಷವೆಲ್ಲ ಶಾಂತವಾದೀತು. ನಾಗಾನಂದ, ಈ ದ್ವೇಷದ ವಿರುದ್ಧವಾಗಿ ಹೋರಾಡುವ ಪ್ರತಿಜ್ಞೆಯನ್ನು ನಾವು ಮಾಡೋಣ. ಕೈಯಲ್ಲಿ ಕೈ ಹಾಕೋಣ. ಭರತಖಂಡದಲ್ಲೆಲ್ಲ ಪ್ರೇಮದ ಮಳೆಯನ್ನು ಸುರಿಸೋಣ. ಆಸ್ತಿಕನ ಧ್ಯೇಯವನ್ನು ಪ್ರಚಾರಮಾಡೋಣ. ಈ ಧ್ಯೇಯ ಸಾಧಿಸುವಾಗ ಬರುವ ಸಂಕಟಗಳನ್ನೆದುರಿಸೋಣ. ಪ್ರಸಂಗ ಬಿದ್ದರೆ ಬೆಂಕಿಯಲ್ಲಿ ಹಾರೋಣ. ಬರುವಿರಾ ? ನನ್ನ ಕೈಯನ್ನು ಹಿಡಿಯುವಿರಾ ? ಹೀಗೆಂದು ಭಾವದ್ರೇಕದಿಂದ ತನ್ನ ಕೈಯನ್ನು ಮುಂದೆ ಮಾಡಿದಳು

ಇಬ್ಬರೂ ಮೌನವಾಗಿದ್ದರು. ಎರಡು ನಕ್ಷತ್ರಗಳು ಭೂಮಿಗಿಳಿದಂತಿತ್ತು. ಹಾಗೂ ಅವರು ನಡಗುತ್ತಿದ್ದರು. ಅವರಿಬ್ಬರೂ ಭಾರತದ ಭವಿಷ್ಯವನ್ನು ಚಿಂತಿಸುತ್ತಿರುವರೇ ? ದೊಡ್ಡ ಧ್ಯೇಯಗಳು ಮೌನದಿಂದಲೇ ಹುಟ್ಟುವವು. ಪರ್ವತವು ಆಕಸ್ಮಾತ್ತಾಗಿ ಸಮುದ್ರದಿಂದ ಹೊರಬರುತ್ತದೆ. ತೇಜಸ್ವಿಯಾದ ದೊಡ್ಡ ನಕ್ಷತ್ರವೊಂದು ಆಕಸ್ಮಾತ್ತಾಗಿ ಆಕಾಶದಲ್ಲಿ ಮಿನುಗು

ತ್ತದೆ. ಸುಂದರವಾದ ಮುತ್ತೊಂದು ಗಂಭೀರವಾದ ಸಮುದ್ರದಿಂದ ಆಕಸ್ಮಾತ್ತಾಗಿ ದಂಡೆಗೆ ಸಿಡಿದು ಬಿದ್ದು ಹೊಳೆಯುತ್ತದೆ.

ಅಜ್ಜಿ ಸುಶ್ರುತೆಯು ಬಂದಳು. ಇಬ್ಬರ ಕಡೆಗೂ ನೋಡುತ್ತ ನಿಂತಳು.

"ನೀವು ಯಾವಾಗ ಬಂದಿರಿ? ನಿಮ್ಮನ್ನು ಇವಳು ಬಹಳ ನೆನಿಸುತ್ತಲಿದ್ದಳು! ತೀರ ಹಣ್ಣಾಗಿದ್ದಳು. ಇತ್ತೀಚೆಗಂತೂ ಇವಳು ಹಾಸಿಗೆಯನ್ನೇ ಹಿಡಿದಿದ್ದಳು. ನೀವು ಬಂದದ್ದು ನೆಟ್ಟಗಾಯಿತು. ಇನ್ನು ಇವಳಿಗೂ ನೆಟ್ಟಗಾದೀತು." ಎಂದಳು ಸುಶ್ರುತೆ.

"ಇವರನ್ನು ನೋಡಿದೊಡನೆಯೇ ನನಗೆ ಶಕ್ತಿ ಬಂದಿತು. ನನ್ನ ಜೇನೆಯೆಲ್ಲ ಓಡಿಹೋಯಿತು. ಪ್ರೀತಿಯ ಮನುಷ್ಯರ ಭೆಟ್ಟಿಯಂದರೆ, ಧನ್ವಂತರಿಯ ದರ್ಶನವಾದಂತೆ. ಅಜ್ಜೀ, ಅವರು ಬಂದವರೇ ಬಾಗಿಲಲ್ಲಿ ಬಿದ್ದುಬಿಟ್ಟರು. ನಾನು ಹೆದರಿದೆ. ಹೋಗಿ ನೋಡುತ್ತೇನೆ, ಇವರು! ನಾನು ಗಾಬರಿಯಾದೆ. ಅವರ ಕಣ್ಣಿಗೆ ನೀರು ಹಚ್ಚಿದೆ, ಹಾಗೂ ಸೆರಗಿನಿಂದ ಗಾಳಿಯನ್ನು ಹಾಕಿದೆ. ಅವರು ಕಣ್ಣು ತೆರೆದರು, ಆಗ ನನಗೆ ಜೀವದಲ್ಲಿ ಜೀವ ಬಂದಂತಾಯಿತು.'' ಎಂದಳಾಕೆ.

''ನನ್ನ ಕಣ್ಣಿಗೆ ಹಚ್ಚಿದ ನೀರು ಎಂಥದು?" ಎಂದನು ನಾಗಾನಂದ.

''ಉಪ್ಪುನೀರು" ಅನಳು ನಗುತ್ತ ಹೇಳಿದಳು.

"ಉಪ್ಪುನೀರನ್ನೇಕೆ ಹಚ್ಚಿದೆ? ನೀನು ಹುಚ್ಚಿಯೇ ಇರುವೆ?" ಎಂದಳು ಅಜ್ಜಿ.

"ಉರಿಯಿತೇನು?" ಆವಳು ವಿಚಾರಿಸಿದಳು.

"ಉಪ್ಪುನೀರು ಉರಿಯುವದಿಲ್ಲ. ಆದರಿಂದ ಕಣ್ಣುಗಳು ಸ್ವಚ್ಛವಾಗುತ್ತವೆ. ಕಣ್ಣುಗಳನ್ನು ತೊಳೆಯುವದಕ್ಕಾಗಿ ದೇವರು ಉಪ್ಪುನೀರಿನ ಸಮುದ್ರವನ್ನೇ ನಿರ್ಮಾಣ ಮಾಡಿದ್ದಾನೆ. ಯಾವ ಬಗೆಯಾಗಿ ಭೀಷ್ಮರಿಗೆ ಪಾತಾಳಗಂಗೆಯ ಇಚ್ಛೆಯಾಗಿತ್ತೋ, ಅದೇ ಪ್ರಕಾರವಾಗಿ ಜನರಿಗೆ ಒಮ್ಮೊಮ್ಮೆ ಹೃದಯದದಲ್ಲಿರುವ ಉಪ್ಪುನೀರಿನ

ಆವಶ್ಯವು ಇರುತ್ತದೆ. ಆದರಿಂದ ಆವರ ಕಣ್ಣುಗಳು ತೆರೆಯುವವು. ಮುಖವು ಅರಳುವದು. ನೀರಸವಾಗಿರುವ ಜೀವನದಲ್ಲಿ ಜೀವ ಬರುವದು. ರಸವು ಉತ್ಪನ್ನವಾಗುವದು." ಎಂದನು ನಾಗಾನಂದ.

"ನೀವೂ ಬೇನೆ ಬಿದ್ದಿದ್ದಿರಾ? ಸೊರಗಿದಂತೆ ಕಾಣುತ್ತೀರಿ?" ಎಂದಳು ಅಜ್ಜಿ.

"ಅವರು ದೂರದಿಂದ ಬಂದಿದ್ದಾರೆ. ಪ್ರವಾಸದಿಂದ ಅವರಿಗೆ ತೊಂದರೆಯಾಗಿರಬಹುದು. ಬೆಳಿಗ್ಗೆ ನೋಡು, ತರುಣರಂತೆ ಕಾಣುವರು. ಅರಳಿದ ದುಂಡುಮಲ್ಲಿಗೆಯ ಹೂವಿನಂತೆ ಕಂಡಾರು?" ಎಂದಳು ನಗುತ್ತ ವತ್ಸಲೆ.

"ಕಪ್ಪು ದುಂಡುಮಲ್ಲಿಗೆಯಂತಲ್ಲವೇ?" ಎಂದು ನಾಗಾನಂದನು ನಕ್ಕನು.

"ಕಪ್ಪು ದುಂಡುಮಲ್ಲಿಗೆ ಇರುವದೇ? ಅದು ನಾಗರ ತೋಟದಲ್ಲಿರುವಂತೆ ಕಾಣುತ್ತದೆ." ಎಂದು ಚೇಷ್ಟೆ ಮಾಡಿದಳು

"ನಾಗರ ತೋಟದಲ್ಲಿ ಎಲ್ಲವೂ ಇರುತ್ತದೆ. ಮನಸ್ಸಿಗೆ ಬಂದದ್ದನ್ನೆಲ್ಲ ಅಲ್ಲಿ ಅರಳಿಸಲು ಶಕ್ಯವಿದೆ. ಎಲ್ಲವೂ ಮನಸ್ಸಿನ ಪರಿಣಾಮ. ಮನಸ್ಸು ತನ್ನ ಬಣ್ಣವನ್ನು ವಸ್ತುವಿಗೆ ಕೊಡುತ್ತದೆ. ಮನಸ್ಸೆಂದರೆ ಜಾದುಗಾರ, ದೊಡ್ಡ ಚಿತ್ರಗಾರ, ಮನಸ್ಸೆಂದರೆ ಬ್ರಹ್ಮದೇವ, ಮನಸ್ಸೆಂದರೆ ಸೃಷ್ಟಿಯ ತತ್ವ. ಸಂಕಲ್ಪವಿಲ್ಲದೆ ಸೃಷ್ಟಿಯಿಲ್ಲ, ಮನವಿಲ್ಲದೆ ಸಂಕಲ್ಪವಿಲ್ಲ." ಎಂದನು ನಾಗಾನಂದ.

"ನೀವೇನು ಆಶ್ರಮದಲ್ಲಿದ್ದಿರೋ? ತತ್ವಜ್ಞಾನಿಯಂತೆ ಮಾತನಾಡುವಿರಿ? ವತ್ಸಲೆಯೂ ಮೊದಲು ಹೀಗೆಯೇ ಮಾತನಾಡುತ್ತಿದ್ದಳು. ಆದರೆ ಆಕೆಯ ಇಂಥ ಮಾತುಗಳು ಈಗ ಮಾಯವಾಗಿವೆ. ಈಗಿನ ಮಾತುಗಳೇ ಬೇರೆ. ಮನುಷ್ಯನು ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಮಾತನಾಡುತ್ತಾನೆ." ಎಂದು ಸುಶ್ಮಿತೆಯು ನುಡಿದಳು.

“ ಆದರೆ ಆ ಎಲ್ಲ ಮಾತುಗಳಲ್ಲಿ ಅವರ ಹೃದಯದ ಬಣ್ಣವು ಒಂದೇ ರೀತಿ ಕಾಣುತ್ತದೆ. ಒಬ್ಬನ ಹೃದಯದ ಬಣ್ಣ, ಆ ಆತ್ಮನ ನಾನಾವಿಧ ಜೀವನದ ದರ್ಶನ. ನಮ್ಮ ಎಲ್ಲ ವ್ಯವಹಾರಗಳಲ್ಲಿ ನಮ್ಮ ಜೀವನದ ಅನಂತ ಪ್ರಕಾರಗಳು ಪ್ರಕಟವಾಗುತ್ತವೆ. ” ಎಂದನು.

“ ತಾವು ಯಾವ ಆಶ್ರಮದಲ್ಲಿದ್ದಿರಿ ? ಹಿಂದಕ್ಕೆ ನಾನು ಆಶ್ರಮದಲ್ಲಿದ್ದೆ ನೆಂದು ನದಿಯ ದಂಡೆಯ ಮೇಲೆ ಕಾರ್ತಿಕನಿಗೆ ಹೇಳಿದ್ದಿರಿ. ” ಎಂದು ವತ್ಸಲೆಯು ಪ್ರಶ್ನಿಸಿದಳು.

“ ಆ ಆಶ್ರಮವು ಈಗ ಇರುವದಿಲ್ಲ. ಆ ಆಶ್ರಮದಲ್ಲಿ ಆರ್ಯ ಹಾಗೂ ಅನಾರ್ಯ ತರುಣರು ವಾಸಿಸುತ್ತಿದ್ದರು. ಒಂದು ದಿವಸ ಆರ್ಯರು ಆ ಆಶ್ರಮದ ಮೇಲೆ ದಂಡೆತ್ತಿ ಬಂದರು. ಆಶ್ರಮದ ಆಚಾರ್ಯರು ಅವರ ಸಮೀಪಕ್ಕೆ ಹೋಗಿ, ‘ ಹತ್ಯೆಯನ್ನು ಮಾಡಬೇಡಿರಿ. ನಾಳೆಯಿಂದ ಆಶ್ರಮವು ಮುಚ್ಚಲ್ಪಟ್ಟೀತೆ ? ಆ ಆಶ್ರಮವು ಮುಚ್ಚಲ್ಪಟ್ಟರೂ ಕೂಡ, ಸತ್ಯವು ತನ್ನಷ್ಟಕ್ಕೆ ತಾನೇ ಪ್ರಸಾರವಾಗುವದು ಸತ್ಯವು ಆಶ್ರಮವನ್ನವಲಂಬಿಸಿಯೇ ಬದುಕುವದಿಲ್ಲ. ಸತ್ಯವು ಸಹಸ್ರಾರು ಮುಖದಿಂದ ಬೆಳೆಯುತ್ತಿರುತ್ತದೆ. ಸತ್ಯದ ಪ್ರಸಾರದ ನೇಮವು ಅತರ್ಕ್ಯವಿದೆ. ಸತ್ಯ ಬದುಕುವದರ ಚಿಂತೆ ನನಗಿಲ್ಲ. ಆಶ್ರಮವು ನಿಲ್ಲಿಸಲ್ಪಟ್ಟಿತೆಂದು ತಿಳಿಯಿರಿ ’ ಎಂದು ಉಪದೇಶಿಸಿ ನಮಗೆ ಅಪ್ಪಣೆಯನ್ನು ಕೊಟ್ಟರು. ಆಗ ನಮಗೆ ಅತ್ಯಂತ ದುಃಖವಾಯಿತು. ಆಗ ಅವರು ‘ ನೀವು ಒಬ್ಬೊಬ್ಬರು ಒಂದೊಂದು ಆಶ್ರಮವಾಗಿರಿ. ನೀವು ಎಲ್ಲೆಲ್ಲಿ ಹೋಗುವಿರೋ ಅಲ್ಲಲ್ಲಿ ಆಶ್ರಮದ ಧ್ಯೇಯಗಳನ್ನು ನಿರ್ಭಯದಿಂದ ಹಾಗೂ ನಮ್ರರೀತಿಯಿಂದ, ಪ್ರೇಮದಿಂದ ಹಾಗೂ ನಿಸ್ಪೃಹ ರೀತಿಯಿಂದ ಅವುಗಳನ್ನು ಪ್ರಸಾರಮಾಡಿರಿ. ತಾವು ದೂರ ಇದ್ದರೂ ಸಮೀಪವೇ ಇರುವಿರಿ. ಒಂದೇ ಧ್ಯೇಯದಿಂದ ಬಂಧಿಸಲ್ಪಟ್ಟ ನಾವು ಒಂದೆಡೆಯೇ ಇದ್ದಹಾಗೆ. ಜ್ಞಾನಮಯ ಸಂಬಂಧಕ್ಕೆ, ಚಿನ್ಮಯ ಸಂಬಂಧಕ್ಕೆ ದೇಶ, ಕಾಲಗಳು ಪ್ರತಿಬಂಧಕವಾಗುವದಿಲ್ಲ ’ ಎಂದರು. ನಮ್ಮ ಆಚಾರ್ಯರು ಎಲ್ಲಿಗೆ ಹೋದರೆಂಬುದು ತಿಳಿದಿಲ್ಲ. ಆದರೆ ಕೆಲವರು ಅವರ ಅವತಾರವು ಮುಗಿಯಿತೆಂದು ಹೇಳುತ್ತಾರೆ. ಅವರೇ

ನನ್ನ ತಂದೆ ತಾಯಿಗಳು. ಅವರು ನನಗೆ ಜ್ಞಾನವನ್ನು ಕೊಟ್ಟರು. ಪ್ರೇಮವನ್ನು ತೋರಿಸಿದರು. ಸರ್ವ ವಿದ್ಯಾರ್ಥಿಗಳ ಮೇಲೆ ಅವರ ಲೋಭ. ಆದರಲ್ಲಿಯೂ ನನ್ನ ಮೇಲಂತೂ ವಿಶೇಷ. ಏಕೆಂದರೆ ನಾನು ಚಿಕ್ಕವ ಹಾಗೂ ಪರದೇಶಿ. ನಾನು ಈ ವಿಶಾಲವಾದ ಜಗತ್ತಿನಲ್ಲಿ ಒಬ್ಬನೇ ಒಬ್ಬ. ಎಲ್ಲಿಯಾದರೂ ಒಂದು ಬೋರೆಹಣ್ಣು ಸಿಕ್ಕರೂ ಕೂಡ ಅವರು ಅದನ್ನು ನನ್ನ ಸಲುವಾಗಿ ತೆಗೆದಿಡುತ್ತಿದ್ದರು. ನಾನು ಎಷ್ಟೆಂದು ಹೇಳಲಿ ಅವರ ನೆನಪನ್ನು ! ಒಂದು ದಿವಸ ಕಟ್ಟಿಗೆಯನ್ನು ತರಲು ಅಡವಿಗೆ ಹೋಗಿದ್ದೆವು. ನಮ್ಮಲ್ಲಿ ಒಬ್ಬ ನಾಗಕುಮಾರನು ತೀರ ಅಶಕ್ತನಿದ್ದನು. ಆದರೆ ಉಳಿದವರೆಲ್ಲರೂ ದೊಡ್ಡ ಹೊರೆಯನ್ನು ಅವನೂ ಹೊರಬೇಕೆಂದು ಆಗ್ರಹ ಪಡಿಸಿದರು. ಅವನು ದಣಿದನು. ಮೆಲ್ಲಗೆ ನಡೆಯ ಹತ್ತಿದನು. ನಾನೂ ಮೆಲ್ಲಗೆ ನಡೆದೆ. ಉಳಿದವರೆಲ್ಲರೂ ಮುಂದೆ ಹೋದರು. ನಾನು ನನ್ನ ಹೊರೆಯನ್ನು ಕೆಳಕ್ಕೆ ಒಗೆದೆ. ಅವನಿಗೂ ಒಗೆಯಲು ಹೇಳಿದೆ. ಅವನು ಹೊರೆಯಲ್ಲಿಯ ಕಟ್ಟಿಗೆಗಳನ್ನು ತೆಗೆದು ನನ್ನ ಹೊರೆಯಲ್ಲಿ ಕಟ್ಟಿಕೊಂಡೆ. ಅದನ್ನು ಹಗರು ಮಾಡಿದೆ ಅವನು ಬೇಡವೆನ್ನುತ್ತಿದ್ದ. ಉಳಿದವರು ಛೇಡಿಸುವರು, ಹೆಸರಿಡುವರು, ಎಂದು ಅವನು ಅಂದ. ನೋಡೋಣ ಯಾರು ಹೆಸರಿಡುತ್ತಾರೆ? ಅಂಜಬೇಡ ಎಂದು ನಾನು ಹೇಳಿದೆ. ಚಿಕ್ಕದಾದ ಹಾಗು ಹಗುರಾದ ಹೊರೆಯನ್ನು ಅವನ ತಲೆಯ ಮೇಲೆ ಹೊರಿಸಿ, ಆ ದೊಡ್ಡ ಹೊರೆಯನ್ನು ನಾನು ಹೊತ್ತುಕೊಂಡು ನಡೆದೆವು. ಆಶ್ರಮದಲ್ಲಿ ಆಚಾರ್ಯರು ನಮ್ಮ ದಾರಿಯನ್ನು ನೋಡುತ್ತಿದ್ದರು. ಅವರಿಗೆ ಸಮಾಧಾನವಾಗಲೊಲ್ಲದು. ನಮ್ಮನ್ನು ನೋಡುವದಕ್ಕಾಗಿ ಅವರೇ ಹೊರಟರು. ಅವರೇ ಬಂದರು, ಬಂದರು ಎಂದು ಹುಡುಗರು ಚಪ್ಪಾಳೆಬಾರಿಸಿದರು. ನನ್ನ ತಲೆಯ ಮೇಲಿನ ದೊಡ್ಡ ಹೊರೆಯನ್ನು ನೋಡಿ ಆಚಾರ್ಯರು ಇಷ್ಟು ದೊಡ್ಡ ಹಾಗು ಜಡವಾದ ಹೊರೆಯನ್ನು ಏಕೆ ತರಬೇಕು? ಎಂದರು. ನಾನು ಸುಮ್ಮನಿದ್ದೆ. ಆದರೆ ಹಿಂದುಗಡೆ ಅವರಿಗೆ ಎಲ್ಲ ಸಂಗತಿಯನ್ನು ತಿಳಿಸಿದೆ. ಅವರಿಗೆ ಕೆಡುಕೆನಿಸಿತು. ಎರಡನೆಯ ದಿವಸ ಪ್ರಾರ್ಥನೆಯ ಸಮಯದಲ್ಲಿ ಮಕ್ಕಳಿರಾ, ಸಮಾನತೆ, ಸಮಾನತೆ ಎಂದು ನೀವು ಅನ್ನುವಿರಿ. ಆದರೆ ಅದರ ನಿಜವಾದ ಅರ್ಥವೇನು ? ನಾವು ಅನೇಕ ಶಬ್ದಗಳನ್ನು ಉಚ್ಚರಿಸುತ್ತೇವೆ.

ಆದರೆ ಅವುಗಳ ಅರ್ಥವನ್ನು ನಾವು ಅರಿಯುವದಿಲ್ಲ. ವೇದಾಭ್ಯಾಸ ಮಾಡು ವಾಗ ಒಂದು ಸ್ವರವನ್ನು ತಪ್ಪಿದರೆ, ಅದರ ಅರ್ಥವು ಹೇಗೆ ವಿಪರೀತವಾಗುವ ದೆಂಬುದನ್ನು ನೀವು ತಿಳಿದಿರುವಿರಿ. ಸ್ವತಂತ್ರತೆ, ಸಮಾನತೆ ಈ ಶಬ್ದ ಗಳನ್ನು ನೀವು ಮೇಲಿಂದ ಮೇಲೆ ಉಪಯೋಗಿಸುವಿರಿ. ಸಮಾನತೆಯೆಂದರೆ ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವದು. ಎಲ್ಲರೊಡನೆ ಸಮದೃಷ್ಟಿ ಯಿಂದ ನಡೆಯುವದು ಅಂದರೆ ಇದರ ಅರ್ಥವೇನು? ಚಿಕ್ಕಮಕ್ಕಳಿಗೂ ಕೂಡ ದೊಡ್ಡವರಷ್ಟೇ ಕೆಲಸವನ್ನು ಹಚ್ಚುವದು ಎಂದೋ? ಈ ಸಮಾ ನತೆಯು ಮಕ್ಕಳಿಗೆ ಮಾರಕವಾಗುವದು. ನನ್ನಂತಹ ವೃದ್ಧನಿಗೆ ತರುಣ ರಷ್ಟು ಕೆಲಸವನ್ನು ಕೊಡುವದು ಸಮಾನತೆಯೇ. ಸಮಾನತೆಯೆಂದರೆ ಯಾವನ ವಿಕಾಸಕ್ಕೆ ಏನು ಬೇಕಾಗುವದೋ ಅದನ್ನು ಒದಗಿಸುವದು ಎಂದರ್ಥ. ಯಾರ ವಿಕಾಸಕ್ಕೂ ಅದು ಅಡ್ಡಿಯಾಗಬಾರದು. ನಮ್ಮ ಆಶ್ರಮದಲ್ಲಿ ಒಬ್ಬ ಅಶಕ್ತ ಹುಡುಗನಿದ್ದರೆ, ಅವನಿಗೆ ಸ್ವಲ್ಪ ಬೇರೆ ಆಹಾರ ವನ್ನು ಕೊಡಬೇಕು. ಅವನಿಗೆ ಸ್ವಲ್ಪ ಹೆಚ್ಚು ಹಾಲನ್ನು ಕೊಟ್ಟರೆ, ಸಮಾ ನತೆಯು ನಷ್ಟವಾಯಿತೆ? ನೀವು ಆ ಆಶಕ್ತ ಪದ್ಮನಾಭನಿಗೆ ಜಡವಾದ ಹೊರೆಯನ್ನು ಹೊರಲು ಹಚ್ಚಿದ್ದೇಕೆ? ಅದು ಅವನಿಗೆ ಹೊರಲು ಆಗ ಲೊಲ್ಲದು. ಅವನು ದಣಿದ. ಒಂದು ವೇಳೆ ನಾಗಾನಂದನು ನಿಂತು, ತನ್ನ ಮನಸ್ಸಿನ ದೊಡ್ಡಿಸ್ತನವನ್ನು ತೋರಿಸದೇ ಇದ್ದರೆ, ಆ ಪದ್ಮನಾಭನ ವಿಷಯದಲ್ಲಿ ಅಂತಃಕರಣವನ್ನು ತೋರಿಸದೆ ಇದ್ದರೆ, ಆ ಬಡಪಾಯಿಯು ಅಲ್ಲಿಯೇ ಬೀಳುತ್ತಿದ್ದ. ಸೂರ್ಯನ ಪ್ರಖರ ಬಿಸಿಲಿಗೆ ಸತ್ತು ಹೋಗುತ್ತಿದ್ದ. ಇನ್ನೊಮ್ಮೆ ಹೀಗೆ ಮಾಡಬೇಡಿರಿ. ಯಾರಿಗೆ ಎಷ್ಟು ಶಕ್ತಿಯಿದೆಯೋ ಅಷ್ಟೆ ಅವರಿಗೆ ಕೊಡಬೇಕು. ನಾಗಾನಂದನು ತುಂಬಿದ ನದಿಯಲ್ಲಿ ಧುಮುಕುತ್ತಾ ನೆಂದು ಸರ್ವರಿಗೂ ಸಾಯಲು ಹೇಳಲೋ? ಆದರೆ ನಿಶ್ಚಯವಾಗಿಯೂ ಆ ಶಕ್ತಿಯು ಎಲ್ಲರಲ್ಲಿಯೂ ಬರಬೇಕೆಂದು, ನಾವು ಪ್ರಯತ್ನಿಸಲೇ ಬೇಕು. ನಾವು ದುರ್ಬಲತೆಯ ಉಪಾಸಕರೆಂದೂ ಆಗ ಕೂಡದು. ತಮಗೆ ಬಹಳ ಕೆಲಸಬೀಳಬಾರದು, ಎಲ್ಲರೂ ತನ್ನವಿಷಯಕ್ಕೆ ದಯವುಳ್ಳವರಾಗಬೇಕು. ತನಗೆ ಸುಕುಮಾರ ನೆನ್ನಬೇಕು, ಎಂಬ ಭಾವನೆಗಳನ್ನು ನಾವು ತ್ಯಜಿಸ

ಬೇಕು. ತಾರತಮ್ಯವನ್ನು ನಾವು ಅರಿಯಬೇಕು. ನಮ್ಮ ಕೈಬೆರಳುಗಳು ಐದೂ ಸರಿಯಾಗಿಲ್ಲ. ಅವೆಲ್ಲವುಗಳನ್ನು ಕಡಿದು ಸಮಮಾಡುವದು ಸಮಾನತೆಯೇ? ಅದು ಮೂರ್ಖತನವು. ಆದರೆ ಯಾವ ಬೆರಳಿಗೆ ಅವರ ಬೆಳವಣಿಗೆಗೆ ಹೃದಯದಲ್ಲಿಯ ಎಷ್ಟು ರಕ್ತವು ಅವಶ್ಯವೋ ಅಷ್ಟನ್ನು ಹೃದಯವು ಪೂರೈಸುವದು. ಸಮಾನತೆಯ ತತ್ವವನ್ನು ಚೇಷ್ಟೆ ಮಾಡಬಾರದು. ಅದರಂತೆಯೇ ಸ್ವಾತಂತ್ರ್ಯದ ತತ್ವ. ಇವುಗಳ ನಿಜವಾದ ಅರ್ಥವನ್ನು ಎಷ್ಟು ಜನರು ತಿಳಿದಿರುವರೋ ದೇವರೇ ಬಲ್ಲ ಸ್ವಾತಂತ್ರ್ಯವೆಂದರೆ ಸಂಯಮ. ಸ್ವಾತಂತ್ರ್ಯವೆಂದರೆ ಸ್ವೈರಾಚಾರವಲ್ಲ. ಅಸಂಯಮಿ ಸ್ವಾತಂತ್ರ್ಯವು, ಮಾರಕವಿರುತ್ತದೆ. ಸಂಯಮವು ತಾರಕವಿದೆ. ನಿಮಗೆ ವಾಸನೆಗಳನ್ನು ನಿಮ್ಮ ವಶದಲ್ಲಿಟ್ಟುಕೊಳ್ಳಬೇಕಾಗಿದ್ದರೆ ವಾಸನೆಗಳನ್ನು ಸಂಯಮ ಮಾಡುವ ಸ್ವಾತಂತ್ರ್ಯವು ನಿಮಗೆ ಬೇಕು. ಮನುಷ್ಯನ ಯೋಗ್ಯತೆಯು ಅವನು ತನ್ನ ಭೋಗಗಳಿಗೂ ಇಂದ್ರಿಯ ಸುಖಗಳಿಗೂ ತನ್ನ ಸ್ವಾರ್ಥಕ್ಕೂ ಎಷ್ಟು ಬೆಲೆ ಕೊಡುವನೋ ಅದನ್ನೇ ಅದು ಅವಲಂಬಿಸಿದೆ. ಅವನು ಸ್ವಾತಂತ್ರ್ಯದ ದಾಸನಿರುವನೋ ಅಥವಾ ಸ್ವಾಮಿಯಿರುವನೋ. ಎಂಬುದರ ಮೇಲೆಯೇ ಅವನ ಸ್ವಾತಂತ್ರ್ಯದ ಬೆಲೆಯಿದೆ' ಹೀಗೆ ಅಂದು, ಅವರು ತಮ್ಮ ಪ್ರವಚನದಲ್ಲಿ ಎಷ್ಟೋ ಮಾತುಗಳನ್ನು ಹೇಳಿದರು. ಅವೆಲ್ಲವೂ ನನ್ನ ಕಿವಿಯಲ್ಲಿ ಇನ್ನೂ ಧ್ವನಿಗೊಡುತ್ತಲಿವೆ. ನಾನು ಬಹಳ ದಣಿದದ್ದರಿಂದ ನನ್ನ ಕಾಲಿಗೆ ಎಣ್ಣೆಯನ್ನು ಹಚ್ಚಿ ತಿಕ್ಕ ಹತ್ತಿದರು. ಆ ದೊಡ್ಡ ವಿಭೂತಿಯು ನನಗೆ ತಾಯಿ. ಅವರು ಎಲ್ಲಿರಬಹುದು? ಅವರು ನನಗೆ ಯಾವಾಗ ಭೆಟ್ಟಿಯಾಗುವರು? ವತ್ಸಲೇ, ಈ ನಾಗನಂದನನ್ನು ಅವರೇ ಮೂರ್ತಿಗೊಳಿಸಿದರು. ಚಿಕ್ಕಂದಿನಲ್ಲಿ ನನ್ನ ತಾಯಿಯು ಈ ಇಬ್ಬರೂ ತಾಯಂದಿರು ನನಗೆ ಮೂರ್ತ ಸ್ವರೂಪವನ್ನು ಕೊಟ್ಟಿದ್ದಾರೆ. ನನ್ನ ಜೀವನದಲ್ಲಿ ರಸವನ್ನು ತುಂಬಿದ್ದಾರೆ" ಎಂದು ಮಾತನಾಡುತ್ತಾಡುತ್ತ ಅವನ ಕಂಠವು ಬಿಗಿದು ಬಂದಿತು.

"ಇಂತಹ ಈ ಪವಿತ್ರವಾದ ಕೊಡವನ್ನು ತಲೆಯ ಮೇಲಿಟ್ಟುಕೊಂಡು ನನಗೆ ಕುಣಿಯಗೊಡು. ನಿನ್ನ ಜೀವನವನ್ನು ನಾನು ಪೂಜಿಸುವೆ.

ಅದನ್ನು ನನ್ನದನ್ನಾಗಿ ಮಾಡಿಕೊಳ್ಳುವೆ. ನಿನ್ನ ತುಂಬಿದ ಕೊಡದಲ್ಲಿಯ ರಸವನ್ನೆಲ್ಲ ನನ್ನ ಜೀವನದಲ್ಲಿ ಸುರುವು. ನಿನ್ನದಂತೂ ಬರಿದಾಗುವದಿಲ್ಲ. ಆದರೆ ನನ್ನ ಜೀವನವು ಮಾತ್ರ ಅರಳುವದು" ಎಂದಳು ವತ್ಸಲೆ.

" ಈಗ ಊಟಮಾಡಿರಿ. ಬಿಸಿ ಬಿಸಿ ರೊಟ್ಟಿ ಹಾಗೂ ಹಾಲನ್ನು ಊಟ ಮಾಡಿರಿ. ಏಳಿರಿ, ಏಳಿರಿ. ವತ್ಸಲೆ! ಎಬ್ಬಿಸು ಅವರನ್ನು " ಎಂದು ಪ್ರೇಮ ದಿಂದ ಅಜ್ಜಿಯು ಮಾತನಾಡಿದಳು.

" ಒಳ್ಳೇದು ಏಳುವೆ. ಈಗ ಹತ್ತು ಹರದಾರಿಯನ್ನು ಓಡಬಲ್ಲೆ " ಎಂದಳು ವತ್ಸಲೆ.

ವತ್ಸಲೆ ಹಾಗು ನಾಗಾನಂದರಿಬ್ಬರೂ ಊಟಕ್ಕೆ ಕುಳಿತರು. ಅವರಿಬ್ಬರ ಆನಂದಕ್ಕೆ ಮಿತಿಯಿರಲಿಲ್ಲ. ಅವರ ಮುಖಗಳು ಅರಳಿದ್ದವು. ಅವರ ನಗೆಯು ಕೋಣೆಯನ್ನೆಲ್ಲ ತುಂಬಿತ್ತು. ಸುಶ್ರುತೆಯ ಮೋರೆಯ ಮೇಲೂ ಪ್ರಸನ್ನತೆಯು ತೋರುತ್ತಿತ್ತು. ಯಾರೂ ಮಾತನಾಡುತ್ತಿರಲಿಲ್ಲ. ಮೆಲ್ಲಗೆ ನಾಗಾನಂದನು ವತ್ಸಲೆಯ ಕಡೆಗೆ ನೋಡುವನು. ಅವನ ತುತ್ತು ಕೆಳಗೆ ಬೀಳು ತ್ತಿತ್ತು. ಅದರಂತೆಯೇ ಅವನನ್ನು ತಪ್ಪಿಸಿ ಅವಳು ನೋಡುವಳು. ಸುಶ್ರುತೆಗೆ ಇದನ್ನು ನೋಡಿ. ನಗೆ ಬರುತ್ತಿತ್ತು.

" ಅಜ್ಜೀ, ಯಾಕೆ ನಗುತ್ತಿ ? ನಿನ್ನ ಊಟಗೀಟ ನನಗೇನೂ ಬೇಡ. ನೀನು ನಗುವಿ, ನನ್ನನ್ನು ನಗಿಸುವಿ ನಾನು ಏಳಲಾ " ಎಂದು ಸಿಟ್ಟಿಗೆದ್ದಂತೆ ನಟಿಸಿದಳು ವತ್ಸಲೆ.

" ಹೊಟ್ಟೆ ತುಂಬಿದಂತೆ ಕಾಣುತ್ತದೆ. ಆದ್ದರಿಂದಲೇ ಊಟ ಬೇಡ ವಾಗಿದೆ " ಎಂದಳು ಅಜ್ಜಿ

" ಅವರದೂ ಕೂಡ ತುಂಬಿರುವದೇ ? ಅವರಂತೂ ಬಹಳ ದಣಿದು ಬಂದಿದ್ದಾರೆ. ಅವರ ರೊಟ್ಟಿ ಏಕೆ ಸವಿಯಲೊಲ್ಲದು ? " ಎಂದಳು ವತ್ಸಲೆ.

" ಅತಿ ಶ್ರಮದಿಂದ ಹಸಿವೆಯು ಸಾಯುತ್ತದೆ " ಎಂದನು ನಾಗಾ ನಂದನು.

“ ಅತಿ ಹಸಿವೆಯಿಂದಲೂ ಸಾಯುತ್ತದೆ ” ಎಂದು ನಗುತ್ತ ಸುಶ್ರುತೆ ಸುರಿದಳು.

“ ನೀವು ಹೊಟ್ಟೆತುಂಬ ಊಟಮಾಡಿರಿ ” ವತ್ಸಲೆಯು ಎಂದಳು.

“ ಅವರಿಗೆ ಇನ್ನೂ ಸಂಕೋಚವೆನಿಸುತ್ತಿರಬಹುದು ” ಎಂದಳು ಸುಶ್ರುತೆ.

‘ ಸಂಕೋಚವೇತರದು ? ಸಂಕೋಚವೆನಿಸುತ್ತಿದ್ದರೆ ಇಲ್ಲಿ ಬರುತ್ತಿದ್ದರೆ ! ಏನು ತಾವು ಬರುತ್ತಿದ್ದರಾ ! ನಗಬೇಡಿರಿ, ನಿಜಹೇಳಿರಿ ’ ಎಂದಳು ವತ್ಸಲೆ.

‘ ನನಗೆ ನಗಬೇಡಿರಿ ಎನ್ನುವಿ. ಆದರೆ ನೀನೇಕೆ ನಗುವಿ. ನಿನ್ನನ್ನು ನೋಡಿದೊಡನೆಯೇ ನಗೆ ಬರುತ್ತದೆ ’ ಎಂದನು.

‘ ನಾನೇನು ವಿದೂಷಕಳೇ ! ಸೋಗು ಹಾಕಿರುವೆನೇ ’ ಎಂದು ರೇಗಿ ಗೆದ್ದಳು ವತ್ಸಲೆ.

‘ ಸೋಗು ಅಲ್ಲದಿದ್ದರೆ ಮತ್ತೇನು ? ನಿನನ್ನು ನೋಡಿ ಊರಿಗೆ ಊರೇ ನಗುತ್ತದೆ ’ ಎಂದಳು ಅಜ್ಜಿ.

‘ ನೀವಿಬ್ಬರೂ ಇಂದು ನನ್ನನ್ನು ಆಳಿಸುವ ಯೋಜನೆ ಮಾಡಿದಂತೆ ಕಾಣುತ್ತದೆ ’ ಎಂದಳು.

‘ ಇರಲಿ ಬಿಡು. ಆ ಹಾಲನ್ನು ಕುಡಿದು ಬಿಡು, ಚೆಲ್ಲ ಬೇಡ ! ಎಂದಳು ಅಜ್ಜಿ.

ಇಬ್ಬರ ಊಟವೂ ಮುಗಿಯಿತು. ಅಜ್ಜಿಯು ಹಾಲು ತೆಗೆದುಕೊಂಡಳು.

‘ ನಿಮ್ಮ ಕಾಲುಗಳು ಹರಿಯುತ್ತಿರ ಬಹುದು ’ ಎಂದು ವತ್ಸಲೆಯು ವಿಚಾರಿಸಿದಳು.

‘ ಇಲ್ಲ. ಹರಿಯುವದಿಲ್ಲ ’ ಎಂದನು ನಾಗಾನಂದ.

‘ ಹಾಗಾದರೆ ಕಾಲುಗಳ ಮೇರೆ ಏಕೆ ಕೈಯಾಡಿಸಿ ಕೊಳ್ಳುತ್ತಿದ್ದೀರಿ ? ಎಂದಳು.

' ಕಾಲಲ್ಲಿ ಮುಳ್ಳು ನಟ್ಟಿತ್ತು '

' ಇನ್ನೂ ಕಾಲಲ್ಲಿ ಇರುವುದೇ '

' ಆಹುದು. ಬಹಳ ಒಳಗೆ ಸೇರಿದೆ, ಹಾಗೆಯೇ ನಡೆಯುತ್ತ ಬಂದೆ'

' ನಾನು ತೆಗೆಯುತ್ತೇನೆ. ಇಲ್ಲದಿದ್ದರೆ ನಿಮಗೆ ನಿದ್ರೆ ಬರಲಾರದು '

' ಬೇಡ, ನಾನು ಬೆಳಿಗ್ಗೆ ತೆಗೆದು ಕೊಳ್ಳುತ್ತೇನೆ '

' ನನಗೆ ಮುಳ್ಳು, ತೆಗೆಯಲು ಚನ್ನಾಗಿ ಬರುತ್ತದೆ '

' ನಿಜವಾಗಿಯೂ ಮುಳ್ಳನ್ನು ವತ್ಸಲೆಯು ಚನ್ನಾಗಿ ತೆಗೆಯುತ್ತಾಳೆ. ಹಿಂದಕ್ಕೆ ನನಗೆ ಅನೇಕ ಮುಳ್ಳುಗಳು ನಟ್ಟಿದ್ದವು. ನನಗೆ ತಿಳಿಯು ದಂತೆಯೇ ಅವುಗಳನೆಲ್ಲ ಆಕೆಯು ತೆಗೆದಳು. ನಿಮ್ಮದೂ ತೆಗೆಯಲಿ. ನಿದ್ರೆ ಬರುವದು. ಮುಳ್ಳು ಇರುವ ವರೆಗೆ ಎಲ್ಲಿಯ ನಿದ್ರೆ ? ' ಎಂದು ಶುಶ್ರೂತೆಯು ಮಮತೆಯಿಂದ ಮಾತನಾಡಿದಳು.

ವತ್ಸಲೆಯು ಒಳಗೆ ಹೋಗಿ, ಸೂಜಿಯನ್ನು ತೆಗೆದುಕೊಂಡು ಬಂದಳು.

' ತಾವು ಮಲಗಿಕೊಳ್ಳಿರಿ. ನಾನು ಮೆಲ್ಲಗೆ ಮುಳ್ಳನ್ನು ತೆಗೆಯುವೆ. ನಗುತ್ತೀರೇನು ? ' ಎಂದು ವತ್ಸಲೆಯು ಸ್ವಲ್ಪ ವಿನೋದದಿಂದ ಅಂದಳು.

' ವತ್ಸಲೆ, ಮುಳ್ಳು ಎಷ್ಟು ! ಅದರ ಸ್ತೋಮವನ್ನು ಎಷ್ಟು ಬೆಳೆಸುವಿ ! ಎಂದನು ನಾಗಾನಂದ.

' ಚಿಕ್ಕದೇ ದೊಡ್ಡದಾಗುತ್ತದೆ. ತಕ್ಕ ವೇಳೆಯಲ್ಲಿಯೇ ಉಪಾಯ ವನ್ನು ಯೋಚಿಸಬೇಕು. ನಾವು ಎಲ್ಲವೂ ಮೊದಲು ಚೇಷ್ಟೆಯೆಂದು ತಿಳಿಯುತ್ತೇವೆ. ಮುಂದೆ ಪರಿಸ್ಥಿತಿಯು ಗಂಭೀರವಾಗುತ್ತದೆ. ಆದರಿಂದ ಒಮ್ಮೊಮ್ಮೆ ಪ್ರಾಣಕ್ಕೆ ಎರವಾಗ ಬೇಕಾಗುತ್ತದೆ. ತಾವು ಮಲಗಿಕೊಳ್ಳಿರಿ. ಕೊಡಿರಿ, ಇತ್ತ ಕಾಲನ್ನು ' ಎಂದಳು.

ಸುಶ್ರೂತೆಯು ದೀಪವನ್ನು ದೊಡ್ಡದು ಮಾಡಿದಳು. ವತ್ಸಲೆಯು ಕಣ್ಣನ್ನು ಅರಳಸಿ ಮುಳ್ಳನ್ನು ನೋಡ ಹತ್ತಿದಳು. ಕಾಲನ್ನು ಸ್ವಚ್ಛವಾಗಿ ತೊಳೆದಳು. ಸೆರಗಿನಿಂದ ಒರಿಸಿದಳು. ತೊಡೆಯ ಮೇಲೆ ಕಾಲನ್ನಿಟ್ಟು ಕೊಂಡು ಮೆಲ್ಲನೆ ಮುಳ್ಳನ್ನು ತೆಗೆಯ ಹತ್ತಿದಳು. ನಡುನಡುವೆ ಸೂಜಿಯು

ಮುಳ್ಳಿಗೆ ತಾಗಿದೊಡನೆ ಅದು ಅಳುಕಿ, ನಾಗಾನಂದನು ಹಾಯ್ ! ಅನ್ನುವನು.

‘ ಸೂಜಿಯು ಹತ್ತಿತೇನು ? ಇನ್ನು ಮೇಲೆ ಎಚ್ಚರದಿಂದ ತೆಗೆಯುವೆ. ಇನ್ನು ಹತ್ತಗೊಡುವದಿಲ್ಲ ’ ಎಂದಳು. ಮುಳ್ಳು ಹೊರಬಂದಿತು. ಆ ಪಾದವನ್ನು ಹೃದಯಕ್ಕೆ ಅವಚಿಕೊಂಡಳು, ತಲೆಯ ಮೇಲಿಟ್ಟುಕೊಂಡಳು. ಕಣ್ಣು ಮುಚ್ಚಿ ವಂದನೆಯನ್ನು ಮಾಡಿದಳು. ಮೆಲ್ಲಗೆ ಕೆಳಗಿಟ್ಟಳು. ಆಕೆಗೆ ನಾಚಿಗೆ ಬಂದಿತು. ಮುಗುಳುನಗೆ ನಗುತ್ತಿದ್ದಳು.

‘ ಇದು ನೋಡಿರಿ, ಮುಳ್ಳು ಎಷ್ಟು ದೊಡ್ಡದಿದೆ ? ’ ಎಂದಳು.

‘ ಈಗ ಎಲ್ಲವೂ ನಿಷ್ಕಂಟಕವಾಯಿತಷ್ಟೇ ? ’ ಎಂದು ವಿಚಾರಿಸಿದನು.

‘ ದೇವರಿಗೇ ಗೊತ್ತು ’ ಅಂದಳು.

‘ ನಾನು ಈಗ ಮಲಗುವೆ. ಹೊರಗೆ ಮಲಗುವೆ. ನನಗೆ ಮನೆಯೊಳಗೆ ನಿದ್ರೆ ಬರುವದಿಲ್ಲ. ಅಡವಿಯಲ್ಲಿ ಬಯಲಲ್ಲಿ ಮಲಗುವ ನಾಗಾನಂದನಿಗೆ ಈ ಕೊಂಡವಾಡೆಯಲ್ಲಿ ಹೇಗೆ ನಿದ್ರೆ ಬರಬೇಕು ? ನಾನು ಹೊರಗೆ ಪಡಸಾಲೆಯಲ್ಲಿ ಮಲಗುವೆ. ’

ವತ್ಸಲೆಯು ಹಾಸಿಗೆಯನ್ನು ಹಾಸಿದಳು. ‘ ತಲೆದಿಂಬು ಬೇಕೋ ’ ಎಂದು ವಿಚಾರಿಸಿದಳು.

‘ ಅದು ಏನು ? ’ ಎಂದು ವಿಚಾರಿಸಿದ. ಆಕೆ ನಗಹತ್ತಿದಳು.

ಒಮ್ಮೆ ಥಂಡಿಯ ದಿವಸದಲ್ಲಿ ಹಾವನ್ನೇ ತಲೆದಿಂಬನ್ನಾಗಿ ಮಾಡಿಕೊಂಡಿದ್ದೆ. ಅದು ಬಹಳ ಮೆತ್ತಗೆ ಹಾಗು ತಂಪಾಗಿತ್ತು ’ ಎಂದನು.

“ ಅಡವಿಯಲ್ಲಿ ಹಾವಿನ ತಲೆದಿಂಬು, ಮನೆಯಲ್ಲಿ ಅರಳಿಯದಿಂಬು ’ ಎಂದು, ಅಂದಳು.

ಆಕೆಯು ಒಂದು ಸ್ವಚ್ಛವಾದ ತಲೆದಿಂಬನ್ನು ತಂದು ಕೊಟ್ಟಳು. ಅವನು ಮಲಗಿದನು. ಅವನ ಮೈಮೇಲೆ ಒಂದು ಕಂಬಳಿಯನ್ನು ಹೊಚ್ಚಿದಳು.

‘ ಕಂಬಳಿಯೇತಕ್ಕೆ ? ’ ಎಂದನು.

' ಅಂದರೆ ನಾಗವು ಓಡಿ ಹೋಗುವದಿಲ್ಲ. ಅದು ನಡುಗುವದಿಲ್ಲ. ಆದಕ್ಕೆ ಬೆಚ್ಚಗೆ ಎನಿಸೀತು. ? ' ಎಂದಳು.

ವತ್ಸಲೆಯು ಮಲಗಿದಳು. ಆಕೆಯು ಮುಂಗುರುಳುಗಳಮೇಲೆ ಕೈಯಾಡಿಸುತ್ತ, ಆವಳ ಅಜ್ಜಿಯು ಅಲ್ಲಿಯೇ ಮಲಗಿದಳು. ದೂರದಲ್ಲಿ ನಾಯಿಗಳು ಒದರುತ್ತಿದ್ದವು. ನಡುವೆ, ಹುಲಿಯ ಹುಂಕಾರವು ಕೇಳಿಸಿತು. ವತ್ಸಲೆಯು ಗಾಬರಿಯಾದಳು. ತಲೆಬಾಗಿಲು ಮುಚ್ಚಿರಲಿಲ್ಲ. ಹುಲಿಯು ಒಳಗೆ ಬಂದಿಲ್ಲವಷ್ಟೆ ? ಎಂದು ಆವಳ ಮನಸ್ಸಿನಲ್ಲಿ ಬಂದಿತು. ಆಕೆಯು ಎದ್ದು ಹೊರ ಬಂದಳು. ಬೆಳದಿಂಗಳು ನಾಗಾನಂದನ ಮುಖದ ಮೇಲೆ ಬಿದ್ದಿತ್ತು. ಅವನ ಮುಖವು ಬಹಳ ಮಧುರವಾಗಿ ಕಾಣುತ್ತಿತ್ತು. ಚಂದ್ರನು ತನ್ನ ಸಹಸ್ರಾರು ಕಿರಣಗಳಿಂದ ಅವನ ಮುಂಗುರುಳುಗಳನ್ನು ತೀಡುತ್ತಿದ್ದನು. ವತ್ಸಲೆಯು ಎವೆಯಿಕ್ಕದೆ ನೋಡುತ್ತ ನಿಂತಳು. ಆಕೆಯ ಮನದಲ್ಲಿ ಅನೇಕ ವಿಚಾರಗಳು ಬಂದವು. ನಾಗಾನಂದನ ಕಾಲುಗಳ ಕಡೆಗೆ ಹೋದಳು. ಕಾಲುಗಳನ್ನು ತೊಡೆಯಮೇಲೆ ಇಟ್ಟು ಕೊಂಡಳು. ಕಾಲು ಒತ್ತ ಹತ್ತಿದಳು. ನಾಗಾನಂದನು ಸ್ವಸ್ಥ ನಿದ್ರಿಸುತ್ತಿದ್ದನು. ಸ್ವಲ್ಪ ಸಮಯದ ನಂತರ ಅಂಗಳದಲ್ಲಿ ಎದ್ದು ನಿಂತಳು. ಆ ತನ್ನ ಕರಗಳ ಚುಂಬನವನ್ನು ತೆಗೆದುಕೊಂಡಳು. ನಾಗಾನಂದನ ಕಾಲುಗಳನ್ನೊತ್ತಿ ಆಕೆಯ ಕರಗಳು ಕೃತಾರ್ಥವಾಗಿದ್ದವು. ಆ ಕೈಗಳನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡಳು. ನಾಗಾನಂದನ ಪಾದ ಧೂಳಿಯನ್ನು ಮಸ್ತಕದಲ್ಲಿ ಧರಿಸಿದಳು. ಆ ಧೂಳು ಆಕೆಗೆ ಕೇಶರ, ಕಸ್ತೂರಿ. ಆ ಧೂಳು ಸಕಲ ಸುಗಂಧ ದ್ರವ್ಯವಾಕೆಗೆ. ಆ ಧೂಳೆಂದರೆ ಆಕೆಗೆ ಮೋಕ್ಷ. ಅದೇ ಆಕೆಯ ಸರ್ವಸ್ವ. ಇಂದು ಆಕೆಗೆ ದೇವ ದರ್ಶವಾಗಿತ್ತು.

' ವತ್ಸಲೆ, ಹೀಗೇಕೆ ಹುಚ್ಚಿಯಂತೆ ಗಾಳಿಯಲ್ಲಿ ನಿಂತಿರುವಿ ? ನಿನಗೆ ಹುಚ್ಚು ಹಿಡಿದಿಲ್ಲವಷ್ಟೇ ? ಬೆಳದಿಂಗಳಲ್ಲಿ ಹುಚ್ಚು ಹಿಡಿಯುತ್ತದೆ. ನಡೆ ಒಳಗೆ ' ಎಂದು ಸುಶ್ಮಿತೆಯು ಹೊರ ಬಂದು ಗದ್ದರಿಸಿದಳು.

‘ ಅಜ್ಜೀ ಹುಲಿಯ ಧ್ವನಿಯನ್ನು ಕೇಳಿ ನಾನು ಹೊರಬಂದೆ. ಇವರು ಹೊರಗೆ ಮಲಗಿರುವರು. ಹೊರಗೆ ಬರಬಾರದೆಂದೆನಿಸಿದರೂ ಬಂದೆ ’ ಎಂದಳು.

‘ ಇದೆಲ್ಲವೂ ಸೋಗು. ಹುಲಿಯನ್ನು ನೋಡಲು ಬಂದೆಯೋ ಇವರನ್ನು ನೋಡಲು ಬಂದೆಯೋ ? ಒಳ್ಳೇ ಹೆದರು ಬಡಿಕಿ ನೀನು ’

‘ ನಾನು ಹೆದರುಬಡಿಕಿಯೇ ? ಮಹಾಪೂರ ಬಂದ ಸಮಯದಲ್ಲಿ ನೀರಿನಲ್ಲಿ ಕುಣಿಯುತ್ತ ನಿಂತ ನಾನು ಅಂಜುಬರುಕಿಯೇ ? ಗಿಡದ ತುಟ್ಟ ತುದಿಯನ್ನೇರಿ ಅಲ್ಲಿಂದ ಕೆಳಗೆ ಜಿಗಿಯಲು ಬಯಸಿದ ನಾನು ಬೆದರಬಡಿಕಿಯೆ ? ಅಜ್ಜೀ, ನೀನು ನನಗೆ ಬೇಕಾದದ್ದನ್ನು ಅನ್ನು. ಅಂಜುಬುರುಕಳೆಂದೆನ್ನಬೇಡ. ಅದು ಅವರಿಗೆ ಸೇರುವದಿಲ್ಲ. ಅಂಜುಬುರುಕಿ ವತ್ಸಲೆಯ ಕಡೆಗೆ ಅವರು ಕಣ್ಣೆತ್ತಿಕೂಡ ನೋಡಲಿಕ್ಕಿಲ್ಲ. ನಾನು ಬೆದರುಬಡಿಕೆಯಲ್ಲ ? ’ ಎಂದಳು.

‘ ಅವರು ಹೊರ ಪಡಸಾಲೆಯಲ್ಲಿ ಮಲಗಿದ್ದಾರೆ. ಹುಲಿಯು ಬಂದರೆ ಅವರ ಗತಿಯೇನು ’ ಎಂದು ನಿನಗೆ ‘ ಅಂಜಿಕೆ ಬರಲಿಲ್ಲವೇ ? ’ ಎಂದು ನಕ್ಕಳು ಅಜ್ಜಿ.

‘ ಎರಡನೆಯವರ ರಕ್ಷಣೆಗಾಗಿ ಚಿಂತೆಯೆನಿಸುವದು ಅಂಜುಬುರುಕತನವಲ್ಲ. ಹುಲಿಬಂದಿದ್ದರೆ ನಾನು ಹೊಡೆಯುತ್ತಿದ್ದೆ. ’ ಎಂದಳು.

‘ ಮೆಲ್ಲಗೆ ಮಾತನಾಡು ಅವರಿಗೆ ಎಚ್ಚರವಾದೀತು ? ನಡೆ ಒಳಗೆ ’ ಎಂದಳು ಅಜ್ಜಿ

ವತ್ಸಲೆಯು ಒಳಗೆ ಹೋಗಿ ಮಲಗಿಕೊಂಡಳು.

೭

ಆಸ್ತಿಕನ ಆಶ್ರಮದಲ್ಲಿ ಇಂದು ಬಹಳ ಗದ್ದಲ. ಆಶ್ರಮವನ್ನೆಲ್ಲ ಶೃಂಗರಿಸಿದ್ದರು. ತಳಿರು ತೋರಣಗಳನ್ನು ಕಟ್ಟಿದ್ದರು. ಅಲ್ಲಲ್ಲಿ ಹೂವಿನ ಹಾರಗಳನ್ನು ತೂಗಬಿಟ್ಟಿದ್ದರು. ಸುಂದರವಾದ ಧ್ವಜವು ಹಾರಾಡುತ್ತಿತ್ತು. ಎಲ್ಲ ಕಡೆಗೆ ಥಳಿ ಹಾಕಿದ್ದರು. ಅಲ್ಲಿ ಪ್ರಸನ್ನವಾದ ಹಾಗೂ ಸುಂದರವಾದ ವಾತಾವರಣವು ಹಬ್ಬಿತ್ತು.

ಇಂದು ರಾಜಾ ಪರೀಕ್ಷಿತನು, ಆಶ್ರಮಕ್ಕೆ ಬರುವವನಿದ್ದನು. ಅವನ ಸಂಗಡ ಇನ್ನೂ ಬೇರೆ ಋಷಿಗಳೂ ಬರುವವರಿದ್ದರು. ಅವರ ಸ್ವಾಗತದ ಸಿದ್ಧತೆಯು ನಡೆದಿತ್ತು. ಇಂದು ಆಶ್ರಮಕ್ಕೆ ಬಿಡುವಿತ್ತು. ಶಿಷ್ಯರೆಲ್ಲ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿದ್ದಾರೆ. ಕೆಲವು ಶಿಷ್ಯರು ರಾಜನ ಮಾರ್ಗ ನಿರೀಕ್ಷಣೆಗಾಗಿ ಮುಂದೆ ಹೋಗಿದ್ದರು. ರಾಜನು ಬರುವ ಸುಳಿವು ಹತ್ತಿ ದೊಡನೆಯೆ ಕೊಂಬನ್ನೂದುವವರಿದ್ದರು. ಅತಿಥಿ ಶಾಲೆಯಲ್ಲಿ ಎಲ್ಲ ವ್ಯವಸ್ಥೆ ಮಾಡಲ್ಪಟ್ಟಿತ್ತು.

ಕೊಂಬಿನ ಧ್ವನಿಯಾಯಿತು. ಭಗವಾನ್ ಆಸ್ತಿಕರು ಸ್ವಾಗತಕ್ಕಾಗಿ ಪುಷ್ಪಹಾರವನ್ನು ಹಿಡಿದುಕೊಂಡು, ಶಿಷ್ಯರೊಡನೆ ಎದುರು ನಡೆದರು. ರಾಜಾ ಪರೀಕ್ಷಿತನ ರಥವು ದೂರದಿಂದಲೇ ಕಾಣಿಸುತ್ತಿತ್ತು. ಸಂಗಡ ಕೆಲವು ರಾಹುತರಿದ್ದರು. ಇನ್ನೂ ಬೇರೆ ರಥಗಳಲ್ಲಿ ಋಷಿವರ್ಯರು ಇದ್ದರು. ಭಗವಾನ್ ಆಸ್ತಿಕರನ್ನು ಕಂಡಕೂಡಲೇ ರಾಜಾ ಪರೀಕ್ಷಿತನು ರಥದಿಂದ ಇಳಿದನು. ಅವನು ಮುಂದೆ ಬಂದು ಆಸ್ತಿಕರಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ಉಳಿದ ಋಷಿಗಳೂ ಆಸ್ತಿಕರಿಗೆ ಅಭಿವಂದನೆ

ಗಳನ್ನು ಅರ್ಪಿಸಿದರು. ಆಸ್ತಿಕರು ಪರೀಕ್ಷಿತನಿಗೆ ಪೂಮಾಲೆಯನ್ನು ಹಾಕಿದರು. ಋಷಿಗಳಿಗೂ ಮಾಲೆಯನ್ನು ಹಾಕಿದರು. ಶಿಷ್ಯರೆಲ್ಲ ಪುಷ್ಪವೃಷ್ಟಿಯನ್ನು ಮಾಡಿದರು.

ಎಲ್ಲರೂ ಆಶ್ರಮಕ್ಕೆ ಬಂದರು. ರಥವು ಒಂದು ಬದಿಗೆ ಬಿಡಲ್ಪಟ್ಟಿತು. ಅತಿಥಿಗಳ ಪಾದಪ್ರಕ್ಷಾಲನೆ ಮಾಡಲ್ಪಟ್ಟಿತು. ಕುಶಲ ಪ್ರಶ್ನೆಗಳಾದವು. ಆಸ್ತಿಕರು ಎಲ್ಲರ ಯೋಗಕ್ಷೇಮವನ್ನು ವಿಚಾರಿಸಿದರು. ಸವಿಯಾದ ಹಣ್ಣುಗಳ ಉಪಹಾರವಾಯಿತು.

"ಆಸ್ತಿಕರೇ, ಈ ಹಣ್ಣುಗಳು ಎಷ್ಟು ರುಚಿಯಾಗಿವೆ! ಇಂಥ ಹಣ್ಣುಗಳನ್ನು ನಾನು ಎಂದೂ ತಿಂದಿದ್ದಿಲ್ಲ. ರಾಜನ ಉಪವನದಲ್ಲಿಯೂ ಕೂಡ, ಇಂಥ ಹಣ್ಣುಗಳು ದೊರೆಯುವದಿಲ್ಲ. ನೀವೇನು ಮಾಂತ್ರಿಕರೇ?" ಎಂದು ಪರೀಕ್ಷಿತನು ವಿಚಾರಿಸಿದನು.

"ರಾಜಾ, ಮಂತ್ರಗಾರಿಕೆ ಈ ಆಶ್ರಮದಲ್ಲಿಲ್ಲ. ಈ ಆಶ್ರಮದಲ್ಲಿ ವಿಶೇಷವೇನೂ ಇಲ್ಲ. ಪ್ರೇಮ ಒಂದು ಮಾತ್ರ ಇದೆ. ಜೀವನ ವೃಕ್ಷಕ್ಕೆ ಮಧುರವಾದ ಫಲಗಳು ಹೇಗೆ ಬಿಡಬೇಕೆಂಬುದನ್ನು ಇಲ್ಲಿ ಕಲಿಸಲಾಗುತ್ತದೆ." ಎಂದು ಆಸ್ತಿಕರು ಅಂದರು.

"ಯಾವನಿಗೆ ಜೀವವನ್ನು ರಸಮಯವಾಗಿ ಮಾಡಲು ಬರುವದೋ ಅವನಿಗೆ, ವೃಕ್ಷಕ್ಕೆ ಒಳ್ಳೇ ಫಲಗಳು ಬರುವಂತೆ ಮಾಡಲು ಬರುವದಿಲ್ಲವೇ? ಜೀವನ ಕೃಷಿಯೇ ಬಹು ಕಷ್ಟ." ಎಂದು ಒಬ್ಬ ಋಷಿ ಅಂದನು.

"ನೂರುಗಾವುದ ವಿಸ್ತಾರವಾದ ಭೂಮಿಯನ್ನು ಸಾಗಮಾಡುವದು ಸುಲಭ. ಆದರೆ ಈ ಮೂರೂವರೆ ಮೊಳದ ಭೂಮಿಯನ್ನು ಸಾಗು ಮಾಡುವದು ಕಠಿಣ. ಆದರೆ ಒಮ್ಮೆ ಇದು ಸಾಗಾಯಿತೆಂದರೆ, ಅಮೂಲ್ಯವಾದ ಸಂಪತ್ತನ್ನು ಕೊಡುವದು. ಆ ಸಂಪತ್ತು ಎಂದೂ ಸವೆಯುವದಿಲ್ಲ. ಕಳೆಯುವದಿಲ್ಲ." ಎಂದು ಬೇರೊಬ್ಬ ಋಷಿಯು ನುಡಿದನು.

"ಜೀವನದ ಬೆಳೆಯನ್ನು ನಾಶ ಮಾಡಲು ಇಲಿ, ಹೆಗ್ಗಣಗಳು ಕಾದುಕೊಂಡು ಕೂತಿರುತ್ತವೆ. ನಾವು ಮೇಲಿಂದ ಮೇಲೆ ಜಪ್ಪಿಸ

ಬೇಕಾಗುತ್ತದೆ. ಈ ಬೆಳೆಯನ್ನು ಉಧ್ವಸ್ಥಗೊಳಿಸಲು ವಿಕಾರರೂಪ ವಾದ ವಾಸನಾಮಯ ಪಶುಗಳು ಹಪಾಪಿಸಿರುತ್ತವೆ. ಈ ಬೆಳೆಯನ್ನು ಬೆಳೆಸುವದು ಬಹಳ ಕಷ್ಟವಿದೆ. ಆದರೆ ಈ ಬೆಳೆಯನ್ನು ಬೆಳೆಸದಿದ್ದರೆ, ಎಲ್ಲವೂ ವ್ಯರ್ಥ. ಹೃದಯದ ಕ್ಷೇತ್ರವು ಶುದ್ಧವಾಗಿ ಬೆಳೆಯದಿದ್ದರೆ, ಹೊರಗಿನ ಕ್ಷೇತ್ರದಲ್ಲಿ ನಾವು ಎಷ್ಟು ಬೆಳೆದರೂ ಉಪವಾಸ ವನವಾಸ ಗಳು ತಪ್ಪಲು ಶಕ್ಯವಿಲ್ಲ. ಜಗಳಗಳು ದೂರವಾಗಲಾರವು. ಆದುದರಿಂದ ರಾಜಾ, ಈ ಹೃದಯದ ಬೆಳೆಯನ್ನು ಇಲ್ಲಿ ಬೆಳೆಸಲಾಗುತ್ತದೆ. ಹೊರ ಗಿನ ಬೆಳೆಯೊಡನೆಯೇ, ಅಂತರಂಗದ ಕಡೆಗೂ ಲಕ್ಷವು ಪೂರೈಸಲ್ಪಡು ತ್ತಿದೆ. ನಾವು ಹೊಲಗಳಿಗೆ ಹೋಗುತ್ತೇವೆ. 'ಮಕ್ಕಳೇ ಹೊಲದಲ್ಲಿಯ ಧಾನ್ಯವು ಬೆಳೆಯಬೇಕಾದರೆ, ಅಲ್ಲಿರುವ ಕಳೆಯನ್ನು ತೆಗೆಯಬೇಕಾಗುತ್ತದೆ. ಆದರಂತೆಯೇ ನಮ್ಮ ಜೀವನವು ಸಮೃದ್ಧವಾಗಬೇಕಾದರೆ, ಅಂತರಂಗದ ಜೀವನದಲ್ಲಿಯ ದ್ವೇಷ, ದ್ರೋಹ ರೂಪವಾದ ಕೊಳೆಯನ್ನು ನಾವು ತೆಗೆದೊಗೆಯಲೇಬೇಕು' ರಾಜಾ! ಪ್ರತಿಯೊಂದು ಬಾಹ್ಯಕರ್ಮದೊಡ ನೆಯೇ ಮಾನಸಿಕ ಕರ್ಮವೂ ಆಗುವಂತೆ, ನಾವು ಇಲ್ಲಿ ಎಚ್ಚರ ತೆಗೆದು ಕೊಳ್ಳುತ್ತೇವೆ. ಬೆಳಿಗ್ಗೆ ವಿದ್ಯಾರ್ಥಿಗಳು ಆಶ್ರಮವನ್ನು ಜಳಜಳ ಮಾಡು ತ್ತಾರೆ. ನೀರಿನಿಂದ ಥಳಿ ಹಾಕುತ್ತಾರೆ. ಆಗ 'ಪ್ರಿಯ ವಿದ್ಯಾರ್ಥಿಗಳೇ, ಇದರಂತೆಯೇ ಹೃದಯದಲ್ಲಿಯ ಹೊಲಸನ್ನು ತೆಗೆದೊಗೆಯಿರಿ. ಧೂಳು ಏಳಬಾರದೆಂದು ಥಳಿ ಹಾಕುವದಿಲ್ಲವೇ? ಆದರಂತೆಯೆ ಜೀವನದಲ್ಲಿಯ ದುಷ್ಟ ಸ್ಪರ್ಧೆಯ, ಕಾಮ, ಕ್ರೋಧಗಳ, ದ್ವೇಷ ಹಾಗೂ ಸ್ವಾರ್ಥದ ಧೂಳು ಎದ್ದು, ಮಾರ್ಗವು ಕಾಣದಂತಾದಾಗ ನಾವು ಅಲ್ಲಿಯೂ ಥಳಿ ಯನ್ನು ಹಾಕಬೇಡವೇ? ಅಲ್ಲಿ ಪವಿತ್ರ ಪ್ರೇಮ ರೂಪವಾದ, ಸೇವೆನ, ಹಾಗೂ ಸಹಾನುಭೂತಿಯ ಸುಗಂಧವುಳ್ಳ ನೀರಿನ ಥಳಿಯನ್ನು ಹಾಕಿರಿ. ಪವಿತ್ರ ಪ್ರಾತಃಕಾಲದಲ್ಲಿಯಾದರೂ ಒಮ್ಮೆ ಹಾಕಿರಿ' ಪ್ರಾತಃ ಕಾಲದಲ್ಲಿ ಭಗವಾನ್ ಸೂರ್ಯನಾರಾಯಣನು ಜಗತ್ತಿಗೆಲ್ಲ ಬಂಗಾರ ವನ್ನು ಹಂಚಲು ಬರುತ್ತಾನೆ. ಅಂತಹ ಮಂಗಲಸಮಯದಲ್ಲಿ, ನಮ್ಮ ಜೀವನವೂ ಬಂಗಾರವಾಗುವಂತೆ ನಾವು ಪ್ರಯತ್ನಿಸಬೇಕು. ಪ್ರಭಾತ

ದಲ್ಲಿಯ ಸಂಸ್ಕಾರಗಳು ಇಡೀ ದಿವಸ ಉಪಯೋಗಬೀಳುತ್ತವೆ. ಪ್ರಭಾತ ದಲ್ಲಿ ನಾವು ಏನು ಬಿತ್ತುವೆವೋ ಅದನ್ನು ಸಾಯಂಕಾಲ ಕೊಯ್ಯುವೆವು. ಹೀಗಿದೆ ನಮ್ಮ ಆಶ್ರಮದ ರೀತಿ. ರಾಜಾ, ಇಲ್ಲಿ ಯಾವ ಮಂತ್ರತಂತ್ರ ಇಲ್ಲ, ಮೋಸವೂ ಇಲ್ಲ. ನಮಗೆ ಏನು ಮಾಡುವದಿದೆಯೋ ಅದನ್ನು ಮನಃಪೂರ್ವಕವಾಗಿ ಮಾಡಬೇಕು. ನಾವು ಯಾವುದನ್ನು ಮಾಡು ತ್ತೇವೆಯೋ ಅದನ್ನು ಅಂತಃಕರಣಪೂರ್ವಕವಾಗಿ ಮಾಡಬೇಕು. ನಾವು ಯಾವ ಗಿಡಕ್ಕೆ ಅಂತಃಕರಣಪೂರ್ವಕವಾಗಿ ನೀರು ಎರೆಯುವೆವೋ ಅದು ಸವಿಯಾದ ಫಲಗಳನ್ನು ಕೊಡಲಾರದೇ? ಮಕ್ಕಳು ಗಿಡಗಳಿಗೆ ಸುಮ್ಮನೆ ಗೊಬ್ಬರವನ್ನೂ ನೀರನ್ನೂ ಹಾಕುವದಿಲ್ಲ. ಅದರೊಡನೆ ಅವರು ತಮ್ಮ ಹೃದಯವನ್ನೂ ಸುರುವಿರುತ್ತಾರೆ. ವೃಕ್ಷಗಳೂ ಈ ಮಾತನ್ನು ಅರಿತು, ಸವಿಯಾದ ಫಲಗಳನ್ನೀಯುತ್ತವೆ. ಒಮ್ಮೊಮ್ಮೆ ಮನುಷ್ಯನಿಗಿಂತಲೂ ಮನುಷ್ಯೇತರ ಈ ಸೃಷ್ಟಿಯು ಹೆಚ್ಚಾಗಿ ಕೃತಜ್ಞತೆಯನ್ನು ತೋರುತ್ತದೆ. ಭೂಮಿಯನ್ನು ನಾವು ಒಳ್ಳೇ ರೀತಿಯಿಂದ ಜೋಪಾನಮಾಡಿದರೆ ಅದು ನಮಗೆ ಕಾಳಿನಿಂದ ತುಂಬಿದ ಫಲಭರಿತವಾದ ತೆನೆಯನ್ನು ಕೊಡುತ್ತದೆ. ನಾನು ಯಾವಾಗಲೂ ಇದನ್ನೆಲ್ಲ ವಿಚಾರ ಮಾಡುತ್ತಿರುತ್ತೇನೆ" ಆಸ್ತಿಕನ ವಾಣಿಯು ಗಂಗಾ ಪ್ರವಾಹದಂತೆ ಹರಿಯಹತ್ತಿತು.

"ಸ್ನಾನವನ್ನು ಇಲ್ಲಿ ಮಾಡುವಿರಾ ಅಥವಾ ನದಿಗೆ ಹೋಗುವಿರಾ?" ಎಂದು ಒಬ್ಬ ಶಿಷ್ಯನು ವಿನಯಪೂರ್ವಕವಾಗಿ ವಿಚಾರಿಸಿದನು.

"ನದಿಗೇ ಹೋಗೋಣ. ಈಸದೆ ಬಹಳ ದಿನಗಳಾದವು, ಇಂದು ಈಸೋಣ!" ಎಂದನು ಪರೀಕ್ಷಿತ.

"ಹಾಗಾದರೆ ನಾವು ಈಗ ಹೊರಡಬೇಕು." ಎಂದನು ಒಬ್ಬ ಋಷಿ.

ಎಲ್ಲರೂ ಸ್ನಾನಕ್ಕಾಗಿ ನದಿಗೆ ಹೋದರು. ಸಾರಥಿಯು ಕುದುರೆಗಳಿಗೆ ನೀರು ಕುಡಿಸಿ ತರುತ್ತಿದ್ದನು. ಪರೀಕ್ಷಿತನು ಕುದುರೆಗಳ ಬೆನ್ನು ಚಪ್ಪರಿಸಿದನು

"ನೀವು ಕುದುರೆಗಳನ್ನು ಪ್ರೀತಿಸುವಿರಾ?" ಎಂದನು ಆಸ್ತಿಕ.

"ಭಗವಾನ್ ಶ್ರೀಕೃಷ್ಣನಿಗೆ ಕುದುರೆಗಳ ಮೇಲೆ ಎಷ್ಟು ಪ್ರೀತಿ. ಅವನು ಕುದುರೆಗಳಿಗೆ ತನ್ನ ಪೀತಾಂಬರದಲ್ಲಿಯೇ ತಿನಿಸು ಕೊಡುತ್ತಿದ್ದನು. ಕುದುರೆಗಳ ಮೈಯನ್ನು ಸ್ವತಃ ತಿಕ್ಕುತ್ತಿದ್ದನು. ಅವುಗಳ ಮೈಮೇಲಿನ ಹೊಲಸನ್ನು ತೆಗೆಯುತ್ತಿದ್ದನು! ಈ ಮಾತುಗಳನ್ನು ಕೇಳಿ ದೊಡನೆಯೇ ನನ್ನ ಮನಸ್ಸಿಗೆ ಆನಂದ ವೆನಿಸುತ್ತದೆ" ಎಂದನು ಪರೀಕ್ಷಿತ.

"ಶ್ರೀಕೃಷ್ಣನ ಜೀವನವೆಂದರೆ ಅಗಾಧವಾದ ಸಮುದ್ರ! ಅದನ್ನು ಎಷ್ಟುತಿಳಿದರೂ ಕಡಿಮೆಯೇ" ಎಂದನು ಆಸ್ತಿಕ.

"ನಿಮ್ಮ ಆಶ್ರಮದಲ್ಲಿಯ ವಿದ್ಯಾರ್ಥಿಗಳು ಬರುವದಿಲ್ಲವೇ? ನಮ್ಮ ಸಂಗಡ ಈಸಾಡಲು ಅವರೂ ಬರಲಿ. ಈಗ ನಾನು ರಾಜನಲ್ಲ. ಸಾಮಾನ್ಯ ಮನುಷ್ಯ. ಹುಡುಗರೊಡನೆ ಇಂದು ಆಡುವಾ, ಕುಣಿಯುವಾ, ನಗುವಾ, ನರ್ತಿಸುವಾ; ನಾವೂ ಹುಡುಗರಾಗುವಾ" ಎಂದ ಪರೀಕ್ಷಿತನು.

"ಎಲ್ಲರನ್ನು ಕರೆಯಲೇನು?" ಎಂದೊಬ್ಬ ಹುಡುಗನು ವಿಚಾರಿಸಿದನು.

"ಊಟದ ವ್ಯವಸ್ಥೆ ಮಾಡುವವರನ್ನು ಬಿಟ್ಟು ಉಳಿದವರನ್ನೆಲ್ಲ ಕರೆ." ಎಂದು ಆಸ್ತಿಕರು ಹೇಳಿದರು.

ಹುಡುಗರೆಲ್ಲ ಕುಣಿಯುತ್ತ ಬಂದರು. ಲಂಗೋಟಿಯನ್ನು ಹಾಕಿಕೊಂಡು ಸಿದ್ಧರಾದರು. ಅವರಲ್ಲಿ ಕೆಲವರು ಕೇಕೆ ಹಾಕಿದರು. ಒಬ್ಬನು ಕೊಂಬನ್ನೂದಿದನು. ಮೋಜು ನಡೆಯಿತು. ನದಿಯಲ್ಲಿ ನೀರು ಸಾಕಷ್ಟಿತ್ತು. ನದಿಯಲ್ಲಿ ಈಸಾಡುತ್ತಿದ್ದ ಆರ್ಯ ಹಾಗೂ ನಾಗರ ಮಕ್ಕಳ ಮುಖಗಳು, ನದಿಯಲ್ಲಿ ಅರಳಿದ ನೀಲ ಹಾಗೂ ಬಿಳಿಯ ಕಮಲಗಳಂತೆ ಶೋಭಿಸುತ್ತಿದ್ದವು.

"ನನ್ನನ್ನು ಯಾರಾದರು ಹಿಡಿಯುವಿರಾ" ರಾಜನೆಂದ.

"ನಾನು ಹಿಡಿಯುತ್ತೇನೆ" ಎಂದನೊಬ್ಬ ಹುಡುಗ.

ರಾಜನು ಮುಳುಗಿದನು. ಆ ಹುಡುಗನೂ ಮುಳುಗಿದನು. ನಡುವೆಯೇ ಮೇಲೆ ಬರುವರು. ಮತ್ತೆ ಮುಳುಗುವರು. ರಾಜನು ಸಿಗಲಿಲ್ಲ.

"ಸೋತೆಯಲ್ಲವೇ!" ಎಂದು ರಾಜನು ನಗುತ್ತ ಕೇಳಿದ.

"ನಾನು ಚಿಕ್ಕವ" ಎಂದನು ಹುಡುಗ.

" ಹುಡುಗರೇ ಮುದುಕರಿಗಿಂತ ಮುಂದೆ ಹೋಗಬೇಕು. " ಎಂದು ಪರೀಕ್ಷಿತನೆಂದನು.

" ಇನ್ನು ಸಾಕು. ಅತಿಯಾದರೆ ಹಿತವಾಗದು! " ಎಂದನು ಪರೀಕ್ಷಿತ.

" ರಾಜನು ಬೇನೆ ಬಿದ್ದರೆ, ಪ್ರಜೆಗಳ ಗತಿಯೇನು ? ರಾಜನು ಬಹಳ ದಕ್ಷತೆಯಿಂದ ನಡೆಯಬೇಕು. " ಎಂದನೊಬ್ಬ ಹುಡುಗ.

" ರಾಜನನ್ನು ಯಾರು ಕೇಳುತ್ತಾರೆ? ರಾಜನು ಪ್ರಜೆಗಳ ಅಧೀನನು." ಎಂದನು ಪರೀಕ್ಷಿತ.

" ಹಾಗೇನೂ ಇಲ್ಲ. ಯುವರಾಜನಾದ ಜನಮೇಜಯನು, ನಾಗರಿಗೆ ಆಶ್ರಮದಲ್ಲಿ ಆಶ್ರಯವನ್ನೀಯಕೂಡದು ಎಂದು ಆಜ್ಞೆಯನ್ನು ವಿಧಿಸಿದೊಡನೆಯೇ, ಅನೇಕ ಆಶ್ರಮಗಳಲ್ಲಿ ಅವರಿಗೆ ಆಶ್ರಯವಿಲ್ಲದಾಯಿತು. ಅನೇಕ ಜನ ಆಚಾರ್ಯರು ಇಂತಹ ಪಾಪಕೃತ್ಯವನ್ನೆಸಗಲು ಮನಸ್ಸಿಲ್ಲದೆ, ಆಶ್ರಮಗಳನ್ನೇ ನಿಲ್ಲಿಸಿಬಿಟ್ಟರು. ಇಂತಹ ಎಷ್ಟೋ ಆಚಾರ್ಯರು ಇಲ್ಲಿಗೆ ಬಂದಿದ್ದಾರೆ. ಅವರಿಗೆ ಬಹಳ ಕೆಡುಕೆನಿಸಿದೆ. " ಎಂದು ಒಬ್ಬ ನಾಗಕುಮಾರನು ಉತ್ತರಿಸಿದನು.

" ಆದರೆ ಈ ಆಶ್ರಮದಲ್ಲಿ ಉಭಯ ಜಾತಿಯ ಶಿಷ್ಯರೂ ಇದ್ದಾರೆ. ಈ ಆಶ್ರಮದಲ್ಲಿ ಬಂದರೆ, ರಾಜನೂ ಕೂಡಾ ಧನ್ಯನಾಗುತ್ತಾನೆ. " ಎಂದು ವಸ್ತ್ರಗಳನ್ನು ಧರಿಸುತ್ತಲೇ ಪರೀಕ್ಷಿತನು ಉತ್ತರವಿತ್ತನು.

ಎಲ್ಲರ ಸ್ನಾನವೂ ಮುಗಿಯಿತು. ಊಟವೂ ಆಯಿತು. ಊಟವಾದ ನಂತರ ಎಲ್ಲರೂ ವಿಶ್ರಾಂತಿಯನ್ನು ಹೊಂದಿದರು. ಶಿಷ್ಯರು ಮಾತ್ರ ಕೆಲಸವನ್ನು ಮಾಡುತ್ತಲಿದ್ದರು. ಆಶ್ರಮದ ಪಟಾಂಗಣದಲ್ಲಿಯೇ ಅವರು ಆಸನಗಳನ್ನು ಮಂಡಿಸಿದ್ದರು. ಮಧ್ಯಾಹ್ನ ಮೂರು ಗಂಟೆಯ ನಂತರ ವಿಚಾರ ವಿನಿಮಯ ನಡೆಯುವದಿತ್ತು. ಆ ಸ್ಥಳದಲ್ಲೆಲ್ಲ ನೆರಳು ಇತ್ತು. ನಡನಡುವೆ ಹೂಗಳಿಂದ ಆ ಪಟಾಂಗಣವನ್ನು ಶೃಂಗರಿಸಿದ್ದರು.

ಪರೀಕ್ಷಿತ ರಾಜನೂ ಋಷಿವರ್ಯರೂ ಎದ್ದು ಮುಖವನ್ನು ತೊಳೆದುಕೊಂಡು, ಆಸ್ತಿಕನೊಡನೆ ಹಾಸ್ಯಮಾಡುತ್ತ ಸಭಾಮಂಟಪಕ್ಕೆ ಬಂದರು. ಅಲ್ಲಿ ಶಿಷ್ಯರೆಲ್ಲರೂ ನಿಂತಿದ್ದರು. ಆಸ್ತಿಕರು ರಾಜಾ ಪರೀಕ್ಷಿತನನ್ನು ಒಂದು

ಉಚ್ಚಾಸನದಲ್ಲಿ ಕೂಡ್ರಿಸಿದರು. ಪರೀಕ್ಷಿತನು ಆಸ್ತಿಕರನ್ನು ತನ್ನ ಹತ್ತಿರದ ಆಸನದಲ್ಲಿ ಕೂಡಿಸಿಕೊಂಡನು. ಉಳಿದೆಲ್ಲ ಋಷಿಗಳು ಆಸನಗಳಲ್ಲಿ ಕುಳಿತರು. ಆಸ್ತಿಕರ ಆಶ್ರಮದಲ್ಲಿ, ಬಂದು ವಾಸಮಾಡಿದ ಅನೇಕ ಋಷಿಗಳೂ ಅಲ್ಲಿಗೆ ಬಂದರು. ಸಭೆಯಲ್ಲಿ ಪ್ರಸನ್ನತೆಯು ವ್ಯಾಪಿಸಿತ್ತು.

ಭಗವಾನ್ ಆಸ್ತಿಕರು ಮಾತನಾಡಲು ಪ್ರಾರಂಭಿಸಿದರು.

“ಇಂದು ನಮಗೆ ಭಾಗ್ಯದ ದಿವಸ. ಅನೇಕ ಜನ ಮಹನೀಯರು ಆಶ್ರಮಕ್ಕೆ ದರ್ಶನವನ್ನಿತ್ತಿದ್ದಾರೆ. ಆಶ್ರಮವನ್ನು ಪುನೀತಗೊಳಿಸಲು ಅವರು ಬಂದಿದ್ದಾರೆ. ಜ್ಞಾನಧನರಾದ ಹಾಗು ತಪೋಧನರಾದ ಅನೇಕ ಮಹ ಋಷಿಗಳೊಡನೆ ರಾಜಾ ಪರೀಕ್ಷಿತನು ಆಗಮಿಸಿದ್ದಾನೆ. ಇಂಥ ಮಹನೀಯ ರಿಗೆ ಪ್ರೇಮದ ಹೊರತು, ನಮ್ಮಲ್ಲಿ ಅರ್ಪಿಸಲು ಏನು ಇದೆ? ಆಶ್ರಮಕ್ಕೆ ರಾಜರು ಬರುವದೆಂದರೆ ಸರ್ವ ಪ್ರಜಗಳು ಬಂದಂತೆ. ರಾಜನೆಂದರೆ ಪ್ರಜೆ ಗಳ ಪ್ರತಿನಿಧಿ. ರಾಜನೆಂದರೆ ಸರ್ವ ಪ್ರಜೆಗಳ ಕಲ್ಯಾಣ. ಸರ್ವ ಪ್ರಜೆಗಳ ಸಂರಕ್ಷಣೆ. ಭೇದಾತೀತ ನ್ಯಾಯ. ರಾಜನೆಂದರೆ ಒಂದು ಬಗೆಯ ಮಹಾನ್ ಸನ್ಯಾಸಿ. ಅವನು ವೈಭವ ಸಂಪನ್ನನಿದ್ದರೂ ಅವನು ಅಕಾಂಚನನು. ಅವ ನಿಗೆ ತನ್ನದೆನ್ನುವದೇನೂಯಿಲ್ಲ. ವೃಕ್ಷದ ಫಲಪುಷ್ಪಗಳು ಎರಡನೆಯವರಿ ಗಾಗಿ, ವೃಕ್ಷದ ವಿಸ್ತಾರವು ಎರಡನೆಯವರಿಗಾಗಿ, ಹಾಗೆಯೇ ರಾಜ. ಆದುದ ರಿಂದಲೇ ರಾಜನು ವಿಷ್ಣುವಿನ ಅಂಶವೆಂದು ನಾವು ಬಗೆಯುತ್ತೇವೆ. ವಿಷ್ಣು ವೆಂದರೆ ಎಲ್ಲ ಕಡೆಗೆ ಪ್ರವೇಶಿಸುವವ. ವಿಷ್ಣುವೆಂದರೆ ತೇಜಸ್ವಿಯಾದ ಸೂರ್ಯ. ಸೂರ್ಯನ ಕಿರಣಗಳು ಎಲ್ಲ ಕಡೆಗೂ ಪ್ರವೇಶಿಸುತ್ತವೆ. ಕತ್ತಲೆಯನ್ನು ಕಳೆಯುತ್ತವೆ. ಉಷ್ಣತೆಯನ್ನು ಕೊಡುತ್ತವೆ. ಜೀವನವನ್ನು ಬೆಳೆಸುತ್ತವೆ. ಹಾಗೆಯೇ ರಾಜನು, ಸರ್ವರ ಜೀವನದಲ್ಲಿ ಹೊಕ್ಕು, ಸರ್ವರ ಸುಖದುಃಖ ಗಳನ್ನು ವಿಚಾರಿಸಿ, ಸರ್ವರಿಗೂ ಆಧಾರನಾಗಬೇಕು. ದ್ವೇಷ, ಸ್ಪರ್ಧೆ, ಮತ್ಸರ, ಮೊದಲಾದ ಸಂಕುಚಿತ ವೃತ್ತಿಗಳನ್ನು ಹತ್ತಿಕ್ಕುತ್ತ ಸರ್ವರ ಬೆಳ ವಣಿಗೆಯೂ ಚನ್ನಾಗಿ ಆಗುವಂತೆ ಎಚ್ಚರ ತೆಗೆದುಕೊಳ್ಳಬೇಕು. ಮೇಲಿನ ವರ್ಣನೆಯು ಪರಿಕ್ಷಿತ ಮಹಾರಾಜನಿಗೆ ಪೂರ್ಣವಾಗಿ ಅನ್ವಯಿಸುವದು. ಅವನ ಆರುವಿಕೆಯೇ ಇದಕ್ಕೆ ಸಾಕ್ಷಿ. ರಾಜನು ನ್ಯಾಯ, ಸಹಾನುಭೂತಿ,

ಸಮತೆಯು ದೀವಟಿಗೆಗಳನ್ನು ಕೈಯ್ಯಲ್ಲಿ ಹಿಡಿದುಕೊಂಡು ಎಲ್ಲ ಕಡೆಗೂ ಸಂಚರಿಸಬೇಕು. ಅಂದರೆ ಅನ್ಯಾಯ ಹಾಗು ಅಸತ್ಯಗಳು ಬೆಳೆಯುವದಿಲ್ಲ. ಇರಲಿ. ನಿಮ್ಮೆಲ್ಲರ ಪತಿಯಿಂದ ರಾಜನನ್ನು ನಾನು ಸ್ವಾಗತಿಸುವೆ. ಪ್ರಜೆಗಳ ಕಲ್ಯಾಣವು ಈ ರಾಜನಿಂದ ಆಗಲೆಂದೂ ದೇವರು ಇವರಿಗೆ ಆಯುರಾರೋಗ್ಯಗಳನ್ನು ಕೊಡಲೆಂದೂ ಹಾರೈಸುವೆ " ಎಂದು ಆಸ್ತಿಕರು ರಾಜನಿಗೆ ಪೂಪಾಲೆಯನ್ನು ಹಾಕಿದರು. ಆದರಂತೆಯೇ ಸರ್ವ ಮಹರ್ಷಿಗಳನ್ನು ಪೂನಾಲೆಗಳಿಂದ ಪೂಜಿಸಿದರು. ಆಸ್ತಿಕನು ಆಸನದ ಮೇಲೆ ಕುಳಿತನು.

ನಂತರ ರಾಜಾ ಪರೀಕ್ಷಿತನು ಎದ್ದು ' ಭಗವಾನ್ ಆಸ್ತಿಕರು ನಮಗಿತ್ತ ಗೌರವಕ್ಕಾಗಿ ನಾವು ಕೃತಾರ್ಥರಾಗಿದ್ದೇವೆ. ಅನೇಕ ದಿನಗಳಿಂದ ಈ ಆಶ್ರಮಕ್ಕೆ ಬರಬೇಕೆಂದು ನಾನು ಹೇಳುತ್ತಿದ್ದೆ. ನಾನು ಅನೇಕ ಆಶ್ರಮಗಳನ್ನು ನೋಡಿರುವೆ. ಆದರೆ ಈ ಆಶ್ರಮದ ರೀತಿಯೇ ಬೇರೆಯಾಗಿದೆ. ನಾವಿಲ್ಲಿ ಕಾಲಿಟ್ಟೊಡನೆ ಶ್ರಮವೆಲ್ಲ ಪರಿಹಾರ ವಾದಂತಾಗುವದು. ಯಾವ ಆಶ್ರಮದಲ್ಲಿ ಕ್ಷಣಹೊತ್ತು ಸಂಚರಿಸಿದೊಡನೆ ಸಂಸಾರಿಗಳಿಗೆಲ್ಲ ಸ್ಫೂರ್ತಿದೊರೆಯುವದೋ, ಉದಾತ್ತಧ್ಯೇಯದ ಕಲ್ಪನೆಬರುವದೋ, ಜೀವನಕ್ಕೆ ಹೊಸ ಬೆಳಕು ಕಂಡು, ದೃಷ್ಟಿಯು ವಿಶಾಲವಾಗುವವೋ, ತಾವು ಸ್ವಲ್ಪ ಮೇಲಕ್ಕೇರಿದಂತೆ ಎನಿಸುವದೋ ಅದೇ ನಿಜವಾದ ಆಶ್ರಮವು. ಇಂತಹ ಆಶ್ರಮಗಳಲ್ಲಿ ಜೀವನದ ಸರ್ವಾಂಗೀಣಉನ್ನತಿಯ ವಿಚಾರ ವಿಮರ್ಶೆಗಳು ಅತ್ಯಂತ ಆಸ್ಥಾ ಪೂರ್ವಕವಾಗಿ ಚರ್ಚಿಸಲ್ಪಡುತ್ತವೆ. ಆಶ್ರಮವೆಂದರೆ, ವಿಚಾರ ಮಂಥನದ ಯಜ್ಞಶಾಲೆ. ಜೀವನದ ಸರ್ವ ವಿಷಯಗಳ ಕೂಲಂಕುಷ ವಿಚಾರವಾಗಿ ಇಲ್ಲಿ ಮಾರ್ಗದರ್ಶನ ಮಾಡಲ್ಪಡಬೇಕು. ಶಿಕ್ಷಣವು ಹೇಗೆ ಇರಬೇಕು ? ಆಶ್ರಮಧರ್ಮಗಳೇನು, ರಾಜನೀತಿಯು ಹೇಗೆ ಇರಬೇಕು, ಕಲೆಯ ಧ್ಯೇಯವೇನು ? ವಿವಾಹ ಸಂಬಂಧದ ನಿಯಮಗಳಾವು ? ಭಿನ್ನ ಭಿನ್ನ ಮಾನವ ವಂಶಗಳ ಪರಸ್ಪರರ ಸಂಬಧವು ಹೇಗೆ ಇರಬೇಕು? ಧರ್ಮದ ಸ್ವರೂಪವೇನು ? ಸಂಸ್ಕೃತಿಯ ಸಂವರ್ಧನ ಹೇಗೆ ಆಗಬೇಕು ? ಇಂತಹ ನೂರಾರು ಪ್ರಶ್ನೆಗಳ ಚರ್ಚೆಯು ಆಶ್ರಮದಲ್ಲಿ ನಡೆಯಬೇಕು. ಈ ವಿಚಾರ ಮಂಥನದ ಬೆಳಕು ಹೊರ ಜಗತ್ತಿಗೆ ಹರಡಬೇಕು. ಜೀವನಕ್ಕೆ ಸ್ಫೂರ್ತಿ

ಬೆಳಕು, ಹೊಸ ದೃಷ್ಟಿಗಳನ್ನೀಯುವ ಆಶ್ರಮಗಳು ಎಲ್ಲ ಕಡೆಗೂ ದೊರೆಯುವದು ಶಕ್ಯವಿಲ್ಲ. ಎಲ್ಲಿ ಮಹಾನ್ ವಿಭೂತಿಗಳು ವಾಸಿಸುವರೋ ಅಂಥಲ್ಲಿಯೇ ಇಂಥ ಆಶ್ರಮಗಳು ಶಕ್ಯ. ನಾನು ಹಿಂದೊಮ್ಮೆ ಇಲ್ಲಿಗೆ ಬಂದಿದ್ದೆ. ಆಗ ನನಗೆ ದೊರೆತ ಸ್ಫೂರ್ತಿಯು ನನ್ನ ಜೀವನದಲ್ಲಿ ಇನ್ನೂ ಕಾರ್ಯ ಮಾಡುತ್ತಲಿದೆ. ಭಗವಾನ್ ಆಸ್ತಿಕರ ಸ್ಮರಣದಿಂದ ನನಗೆ ಪಾವನನಾದಂತೆ ಎನಿಸುತ್ತದೆ. ಹೀಗೇಕೆ ಅನಿಸಬೇಕು ? ಅವರ ಬಗೆಗೆ ನನ್ನಲ್ಲಿ ಪೂಜ್ಯ ಭಾವವು ಏಕೆ ಹುಟ್ಟಬೇಕು ? ನೀವೆಲ್ಲ ಈ ದೃಷ್ಟಿಯಿಂದ ಏಕೆ ನೋಡುವಿರಿ ? ಇಂಥವರ ಚರಣಗಳಲ್ಲಿ ಭಕ್ತಿಭಾವವು ಹುಟ್ಟುವದೇಕೆ ? ಇದರ ಕಾರಣವೇನು ? ಬಲ್ಲಿರಾ ! ನಮ್ಮ ಜೀವನದಲ್ಲಿ ನಮಗೆ ಪೂರ್ಣತೆಎಸುವದಿಲ್ಲ ನಮ್ಮ ಕೃತಿಗಳಲ್ಲಿ ಜೀವನದ ಪೂರ್ಣತೆಯು ಪ್ರಕಟವಾಗುವದಿಲ್ಲ. ಇದರಿಂದ ನಮಗೆ ಅಸಮಾಧಾನವೆನಿಸುತ್ತದೆ. ನಮ್ಮ ಸುಂದರ ಸ್ವರೂಪವನ್ನು ಕಾಣುವ ಇಚ್ಛೆಯು ನಮಗೆ ಇರುವದು ಸ್ವಾಭಾವಿಕ. ದೊಡ್ಡ ವಿಭೂತಿಗಳಲ್ಲಿ ನಾವು ಈ ವಿಕಾಸವನ್ನು ನೋಡುತ್ತೇವೆ. ಅವರ ಉದಾತ್ತ ದೈವೀಸ್ವರೂಪವನ್ನು ಕಂಡು, ನಮಗೂ ಹೀಗಾಗ ಬೇಕೆನಿಸುತ್ತದೆ. ಪರಿಪೂರ್ಣತೆಯೇ ನಮ್ಮ ನಿಜವಾದ ಸ್ವರೂಪ ಎಂದು ನಮಗೆ ಎನಿಸುತ್ತದೆ. ನಾವು ದೇವರನ್ನು ಮನ್ನಿಸುತ್ತೇವೆ. ನನ್ನ ದೇವರ ಕಲ್ಪನೆಯೆಂದರೆ, ನನ್ನ ಪರಿಪೂರ್ಣತೆಯು. ನನ್ನ ದೇವರ ಚಿಂತನೆಯೆಂದರೆ, ನನ್ನ ಪರಿಪೂರ್ಣತೆಯ ಚಿಂತನೆ. ಈ ಪರಿಪೂರ್ಣತೆಯು ಎಲ್ಲೆಲ್ಲಿ ಕಾಣುವದೋ ಅಲ್ಲಲ್ಲಿ ನಾನು ತಲೆಬಾಗುವೆ. ಆಸ್ತಿಕರಲ್ಲಿ ಮಾನವ ಪರಿಪೂರ್ಣತೆಯು ಪ್ರಕಟವಾದದ್ದು ಕಾಣುತ್ತದೆ. ಆದುದರಿಂದಲೇ ನಾವೆಲ್ಲ ತಲೆಬಾಗುವೆವು. ಪರಿಪೂರ್ಣತೆಯು ಅನೇಕ ಬಗೆಯಾಗಿದೆ. ಪರಿಪೂರ್ಣತೆಯೆಂದರೆ, ಸರ್ವಾಂಗೀಣ ಸೌಂದರ್ಯ. ಶರೀರವು ಸಪ್ರಮಾಣವಾಗಿ ಬೆಳದರೆ, ಶಾರೀರಕ ಸೌಂದರ್ಯವು ಉತ್ಪನ್ನವಾಗುವದು. ಮನ ಹಾಗು ಬುದ್ಧಿಗಳು ಪರಿಪೂರ್ಣ ವಿಕಾಸವಾದರೆ, ಜ್ಞಾನವು ಉದಯವಾಗುವದು. ಮಾನವ್ಯದ ಪರಿಪೂರ್ಣತೆಯಾದರೆ, ದೇವತ್ವವು ಅವತರಿಸುವದು. ಇವು ಒಂದಕ್ಕಿಂತ ಒಂದು ಮಿಗಿಲು. ಅಥವಾ ಶರೀರದ ಸೌಂದರ್ಯವೆಂದರೆ, ಮನೆಯ ಹೊರಗಿನ ಶೋಭೆ. ಮನಸ್ಸಿನ ಸೌಂದರ್ಯವೆಂದರೆ

ಮನೆಯೊಳಗಿನ ಚಂದ, ಮಾನವ್ಯದ ಸೌಂದರ್ಯವೆಂದರೆ, ಅಂತರಂಗದ ದೇವರ ಮನೆಯ ಶೋಭೆ. ಅಂತರಂಗದ ದಿವ್ಯ ಜ್ಯೋತಿಯು ಬೆಳಗದಿದ್ದರೆ, ಹೊರಗಿನ ಬೆಳಕೇನು ಪ್ರಯೋಜನ ? ಆದುದರಿಂದ ಯಾವನ ಅಂತಃಕರಣ ದಲ್ಲಿ ಅಂತರಾತ್ಮನ ಜ್ಯೋತಿಯು ಬೆಳಗುವದೋ, ಅವನೇ ನಿಜವಾದ ಆನಂದಿ.

ಭಗವಾನ್ ಆಸ್ತಿಕರಲ್ಲಿ ಮಾನವ್ಯತೆಯ ಪರಿಪೂರ್ಣತೆಯು ಕಾಣು ವದರಿಂದಲೇ ಅವರ ಜೀವನವು ಪ್ರಕಾಶಮಾನವಾಗಿದೆ. ಅವರ ಜೀವನ ವೆಂದರೆ ಮಂಗಲಜ್ಯೋತಿಯು. ಆದುದರಿಂದಲೇ ನಾನು ಅವರ ಕಡೆಗೆ ಬರುವೆ. ನನ್ನ ಜೀವನದಲ್ಲಿ ಕತ್ತಲೆ ಕವಿದಾಗೆಲ್ಲ ಇಲ್ಲಿ ಬರಬೇಕೆನಿಸುತ್ತದೆ. ಇಂದು ಕೂಡ ನನಗೆ ಕತ್ತಲೆ ಕವಿದಿದೆ. ಕಾರ್ಯಾಕಾರ್ಯವು ತಿಳಿಯ ದಂತಾಗಿದೆ. ನಾನು ಕರ್ತವ್ಯಮೂಢನಾಗಿದ್ದೇನೆ. ಭಗವಾನ್ ಆಸ್ತಿಕರು ಮಾರ್ಗದರ್ಶನ ಮಾಡಬೇಕೆಂದು ಪ್ರಾರ್ಥಿಸುವೆ.

" ರಾಜನೇ, ನಿನಗೆ ಬಂದ ಸಂಶಯಗಳನ್ನೆಲ್ಲ ನಿವರಿಸು. ನನಗೆ ತೋಚಿದ್ದನ್ನೆಲ್ಲ ಸೂಚಿಸುವೆ. ನಾವು ಒಬ್ಬರಿಗೊಬ್ಬರು ನೆರವನ್ನಿತ್ತು, ಮುಂದೆ ಸಾಗೋಣ " ಎಂದು ಆಸ್ತಿಕರು ನುಡಿದರು.

" ಭಗವಾನ್, ಇಂದು ಎರಡು ಸಂಸ್ಕೃತಿಗಳ ತಿಕ್ಕಾಟವು ಪ್ರಾರಂಭ ವಾಗಿದೆ. ಆರ್ಯರಾದ ನಾವು ಈ ಪ್ರದೇಶಕ್ಕೆ ಬಂದು, ಇದಕ್ಕೆ ಆರ್ಯಾ ವರ್ತವೆಂದು ಕರೆಯಹತ್ತಿದೆವು. ಆದರೆ ಇಲ್ಲಿ ನಾನಾಬಗೆಯ ಮೂಲ ನಿವಾಸಿಗಳು ಇದ್ದೇ ಇದ್ದರು. ಅವರೊಡನೆ ಯುದ್ಧವಾಯಿತು. ಅವರು ಸೋತರು. ಆದರೆ ನಾವು ನಮ್ಮ ವಸಾಹತುಗಳನ್ನು ಬೆಳೆಸುತ್ತ ನಡೆದವು. ಅವರ ನಮ್ಮ ಸಂಪರ್ಕವು ಬೆಳೆಯಹತ್ತಿತು. ಇತ್ತ ಅವರೊಡನೆ ಯುದ್ಧ ನಡೆದಿದ್ದರೂ ಜನಸಾಮಾನ್ಯರು ಪ್ರೇಮ ಸಂಬಂಧವನ್ನು ಬೆಳೆಯಿಸಹತ್ತಿ ದರು. ಅನೇಕ ನಾಗಕನ್ಯೆಯರೊಡನೆ ನಾವು ಲಗ್ನವಾದೆವು. ಆ ನಾಗ ಕನ್ಯೆಯರು ತಮ್ಮ ತವರು ಮನೆಯ ದೇವತೆಗಳನ್ನೂ ಸಾಂಪ್ರದಾಯ ಗಳನ್ನೂ ತಮ್ಮೊಡನೆ ತಂದರು. ಇತರ ಆರ್ಯೇತರ ಸ್ತ್ರೀಯರೂ ತಮ್ಮ ತಮ್ಮ ದೇವತೆಗಳನ್ನು ತಂದರು. ಎಲ್ಲವೂ ಬೆರೆತು ಕಿಚಡಿಯಾಗ ಹತ್ತಿದೆ. ಬೇರೆ ಬೇರೆ ರೀತಿ, ನಡಾವಳಿಗಳು ಬಂದು ಸೇರಹತ್ತಿವೆ. ಹೊಸ

ಸಾಂಪ್ರದಾಯಗಳು ರೂಢವಾಗಹತ್ತಿವೆ. ಇಂತಹ ಸಮಯದಲ್ಲಿ ಏನು ಮಾಡಬೇಕು ? ಈ ಸಮಯದಲ್ಲಿ ನಾವು ಜಪ್ಪಿಸಬೇಡವೇ ? ಸಂಸ್ಕೃತಿಯ ಸಂರಕ್ಷಣೆಯು ಸ್ತ್ರೀಯರ ಕೈಯಲ್ಲಿದೆ. ಆರ್ಯ ಸಂಸ್ಕೃತಿಯು ಪರಿಶುದ್ಧ ವಾಗಿ ಉಳಿಯಬೇಕಾದರೆ, ನಾಗರಿಂದ ನಾವು ದೂರಿರಬೇಡವೇ ! ಈ ವಿವಾಹಗಳು ನಿಷಿದ್ಧವೆಂದು ನಾವು ತಿಳಿಯಬೇಡವೇ ? ಆರ್ಯ ಹಾಗೂ ಆರ್ಯೇತರ ಲಗ್ನಗಳು ಆಗದಂತೆ, ನಿರ್ಬಂಧಿಸುವದು ಅಗತ್ಯವಿಲ್ಲವೇ ? ನಾಗಕನ್ಯೆಯರೂ ಸುಂದರರಿರುತ್ತಾರೆ. ಆರ್ಯತರುಣರು ಅವರಿಗೆ ಮರು ಳಾಗುತ್ತಾರೆ. ಅಂದರೆ ನಾಗರಿಗೆ ಇಲ್ಲಿಂದ ದೂರ ಹೋಗಿರಿ ಎಂದು ಹೇಳು ವದು ಯೋಗ್ಯವಲ್ಲವೇ ! ಈಗಂತೂ ಆರ್ಯಕನ್ಯೆಯರೂ ನಾಗರನ್ನು ಮದುವೆಯಾಗತೊಡಗಿದ್ದಾರೆ. ಆರ್ಯರು ನೀಚ ನಾಗರೊಡನೆ ಲಗ್ನವಾಗ ಬೇಕೆ ? ಇದು ಅಧಃಪತನವಲ್ಲವೇ ? ನಮ್ಮ ಮಕ್ಕಳು ಮರಿಗಳ ಅಧಃಪತನ ವನ್ನು ಕಣ್ಣಿನಿಂದ ನೋಡಬೇಕೇ? ಹೀಗೆ ಅನೇಕ ಪ್ರಶ್ನೆಗಳು ತಲೆತಿನ್ನಹತ್ತಿವೆ. ಪ್ರಜೆಗಳಲ್ಲಿಯೂ ಕೂಡ ಇದೇ ಚರ್ಚೆ. ಈ ಸಮಯದಲ್ಲಿ ರಾಜನ ಕರ್ತವ್ಯ ವೇನು ? ನನ್ನ ಕರ್ತವ್ಯವೇನು ? ಎಂಬುದನ್ನು ನನಗೆ ತಿಳಿಸಿ, ಮಾರ್ಗ ದರ್ಶನ ಮಾಡಿರಿ.

ಸಭೆಯೆಲ್ಲ ತಟಸ್ಥವಾಗಿತ್ತು. ರಾಜನು ಮಹತ್ವದ ಪ್ರಶ್ನೆಗೆ ಕೈ ಹಾಕಿದ್ದನು. ಉತ್ತರವನ್ನು ಕೇಳಲು ಎಲ್ಲರೂ ಆತುರರಾಗಿದ್ದರು. ಗಿಡದ ಮೇಲಿನ ಪಕ್ಷಿಗಳು ಕೂಡ ಶಾಂತವಿದ್ದವು. ಆಶ್ರಮದಲ್ಲಿಯ ಚಿಗರೆಯು ಸಹ ಉಪದೇಶವನ್ನು ಕೇಳಲು ಕಿವಿಗಳನ್ನು ಅರಳಿಸಿ ನಿಂತಿತ್ತು. ಕುದು ರೆಯು ಹೂಂಕರಿಸಿ, ತಾನೂ ಉತ್ಸುಕವಾಗಿದ್ದೇನೆ ಎಂಬುದನ್ನು ತೋರಿಸಿತು.

ಆಸ್ತಿಕರ ತಲೆಯಮೇಲೆ ಗಿಡಗಳಿಂದ ಹೂಗಳು ಉದರಿದವು. ವೃಕ್ಷ ಗಳು ಗುರುದೇವನ ಪೂಜೆಗೈದವು. ಆಸ್ತಿಕರು ಕ್ಷಣಹೊತ್ತು ಗಂಭೀರರಾಗಿ ' ರಾಜಾ ! ಶ್ರೇಷ್ಠರಾರು ? ಕನಿಷ್ಠರಾರು ? ನಾವು ಈಗ ನಾಗರ ಪ್ರದೇಶಕ್ಕೆ ಬಂದಿದ್ದೇವೆ. ಅವರಿಗಿಂತಲೂ ನಮ್ಮ ಸಂಸ್ಕೃತಿಯು ಉಚ್ಚವೆಂದು ನಾವು ಅನ್ನಹತ್ತಿದೆವು. ಯಾರ ಸಂಸ್ಕೃತಿಯು ಶ್ರೇಷ್ಠವಿದೆಯೋ ಅವರೇ ಬದುಕಲು

ಯೋಗ್ಯರೆಂದು ಹೇಳಲು ಹತ್ತಿದೆವು. ಆದರೆ ಯಾವ ಸಂಸ್ಕೃತಿಯು ಶ್ರೇಷ್ಠವಿದೆಯೋ ಅದು ಎರಡನೆಯ ಸಂಸ್ಕೃತಿಗೆ ಬೆದರುವದಿಲ್ಲ. ಎರಡನೆಯ ಸಂಸ್ಕೃತಿಯನ್ನು ಹತ್ತರ ಕರೆದು, ಅದನ್ನು ಪವಿತ್ರಗೊಳಿಸುತ್ತದೆ. ಗಂಗೆಯು ಶ್ರೇಷ್ಠವೇಕೆ ? ಅದು ಅನೇಕ ಪ್ರವಾಹಗಳನ್ನು ತನ್ನಲ್ಲಿ ಅರಗಿಸಿಕೊಂಡರೂ ತಾನು ಪವಿತ್ರವಾಗಿಯೇ ಉಳಿಯುತ್ತದೆಂದಲ್ಲವೇ? ಇತರ ಪ್ರವಾಹಗಳನ್ನು ಅದು ತುಚ್ಛವೆಂದು ಭಾವಿಸುದಿಲ್ಲ. ಸರ್ವನದಿಗಳಲ್ಲಿಯೂ ಹೊಲಸು ಇದ್ದೇ ಇರುತ್ತದೆ. ಕೊನೆಗೆ ಅದೆಲ್ಲವೂ ಕೆಳಗೆ ಕೂಡ್ರುತ್ತದೆ. ಮತ್ತು ಒಂದು ದೊಡ್ಡ ಗಂಭೀರ ಪ್ರವಾಹವಾಗಿ ಅದು ಮುಂದೆ ಸಾಗುತ್ತದೆ. ಆರ್ಯರಾದ ನಾವು ಶ್ರೇಷ್ಠರಲ್ಲವೇ? ಶ್ರೇಷ್ಠರು ಸರ್ವರನ್ನು ಹತ್ತರ ತೆಗೆದುಕೊಳ್ಳಬೇಕು. ಮಾನವ ಪ್ರಾಣಿಯು ಇತರ ಪ್ರಾಣಿಗಳಿಗಿಂತ ಶ್ರೇಷ್ಠವೇಕೆ? ಏಕೆಂದರೆ ಅವನು ಕೇವಲ ತನ್ನ ವಿಚಾರವನ್ನಷ್ಟೇ ಮಾಡದೆ, ಸಕಲ ವಿಶ್ವದ ವಿಚಾರವನ್ನು ಮಾಡುತ್ತಾನೆಂದಲ್ಲವೇ ? ನರನು ಕೊನೆಗೆ ವಿಶ್ವಾನರ, ವೈಶ್ವಾನರನು ಇದ್ದಾನೆ. ಮನುಷ್ಯನು ವಿಶ್ವದ ಕೂಸು. ಅವನು ನಕ್ಷತ್ರಗಳ ಬಗೆಗೆ ವಿಚಾರಿಸುವನು. ವಾಯುವಿನ ಬಗ್ಗೆ ವಿಚಾರಿಸುವನು. ಪಶುಪಕ್ಷಿಗಳಿಗೆ ಎಂದೂ ದುಃಖ ಕೊಡುವದಿಲ್ಲ. ಗಿಡಗಳನ್ನು ಸುಮ್ಮನೆ ಮುರಿಯುವದಿಲ್ಲ. ಅವನು ಸರ್ವವನ್ನು ಮರ್ಯಾದಿತವಾಗಿ ಸಂರಕ್ಷಿಸುವನು. ರಾಜಾ, ಒಂದು ವೇಳೆ ಮಾನವನು ವಿಶ್ವಾಮಿತ್ರನಾಗಬೇಕಿದ್ದರೆ, ವೈಶ್ವಾನರನಾಗ ಬೇಕಿದ್ದರೆ, ನಾಗರನ್ನು ಹತ್ತರ ಬರಮಾಡಿಕೊಳ್ಳುವದಿಲ್ಲವೇಕೆ ? ಅವರ ವಿಷಯವಾಗಿ ನಾವು ಸಹಾನುಭೂತಿಯನ್ನು ತೋರುವದಿಲ್ಲವೇಕೆ ? ನಾವು ಅಗ್ನಿಗೆ ವೈಶ್ವಾನರನೆನ್ನುತ್ತೇವೆ. ಅವನು ದೊಡ್ಡ ದೇವರೆಂದು ತಿಳಿಯುತ್ತೇವೆ. ಯಾರು ಅಗ್ನಿ ಉಪಾಸಕರಿರುವರೋ ವೈಶ್ವಾನರನ ಪೂಜಕರಿರುವರೋ ಅವರು ಹೇಗೆ ನಡೆಯಬೇಕು. ? ಅಗ್ನಿಯು ಪ್ರತಿಯೊಂದು ಮನೆಯಲ್ಲಿಯೂ ಹೊತ್ತುತ್ತದೆ. ಪ್ರಕಾಶವನ್ನು ಕೊಡುತ್ತದೆ. ಉಷ್ಣತೆಯನ್ನು ನಿರ್ಮಿಸುತ್ತದೆ. ಅನ್ನವನ್ನು ಸಿದ್ಧಪಡಿಸುತ್ತದೆ. ಉಪಕಾರಕವಾದ ಈ ಅಗ್ನಿಯ ಶೋಧವನ್ನು ಯಾವನು ಮಾಡಿದನೋ ಅವನು ಮಾನವ ಜಾತಿಯ ದೊಡ್ಡ ಸೇವಕನೆಂದೇ ಹೇಳಬೇಕು. ಈ ಅಗ್ನಿಯ ಉಪಾಸನೆಯನ್ನು ಮಾಡಿ ನಾವು ಸರ್ವತ್ರ ಜ್ಞಾನವನ್ನು ಹಬ್ಬಿಸೋಣ, ಉಷ್ಣತೆಯನ್ನು ನಿರ್ಮಿಸೋಣ, ಪ್ರಕಾಶವನ್ನು

ಕೊಡೋಣ ನಡೆ. ಭಿನ್ನ ಭಿನ್ನ ಪ್ರದೇಶಗಳಲ್ಲಿ ಭಿನ್ನ ಭಿನ್ನ ವಿಚಾರಗಳು ಬೆಳೆಯುತ್ತವೆ. ಅವೆಲ್ಲವುಗಳನ್ನು ಚನ್ನಾಗಿ ಹೊಂದುಗೂಡಿಸೋಣ.

ನಾಗರನ್ನು ದೂರವಿಟ್ಟರೆ ಅವರು ಸುಧಾರಿಸುವ ಬಗೆ ಹೇಗೆ? ಉಳಿದೆಲ್ಲ ಜಾತಿಗಳನ್ನು ಕೀಳೆಂದು ಬಗೆದರೆ ಅವರ ಉನ್ನತಿಯೆಂತು? ಅದರಂತೆಯೋ ಅವರ ದೇವತೆ ಹಾಗೂ ಅವರ ರೀತಿ, ನೀತಿಗಳನ್ನು ಶಸ್ತ್ರದಿಂದ ನಷ್ಟ ಪಡಿಸಿದರೂ ಉಪಯೋಗವಿಲ್ಲ. ನಾಗರು ಹಾವಿನ ಉಪಾಸನೆಯನ್ನು ಮಾಡುವರೆಂದು ನಾವು ನಗುತ್ತೇವೆ. ಆದರೆ ಅದರಲ್ಲಿ ನಗುವಂತಹದೇನಿದೆ? ಮನುಷ್ಯನಿಗೆ ಯಾವದು ಭವ್ಯ, ದಿವ್ಯ, ಭೀತಿದಾಯಕ, ಹಾಗೂ ಆಶ್ಚರ್ಯವೆನಿಸುವದೋ ಅವನು ಅದನ್ನು ಪೂಜಿಸಹತ್ತುವನು. ನಮ್ಮದಂತ ಕತೆಗಳಾದರೂ ಆಕಾಶದಲ್ಲಿಯ ನಕ್ಷತ್ರಗಳನ್ನು ನೋಡಿ ನಿರ್ಮಿಸಿಲ್ಲವೇ? ನಮ್ಮ ಪೂರ್ವಜರು ಆಕಾಶವನ್ನು ನಿರೀಕ್ಷಿಸುತ್ತಿದ್ದರು. ಅವುಗಳನ್ನು ಕುರಿತು ಕಾವ್ಯಗಳನ್ನು ರಚಿಸಿದರು. ಈ ಧ್ರುವ ನಕ್ಷತ್ರವು ಒಂದು ಸ್ಥಳದಲ್ಲಿ ಸ್ಥಿರವೇಕೆ? ಅದಕ್ಕೆ ತಂದೆ ಇರಬೇಕು. ಅವನು ತನ್ನ ಉದ್ದವಾದ ಕಾಲುಗಳಿಂದ ಒದೆದಿರಬೇಕು. 'ಆದುದರಿಂದ ಆ ರಾಜನಿಗೆ ಉತ್ತಾನಪಾದನೆಂದು ಹೆಸರು ಬಂದಿರಬೇಕು. ಆದ್ದರಿಂದ ಧ್ರುವನು ವನಕ್ಕೆಹೋದ. ತಪಸ್ಸು ಮಾಡಿದ, ಸ್ಥಿರವಾದ ಪದವನ್ನು ಹೊಂದಿದ. ಹೀಗೆ ಧ್ರುವ ನಕ್ಷತ್ರವನ್ನೇ ಕೇಂದ್ರವಾಗಿಟ್ಟುಕೊಂಡು ಅದ್ಭುತ ರಮ್ಯ, ಸುಂದರವಾದ ಕಥೆಯನ್ನು ರಚಿಸಿದರು. ಒಂದೆಡೆಯಲ್ಲಿ ಏಳು ನಕ್ಷತ್ರಗಳನ್ನು ನೋಡಿದರು. ಅವುಗಳಿಗೆ ಸಪ್ತಋಷಿಗಳೆಂದು ಹೆಸರಿಟ್ಟರು. ಮೃಗದ ಹಾಗೆ ಇನ್ನೂ ಕೆಲವು ನಕ್ಷತ್ರಗಳು ಕಾಣುತ್ತವೆ. ನಡುವೆ ಬಾಣದಂತೆ ತೋರುತ್ತದೆ. ಆದರಾಚೆಗೆ ಒಂದು ತೇಜಸ್ವಿಯಾದ ನಕ್ಷತ್ರವು ಹೊಳೆಯುತ್ತದೆ. ಆ ನಕ್ಷತ್ರಕ್ಕೆ ವ್ಯಾಧನೆಂದು ಹೆಸರಿಟ್ಟರು. ಈ ವ್ಯಾಧ ಹಾಗೂ ಚಿಗರೆ ಆಕಾಶದಲ್ಲಿ ಎಲ್ಲಿಂದ ಬಂದವು? ರಚಿಸಿರುವರು ದಂತ ಕತೆಯನ್ನು. ಹೀಗೆ ಆಕಾಶವನ್ನು ನೋಡಿ, ನಮ್ಮ ಪುರಾಣಗಳಲ್ಲಿ ಅನೇಕ ಕತೆಗಳು, ಆಖ್ಯಾಯಿಕೆಗಳು ರೂಪುಗೊಂಡಿವೆ. ಆ ಕಥೆಗಳಲ್ಲಿ ನಾವು ನಮ್ಮ ಅನಭವವನ್ನು ' ನಮ್ಮ ಧ್ಯೇಯವನ್ನು ಅದರಲ್ಲಿ ತುಂಬುತ್ತೇವೆ. ಆದುದರಿಂದ ಆ ಕತೆಗಳು ಅತಿ ರಮ್ಯವಾಗಿ

ಕಾಣುತ್ತವೆ. ಕವಿಗಳು ನಮ್ಮ ಜೀವನದ ಆಶೆ ಆಕಾಂಕ್ಷೆಗಳನ್ನು ಕಾವ್ಯದಲ್ಲಿ ತುಂಬಿರುವ ಮೂಲಕವೇ, ಆ ಕಾವ್ಯವು ನಮ್ಮ ಹೃದಯವನ್ನು ಅರಳಿಸುತ್ತದೆ.

ಅನೇಕ ಕಡೆಗೆ ಸುಂದರವಾದ ಅನೇಕ ಉಷಾ ಸ್ತೋತ್ರಗಳು ದೊರೆಯುತ್ತವೆ. ರಮ್ಯಳಾದ ಉಷೆಯು ಎಲ್ಲೆಲ್ಲಿ ಹೇಗೆ ಕಂಡಳೋ ಅಲ್ಲಲ್ಲಿ ಋಷಿಗಳು ಹಾಗೇ ವರ್ಣಿಸಿದ್ದಾರೆ. ನಾವು ಸೂರ್ಯ, ಅಗ್ನಿ, ವರುಣ, ಇಂದ್ರ, ಉಷಾ, ಮೊದಲಾದವುಗಳನ್ನು ದೇವತೆಗಳೆಂದು ಭಾವಿಸುತ್ತೇವೆ. ನೀರಿನ ಉಪಾಸನೆಯನ್ನು ಮಾಡುತ್ತೇವೆ ಅಂದಮೇಲೆ, ಯಾರಾದರೂ ವಿಶಾಲ ವೃಕ್ಷದ ಉಪಾಸನೆಗೈದರೆ ನಗುವದೇಕೆ? ನಾಗರ ಉಪಾಸನೆಯನ್ನು ಮಾಡಿದರೆ, ಚೇಷ್ಟೆಯೇಕೆ ? ರಾಜಾ; ನಿನಗೆ ಗುಟ್ಟಿನ ಮಾತೊಂದನ್ನು ಹೇಳುವೆ. ಕೇಳು. ಈ ಎಲ್ಲ ಕಲ್ಪನೆಗಳಿಗೆ ನಾವು ಶ್ರೇಷ್ಠ ಕಲ್ಪನೆಯ ಮುದ್ರೆಯನ್ನೊತ್ತಬೇಕು. ಅಂದರೆ ಎಲ್ಲವೂ ಸರಿಹೋಗುವದು. ಎಷ್ಟೋ ಕಡೆಗೆ ಶಿಶ್ನ ದೇವರನ್ನು ಪೂಜಿಸುವ ಜನಾಂಗವೂ ಇದೆ. ಅವರು ಜನನೇಂದ್ರಿಯದ ಪ್ರತಿಮೆಯನ್ನು ರಚಿಸಿ, ಪೂಜಿಸುವರು. ಅದನ್ನು ನೋಡಿ ನಾವು, ನಗಬಾರದು. ಆ ಲಿಂಗ ಪೂಜೆಗೆ ಉದಾತ್ತತೆಯ ಸ್ವರೂಪವನ್ನು ನಾವು ಕೊಡಬೇಕು. ಲಿಂಗಪೂಜೆಯಂದರೆ ಶಕ್ತಿಯ ಪೂಜೆ. ಯಾವ ಶಕ್ತಿಯಿಂದ ಈ ವಿಶ್ವದ ನಿರ್ಮಾಣವಾಗುತ್ತದೆಯೋ ಅದೇ ಶಕ್ತಿಯ ಪೂಜೆ! ಎಂಬ ಶ್ರೇಷ್ಠ ಕಲ್ಪನೆಯನ್ನು ನಾವು ಅದಕ್ಕೆ ಕೊಡಬೇಕು. ಈ ಶಕ್ತಿಯು ಕ್ಷೋಭಿಸಿದರೆ ಪ್ರಳಯವಾದೀತು. ಆ ಶಕ್ತಿಯು ಶಮನವಾದರೆ ಕಲ್ಯಾಣವಾದೀತು. ಅದುದರಿಂದಲೇ ನಾವು ಶಕ್ತಿ ಹಾಗು ಶಿವ ಎಂಬೆರಡು ದೇವತೆಗಳನ್ನು ನಿರ್ಮಿಸಿದೆವು. ಈ ಶಿವನು ತನ್ನ ಜ್ಞಾನ ಚಕ್ಷುವಿನಿಂದ ಕಾಮನನ್ನು ಭಸ್ಮ ಮಾಡಿದನೆಂದು ಕತೆಯನ್ನು ನಿರ್ಮಿಸಿದೆವು. ಕೆಲವರು ಶಿಶ್ನದೇವನ ಪೂಜಕರಿರಬಹುದು. ಆದರೆ ನಮ್ಮ ಪ್ರತಿಭಾವಂತರಾದ ಪೂರ್ವಜರು, ಅವರ ದೇವತೆ, ಹಾಗೂ ಅವರ ಕಲ್ಪನೆಗಳನ್ನೇ ತೆಗೆದುಕೊಂಡು, ಅವುಗಳಿಗೆ ಉದಾತ್ತ ಹಾಗೂ ಪವಿತ್ರವಾದ ಅರ್ಥವನ್ನು ಕಲ್ಪಿಸಿದರು. ಈ ಕಲ್ಪನೆಯೇ ಮುಂದೆ ರೂಢವಾಯಿತು. ಮುಂದೆ ಜನನೇಂದ್ರಿಯಗಳ ಈ ಮಂದಿರಗಳು ಗಂಭೀರವೆನಿಸಿದವು.

ವೈರಾಗ್ಯದ ಮಂದಿರಗಳಾದವು. ಅಲ್ಲಿ ಕಾಮನನ್ನು ದಹಿಸಿದ ಶಂಕರನ ನೆನಪು ಆಗಹತ್ತಿತು. ಸಂಸಾರವು ಸುಖಮಯವಾಗಬೇಕಿದ್ದರೆ, ನಾವು ಸಂಯಮಿಗಳಾಗಬೇಕು. ಈ ಶರೀರವೆಂದರೆ ಈಶ್ವರನ ಮಂದಿರ. ಅದು ಪವಿತ್ರವಾಗಿರಬೇಕಲ್ಲವೇ? ಅದರಲ್ಲಿಯ ಇಂದ್ರಿಯಗಳು ಶುದ್ಧವಾಗ ಬೇಕಲ್ಲವೇ? ಈ ಬಗೆಯ ಭಾವನೆಗಳು ಆ ಮಂದಿರಗಳಲ್ಲಿ ಉತ್ಪನ್ನವಾದಾವು. ಈ ದೃಷ್ಟಿಯಿಂದ ಎಲ್ಲ ಜಾತಿ, ಮತಗಳೊಡನೆ ಬೆರೆಯುವಾ. ಮೇಲೆ ಮೇಲೆ ನೋಡಿ ಯಾವುದನ್ನು ಕೀಳವೆಂದು ಭಾವಿಸೋಣ ಬೇಡ.

ರಾಜಾ! ಪ್ರತಿಯೊಬ್ಬ ಮನುಷ್ಯನು ಕೆಲವು ವಿಷಯಗಳಲ್ಲಿ ಹೆಚ್ಚು ವಿಕಸಿತನಾಗಿದ್ದರೆ, ಕೆಲವು ವಿಷಯಗಳಲ್ಲಿ ಕಡಿಮೆ ವಿಕಸಿತನಾಗಿರುತ್ತಾನೆ. ಆದುದರಿಂದ ಎರಡನೆಯವರಿಗಿಂತ ನಾನು ಶ್ರೇಷ್ಠನೆಂದು ಹೇಳುವದು ಹೇಗೆ? ಆರ್ಯರಲ್ಲಿ ಕೆಲವು ಗುಣಗಳು ಶ್ರೇಷ್ಠವಿದ್ದರೆ, ಆರ್ಯೇತರರಲ್ಲಿ ಕೆಲವು ಗುಣಗಳು ಶ್ರೇಷ್ಠವಿರಬಹುದು. ಪರಸ್ಪರರು ಒಳ್ಳೇ ಗುಣಗಳನ್ನು ಕಲಿತರೆ, ಪೂರ್ಣತೆಗೆ ನೆರವಾಗುವದಿಲ್ಲವೇ? ಆರ್ಯ ಹಾಗೂ ನಾಗರಲ್ಲಿ ವಿವಾಹವಾದರೆ ಏನು ಕೆಟ್ಟಿತು? ನಾವು ಎಲ್ಲರೂ ಒಂದೇ ದೇಶದಲ್ಲಿರುವೆವು. ಒಂದೇ ಬಗೆಯ ಆಹಾರವನ್ನು ತೆಗೆದುಕೊಳ್ಳುವೆವು. ಅದೇ ನೀರನ್ನು ಕುಡಿಯುವೆವು. ಅದೇ ಹವೆಯನ್ನು ಉಸುರಾಡಿಸುವೆವು ನಾವೆಲ್ಲರೂ ಇಲ್ಲಿಯವರೇ. ಅಂದ ಮೇಲೆ ವಿವಾಹಕ್ಕೆ ಅಡ್ಡಿ ಏಕೆ? ನಾಗಕನ್ಯೆಯಾದ ಚಿತ್ರಾಂಗದೆಯೊಡನೆ ಅರ್ಜುನನು ಮದುವೆಯಾದ. ಅವಳ ಹೊಟ್ಟೆಯಿಂದ ಹುಟ್ಟಿದ ಬಭ್ರುವಾಹನನೇನು ಕಡಿಮೆ ಪರಾಕ್ರಮಿಯೇ? ಅವನಕಿಂತಲೂ ಒಂದು ಕೈ ಮೇಲೆಯೇ. ಅನೇಕ ಮಹರ್ಷಿಗಳು ಕೂಡ ಈ ಬಗೆಯ ಸಂಬಂಧಗಳಿಂದಲೇ ಹುಟ್ಟಿರುವದಿಲ್ಲವೇ? ಯಾವ ವಿವಾಹದಿಂದ ಸುಖವಾಗುವದು? ಇದಕ್ಕೆ ಎರಡು ಸಂಗತಿಗಳ ಅವಶ್ಯಕತೆ ಇರುತ್ತದೆ. ಸಮಾನ ಧರ್ಮವು ಅವಶ್ಯ. ಧರ್ಮವೆಂದರೆ ಗುಣಧರ್ಮ. ಸಮಾನಧ್ಯೇಯ, ಸಮಾನ ಅಭಿರುಚಿಗಳಿದ್ದರೆ ಒಳ್ಳೇದು. ಕೇವಲ ಸಾಧರ್ಮ್ಯವು ಪೂರ್ಣವಾಗಿ ಉಪಯೋಗ ಬೀಳುವದಿಲ್ಲ. ನಾವು ಯಾವುದರಿಂದ ಆಕರ್ಷಿಸಲ್ಪಡುವೆವೋ ಅಲ್ಲಿ ಎರಡು ಶಕ್ತಿಗಳ ಕ್ರಿಯೆಯು ನಡೆದಿರುತ್ತದೆ. ಕೆಲವು ಸಮಾನ ಗುಣಧರ್ಮಗಳು

ನಮ್ಮನ್ನು ಆಕರ್ಷಿಸುತ್ತವೆ. ಕೆಲವು ವಿಶಿಷ್ಟ ಸಂಗತಿಗಳಿಂದ ಆಕರ್ಷಿಸಲ್ಪಡುತ್ತವೆ. ನನ್ನಲ್ಲಿ ಏನಿದೆಯೋ ಅದು ಎರಡನೆಯವರಲ್ಲಿಯೂ ಇದೆ. ಅಲ್ಲದೆ ಯಾವುದು ನನ್ನಲ್ಲಿ ಇಲ್ಲವೋ, ಯಾವುದರ ಅವಶ್ಯಕತೆ ನನಗೆ ಇರುವದೋ, ಅಂತಹ ಕೆಲವು ಸಂಗತಿಗಳು, ಎರಡನೆಯ ವ್ಯಕ್ತಿಗಳಲ್ಲಿರುತ್ತವೆ. ನೀರಡಿಕೆಯಾದೊಡನೆಯೆ ನಾವು ನೀರಿನ ಕಡೆಗೆ ಎಳೆಯಲ್ಪಡುತ್ತೇವೆ. ಚಳಿಯೆನಿಸಿದೊಡನೆಯೇ ಅಗ್ನಿಯ ಹತ್ತರ ಕೂಡುತ್ತೇವೆ. ಅಂದರೆ ಯಾವ ಯಾವ ವಸ್ತುಗಳ ಅವಶ್ಯಕತೆ ನಮಗೆ ಎನಿಸುವದೋ ಮತ್ತು ಅವು ನಮ್ಮಲ್ಲಿ ಇಲ್ಲವೋ ಆ ವಸ್ತುಗಳ ಕಡೆಗೆ ನಾವು ಓಡುತ್ತೇವೆ. ಆ ವಸ್ತುವು ಸಿಕ್ಕರೆ ಬದುಕುವೆವು. ಇಲ್ಲವೆ ಸಾಯುವೆವು. ಲಗ್ನವೆಂದರೆ ಒಂದು ಬಗೆಯ ಪೂರ್ಣತೆಯು. ಪರಸ್ಪರರಲ್ಲಿ ಯಾವ ಕೊರತೆಯಿರುವದೋ ಅದನ್ನು ಪರಸ್ಪರರು ಪೂರ್ಣ ಮಾಡಿ, ಇಬ್ಬರೂ ಕೂಡಿಯೇ ಬೆಳೆಯುವದು. ಒಂದೇ ಧ್ಯೇಯದ ಸ್ತ್ರೀಪುರುಷರಿದ್ದರೂ ಪ್ರಖರ ವೃತ್ತಿಯ ಸ್ತ್ರೀಗೆ ಅದೇ ಧ್ಯೇಯದ ಆದರೆ ಸೌಮ್ಯವೃತ್ತಿಯ ಪತಿಯು ರುಚಿಸಬಹುದು. ಅದರಿಂದಲೇ ಅವರ ಪರಿಪೂರ್ಣತೆಯಾಗುತ್ತದೆ. ಆದುದರಿಂದ ಯಾವುದರಿಂದ ನಿಜವಾಗಿ ಒಬ್ಬರನ್ನೊಬ್ಬರು ಆಕರ್ಷಿಸಲ್ಪಡುತ್ತಾರೋ ಅವರು ಬೆರೆಯುವದರಿಂದಲೇ ಅವರ ಪರಿಪೂರ್ಣತೆಯಾಗುತ್ತದೆ. ಅವರಲ್ಲಿಯೇ ಅವರ ವಿಕಾಸವಿರುತ್ತದೆ. ಸೌಮ್ಯ ಮನುಷ್ಯರಿಗೆ ಪ್ರಖರತೆಯ ಜೋಡು ಸಿಗುತ್ತದೆ. ಪ್ರಖರತೆಗೆ ಸೌಮ್ಯವೃತ್ತಿಯ ಜೋಡು ಸಿಕ್ಕು ಮರ್ಯಾದೆ ಹಾಗೂ ಸಂಯಮಗಳು ಬರುತ್ತವೆ. ನಾಗರಾದರೇನು ಯಾವ ಜಾತಿಯವರಾದರೇನು ? ಬರಲಿ ಒಬ್ಬರೊಬ್ಬರು ಸಮೀಪಕ್ಕೆ. ಯಾರಿಗೆ ಯಾವುದು ಯೋಗ್ಯವೆನಿಸುವದೋ ಅವರು ಅದನ್ನೇ ಆರಿಸುವರು. ಇಷ್ಟೆಲ್ಲ ವಿಚಾರ ಮಾಡಿದರೂ ಮಾನವೀ ಜೀವನವು ಅಪೂರ್ಣವೇ ಇರುತ್ತದೆ. ಆದುದರಿಂದ ನಮ್ಮ ದೃಷ್ಟಿಯು ಹೆಚ್ಚು ಉದಾರವಾಗಿರಬೇಕು. ಸ್ವತಃಹದ ವಿಕಾಸಕ್ಕೆ ಏನು ಬೇಕೆಂಬುದನ್ನು ಸ್ತ್ರೀಪುರುಷರು ತಮ್ಮಿಬ್ಬರಲ್ಲಿ ನೋಡಿಕೊಳ್ಳುವರು. ಒಂದೇ ದೃಷ್ಟಿಕ್ಷೇಪದಿಂದ ನೋಡುವರು. ಒಂದೇ ಕಟಾಕ್ಷದಲ್ಲಿ ಅವರ ಇಡೀ ಜೀವನವೇ ಬೈಲಿಗೆ ಬರುವದು. ಅವರಲ್ಲಿಯ ಸಾಧರ್ಮ್ಯ-ವೈಧರ್ಮ್ಯಗಳು ಅಲ್ಲಿಯೇ ನಿಶ್ಚಯವಾಗುವವು. ನಾವಿಬ್ಬರು ಸಮೀಪ ಬಂದರೆ, ನಮ್ಮ ಜೀವನವು ಸಫಲವಾಗುವದು. ಎಂದು ಆ ಎರಡೂ ಜೀವನಗಳು ಮೌನ

ದಿಂದಲೇ ಮಾತನಾಡುವವು. ಪರಸ್ಪರರ ಹಸ್ತ ಸ್ಪರ್ಶದಿಂದಲೇ ಹೇಳುವವು. ನಿಮ್ಮ ಸಕಲ ಶಾಸ್ತ್ರಗಳು ಈ ಜೀವನ ಶಾಸ್ತ್ರದ ಮುಂದೆ ಕೈಯೂರುವವು. ಈ ಮಹಾನ್ ಜೀವನ ಶಾಸ್ತ್ರವು ಧರ್ಮವಾಗಿ ಪರಿಣಮಿಸಿದಾಗ ಸಂಸ್ಕೃತಿಯು ಬೆಳೆಯುವದು. ಸಜೀವತೆಯು ಕಂಡು ಬರುವದು. ಚೈತನ್ಯ ಹಾಗೂ ಸ್ಫೂರ್ತಿಗಳು ಕಾರ್ಯ ಪ್ರವೃತ್ತವಾಗುವವು. ಸಮಾಜದ ಸಂಕುಚಿತ ವೃತ್ತಿಯು ನಾಶವಾಗುವದು. ವ್ಯವಹಾರವು ಸ್ವೇಚ್ಛೆಯಾಗಿ ನಡೆಯುವದು. ಎಲ್ಲ ಕಡೆಗೆ ಪ್ರಕಾಶವು ಹಬ್ಬುವದು. ಸಮುದ್ರವು ಎಂದೂ ಬತ್ತುವದಿಲ್ಲ. ಆದು ಎಲ್ಲರನ್ನು ಹತ್ತರ ಕರೆಯುವದು. ಆದು ಯಾವಾಗಲೂ ಉಕ್ಕೇರುವದು. ಆರ್ಯರು ಸಾಗರದಂತಾಗಬೇಕು. ಸಾವಿರಾರು ಜಾತಿಗಳ ತೆರೆಗಳು ಮಾನವ ಸಾಗರದಲ್ಲಿ ಉಕ್ಕೇರಲಿ. ಹೆಚ್ಚಾಗಲಿ. ಸಾಗರದಲ್ಲಿ ಅನಂತತೆರೆಗಳು ಒಂದನ್ನೊಂದಪ್ಪಿಕೊಳ್ಳಲಿ. ಹಿಮಾಲಯದಲ್ಲಿ ಸಹಸ್ರಾರು ಶಿಖರಗಳಿವೆ. ಇಡೀ ಹಿಮಾಲಯವು ಶುಭ್ರ ಹಾಗೂ ಸ್ವಚ್ಛವಿದೆ. ನೂರಾರು ಜೀವನದಾಯಿಯಾದ ನದಿಗಳಿಗೆ ಜನ್ಮವನ್ನೀಯುತ್ತದೆ. ಸರ್ವ ಪ್ರಕಾರದ ವೃಕ್ಷ, ವನಸ್ಪತಿಗಳಿಗೆ ಆಶ್ರಯವಿತ್ತು ಅರಳಿಸುತ್ತದೆ. ಭಾರತೀಯ ಸಮಾಜವೂ ಹೀಗೆಯೇ ಆಗಲಿ. ಬಗೆಬಗೆಯ ವಿಚಾರಗಳನ್ನು ಪ್ರಸರಿಸುವ, ನೂರಾರು ಕಲ್ಪನೆಗಳನ್ನು ಕೊಡುವ, ಸಾವಿರಾರು ರೀತಿ ನಡಾವಳಿಗಳ, ಮನೋಹರವಾದ ಪುಷ್ಪಗಳನ್ನೀಯುವ, ನೂರಾರು ಪ್ರಯೋಗಗಳನ್ನು ಮಾಡುವ, ಪರಸ್ಪರ ಸಹಕಾರ ಹಾಗೂ ಸಹಾನುಭೂತಿಗಳಿಂದ ಮುಂದೆ ಸಾಗುವಂತೆಯೂ ಮೇಲಕ್ಕೆ ಏರುವಂತೆಯೂ, ಭಾರತೀಯ ಸಮಾಜವು ಭವ್ಯವಾಗಿ ಬೆಳೆಯಲಿ.

ರಾಜಾ, ನನಗೆ ಎಲ್ಲೆಡೆಗೆ ಮಾಂಗಲ್ಯವೇ ಕಾಣುತ್ತಿದೆ. ಒಂದು ದಿನ ನಾನು ಗಿಡವನ್ನು ರಾತ್ರಿಯ ಸಮಯದಲ್ಲಿ ಕಡಿಯುತ್ತಿದ್ದೆ. ಆಗ ಒಬ್ಬ ವೃದ್ಧ ನಾಗಮಾತೆಯು ಬಂದು ಬೇಡಪ್ಪಾ ಬೇಡ. ರಾತ್ರಿ ಎಲೆಗಳು ಮಲಗುತ್ತವೆ. ಗಿಡಗಳು ನಿದ್ದೆ ಮಾಡುತ್ತವೆ. ಕಡಿಯಬೇಡ ಎಂದಳು. ನಾನು ಆಕೆಯನ್ನು ನೋಡಿ ನಗಲಿಲ್ಲ. ಆಕೆಗೆ ನಮಸ್ಕರಿಸಿದೆ. ಆಕೆಯು ಕಲ್ಪನೆಯು ತಪ್ಪಿರಬಹುದು. ಆದರೆ ಆಕೆಯು ಸರ್ವತ್ರದಲ್ಲಿ ಚೈತನ್ಯವನ್ನು ನೋಡುತ್ತಿದ್ದಾಳೆ. ವೃಕ್ಷಕ್ಕೂ ಕೂಡ ಸುಖದುಃಖಗಳಾಗುವವೆಂದು

ವಿಚಾರ ಮಾಡುತ್ತಿದ್ದಾಳೆ. ನಾನು ನನನ್ನೇ ಕ್ಷುದ್ರನೆಂದು ಬಗೆದೆ. ಆ ಮಾತೆಯು ದೊಡ್ಡವಳೆಂದು ತಿಳಿದೆ. ರಾಜಾ, ಸರ್ವರಿಗೂ ವಿಕಾಸದ ವೇಳೆ ಬರುತ್ತದೆ ಯಾವ ಯಾವ ಗಿಡಗಳಿಗೆ ಯಾವಾಗ ಸಮಯ ಬರುವದೋ ಆಗ ಅವು ಚಿಗುರೊಡೆದು ನಲಿಯುತ್ತವೆ. ಹೊಸ ಹಣ್ಣು ಹಂಪಲಗಳಿಂದ ತುಂಬಿ ತುಳುಕುತ್ತವೆ. ಇಂದು ಒಂದಕ್ಕಾದರೆ ಇನ್ನೊಂದು ದಿನ ಮತ್ತೊಂದಕ್ಕೆ. ಅಂತೂ ಎಲ್ಲರ ವಿಕಾಸವು ಆಗಿಯೇ ಆಗುತ್ತದೆ. ಯಾರೂ ಬಂಜೆಯಲ್ಲ. ಈ ದೃಷ್ಟಿಯಿಂದ ನಾವು ಮುಂದೆ ಸಾಗೋಣ. ಆವರವರ ವಿಕಾಸಕ್ಕೆ ಸಹಾಯಕರಾಗೋಣ. ನಮ್ಮ ವಿಕಾಸವನ್ನು ನಾವು ಮಾಡಿಕೊಳ್ಳಬೇಕಾಗಿದ್ದರೆ, ಎರಡನೆಯವರ ಬಗೆಗೆ ಆದರವನ್ನು ತಾಳದೆ ಎಂದೂ ಶಕ್ಯವಿಲ್ಲ. ನಾನೇನು ಹೇಳಲಿ. ಈ ತರುಣರಿಗೆ ನಾನು ಇದನ್ನೇ ಕಲಿಸುತ್ತಿದ್ದೇನೆ. ನನ್ನ ಎದುರಿಗೆ ಈ ಕಪ್ಪು, ಕೆಂಪು ಮೂರ್ತಿ ಗಳು ಕೂತಿವೆ. ಅವುಗಳಲ್ಲಿ ನನಗೆ ದಿವ್ಯತ್ವವು ಕಾಣುತ್ತಿದೆ. ಅವೆಲ್ಲವೂ ಸುಗಂಧವುಳ್ಳ ಪುಷ್ಪಗಳು. ಅವರ ಜೀವನದಲ್ಲಿ ಅಪ್ರಕಟ ವಾಗಿದ್ದ ಸುಗಂಧವನ್ನು ಪ್ರಕಟಮಾಡುವದೇ ನನ್ನ ಕೆಲಸ. ಗುರುವು ಹೊಸದನ್ನೇನೂ ಕಲಿಸುವದಿಲ್ಲ. ಏನು ಇದೆಯೋ ಅದು ಪ್ರಕಟವಾಗ ಲಿಕ್ಕೆ ಸಹಾಯವನ್ನು ಮಾತ್ರ ಮಾಡುತ್ತಾನೆ. ಹತ್ತಿಕ್ಕಲ್ಪಟ್ಟ ಸುಗಂಧವನ್ನು ಹೊರಗೆ ತರುತ್ತಾನೆ. ಯಾವದು ಬದ್ಧವಾಗಿದೆಯೋ ಅದನ್ನು ಮುಕ್ತ ಮಾಡುವದೇ ಗುರುವಿನ ಕೆಲಸ. ಘರ್ಷಣದಿಂದ ಕಟ್ಟಿಗೆಯಲ್ಲಿರುವ ಅಗ್ನಿಯು ಪ್ರಕಟವಾಗುವಂತೆ, ಸಂಸ್ಕಾರಗಳ ಘರ್ಷಣದಿಂದ ಮಾನವೀಯ ಅಂತಃಕರಣದಲ್ಲಿದ್ದ ದಿವ್ಯತೆಯು ಪ್ರಕಟವಾಗುವದು. ಸುಗಂಧವು ಅನೇಕ ಪ್ರಕಾರದ್ದಿದೆ. ಸವಿಯೂ ಅನೇಕ ಬಗೆಯಾಗಿದೆ. ಈ ಛಾತ್ರರಲ್ಲಿಯ ದಿವ್ಯತೆಯು ಅನೇಕ ಬಗೆಯಾಗಿದೆ. ಇವನ ದಿವ್ಯತೆಯನ್ನು ಅವನಿಗೆ ತೋರಿಸುವೆ. ಅವನ ದಿವ್ಯತೆಯನ್ನು ಇವನಿಗೆ ತೋರಿಸುವೆ. ಈ ಆಶ್ರಮ ದಲ್ಲಿ ಏನು ನಡೆದಿದೆಯೋ ಅದೇ ಸಮಾಜದಲ್ಲಿ ನಡೆಯಬೇಕು. ಮತ್ತು ಅದು ಬೆಳೆಯುತ್ತ ಹೋಗಬೇಕು ಎಂಬುದೇ ನನ್ನ ಇಚ್ಛೆ. ಆದರೆ ವಿಚಾರ ಗಳು ಅನಂತ. ಕೊನೆಗೆ ನಮ್ರಪೂರ್ವಕವಾಗಿ ನಿಶ್ಚಯ ವೃತ್ತಿಯಿಂದ ತನ್ನ ಹೃದಯದಲ್ಲಿಯ ಸತ್ಯಕ್ಕೆ ಅಂಟಿಕೊಂಡು ಉಳಿಯಬೇಕು. ಕೊನೆಗೆ

ತನ್ನ ಹೃದಯದಲ್ಲಿಯ ಸತ್ಯದ ಮೇಲೆಯೇ ಶ್ರದ್ಧೆಯನ್ನಿಡಬೇಕು. ಸ್ವತಃದ ಪ್ರಯೋಗಗಳ ಮೇಲೆಯೆ ವಿಶ್ವಾಸವನ್ನಿಡಬೇಕು. ಎಲ್ಲಿ ಶ್ರದ್ಧೆಯಿಲ್ಲವೋ ಅಲ್ಲಿ ವಿಕಾಸವಿಲ್ಲ. ಶ್ರದ್ಧೆಯು ಸ್ವಯಂ ಪ್ರಕಾಶವಾದ ತತ್ವವು. ಶ್ರದ್ಧೆಗೆ ಶ್ರದ್ಧೆಯೇ ಉದಾಹರಣೆ. ಅದು ಸ್ವತಃ ಪ್ರಮಾಣ. ಶ್ರದ್ಧೆಯನ್ನು ತುಚ್ಛ ವೆಂದೆಣಿಸಬೇಡ. ಅದು ಒಂದು ಸ್ವತಂತ್ರವಾದ ಶಕ್ತಿ. ಶ್ರದ್ಧೆಯ ನಾಶ ವೆಂದರೆ ಸ್ಫೂರ್ತಿಯ ನಾಶ. ಆದುದರಿಂದ ನಾನು ನನ್ನ ಶ್ರದ್ಧೆಯನ್ನು ತೆಗೆದುಕೊಂಡು ಮುಂದೆ ಸಾಗುತ್ತೇನೆ. ನನ್ನ ದೀಪವು ನನ್ನ ಕೈಯಲ್ಲಿ. ಅದು ಎರಡನೆಯವರಿಗೆ ಕಾಣುತ್ತಿದೆಯೋ ಇಲ್ಲವೊ ನನಗೆ ಗೊತ್ತಿಲ್ಲ. ಆದರೆ ನನಗೆ ಮಾತ್ರ ಕಾಣಿಸುತ್ತದೆ ಈ ಸಂಗತಿಯು ಮಾತ್ರ ಸತ್ಯವಿದೆ."

ಆಸ್ತಿಕನು ಶಾಂತನಾದನ . ಒಂದು ಚಿಗರಿಯು ಬಂದು ಅವನನ್ನು ನೆಕ್ಕ ತೊಡಗಿತು. ತನ್ನ ಕೋಡುಗಳಿಂದ ಅವನನ್ನು ತುರಿಸಹತ್ತಿತು. ಪ್ರಾಣಿ ಮಾತ್ರಗಳ ಮೇಲೆ ಪ್ರೇಮವನ್ನು ಮಾಡುವ ಆ ಮಹರ್ಷಿಗೆ ತನ್ನ ಕೃತಜ್ಞತೆಯನ್ನು ಆ ಹರಿಣವು ಪ್ರಕಟಗೊಳಿಸುತ್ತಿತ್ತೋ ?

ಹೊತ್ತು ಮುಳುಗಿತು. ಸಾಯಂಪ್ರಾರ್ಥನೆ ಹಾಗೂ ಸಂಧ್ಯಾ ಸಮಯವು ಸಮೀಪಿಸಿತು. ಸಭೆ ಮುಗಿಯಿತು. ಎಲ್ಲರೂ ಗಂಭೀರರಾಗಿ ದ್ದರು. ಮೌನರಾಗಿದ್ದರು. ರಾತ್ರಿ ಫಲಹಾರವಾದ ನಂತರ ಎಲ್ಲರೂ ವಿಶ್ರಾಂತಿಯನ್ನು ಪಡೆದರು. ಬೆಳಿಗ್ಗೆ ರಾಜನು ಸರ್ವ ಋಷಿಗಳೊಡನೆ ಹೊರಟನು.

"ರಾಜನೆ, ಪರಿಸ್ಥಿತಿಯು ಕಠಿಣವಿದೆ. ನೀನು ದಕ್ಷನಾಗಿರು. ವಿಶಾಲ ದೃಷ್ಟಿಯುಳ್ಳವನಾಗು. ನಾನು ನಿನಗೆ ಏನು ಹೇಳಲಿ ! ನೀನು ಸಮಯ ಜ್ಞನೆ ಇರುತ್ತಿ" ಎಂದು ಆಸ್ತಿಕನು ರಾಜನನ್ನು ಬೀಳ್ಕೊಟ್ಟನು.

"ಭಗವಾನ್ ನಿಮ್ಮ ಆಶೀರ್ವಾದವೇ ನನ್ನ ಶಕ್ತಿ, ಇತ್ತೀಚೆಗೆ ನನ್ನ ಸಂಕಲ್ಪ ಶಕ್ತಿಯೆಲ್ಲವೂ ನಾಶವಾಗುತ್ತ ನಡೆದಿದೆ. ಏನಾಗುವದೋ ಏನೋ ನನ್ನ ಕೈಯಿಂದ ತಪ್ಪಾಗುವ ಮೊದಲೇ, ನನ್ನ ಕಣ್ಣುಗಳು ಮುಚ್ಚಲಿ. ನನ್ನ ರಾಜ್ಯದಲ್ಲಿ ಪ್ರಕ್ಷೋಭವು ಉತ್ಪನ್ನವಾಗುವ ಮೊದಲೇ, ನನ್ನ ಪ್ರಾಣವು ಹೋಗಲಿ" ಎಂದು ಪರೀಕ್ಷಿತನು ನುಡಿದನು.

"ನೀನು ಚಿರಂಜೀವಿಯಾಗು. ನೀನು ಹೋದನಂತರ ಬಹಳ ಕಠಿಣ ಕಾಲವು ಪ್ರಾಪ್ತವಾಗುವದೆಂದು ನನಗೆ ಅನಿಸುತ್ತದೆ. ನೀನಿರುವಾಗಲೇ ಈ ಪ್ರಶ್ನೆಯು ಬಿಟ್ಟರೆ ಬಿಡಬಹುದು." ಎಂದು ಆಸ್ತಿಕನು ಚಿಂತೆಯಿಂದ ಮಾತ ನಾಡಿದನು."

"ಸತ್ಯವು ಸ್ವತಃಹದ ಎಚ್ಚರಿಕೆಯನ್ನು ತೆಗೆದುಕೊಳ್ಳುವದು" ಎಂದನು ಪರೀಕ್ಷಿತ.

ಇಷ್ಟರಲ್ಲಿ ನಾಗೇಶನು ರಸಭರಿತವಾದ ಫಲಗಳ ಒಂದು ಬುಟ್ಟಿಯನ್ನು ತಕ್ಕೊಂಡು ಬಂದನು. ಅದನ್ನು ಆಸ್ತಿಕನ ಕಡೆಗೆ ಕೊಟ್ಟನು. 'ರಾಜನೆ! ಈ ರಸಭರಿತವಾದ ಹಣ್ಣುಗಳನ್ನು ತೆಗೆದುಕೊ. ಆಶ್ರಮದ ಗುರುತಿದು. ನಾವು ನಮ್ಮ ಧ್ಯೇಯವನ್ನು ಈ ಬುಟ್ಟಿಯಲ್ಲಿ ನಿನ್ನ ಸಂಗಡ ಕಳಿಸುತ್ತಿದ್ದೇವೆ. ಈ ನಾಗೇಶನು ನಾಗಜಾತಿಯ ತರುಣನು. ನಾಗೇಶನಿಗೆ ಈ ಕಲ್ಪನೆಯು ಹೊಳೆಯಿತು. ನೀನು ಹಣ್ಣುಗಳ ವಿಷಯವಾಗಿ ನಿನ್ನೆ ಮಾತಾಡಿದ ಸಂಗತಿಯು ಅವನ ಲಕ್ಷ್ಯದಲ್ಲಿತ್ತು. ಅವನು ಒಳ್ಳೇ ಹುಡುಗ. ಅವನ ಶರೀರವು ದೊಡ್ಡದಿದ್ದಂತೆ ಅವನ ಮನಸ್ಸು ದೊಡ್ಡದಿದೆ. ಅವನು ದೊಡ್ಡ ಕಲಾವಂತನು. ಸುಂದರ ಹೂಗಳ ಮಾಲೆಗಳನ್ನು ಹೆಣೆಯುವನು. ಚಿಗುರೆಲೆಗಳ ತೋರಣವನ್ನು ಕಟ್ಟುವನು. ಬಿದುರುಗಳಿಂದ ಕೊಳಲುಗಳನ್ನು ಮಾಡುವನು" ಎಂದು ಆಸ್ತಿಕನು ಹೇಳಿದನು.

"ಅವನನ್ನು ನೋಡಿ ನನಗೂ ಬಹಳ ಆನಂದವಾಗಿದೆ. ಎಲ್ಲರ ಲಕ್ಷ್ಯವೂ ಅವನ ಕಡೆಗೆ ಎಳೆಯಲ್ಪಡುತ್ತದೆ. ಹಾಗೇ ಇರುವನು ಅವನು" ಎಂದನು ಪರೀಕ್ಷಿತ.

"ಆದರೆ ಅವನಿಗೆ ನಿದ್ದೆಯು ಬಹಳ ಬರುವದು" ಎಂದು ನಗುತ್ತ ಆಸ್ತಿಕನು ನುಡಿದನು.

"ನಿರ್ಮಲ ಮನಸ್ಸಿದೆ" ಎಂದು ಪರೀಕ್ಷಿತನು ನುಡಿದನು.

ಅತಿಥಿಗಳೆಲ್ಲ ಹೋದರು. ವಿದ್ಯಾರ್ಥಿಗಳೆಲ್ಲ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದರು. ಭಗವಾನ್ ಆಸ್ತಿಕನು ವಿಚಾರಮಗ್ನನಾಗಿದ್ದನು. ಆದರೆ ಅವನ ಮನಸ್ಸಿನಲ್ಲಿ ಏನು ನಡೆದಿತ್ತು?

೮

ನಾಗಾನಂದನು ವತ್ಸಲೆಯ ಹೊಲದಲ್ಲಿ ವಾಸಿಸುತ್ತಿದ್ದನು. ಅದನ್ನು ಅವನು ಒಂದು ಸುಂದರವಾದ ಉಪವನವನ್ನಾಗಿ ನಿರ್ಮಿಸಿದ್ದನು. ಒಂದು ವಿಶಾಲವಾದ ಭಾವಿಯನ್ನು ತೋಡಿದ್ದನು. ಅದಕ್ಕೆ ದೊಡ್ಡ ಸವಿನೀರಿನ ಶೆಲೆಯು ಬಿದ್ದಿತ್ತು. ನೀರು ವಿಪುಲವಾಗಿತ್ತು. ಅದಕ್ಕೆ ಒಂದು ಕೈರಾಟಿಯನ್ನು ಕೂಡಿಸಿದ್ದನು. ಆ ಹೊಲದಲ್ಲಿ ತೀರ ಸಾದಾ, ಆದರೆ ಸುಂದರವಾದ ಒಂದು ಗುಡಿಸಲವನ್ನು ಹಾಕಿದ್ದನು. ದಿನವೆಲ್ಲ ಹೊಲದಲ್ಲಿ ದುಡಿಯುತ್ತಿದ್ದನು. ಭೂಮಿಯು ಬಹಳ ಬೆಳೆಯುಳ್ಳದ್ದಿತ್ತು. ಆದರಲ್ಲಿ ಬಂಗಾರವನ್ನು ಬೆಳೆಯ ಬಹುದಾಗಿತ್ತು. ನಾಗಾನಂದನು ಕಾವಲಿಗುಂಟ ಅನೇಕ ಹೂವಿನಗಿಡಗಳನ್ನು ಹಚ್ಚಿದ್ದನು. ಪಲ್ಲೆಕಾಯಿಗಳನ್ನು ನೆಟ್ಟಿದ್ದನು. ಹತ್ತರವೇ ಒಂದೆಡೆಯಲ್ಲಿ ಆಕಳ ಕೊಟ್ಟಿಗೆಯಿತ್ತು. ಆಕಳುಗಳ ಯೋಗಕ್ಷೇಮವನ್ನು ಸ್ವತಃ ನೋಡುತ್ತಿದ್ದನು. ಗೋಗಳಿಗೆ ಹುಲ್ಲು ತಿನಿಸುತ್ತಿದ್ದನು. ಹೂವಿನ ಮಾಲೆಮಾಡಿ ಅವುಗಳ ಕೊರಳಿಗೆ ಹಾಕುತ್ತಿದ್ದನು. ಗೋಪಾಲ ಕೃಷ್ಣನ ಅನೇಕ ಹೃದಯಂಗಮ ಕಥೆಗಳನ್ನು ಅವನು ಕೇಳಿದ್ದನು. ಅದರಂತೆಯೇ ಅವನು ಆಕಳಗಳೊಡನೆ ಆಡುತ್ತಿದ್ದನು. ಆಕಳುಗಳನ್ನೆಲ್ಲ ಒಂದೆಡೆ ಸೇರಿಸುವನು. ಕೊಳಲನ್ನು ಊದುವನು. ಅವುಗಳನ್ನು ಕಾಯ್ದು ಕೊಂಡು ಮನೆಗೆ ಬರುವನು. ಒಂದು ವೇಳೆ ಅವೆಲ್ಲವೂ ಒಂದೆಡೆಯಲ್ಲಿ ಸೇರದಿದ್ದರೆ ಕೊಳಲನ್ನೂದುತ್ತ ಸಂಚರಿಸುವನು. ಒಮ್ಮೊಮ್ಮೆ ಒಂದು ಗಿಡದ ಬುಡದಲ್ಲಿ ಕುಳಿತು, ಕೊಳಲನ್ನೂದಿದನೆಂದರೆ ಸೃಷ್ಟಿಯೆಲ್ಲವೂ ಮೈಮರಿಯುತ್ತಿತ್ತು.

ಹೊಲವು ವತ್ಸಲೆಯ ಮನೆಯಿಂದ ಸ್ವಲ್ಪ ದೂರದಲ್ಲಿತ್ತು. ನಾಗಾನಂದನು ದಿನಾಲು ಬೆಳಿಗ್ಗೆ ಹೂಗಳನ್ನೂ ಕಾಯಿ ಪಲ್ಲೆಗಳನ್ನೂ ವತ್ಸಲೆಯ ಮನೆಗೆ ಒಯ್ದು ಕೊಡುತ್ತಿದ್ದನು. ಹಾಲನ್ನೊಯ್ಯುತ್ತಿದ್ದನು. ಆದರೆ ಒಂದು ದಿವಸ ಇನ್ನೂ ಬೆಳಗಾಗಿದ್ದಿಲ್ಲ. ವತ್ಸಲೆಯು ಹೊಲಕ್ಕೆ ಬಂದಳು. ಅದು ಅಶ್ವೀನ ಮಾಸ. ಹುಲ್ಲು ಎತ್ತರವಾಗಿ ಬೆಳೆದಿತ್ತು. ಇಬ್ಬನ್ನಿಯಿಂದ ಅದೆಲ್ಲವೂ ತೊಯ್ದಿತ್ತು. ಆ ತೋಯ್ದ ಹುಲ್ಲಿನಲ್ಲಿಯೇ ಆಕೆ ಬಂದಳು. ನಾಗಾನಂದನು ಆಕಳ ಹಿಂಡುತ್ತಿದ್ದನು. ವತ್ಸಲೆಯು ಎದುರಿಗೆ ಬಂದು ನಿಂತಳು. ಆಕಳವು ಕರವನ್ನು ನೆಕ್ಕುತ್ತಿತ್ತು.

" ಎಲ್ಲ ಹಾಲನ್ನು ಹಿಂಡಬೇಡಿರಿ. ಕರಕ್ಕಷ್ಟು ಉಳಿಯಲಿ. " ಎಂದಳು.

" ವತ್ಸಲೆಗೇ ಕರದ ಬಗೆಗೆ ಚಿಂತೆ " ಎಂದನು.

" ನಿಮಗೆ ಅನಿಸುವದಿಲ್ಲವೆಂದು ನಾನು ಅನ್ನಲಿಲ್ಲ ! " ಎಂದಳು.

" ವತ್ಸಲೇ ನಾನು ಎರಡು ಮೊಲೆಗಳನ್ನು ಕರಕ್ಕಾಗಿ ಬಿಡುವೆ. ಎರಡನ್ನೇ ಹಿಂಡುವೆ " ಎಂದನು.

ವತ್ಸಲೆಯು ಕಾಲುವೆಯ ದಂಡೆಯ ಮೇಲಿರುವ ಹಸಿರು ಹುಲ್ಲನ್ನು ಕಿತ್ತು ತಂದು ಆಕಳಿಗೆ ಹಾಕಿದಳು. ಆಕಳು ಆನಂದದಿಂದ ಆದನ್ನು ತಿನ್ನ ಹತ್ತಿತು. ಆಕೆಯು ಆಕಳದ ಕುತ್ತಿಗೆಗೆ ಕೈಚಾಚಿದಳು. ಅದು ಮೋರೆಯನ್ನು ಮೇಲಕ್ಕೆತ್ತಿತು.

" ಪಶುಗಳಿಗೂ ಕೂಡಾ, ಪ್ರೇಮವುಳ್ಳ ಮನುಷ್ಯರು ಬೇಕಾಗುತ್ತಾರೆ " ಎಂದನು ನಾಗಾನಂದ.

" ಆದರೆ ಮನುಷ್ಯರಿಗೆ ಬೇಡ " ಎಂದಳು ವತ್ಸಲೆ.

" ನೀನು ಇಂದು ಇಷ್ಟು ಬೆಳಿಗ್ಗೆ ಏಕೆ ಬಂದೆ ? ನಿನ್ನ ಸೀರೆಯೆಲ್ಲ ತೊಯ್ದು ಹೋಗಿದೆ. ಹುಲ್ಲಿನ ಊಬು ನಟ್ಟಿರಬಹುದು. ನಾನು ಬೆಳಿಗ್ಗೆ ದಿನಾಲು ನಿಮ್ಮ ಕಡೆಗೆ ಬರುವೆ. ದಿನಾಲು ನನ್ನ ಕಾಲುಗಳು ತೊಯ್ದು ಹೋಗುತ್ತವೆ. ಏನು, ಆ ಹುಲ್ಲು ಅಳುತ್ತಿದೆಯೇ ? ನನ್ನನ್ನು ಇನ್ನು ಮೇಲೆ ಬೇಗನೆ ಕೊಯ್ಯುವರೆಂದು ಅದಕ್ಕೆ ಚಿಂತೆಯೇ ? ಅಂತೆಯೇ ಅದಕ್ಕಷ್ಟು ಕಣ್ಣೀರೇನು ? ಆ ಎಲ್ಲ ಹುಲ್ಲು ಪ್ರತಿಯೊಬ್ಬರ ಪಾದದ ಮೇಲೆ

ಬಿದ್ದು ಅಳುತ್ತಿರುತ್ತದೆ. ದಿನಾಲು ನಾನು ಬರುವಮುಂದೆ ಅಳುತ್ತ, ನನ್ನ ಪಾದಕ್ಕೆ ಎರಗುವದು. ಆದರೆ ಅವುಗಳನ್ನು ತುಳಿದು ನಾನು ಬರಬೇಕಾಗುವದು." ಎಂದನು ನಾಗಾನಂದ.

"ನಿಮ್ಮ ಕಾಲು ಬೀಳುವವರನ್ನು ನೀನು ತುಳಿಯುವಿಯಾ? ಅವರನ್ನು ಅಳಿಸುವಿಯಾ? ನಾಗರು ಇಷ್ಟು ನಿಷ್ಠುರರಿರುವರೋ?" ಎಂದು ಅವನ ಕಡೆಗೆ ನೋಡುತ್ತ ವತ್ಸಲೆ ನುಡಿದಳು.

"ಆದರೆ ನೀನು ಇಂದು ಬೆಳಗಾಗುವದರೊಳಗಾಗಿಯೇ ಏಕೆ ಬಂದೆ?" ಎಂದು ನಾಗಾನಂದನು ವಿಚಾರಿಸಿದನು.

"ಹೊಲದ ಸೌಂದರ್ಯವನ್ನು ನೋಡಲು ಬಂದೆ. ಸೂರ್ಯೋದಯದ ಶೋಭೆಯನ್ನು ಕಾಣಲುಬಂದೆ. ಆಶ್ರಮದಲ್ಲಿದ್ದಾಗ ನಾನು ಬೆಳಿಗ್ಗೆ ಏಳುತ್ತಿದ್ದೆ. ಇಬ್ಬನ್ನಿಯ ಹಾರವನ್ನು ಹಾಕಿಕೊಂಡು ನಗುತ್ತ ಬರಲಿರುವ, ಉಷಾದೇವಿಯನ್ನು ನೋಡುತ್ತಲಿದ್ದೆ. ಆದರೆ ಮನೆಯನ್ನು ಸೇರಿದ ನಂತರ ಹಾಸಿಗೆಯಲ್ಲಿಯೇ ಹೊರಳಾಡುತ್ತೇನೆ. ಇಂದು ಆಲಸ್ಯವನ್ನು ಕಿತ್ತೊಗೆದೆ. ಪ್ರಭಾತದ ಮಂದಮಾರುತವು ನವಜೀವನವನ್ನು ನನಗೆ ಕೊಡುತ್ತಲಿತ್ತು. ನನಗೆ ಉತ್ಸಾಹವೆನಿಸಿತು. ದಿನಾಲು ಬೆಳಿಗ್ಗೆ ಏಳಬೇಕು. ಇಲ್ಲಿಗೆ ಬರಬೇಕು ಎನಿಸಿತು. ದಿನಾಲು ನೀವು ಹಾಲು, ಹೂವು, ಹಣ್ಣುಹಂಪಲಗಳನ್ನು ತೆಗೆದುಕೊಂಡು ಬರುವದಕ್ಕಿಂತ ನಾನೇ ಇಲ್ಲಿಗೆ ಬಂದು ಒಯ್ಯುವೆನು. ನನಗೂ ಸ್ವಲ್ಪು ಕೆಲಸವನ್ನು ಮಾಡಗೊಡಿರಿ. ನೀವು ಹೂಗಳನ್ನು ಬುಟ್ಟಿಯಲ್ಲಿ ತುಂಬಿಡಿರಿ. ಹಾಲನ್ನು ಪಾತ್ರೆಯಲ್ಲಿ ಹಿಂಡಿ ಇಡಿರಿ. ನಾನು ಬಂದು ಒಯ್ಯುವೆ. ನಿಮ್ಮ ಕೈಯಲ್ಲಿಯ ಹೂಗಳನ್ನು ನಾನು ಒಯ್ಯುವೆ. ತಲೆಯಲ್ಲಿ ಮುಡಿಯುವೆ. ನೀವು ಆಕಳುಗಳ ಕೊರಳಲ್ಲಿ ಮಾಲೆಯನ್ನು ಹಾಕುತ್ತೀರಿ. ಆಗ ವತ್ಸಲೆಯ ಕೊರಳು ನಿಮಗೇಕೆ ನೆನಪಾಗುವದಿಲ್ಲ? ನನ್ನ ಕೊರಳು ಏಕೆ ಕೀಳು? ಇಗೋ ನೋಡಿರಿ, ಶಂಖದ ಹಾಗೆ ಹೇಗೆ ಶುಭ್ರವಾಗಿ ಇದೆ, ನನ್ನ ಕೊರಳು. ಹಾಕಿರಿ, ಮಾಲೆಯನ್ನು ನನ್ನ ಕೊರಳಲ್ಲಿ. ನನ್ನ ಕೊರಳಿಗೆ ಮಾಲೆಯನ್ನು ಯಾರು ಹಾಕುವರು? ನಿಮ್ಮ ಕೊರಳಿಗೆ ಹಾಕಬೇಕೆಂದು ಅಂದು ನಾನು ಮಾಲೆಯನ್ನು ಹೆಣೆದಿದ್ದೆ. ಆದರೆ ನೀವು

ಹೇಳದೆ ಕೇಳದೆ ಹೋಗಿಬಿಟ್ಟಿರಿ. ಆ ಹಾರವನ್ನು ಗೂಟಕ್ಕೆ ಹಾಕಿದ್ದೆ. ನಿಮ್ಮ ಸಲುವಾಗಿ ನಾನು ಹೆಣೆದ ಮೊದಲನೇ ಹಾರವದು. ನನ್ನ ಹೃದಯದ ಕೋಮಲತೆಯನ್ನೂ ಮಾಧುರ್ಯವನ್ನೂ ಅದರಲ್ಲಿ ಸುರುವಿದ್ದೆ. ಆದರೆ ಅದು ಒಣಗಿಹೋಯಿತು. ನಂತರ ನಾನು ಪ್ರತಿದಿನ ಹಾರವನ್ನು ಕಟ್ಟುವೆ. ಹಾಗು ಕಪೋತಾಕ್ಷಿಗೆ ಒಪ್ಪಿಸುವೆ. ಈ ನದಿ ಕಪೋತಾಕ್ಷಿಯು ಹೇಗಾದರೂ ಮಾಡಿ ನಿಮಗೆ, ಈ ಹಾರಗಳನ್ನು ಒಪ್ಪಿಸುವಳು ಎಂದು ಅನಿಸಿತು " ಎಂದು ವತ್ಸಲೆಯು ಸುಮ್ಮನಾದಳು. ಮುಂದೆ ಆಕೆಗೆ ಮಾತನಾಡುವದು ಆಗಲಿಲ್ಲ.

' ನಾನು ಒಂದು ದಿನ ಕಪೋತಾಕ್ಷಿಯ ಪ್ರವಾಹದಲ್ಲಿ ಮುಳುಗಿದ್ದೆ. ನಿಜವಾದ ಹಾರವು ಬಂದಿತು. ತಾಯಿ, ಕಪೋತಾಕ್ಷಿಯ ಪ್ರೇಮ ಪ್ರವಾಹದಲ್ಲಿ ನಾನು ಮುಳುಗಿದ್ದೆ. ನಾನು ಅಂಗಾತ ಈಸುತ್ತಿದ್ದೆ. ಸೂರ್ಯಕಿರಣಗಳು ಮುಖದ ಮೇಲೆ, ಕುಣಿಯುತ್ತಿದ್ದವು. ಕೆಳಗೆ ತೆರೆಗಳು ನನ್ನನ್ನು ಕುಣಿಸುತ್ತಿದ್ದವು. ಒಮ್ಮೆಲೆ ತಲೆಯ ಕೂದಲಲ್ಲಿ ಏನೋ ಸಿಕ್ಕಂತಾಯಿತು. ಹಾವು ಇರಬಹುದೇ ? ಎಂದು ಗಾಬರಿಯಾದೆ. ನಾನು ನಾಗಪೂಜಕನಿದ್ದರೂ ಅಂಜಿಕೆಬಂದಿತು. ನಮಗೆ ಶ್ರದ್ಧೆಯೆಲ್ಲಿ ? ಒಮ್ಮೆಲೆ ನಾನು ಡಬ್ಬಬಿದ್ದೆ. ತಲೆಯಮೇಲೆ ಕೈಯಾಡಿಸಿದೆ. ಅದು ಹಾವು ಇರದೆ ಹೂಗಳ ಸುಂದರವಾದ ಹಾರವಿದ್ದಿತು. ನಾನು ಅದನ್ನು ತೆಗೆದುಕೊಂಡು ಮೇಲೆ ಬಂದೆ. ಅದನ್ನು ಮೂಸಿದೆ, ಎದೆಗೆ ಒತ್ತಿಕೊಂಡೆ, ಹೃದಯಕ್ಕೆ ಅವಚಿಕೊಂಡು ನಾನು ಎಷ್ಟು ಹೊತ್ತು ನಿಂತಿದ್ದೆನೋ ದೇವರಿಗೇ ಗೊತ್ತು " ಎಂದು ನಾಗಾನಂದನು ತನ್ನ ನೆನಪನ್ನು ಹೇಳಿದನು.

ಇಬ್ಬರೂ ಮಾತನಾಡಲಿಲ್ಲ. ಮೌನರಾಗಿದ್ದರು. ಇಬ್ಬರ ಮನಸ್ಸೂ ತುಂಬಿತ್ತು.

' ವತ್ಸಲೇ ಇದೇ ಹಿಂಡಿದ ಹಾಲನ್ನು ತೆಗೆದು ಕೊಳ್ಳುವಿಯಾ ? ಧಾರೋಷ್ಣ ಹಾಲು, ಎರಿದು ಅವನು ವಿಚಾರಿಸಿದನು.

' ಹಿಂದಕ್ಕೆ ಕಾರ್ತೀಕನು ಮಧುವಿನಕೊಡ ತಂದಿದ್ದ. ಇಂದು ನೀವು ಹಾಲಿನ ಪಾತ್ರೆಯನ್ನು ಮುಂದೆ ಮಾಡಿದ್ದೀರಿ. ವತ್ಸಲೆಗೆ ಈ ರಸವು ಬೇಡ·

ಇದರ ಹಸಿವೆ ನನಗಿಲ್ಲ. ನನಗೆ ಬೇಕಾಗಿದೆ ಇನ್ನೊಂದು ರಸ. ಆದಕ್ಕಾಗಿ ನಾನು ಆತುರಳಾಗಿರುವೆ.'' ಎಂದಳು.

"ನೋಡು! ಬಾಳೆಯ ಸೊನ್ನಿಯನ್ನು ಹಚ್ಚಿ ಹಾಲು ತಂದಿರುವೆ. ಹಾಲು ತೆಗೆದುಕೋ. ಒಲ್ಲೆವೆನಬೇಡ, ಗೋಮಾತೆ ಸಿಟ್ಟಾದಾಳು. ಹಾಲು ಒಲ್ಲೆವೆನಬಾರದು" ಎಂದನು.

'ನೀವೂ ನನ್ನೊಡನೆ ತೆಗೆದುಕೊಳ್ಳುವಿರಾ ?" ಎಂದಳು.

'ಒಳ್ಳೇದು, ತೆಗೆದುಕೊಳ್ಳುವೆ. ನಾಗರಿಗೆ ಹಾಲಿಗಿಂತ ಪ್ರಿಯವಾದ ಪೇಯ ಮತ್ತೊಂದಿಲ್ಲ. ಆಕಳಕರವಿನಂತೆ ಆಗಿ, ಹಾಲು ಕುಡಿಯಬೇಕೆಂದು ಒಮ್ಮೊಮ್ಮೆ ಆನಿಸುವದು. ಹಾಲು ಕುಡಿಯಬೇಕು, ಮತ್ತನಾಗಬೇಕು. ಎಂದೆನಿಸುತ್ತದೆ. ಅಂದು ಸುಶ್ರುತೆಯು, 'ಹಾಲನ್ನು ನಿನಗೆ ಸಾಕಾಗು ವಷ್ಟು ಕುಡಿ, ಉಳಿದುದನ್ನು ತೆಗೆದುಕೊಂಡು ಬಾ, ಎಂದು ಹೇಳಿದ್ದಳು. ಚಿಕ್ಕಂದಿನಲ್ಲಿ ತಾಯಿಯ ಹಾಲು, ಬೆಳೆದ ಮೇಲೆ, ಗೋಮಾತೆಯ ಹಾಲು! ನಾಗದೇವನಿಗೆ ನಾವು ಹಾಲಿನ ನೈವೇದ್ಯವನ್ನೇ ಇಡುತ್ತೇವೆ" ಎಂದನು.

"ಹಾಲು ಕುಡಿದು ವಿಷವನ್ನು ಸಿದ್ಧಪಡಿಸುವದಿಲ್ಲವೇ" ಎಂದಳು ವತ್ಸಲೆಯು.

"ಆದರೆ ಜಾತಿವಂತ ನಾಗವು, ಆ ವಿಷವನ್ನು ಕ್ವಚಿತ್ತಾಗಿ ಉಪಯೋಗಿ ತ್ತದೆ. ನಿಜವಾದ ನಾಗವು ನಿಜವಾದ ಸನ್ಯಾಸಿ. ಅದು ತಪಸ್ವಿ. ಆದು ಎಷ್ಟು ಸ್ವಚ್ಛ ಹಾಗು ಉಜ್ವಲ! ಎಷ್ಟು ನಿರ್ಮಲ! ಅದಕ್ಕೆ ಎಳ್ಳು ಕಾಳಿ ನಷ್ಟು ಕೂಡ ಹೊಲಸು ಸಹನವಾಗುವದಿಲ್ಲ. ತನ್ನ ಶರೀರವು ಸ್ವಲ್ಪ ಹೊಲಸು ಕಾಣಹತ್ತಿದರೆ, ಆದನ್ನು ಆದು ತೆಗೆದೊಗೆಯುತ್ತದೆ. ಆ ಸಮಯದಲ್ಲಿ ಅದಕ್ಕೆ ಎಷ್ಟೋ ವೇದನೆಯಾಗುತ್ತದೆ. ಆದರೆ ಹೊಸ, ಸುಂದರ ತೇಜಸ್ವೀ ಶರೀರವು ಬರಬೇಕೆಂದು ಆದೆಲ್ಲವನ್ನೂ ಆದು ಸಹನ ಮಾಡುತ್ತದೆ. ವೇದನೆಯಿಲ್ಲದೆ ಯಾವ ಸುಂದರ ವಸ್ತುವೂ ದೊರೆಯುವ ದಿಲ್ಲ. ವೇದನೆಯಿಂದಲೇ ಸೌಂದರ್ಯ, ವೇದನೆಯಿಂದಲೇ ವೇದ! ಎಲ್ಲ ವೇದನೆಯಿಂದಲೇ ಹೊರಬರುವದು. ಒಬ್ಬ ರಮಣಿಗೆ ದುಃಖವಾಗುತ್ತದೆ. ಆದರೆ ಆಕೆಯ ಕಣ್ಣುಗಳಿಂದ ಸುಂದರವಾದ ಮುತ್ತುಗಳು ಉದುರುತ್ತವೆ.

ಯಾವುದರಿಂದ ಸೃಷ್ಟಿಯೇ ಕರುಣಾಮಯವಾಗುವದೋ ಆ ಅಶ್ರುಗಳಿಂದಲೇ ಪ್ರೇಮವು ಅಂಕುರಿಸುವದು. ರೈತನಿಗೆ ಕಷ್ಟವಾಗುವದು. ಆವನು ಬೆವರಿನಿಂದ ಸ್ನಾನ ಮಾಡುವನು. ಆದರಿಂದ ಪೃಥ್ವಿಯು ಸಸ್ಯಶ್ಯಾಮಲೆಯಾಗಿ–ಸುಂದರಳಾಗಿ ಕಾಣುತ್ತಾಳೆ! ವೇದನೆಯೇ ನವನಿರ್ಮಿತಿಯ ಜನನಿ" ಎಂದನು.

"ನಡೆಯಲಿ ನಿಮ್ಮ ನಾಗಪುರಾಣ, ವೇದನಾ ಪುರಾಣ!" ಎಂದಳು.

"ವತ್ಸಲೇ, ನಾಗರ ಹಾಡನ್ನು ಹಾಡುತ್ತಲೇ ಇರಬೇಕೆಂದು ನನಗೆನಿಸುತ್ತದೆ. ನೋಡು! ಆ ಹಾವು ಕೇವಲ ವಾಯು ಸೇವನೆಯಿಂದ ಜೀವಿಸುತ್ತದೆ. ಎಲ್ಲರಿಂದ ದೂರವಿರುತ್ತದೆ. ಚಂದನದಸುಗಂಧ, ಹೂಗಳಪರಿಮಳ, ಮಧುರವಾದ ಸಂಗೀತ, ಆದಕ್ಕೆ ಬಹುಪ್ರಿಯ. ಸುಂದರ ಹಾಗು ಮಂಗಲ, ಸುಗಂಧ ಹಾಗು ನಿರ್ಮಲ ವಸ್ತುಗಳಿದ್ದಲ್ಲಿ ಅದು ಹೋಗುವದು. ಅಲ್ಲಿ ತನ್ನ ಹೆಡೆಯನ್ನು ಅರಳಿಸಿ ಆಡುವದು. ಅಂಥ, ಇಂಥ ತೊಂದರೆಗಳಿಗೆ ಅದು ಸಂತಾಪಗೊಳ್ಳುವದಿಲ್ಲ. ಆದರೆ ಒಮ್ಮೆ ಸಿಟ್ಟಿಗೆದ್ದರೆ ತೀರಿತು. ಒಂದೇ ಕಡಿತದಿಂದ ಮುಗಿಸಿಯೇ ಬಿಡುವದು. ಅದರ ವಿಷವೆಂದರೆ ಅದರ ಸಾಮರ್ಥ್ಯ! ಅದನ್ನು ಅದು ಎಂದೂ ವ್ಯರ್ಥವಾಗಿ ಹಾಳು ಮಾಡುವದಿಲ್ಲ. ಮರಣಾಂತಿಕ ಪ್ರಸಂಗದ ಹೊರತು ಅದು ಕಚ್ಚುವದಿಲ್ಲ. ಅದು ಸಂಯಮಿ ಇದೆ. ಆದುದರಿಂದಲೇ ನಿಶ್ಚಿತವಾದ ಅಮೋಘವಾದ ಸಾಮರ್ಥ್ಯವು ಅದರಲ್ಲಿದೆ." ನಾಗಾನಂದನು ನಾಗಸ್ತುತಿಯನ್ನು ಮಾಡುತ್ತಲೇ ಇದ್ದನು.

'ಹಾಲು ಕೊಡುವದಿಲ್ಲವೇ, ಎಂದಳು.

'ತೆಗೆದುಕೋ ಈ ದೊನ್ನೆಯನ್ನು. ಈ ನೊರೆ ಹಾಲು ಹೇಗಿದೆ?, ಎಂದನು.

ಇಬ್ಬರೂ ಹಾಲು ಕುಡಿದರು. ವತ್ಸಲೆಯು ಗುಡಿಸಲದೊಳಗೆ ನೋಡಹತ್ತಿದಳು. ಅಲ್ಲಿ ಬಹಳ ಸಾಮಾನಗಳಿರಲಿಲ್ಲ. ಎರಡು ಕಂಬಳಿ, ಹುಲ್ಲಿನ ಬುಟ್ಟಿ, ಸುಂದರವಾದ ಕೊಳಲು ಮಾತ್ರ ಕಂಡವು.

'ನಿಮಗೆ ಕೊಳಲು ಊದಲು ಬರುವದೇ?'

'ಬರುತ್ತದೆ.'

‘ ನಿಮಗೆ ಯಾರು ಕಲಿಸಿದರು ? ’

‘ ನದಿಗಳಿಂದಲೂ, ಎಲೆಗಳ ಸಪ್ಪಳದಿಂದಲೂ, ಪಕ್ಷಿಗಳ ಕಲಕಲ ಧ್ವನಿಗಳಿಂದಲೂ ಕಲಿತೆ. ಸೃಷ್ಟಿಯೇ ನನ್ನ ಗುರುವು ’

‘ ನಾನು ಕೊಳಲು ಕೇಳುವೆ, ಸ್ವಲ್ಪ ಊದುವಿರಾ. ’ ಎಂದು ಲಜ್ಜಿತಳಾಗಿ ನುಡಿದಳು. ’

‘ ನಿನ್ನ ಧ್ವನಿಯೇ ಕೊಳಲಧ್ವನಿ, ನಿನ್ನ ಮಾತುಗಳೆಷ್ಟು ಮಧುರವಾಗಿವೆ ! ತುಟಿಗಳ ಕೊಳಲಿನಿಂದ, ಹೃದಯದ ಸಂಗೀತವು ಹೊರಬರುತ್ತಲಿದೆ. ಇದೇ ನಿಜವಾದ ವೇಣುನಾದ ’ ಎಂದನು.

‘ ಕೊಂಕು ಮಾತು ನನಗೆ ಬೇಡ. ಕೊಳಲು ಊದಿರಿ. ’ ಎಂದು ನಾಚುತ್ತ ರೇಗುತ್ತ ನುಡಿದಳು.

‘ ಆದರೆ ಮೊದಲು ಇನ್ನಷ್ಟು ಹಾಲು ಕುಡಿ’, ಎಂದನು.

‘ ನನಗೆ ಅಜೀರ್ಣವಾದೀತು. ಬೇಡ ’ ಎಂದಳು.

“ ಕೊಳಲು ಕೇಳಿ ಎಲ್ಲವೂ ಜೀರ್ಣವಾಗುವದು. ಅದನ್ನು ಕೇಳುವಾಗ ಹೊರಜಗತ್ತಿನ ಸ್ಮೃತಿಯೇ ನಿನಗುಳಿಯುವದಿಲ್ಲ. ತಿನ್ನುಣ್ಣುವ ಮಾತಂತೂ ದೂರೇ ಉಳಿಯಿತು. ಭಾವನೆಗಳ ಭಾರ ಸಹನೆಯಾಗಲಿಕ್ಕಿಲ್ಲ. ಆದುದರಿಂದ ಮೊದಲೇ ಸ್ವಲ್ಪ ಹಾಲು ತೆಗೆದುಕೊಂಡು ಕೂಡು. ಅಂದರೆ ತಾಳಲು ಶಕ್ತಿ ಬರುವದು. ನನ್ನ ಮಾತು ಕೇಳು “ ಎಂದನು.

‘ ನಾನು ಅಂತಹ ದುರ್ಬಲಳಲ್ಲ. ಇಷ್ಟು ದಿನಗಳ ವರೆಗೆ ನಾನು ಸಹಿಸಿದ ಭಾರಕ್ಕಿಂತ ಹೆಚ್ಚಿನ ಭಾರವು, ಈ ಜಗತ್ತಿನಲ್ಲಿ ಮತ್ತಾವುದಿದೆ. ? ಊದಿರಿ ಕೊಳಲನ್ನು ಬೇಗನೆ. ನಾನು ಅಧೀರಳಾಗಿದ್ದೇನೆ. ಗಂಡಸರು ಯಾವಾಗಲೂ ಕೊನೆಯ ಪರೀಕ್ಷೆಯನ್ನೇ ನೋಡುತ್ತಾರೆ, ಎಂದಳು.

‘ ಆವನು ಕೊಳಲನ್ನು ಕೈಯಲ್ಲಿ ತೆಗೆದುಕೊಂಡನು. ಒಂದೆರಡು ಸ್ವರ ನುಡಿಸಿ, ಅದನ್ನು ಒರಿಸಿದನು. ಏನು ಹೇಳಲಿ! ಸರ್ವಸೃಷ್ಟಿಗೆ ಆವನು ಆಮಂತ್ರಣವನ್ನಿತ್ತ. ಪಕ್ಷಿಗಳು ಹಾರುತ್ತ ಹಾರುತ್ತ ಕೇಳಲು ಹತ್ತರವೇ ಬಂದು ಕುಳಿತವು. ನಾನಾ ವರ್ಣದ ಪಕ್ಷಿಗಳು. ಅದೆಷ್ಟು ಚಂದ! ಗೋಗಳು ನಿಂತಲ್ಲಿಯೇ ಕಿವಿಗೊಟ್ಟವು ವೇಣು ನಾದಕ್ಕೆ. ಧ್ವನಿ ಬರುವತ್ತ

ಕರಗಳು ಮುಖ ತಿರುವಿ, ಗೋಣು ಮೇಲಕ್ಕೆತ್ತಿ ಆಲಿಸಹತ್ತಿದವು ವತ್ಸಲೆಯು ಶೀರೆಯನ್ನು ಸರಿಪಡಿಸಿಕೊಂಡು ಕುಳಿತಳು. ನಾಗಾನಂದನು ನುಡಿಸಹತ್ತಿದನು. ದಿವ್ಯವಾದ ಆಲಾಪವನ್ನು ಪ್ರಾರಂಭಿಸಿದ. ಅದು ಒಂದು ಪ್ರಸಿದ್ಧ ಪ್ರೇಮಗೀತವಾಗಿತ್ತು. ಕಪೋತಾಕ್ಷಿಯ ತೀರದಲ್ಲಿಯ ಸ್ತ್ರೀಯರ ನಾಲಗೆಯ ಮೇಲೆಲ್ಲ ಆ ಹಾಡು ಕುಣಿಯುತ್ತಿತ್ತು. ಆ ಹಾಡಿನಲ್ಲೇನಿತ್ತು ? ಅದರ ಭಾವಾರ್ಥವನ್ನು ಸ್ವಲ್ಪ ಹೇಳಲಾ ! ಅದರ ಪೂರ್ಣ ಅರ್ಥವನ್ನು ವಿವರಿಸುವದು ಶಕ್ತಿಯ ಹೊರಗಿನದು. ಅದು ಸ್ವಯಂ ವೇದ್ಯ. ಪುಷ್ಪಗಳ ಪರಿಮಳವನ್ನು ತಿಳಿಸಿ ಹೇಳಲು ಶಕ್ಯವೇ ? ಸಕ್ಕರಿಯ ಸವಿಯು ವ್ಯಾಖ್ಯಾನದಿಂದ ತಿಳಿಯುವದೇ? ಹಾಗೆಯೇ ಕಾವ್ಯದ್ದು! ಅದನ್ನು ಸವಿದೇ ತಿಳಿಯಬೇಕು. ಆದರೂ ಸ್ವಲ್ಪ ಹೇಳುವೆ.

‘ ಭೋಳೆ ಕಣ್ಣುಗಳೇ ! ನೀವು ಅವರ ಕಡೆಗೆ ಏಕೆ ನೋಡಿದಿರಿ ? ನೋಡಬೇಡಿರಿ! ನೋಡಬೇಡಿರಿ! ಎಂದು ಮೊದಲೇ ಹೇಳಲಿಲ್ಲವೇ! ಆದರೆ ನೀವು ಕೇಳಲಿಲ್ಲ. ಅವರ ಮೇಲೆ ವಿಶ್ವಾಸವಿಟ್ಟಿರಿ. ಮೋಸ ಹೋದಿರಿ. ಅಳಿರಿ, ಈಗ ಜನ್ಮವಿರುವತನಕ. ಅಳಿರಿ, ಈಗ ಹಗಲರಾತ್ರಿ.

ಅಧೀರ ಹುಚ್ಚು ಹೃದಯವೇ ! ಅವರಿಗೆ ಸ್ಥಳವನ್ನು ಕೊಡಬೇಡವೆಂದು ಪದೇ ಪದೇ ಹೇಳಲಿಲ್ಲವೆ ನಿನಗೆ ! ಆದರೆ ಕೇಳಲಿಲ್ಲ. ಆದರೆ ಈಗ ಮುಳ್ಳು ಒಂದೇಸವನೆ ಚುಚ್ಚುತ್ತಿದೆ. ಎಂದು ಅಳುತ್ತ ಕೂತಿರುವೆ. ಅಳಿರಿ. ಈಗ ಜನ್ಮವಿರುವತನಕ. ಅಳಿರಿ, ಈಗ ಹಗಲು ರಾತ್ರಿ.

ಎಲೆ ಕೈಗಳೇ! ಸೊರಗಿರುವೆವೆಂದು ಈಗ ಶೋಕಿಸುತ್ತಿರುವಿರಿ! ಆದರೆ ಘಟ್ಟಿಯಾಗಿ ಹಿಡಿದುಕೊಂಡು ಕೂಡುವದರಲ್ಲಿ ಶಕ್ತಿಯನ್ನೆಲ್ಲ ಕಳೆಯಬೇಡಿರೆಂದು ಮೊದಲೇ ಹೇಳಲಿಲ್ಲವೇ? ಆಗ ಕೇಳಲಿಲ್ಲ. ಬಿಗಿಯಾಗಿ ಅಪ್ಪಿಕೊಂಡಿರಿ. ಆದರೆ ಈಗ ಒಣಗಿಹೋದವು.

ಎದೆಯು ಹಾರುತ್ತವೆ. ಕಣ್ಣುಗಳು ನೀರು ಸುರಿಸುತ್ತಿವೆ. ಕೈಯಲ್ಲಿಯ ಕಂಕಣಗಳು ಕಳಚುತ್ತಿವೆ. ಆದರೆ ಜೀವನವೇ ಏಕೆ ಒಮ್ಮೆಲೆ ಹಾರಿ ಹೋಗಲೊಲ್ಲದು?

ಆದರೆ ಅವರು ಸ್ವಪ್ನದಲ್ಲಿ ಬರುವರು. ಕಣ್ಣೆದುರು ನಿಲ್ಲುವರು. ಮನ ಮೋಹಕ ಮಾತುಗಳನ್ನಾಡುವರು. ಆಲಿಂಗಿಸುವರು. ಇಂತಹ ಸ್ವಪ್ನವು ಚಿರಂಜೀವಿ ಏಕೆ ಆಗಬಾರದು? ಮಂಜು, ಸೂರ್ಯನನ್ನು ಹೊಟ್ಟೆಯಲ್ಲಿಟ್ಟು ಕೊಳ್ಳುವಂತೆ, ಸ್ವಪ್ನವೂ ಆ ಮೂರ್ತಿಯನ್ನು ಅಡಗಿಸಿಡುವದು. ಇಬ್ಬ ನ್ನಿಯು ಕರಗುವಂತೆ, ಈ ಸ್ವಪ್ನವೂ ಮಾಯವಾಗುತ್ತದೆ. ನಿದ್ರೆಯಲ್ಲಿ ಆನಂದವೀಯುವ ಸುಖಸ್ವಪ್ನವು, ಜಾಗೃತೆಯ ಹಿಮವೃಷ್ಟಿಯಿಂದ ನಷ್ಟವಾಗು ವದು. ಈ ಸ್ವಪ್ನವು ಅಮರವಾಗುವಂತಹ ಮಂತ್ರವನ್ನು ಯಾರಾದರೂ ಹಾಕುವರೇ ? ಮರಣದ ಹತ್ತಿರವಿರುವದೇ ಈ ಮಂತ್ರ ? ಜೀವನದಲ್ಲಿ ಯಂತೂ ಇಲ್ಲ. ಎಂದಿದ್ದಿತು ಆ ಹಾಡು.

ಕೊಳಲು ನುಡಿಯುತ್ತಿದ್ದಿತು. ಧ್ವನಿಯು ಗಾಳಿಗುಂಟ ಪಸರಿಸುತ್ತಿತ್ತು. ಆ ಕೊಳಲಿನಿಂದ ಸಜೀವ-ನಿರ್ಜೀವ ಸೃಷ್ಟಿಗೆ ಸಮಾಧಿ ಹತ್ತಿತು. ಸಮಾಧಿ ಯಲ್ಲಿ ಪ್ರೇಮಜ್ಯೋತಿಯ ದರ್ಶನವಾಗುತ್ತಲಿತ್ತು. ಪಕ್ಷಿಗಳು ತಟಸ್ಥವಾಗಿ ದ್ದವು. ಗೋಗಳು ನಿಂತಲ್ಲಿಯೇ ನಿಂತಿದ್ದವು. ನಾಗಾನಂದ ಹಾಗು ವತ್ಸಲೆಯು ರಿಬ್ಬರೂ ಕಣ್ಣುಮುಚ್ಚಿದ್ದರು. ಒಂದು ನಾಗವು ಬಂದು ತಲೆಹಾಕುತ್ತ ಕುಳಿ ತಿತ್ತು. ಕೊಳಲನ್ನು ಕೇಳುತ್ತಿತ್ತು. ಅದನ್ನು ನೋಡಿ ಪಕ್ಷಿಗಳು ಗಾಬರಿ ಯಾಗಲಿಲ್ಲ. ಆಕಳಗಳೂ ಕರಗಳೂ ಗಾಬರಿಯಿಂದ ಧ್ವನಿಗೈಯ್ಯಲಿಲ್ಲ. ಆ ಸಮಯದಲ್ಲಿ ನಾಗವು, ನಾಗವಿರಲಿಲ್ಲ. ಆಕಳು, ಆಕಳವಿದ್ದಿಲ್ಲ. ಪಕ್ಷಿಗಳು ಪಕ್ಷಿಗಳಾಗಿರಲಿಲ್ಲ. ಎಲ್ಲವೂ ಚೈತನ್ಯ ಮಹಾಸಿಂಧುವಿನಲ್ಲಿ ತಲ್ಲೀನವಾಗಿ ದ್ದವು. ಮುಳುಗಿದ್ದವು.

ವತ್ಸಲೆಗೆ ಸ್ಮೃತಿ ಇರಲಿಲ್ಲ. ಮಾಂತ್ರಿಕನು ಆಕೆಯನ್ನೇ ನೋಡುತ್ತಿ ದ್ದನು. ಮುಚ್ಚಿದ ನೇತ್ರಕಮಲದಲ್ಲಿಯೇ ಅವನ ದೃಷ್ಟಿ. ಆಕೆಯು ಕಣ್ತೆರೆ ದಳು. ಭಾವಪೂರ್ಣವಾದ ಕಣ್ಣುಗಳು. ಆಕೆಯು ಹುಲ್ಲಿನಮೇಲೆ ಬಿದ್ದಳು.

‘ ನನಗೆ ಸ್ವಲ್ಪ ಆಡ್ಡಾಗಗೊಡಿರಿ! ಆಕಾಶದ ಕಡೆಗೆ ನೋಡಗೊಡಿರಿ. ನಾನೀಗ ನನ್ನವಳಲ್ಲ. ಆಕಾಶದವಳು. ವಿಶ್ವದವಳು. ಸೃಷ್ಟಿಯಲ್ಲಿ ತುಂಬಿರುವ ಸಂಗೀತದವಳು. ಪ್ರೇಮದವಳು, ಎಂದಳು.

‘ ವತ್ಸಲಾ ! ಅಲ್ಲಿ ನೋಡು ಹಾವು ! ಹಾವು ! ’ ಎಂದು ಒಮ್ಮೆಲೇ ಕೂಗಿದನು ನಾಗಾನಂದ.

‘ ಎಲ್ಲಿ’ ಎಂದು ಒಮ್ಮೆಲೆ ಎದ್ದಳು.

‘ ಅಗೋ ನೋಡು. ಹೋಗುತ್ತದೆ. ಕೊಳಲು ಕೇಳಿ ಹೋಗುತ್ತಲಿದೆ ’ ಎಂದು ತೋರಿಸಿದನು.

‘ ಇಂತಹ ಭಯಂಕರ ಹಾವುಗಳು ಇಲ್ಲಿ ಬರುತ್ತವೆ. ನಿಮಗೆ ಅಂಜಿಕೆ ಬರುವದಿಲ್ಲವೇ ?’ ಎಂದಳು.

‘ ಅಂಜಿಕೆ ಬರುವದಿಲ್ಲ, ಹೀಗೇನು ಇಲ್ಲ.’ ಎಂದನು.

‘ ಹಾಗಾದರೆ ವಾಸಿಸಲು ಮನೆಗೆ ನಡೆಯಿರಲ್ಲ !’ ಎಂದಳು.

‘ ಇಲ್ಲಿಯೇ ನೆಟ್ಟಗೆ. ಇಲ್ಲಿ ಹಾವು, ಹುಲಿಗಳ ಅಂಜಿಕೆಯಿದ್ದರೂ, ನನಗಿಲ್ಲಿ ಆನಂದವೆನಿಸುತ್ತಿದೆ.’ ಎಂದನು.

‘ ಮನುಷ್ಯರಿಗಿಂತಲೂ ಅವು ಹೆಚ್ಚಿನವೇ ?, ಎಂದು ವತ್ಸಲೆಯು ವಿಚಾರಿಸಿದಳು.

‘ ಮಾನವರದೇ ಅಂಜಿಕೆ ನನಗಿನ್ನೂ. ಮನುಷ್ಯರ ವಿಶ್ವಾಸವೆನಿಸುವದಿಲ್ಲ ನನಗೆ.’ ಎಂದನು ನಾಗಾನಂದ.

೯

ವತ್ಸಲೆಯ ಊರಿಗೆ ಹುಲಿಯ ಉಪದ್ರವವಾಗಹತ್ತಿತು. ಗಂಡು ಹಾಗೂ ಹೆಣ್ಣು ಹುಲಿಗಳಿವೆ. ಅವು ಆಕಳುಗಳನ್ನು ಕೊಲ್ಲಹತ್ತಿವೆ ' ಎಂದು ಜನ ಮಾತನಾಡುತ್ತಿತ್ತು. ಹುಲಿಯನ್ನು ಕೊಲ್ಲುವವರಾರು ?

" ನಾಗಾನಂದನು ಈ ಊರಿಗೆ ಬಂದದ್ದರಿಂದ ಈ ಸಂಕಟವು ನಮಗೆ ಬಂದಿದೆ " ಎಂದನೊಬ್ಬ.

" ಅವನು ವತ್ಸಲೆಯನ್ನು ಪ್ರೀತಿಸುವ. ಆದರಂತೆ ಅವಳೂ ಅವನನ್ನು ಪ್ರೀತಿಸುವಳು. ಈ ಪಾಪವನ್ನು ನೋಡಲಾರದೆ, ದೇವರು ಈ ರೀತಿಯ ಶಿಕ್ಷೆಯನ್ನು ಕೊಡುತ್ತಿದ್ದಾನೆ " ಎಂದನು ಇನ್ನೊಬ್ಬ.

" ಅವರಿಬ್ಬರನ್ನೂ ಊರು ಬಿಟ್ಟು ಹೊರಗೆ ಹಾಕಿರಿ. " ಎಂದು ಮಗದೊಬ್ಬ

" ಆದರೆ ಅವರನ್ನು ಓಡಿಸಿಬಿಟ್ಟರೆ, ನಮ್ಮ ಹೆಣ್ಣುಮಕ್ಕಳು ಬಂಡು ಹೂಡುವರು, ಕಾಲವು ಕಠಿಣವಿದೆ " ಎಂದ ಮತ್ತೊಬ್ಬ.

" ಅವರನ್ನೇಕೆ ಹೊರದೂಡುವಿರಿ ? ಆ ಗಂಡು ಹೆಣ್ಣು ಹುಲಿಗಳನ್ನು ಹೊಡೆಯಬಾರದೇ ? ದೇವರಿಗೇಕೆ ಹೆಸರಿಡುವಿರಿ, ಇನ್ನೊಬ್ಬರಿಗೇಕೆ ಮಾತನಾಡುವಿರಿ ? ನಿಮ್ಮ ದುರ್ಬಲತೆಯನ್ನು ನೀವೇ ಹಳಿಯಿರಿ. " ಎಂದು ಒಬ್ಬ ಆರ್ಯಕನ್ಯೆಯು ನುಡಿದಳು.

" ಇವಳು ವತ್ಸಲೆಯ ಗೆಳತಿಯು. ಹುಡುಗಿ ಬಹಳೇ ದುಷ್ಟಳಿದ್ದಾಳೆ " ಎಂದೊಬ್ಬನೆಂದ.

" ವತ್ಸಲೆಯು ಗೆಳತಿಯಾಗುವದೇನು ಪಾಪವಲ್ಲ. ಆಕೆಯು ಏನು ಕೆಡುಕು ಮಾಡಿದ್ದಾಳೆ ? ಅವಳ ಪ್ರಾಣವನ್ನುಳಿಸಲು ಯಾರಾದರೂ ಮುಂದೆ ಬಂದಿರಾ ? ಯಾರು ಅವಳ ಪ್ರಾಣವನ್ನುಳಿಸಿದರೊ, ಅವರ ಚರಣಗಳಲ್ಲಿ ಆಕೆಯು ತನ್ನ ಪ್ರೇಮದ ಹಾರವನ್ನೇಕೆ ಅರ್ಪಿಸಬಾರದು ? " ಎಂದಳು.

" ಆ ತರುಣನು ಅಷ್ಟೊಂದು ಧೈರ್ಯಶಾಲಿಯಾಗಿದ್ದರೆ, ಹುಲಿಯ ಉಪದ್ರವವನ್ನೇಕೆ ನಿಲ್ಲಿಸಬಾರದು ? ನಿಜವಾದ ಶೂರರು ಸುಮ್ಮನೆಂದೂ ಕೂಡುವದಿಲ್ಲ. " ಎಂದು ಮತ್ತೊಬ್ಬನು ನುಡಿದನು.

" ಅವರು ಆ ಹುಲಿಯನ್ನು ಇಂದು ರಾತ್ರಿ ಹೊಡೆಯುವ ನಿಶ್ಚಯ ಮಾಡಿದ್ದಾರೆ " ಎಂದು ಹೇಳಿ ಅವಳು ಹೊರಟು ಹೋದಳು.

" ಸತ್ತರೆ ಪರಸ್ಪರ ಪೀಡೆ ಹೋಯಿತು " ಎಂದು ಕಾರ್ತಿಕನ ತಂದೆಯು ಅಂದನು.

" ಯಾರು ಸತ್ತರೆ ? ಹುಲಿಯೋ, ನಾಗನೋ ? " ಎಂದನೊಬ್ಬ.

" ಇಬ್ಬರೂ ಸಾಯಲಿ " ಎಂದು ಯಾರೋ ಒಬ್ಬರೆಂದರು.

ಹುಲಿಯು ಒಂದು ಆಕಳನ್ನು ಕೊಂದು, ಅಡವಿಯಲ್ಲಿ ಒಗೆದಿತ್ತು. ಅಲ್ಲಿಗೆ ಬಹುಶಃ ಅದು ರಾತ್ರಿಯಲ್ಲಿ ಬರಬಹುದೆಂದು ನಾಗಾನಂದನು ತರ್ಕಿಸಿದ. ಅವನು ಹುಲಿಯನ್ನು ಕೊಲ್ಲುವ ನಿಶ್ಚಯವನ್ನು ಮಾಡಿದನು. ಮಧ್ಯಾಹ್ನ ಮೂರು ಗಂಟೆಗೆ ವತ್ಸಲೆಯು ಹೊಲಕ್ಕೆ ಬಂದಳು. ನಾಗಾನಂದನು ಭಾಲೆಯನ್ನು ಮಸೆಯುತ್ತಿದ್ದನು. ಅದನ್ನು ಹರಿತಗೊಳಿಸುತ್ತಿದ್ದನು.

" ಹುಲಿಯ ಬೇಟೆಗೆ ನೀವು ಒಬ್ಬರೇ ಹೋಗುವಿರಾ ? ಎಂದಳು ವತ್ಸಲೆ.

" ಹೌದು " ಎಂದನು.

" ನಾನೂ ಸಂಗಡ ಬರಲ್ಯಾ ? " ಎಂದಳವಳು.

" ಬೇಡ " ಎಂದನವನು.

" ಏಕೆ ? " ಎಂದು ಅವಳು ವಿಚಾರಿಸಿದಳು.

" ಎರಡನೆಯವರ ಸಹಾಯದಿಂದ, ಅದರಲ್ಲಿಯೂ ಒಬ್ಬ ಹೆಂಗಸಿನ ಸಹಾಯದಿಂದ, ಅವನು ಹುಲಿಯನ್ನು ಹೊಡೆದನೆಂದು; ನನ್ನನ್ನು ಜನರು ನಿಂದಿಸುವರು. ನನ್ನ ಜಯಕ್ಕೆ ಕಲಂಕವು ಬೇಡ. ನಾಗಾನಂದನ ಹೆಸರಿಗೆ ಕಪ್ಪು ಹತ್ತಬೇಕೆಂದು ನಿನಗೆ ಅನಿಸುವದೇ ? " ಎಂದು ಪ್ರಶ್ನಿಸಿದನು.

" ನಾನೇನು ಎರಡನೆಯವಳೆ, ನಾನೇನು ಪರಕೀಯಳೇ ? " ಎಂದು ಅವಳು ಕಣ್ಣೀರು ಸುರಿಸುತ್ತ ಕೇಳಿದಳು.

" ಆದರೆ ನೀನು ನನ್ನ ಹೃದಯದಲ್ಲಿರುವೆ. ನನ್ನ ಜೀವನದಲ್ಲಿರುವೆ, ಆದ್ದರಿಂದಲೇ ಬರಬೇಡ. ನಿನ್ನ ಶಕ್ತಿಯು ನನ್ನ ಕೈಯಲ್ಲಿ ಬರಲಿ. ನಾವಿಬ್ಬರೂ ಪರಕೀಯರಲ್ಲ, ಆದ್ದರಿಂದ ಬರುವ ಅವಶ್ಯಕತೆಯಿಲ್ಲ." ಎಂದು ಎಂದನವ.

" ಏನಾದರೂ ಅಪಾಯವಾದರೆ ? " ಎಂದಳಾಕೆ.

" ನೀನು ನನ್ನನ್ನು ನೆನಸುವದಿಲ್ಲವೇ? " ಎಂದನಾತ. ಅವಳು ಹೆಚ್ಚಿಗೆ ಮಾತಾಡಲಿಲ್ಲ, ಸುಮ್ಮನಾದಳು. ಹೊರಟಳು. ಅವಳನ್ನು ಕಳಿಸುವದಕ್ಕಾಗಿ ಅವನು ಸ್ವಲ್ಪ ಮುಂದೆ ಬಂದನು.

" ನೀವು ಹೋಗಿರಿ, ತಿರುಗಿ ಹೋಗಲು ನಿಮಗೆ ಕತ್ತಲೆಯಾದೀತು. " ಎಂದಳು.

" ಇಂದು ಕತ್ತಲೆಯಿಲ್ಲ. ಇಂದು ಹುಣ್ಣಿವೆ " ಎಂದನು.

" ನನಗೆ ಯಾವಾಗಲೂ ಅಮಾವಾಸ್ಯೆಯೇ ಯಿದೆ." ಎಂದು ಅಂದಳು.

" ವತ್ಸಲೆಯೇ ಈ ಮೊಗ್ಗೆಗಳನ್ನು ತಗೊ. ಇವು ಸಂಜೆಗೆ ಅರಳುವವು. ಕೋಮಲ ಹಾಗೂ ಸುಂಗಧವುಳ್ಳ ಹೂಗಳಿವು. ಈ ಹೂಗಳು ಬೇಗನೆ ಬಾಡುವದಿಲ್ಲ. ಒಂವೆ ವೇಳೆ ಬಾಡಿದರೂ ಅವುಗಳ ವಾಸನೆ ಕಡಿಮೆ ಯಾಗುವದಿಲ್ಲ. ಒಣಗಿದ ಪಕಳಿಗಳಿಂದಲೇ ಹೆಚ್ಚು ವಾಸನೆಯು ಬರುತ್ತದೆ. ಅವುಗಳ ಮೇಲೆ ನೀರನ್ನು ಸಿಂಪಡಿಸಿದರೆ ಕೂಡಲೆ ಎಲ್ಲ ಕಡೆಗೆ ವಾಸನೆ ಹಬ್ಬುತ್ತದೆ. ತೆಗೆದುಕೊ ತಕ್ಕೊಳಬಾರದೇ ? " ಎಂದನು.

ಅವಳು ತಕ್ಕೊಳ್ಳಲಿಲ್ಲ. ತನ್ನ ಕೈಯ್ಯನ್ನು ಮುಂದೆ ಚಾಚಲಿಲ್ಲ.

„ ನಿನ್ನ ಚರಣ ಕಮಲಗಳಲ್ಲಿ ಅರ್ಪಿಸುವೆ. ನಿನ್ನ ಮೇಲೆ ಏರಿಸುವೆ ” ಎಂದು ಸದ್ಗದಿತನಾಗಿ ಮಾತನಾಡಿದನು. ಅವಳು ಕೈಯ್ಯನ್ನು ಮುಂದೆ ಚಾಚಿದಳು. ಅವನು ಅವಳ ಕೈಯ್ಯಲ್ಲಿ ಆ ಹೂಗಳನ್ನು ಕೊಟ್ಟನು. ಅವಳು ಅವುಗಳನ್ನು ಎದೆಗೆ ಒತ್ತಿಕೊಂಡಳು.

“ ಮೂಸಿ ನೋಡು ” ಎಂದನವನು.

“ ಈ ಹೂಗಳ ಪರಿಮಳವನ್ನು ಕೇವಲ ಮೂಗಿನಿಂದಷ್ಟೇ ತೆಗೆದುಕೊಳ್ಳುವದಿಲ್ಲ. ಈ ಹೂಗಳ ವಾಸನೆಯನ್ನು ರೋಮ ರೋಮಗಳಿಂದ ತೆಗೆದುಕೊಳ್ಳಬೇಕು. ” ಎಂದಳು.

“ ಈಗ ಹೋಗು ” ಎಂದನು.

“ ನೀವೂ ಹೋಗಿರಿ ” ಎಂದಳು.

“ ವತ್ಸಲೇ, ಸಂಗಡ ಏನನ್ನು ಒಯ್ಯುತ್ತೀ ? ” ಎಂದು ಅವನು ಕೇಳಿದನು.

“ ನಿಮ್ಮ ಅಮರ ಹಾಗು ನಿರ್ಮಲವಾದ ಪ್ರೇಮವನ್ನು, ನಿಮ್ಮ ಸುಗಂಧಯುಕ್ತ ಮೂರ್ತಿಯನ್ನು ” ಎಂದು ಅವಳು ಹೊರಳಿ ಅಂದಳು.

“ ನೀವೇನನ್ನು ಸಂಗಡ ಒಯ್ಯುತ್ತಿರುವಿರಿ?” ಅವರ ಕಡೆಗೆ ನೋಡುತ್ತ ವಿಚಾರಿಸಿದಳು.

“ ಅದು ಗಟ್ಟಿಯಾಗಿ ಹೇಳುವದಲ್ಲ ” ಎಂದು ಅವನು ನಗುತ್ತ ಹೇಳಿದ.

ರಾತ್ರಿಯಾಯಿತು. ನಾಲ್ಕು ತಾಸು ರಾತ್ರಿಯಾಗಿತ್ತು. ಆಕಾಶದಲ್ಲಿ ಚಂದ್ರಮನು ಸಾಕಷ್ಟು ಮೇಲೆ ಬಂದಿದ್ದನು. ಹುಣ್ಣಿಮೆಯ ಚಂದ್ರ. ಪೃಥ್ವಿಯ ತುಂಬೆಲ್ಲ ಹಿಟ್ಟು ಚಲ್ಲಿದ ಹಾಗೆ ಬೆಳದಿಂಗಳು ಬಿದ್ದಿತ್ತು. ನಾಗಾನಂದನು ಕೈಯಲ್ಲಿ ಭಾಲೆಯನ್ನು ಖಡ್ಗವನ್ನು ಹಿಡಿದುಕೊಂಡು ಅಡಗಿ ಕುಳಿತಿದ್ದನು. ಹುಲಿಯ ಭಯಂಕರವಾದ ಗರ್ಜನೆಯು ಕೇಳಿಸಿತು. ಊರಲ್ಲಿಯ ಆಕಳುಗಳು ಗಾಬರಿಯಾದವು, ನಡುಗಹತ್ತಿದವು, ನಾಗಾನಂದನು ಸಿದ್ಧನಾಗಿ ಕುಳಿತನು.

ಬಾಲವನ್ನು ಅಪ್ಪಳಿಸುತ್ತ ಅಪ್ಪಳಿಸುತ್ತ ಹುಲಿಯು ಬರುತ್ತಿತ್ತು. ತುಂಬಿದ ಮೈಮೇಲೆ ಬಂಗಾರದಂತೆ ಹೊಳೆಯುವ ಹಳದೀ ಪಟ್ಟೆಗಳು ಎದ್ದು

ಕಾಣುತ್ತಿದ್ದವು. ಮೃತ್ಯುವಿನಂತಿರುವ ಕೋರೆಯ ಹಲ್ಲುಗಳು, ಕಿಡಿಹಾರುವ ಕೆಂಗಣ್ಣುಗಳು, ಭೀಕರವಾದ ಸೌಂದರ್ಯ. ಆದರ ಉಗುರುಗಳು ಬಹು ತೀಕ್ಷ್ಣ, ಗುಡುಗು ಹಾಕುತ್ತ ಬರುತ್ತಲಿದೆ. ಏನನ್ನು ಮೂಸಿ ನೋಡುತ್ತಿದೆ? ತನ್ನ ಮರಣದ ಕಲ್ಪನೆಯು ಆದಕ್ಕೆ ಬರುತ್ತಲಿದೆಯೇ? ಛೀ ಆದಕ್ಕೆ ಬಹುಶಃ ಭ್ರಮೆಯಾಗಿರಬಹುದು. ಆದು ಎದುರಿಗೆ ಕಾಣುವ ಬೇಟೆಯ ಮೇಲೆ ಒಮ್ಮೆಲೆ ಜಿಗಿಯಿತು. ಮೋಹಜಾಲದಲ್ಲಿ ಬಿದ್ದಿತು. ಎದುರಿಗಿನ ಬೇಟೆಗೆ ಮರುಳಾಗಿದ್ದರಿಂದ ಹತ್ತಿರದಲ್ಲಿಯೇ ಅಡಗಿದ ಮೃತ್ಯುವು ಆದಕ್ಕೆ ಕಾಣಲಿಲ್ಲ.

ಪಂಜರಗಳಿಂದ ಆಕಳನ್ನು ಸೀಳಿ ಸೀಳಿ ಆದು ತಿನ್ನುತ್ತಿತ್ತು. ನಡುವೆ ಆನಂದದಿಂದ ಗುಡುಗು ಹಾಕುತ್ತಿತ್ತು. ಆದು ತನ್ನ ಹೆಂಡತಿಯನ್ನು ಕರೆಯು ತ್ತಿತ್ತೋ? ತಿನ್ನು ಹೊಟ್ಟೆತುಂಬ ತಿನ್ನು. ಹುಲಿಯು ಸ್ವಸ್ಥವಾಗಿಲ್ಲವೇಕೆ? ಏನನ್ನು ನೋಡುತ್ತಲಿದೆ? ಏನನ್ನು ಮೂಸಿ ನೋಡುತ್ತಿದೆ? ಸುತ್ತುಮುತ್ತು ತಿರುಗುತ್ತಲಿದೆ. ಮತ್ತೆ ತಿನ್ನಲು ಹತ್ತಿತು. ತಿನ್ನು ಹೊಟ್ಟೆತುಂಬ ಮಾಂಸ ವನ್ನು ತಿನ್ನು, ಭವಿಷ್ಯದ ಚಿಂತೆಯನ್ನು ಪಶುಗಳು ಮಾಡಬಾರದು.

ನೋಡಿರಿ, ಉದ್ದವಾದ ಭಾಲೆಯೊಂದು ಆದರ ಮೈಯಲ್ಲಿ ಬಂದು ನಟ್ಟಿತು.

ಹುಲಿಯು ಜಿಗಿಯಿತು. ಆದು ಬಹಳ ಸಿಟ್ಟಿಗೆದ್ದಿತು. ಉದ್ರೇಕ ಗೊಂಡಿತು. ಪ್ರಚಂಡವಾಗಿ ಗರ್ಜಿಸಿತು. ಆಲ್ಲಿ ಸತ್ತುಬಿದ್ದ ಆಕಳಿನ ರೋಮ ರೋಮಗಳೂ ಈ ಗರ್ಜನೆಯಿಂದ ಜೀವಂತವಾಗಬೇಕು. ಆದರ ಗರ್ಜನೆಗೆ ಹೆಣಗಳು ಕೂಡ ಏಳಬಹುದಾಗಿತ್ತು. ಹುಲಿಯ ಹೊಟ್ಟೆಯಲ್ಲಿ ಭಾಲೆಯು ನಟ್ಟಿದ್ದರೂ ಕೂಡ, ಆ ಹುಲಿಯು ಆದರೊಡನೆಯೇ ಜಿಗಿಯಿತು. ನಾಗಾನಂದನ ಕೀರ್ತಿ ಹಾಗೂ ಪರಾಕ್ರಮದ ಧ್ವಜವೇ ಹಾರುತ್ತಿದ್ದಂತೆ ಆ ಹುಲಿಯು ಕುಣಿಯುತ್ತಿತ್ತು. ಹುಲಿಯು ನಾಗಾನಂದನ ಮೇಲೆ ಹಾರಿತು. ಆದರೆ ಆವನು ಆದನ್ನು ತಪ್ಪಿಸಿಕೊಂಡನು. ಆವನು ಕತ್ತಿಯಿಂದ ಆದರ ಮೇಲೆ ಏಟು ಹಾಕಿದನು. ಆದರೆ ಆ ಏಟು ಭಾಲೆಗೆ ಬಿತ್ತು. ಭಾಲೆಯು ತುಂಡು ತುಂಡಾಯಿತು. ಮತ್ತೆ ಹುಲಿಯು ಎರಗಿತು. ನಾಗಾನಂದನು ತನ್ನ ಕತ್ತಿಯಿಂದ ಆದರ ರುಂಡವು ಬೇರೆಯಾಗುವಂತೆ ಹೊಡೆದನು.

ಹುಲಿಯು ಸತ್ತು ಬಿದ್ದಿತು. 'ಹೆಣ್ಣು ಹುಲಿಯು ಬಂದಿತು, ಬಂದಿತು' ಎಂಬ ಧ್ವನಿಯು ಕೇಳಿಸಿತು. ಆದರೆ ಈ ಧ್ವನಿಯು ಯಾರದು? ಅದು ಮತ್ತಿಷ್ಟು ಸಿಟ್ಟಿಗೆದ್ದಿತು. ನಾಗಾನಂದನು ಅದರೊಡನೆ ಹೋರಾಡಲು ಸಜ್ಜಾಗಿ ನಿಂತನು. ಅವನ ಕೈಯಲ್ಲಿ ರಕ್ತರಂಜಿತವಾದ ಕತ್ತಿ ಇದ್ದಿತು. ಹೆಣ್ಣು ಹುಲಿಯು ಬಹಳ ಕ್ರೂರವಾಗಿ ಕಾಣುತ್ತಿತ್ತು. ಆದರೆ ಅದಕ್ಕೆ ಹಿಂದಿನಿಂದ ಯಾರು ಕತ್ತಿಯಿಂದ ಹೊಡೆದರು? ಹುಲಿಯು ಸಿಟ್ಟಿನಿಂದ ಹಿಂಬದಿಗೆ ತಿರುಗಿತು. ಅಲ್ಲಿ ಯಾರಿದ್ದರು? ನಾಗಾನಂದನು ಒಮ್ಮೆಲೇ ಅವರ ಸಹಾಯಕ್ಕೆ ಧುಮುಕಿದನು. ಹುಲಿಗೆ ಕತ್ತಿಯಿಂದ ಹೊಡೆದನು. ಹುಲಿಯು ಯಾರನ್ನು ಹಿಡಿದಿತ್ತು? ಮತ್ತೆ ಹುಲಿಯು ಹಿಂದಿರುಗಿತು. ಆದರೆ ನಾಗಾನಂದನು ಮತ್ತೆ ಏಟು ಕೊಟ್ಟನು. ಹುಲಿಯು ಬಿದ್ದಿತು. ಗಂಡು ಹೆಣ್ಣು ಹುಲಿಗಳೆರಡೂ ಅಲ್ಲಿ ಸತ್ತು ಬಿದ್ದವು. ಆದರೆ ನಾಗಾನಂದನ ಸಹಾಯಕ್ಕೆ ಬಂದವರಾರು?

ನಾಗಾನಂದ ಮತ್ತು ವತ್ಸಲೆಯರು ಒಬ್ಬರಿಗೊಬ್ಬರು ಹೊಂದಿಕೊಂಡು ಕುಳಿತಿದ್ದರು. ಅವರ ಎದುರಿಗೆ ಅಡವಿಯ ರಾಜಾ ರಾಣಿಗಳಾದ ಆ ಎರಡು ಜೀವಿಗಳು ಸತ್ತು ಬಿದ್ದಿದ್ದವು.

"ನಿನಗೆ ಪೆಟ್ಟು ತಾಕಿತೇ" ಎಂದು ನಾಗಾನಂದನು ಮೆಲ್ಲಗೆ ಕೇಳಿದನು.

"ಅಹುದು" ಎಂದಳು.

"ಎಲ್ಲಿ?" ಎಂದು ಭಯದಿಂದಲೂ ಪ್ರೇಮದಿಂದಲೂ ಅವನು ವಿಚಾರಿಸಿದನು.

"ಇಲ್ಲಿ" ಎಂದು ನಾಗಾನಂದನ ಎದೆಯ ಮೇಲೆ ಕೈಯಿಟ್ಟಳು. ನಾಗಾನಂದನ ಎದೆಯಿಂದ ರಕ್ತವು ಸೋರುತ್ತಿತ್ತು. ಪಂಜರದ ಏಟು ಬಿದ್ದಿತ್ತು. ಅವನ ಮೊಣಕಾಲುಗಳಿಂದಲೂ ರಕ್ತವು ಸೋರುತ್ತಿತ್ತು. ವತ್ಸಲೆಯು ಶಿರಗನ್ನು ಹರಿದಳು. ನಾಗಾನಂದನ ಕಾಲುಗಳಿಗೆ ಕಟ್ಟಿದಳು. ಅವನ ಎದೆಯ ಮೇಲೆ ರಕ್ತವು ಹೊರಬರದಂತೆ ಒತ್ತಿ ಹಿಡಿದಳು.

"ಹೀಗೆಯೇ ಎಷ್ಟು ಹೊತ್ತಿನವರೆಗೆ ನೀನು ಹಿಡಿಯುವಿ? ನಿಲ್ಲು ಇಲ್ಲಿ ಎಲ್ಲಿಯಾದರೂ ರಕ್ತಸ್ರಾವವನ್ನು ನಿಲ್ಲಿಸುವ ತೊಪ್ಪಲವು ಇರುವ ದೇನೋ ನೋಡುವೆ, ಅದನ್ನು ಕಟ್ಟುವಿಯಂತೆ" ಎಂದನು.

ಅವನು ಆ ವನಸ್ಪತಿಯನ್ನು ಆ ಬೆಳದಿಂಗಳಲ್ಲಿಯೇ ಹುಡುಕಿದನು. ಅದನ್ನು ಅರೆದು ಎದೆಗೆ ಹಾಕಿದಳು. ರಕ್ತವು ನಿಂತಿತು.

"ವತ್ಸಲೇ ನಿನಗೇನೂ ತಾಕಿಲ್ಲವಷ್ಟೆ?" ಎಂದು ಮತ್ತೆ ವಿಚಾರಿಸದನು.

"ಇಲ್ಲ, ಆ ಭಾಗ್ಯವು ನನಗಿಲ್ಲ. ನಿನಗೆ ಸಹಾಯ ಮಾಡುವ ವೇಳೆಯಲ್ಲಿ ಆ ಹುಲಿಯು ನನ್ನನ್ನು ಕೊಲ್ಲಬೇಕೆಂದು ನನ್ನ ಮನಸ್ಸಿನಲ್ಲಿ ಬರುತ್ತಿತ್ತು. ನಿಮ್ಮ ಪ್ರಾಣವನ್ನುಳಿಸುವಾಗ ನಾನು ಸತ್ತಿದ್ದರೆ ಕೃತಾರ್ಥಳಾಗುತ್ತಿದ್ದೆ." ಎಂದಳು.

"ಹಾಗಿದ್ದರೆ, ಹುಲಿಯ ಮುಂದೇಕೆ ನೀನು ನಿಲ್ಲಲಿಲ್ಲ. ಅದಕ್ಕೆ ಕತ್ತಿಯಿಂದೇಕೆ ಹೊಡೆದಿ? ನಿನಗೂ ಬದುಕಬೇಕೆಂಬ ಇಚ್ಛೆಯಿದೆ. ಇಲ್ಲವೆನ್ನಬೇಡ. ಹೇಳು ನಿನಗೆ ಆ ಇಚ್ಛೆಯು ಇದೆಯೋ ಇಲ್ಲವೋ?" ಎಂದನು.

"ನೀವು ಹತರವಿದ್ದರೆ ಮಾತ್ರ" ಎಂದಳು.

"ವತ್ಸಲೆ, ನೀನೇಕೆ ನಿನ್ನ ಪ್ರಾಣವನ್ನು ಸಂಕಟದಲ್ಲಿ ಹಾಕಿದಿ?"

"ನೀವು ಹಿಂದಕ್ಕೆ ನನ್ನ ಸಲುವಾಗಿ ನಿಮ್ಮ ಪ್ರಾಣವನ್ನು ಸಂಕಟದಲ್ಲಿ ನೂಕಿದ್ದಿರಿ."

"ನೀನು ಉಪಕಾರವನ್ನು ತೀರಿಸಲು ಬಂದೆಯಾ? ಅಹುದೋ! ಇಲ್ಲವೋ? ಕೊನೆಗೂ ನಾನು ನಿನಗೆ ಪರಕೀಯನೇ ಆದೆ. ನನ್ನ ಸಾಲವನ್ನು ಕೊಡಲು ಬಂದೆಯಾ? ನಾನು ನನ್ನ ಪ್ರಾಣವನ್ನು ನಿನ್ನ ಸಲುವಾಗಿ ನೀರಲ್ಲಿ ಎಸೆದೆ. ಆ ಋಣವನ್ನು ತೀರಿಸಲು ನೀನು ಬಂದಿರುವೆ. ಕೊಡಕೊಳ್ಳುವದೇ ನನ್ನ ನಿನ್ನ ಸಂಬಂಧವಷ್ಟೇ?" ಎಂದು ಖಿನ್ನವದನನಾದನು.

"ನಾಗಾನಂದಾ! ಖಿನ್ನನಾಗಬೇಡ. ನಾನು ಉಪಕಾರವನ್ನು ತೀರಿಸಲು ಬಂದವಳಲ್ಲ. ನನ್ನ ಮೇಲೆ ವಿಶ್ವಾಸವನ್ನಿಡು. ನಾನು ಪ್ರೇಮದ

ಮೂಲಕವಾಗಿ ಬಂದಿರುವೆ. ನಿನ್ನ ಶರೀವು ಈಗ ನಿನ್ನದಲ್ಲ. ಅದು ನನ್ನದು. ಅದು ನನ್ನದಾಗದಿದ್ದರೆ ಅದು ಅಂದೇ ಉಳಿಯುತ್ತಿದ್ದಿಲ್ಲ. ಈ ನನ್ನ ಶರೀರ ವನ್ನು ರಕ್ಷಿಸುವದಕ್ಕಾಗಿ ನಾನು ಬಂದಿದ್ದೇನೆ ನಾಗಾನಂದಾ! ನಾವಿಬ್ಬರೂ ಏಕೆ ಬದುಕಿದೆವು? ನಿಜವಾಗಿಯೂ ಯಾಕೆ ಬದುಕಿದೆವು? ಅಂತಹ ಪ್ರಕ್ಷುಬ್ಧ ಪ್ರವಾಹದಲ್ಲಿ ನಮ್ಮೆರಡು ಜೀವಗಳು ಒಂದೆಡೆಯಲ್ಲಿ ಏಕೆ ಕೂಡಿದವು? ನೀರಿನಲ್ಲಿ ಎರಡು ಕಟ್ಟಿಗೆಗಳು ಒಂದೆಡೆ ಕೂಡುತ್ತವೆ. ಮತ್ತೆ ತೆರೆ ಬಡಿದೊಡನೆಯೇ ಅವು ಬೇರೆಯಾಗುತ್ತವೆ. ಆದರೆ ನಾವು ಇಬ್ಬರೂ ಏಕತ್ರವಾದುದು ಹೇಗೆ? ಬೇರೆಯಾಗಲು ನಾವು ಒಂದಾಗಿದ್ದೇವೆಯೇ? ಇಲ್ಲ! ಇಲ್ಲ! ನಾವೀರ್ವರೂ ಒಬ್ಬರಿಗೊಬ್ಬರು ಬೇಕಾದವರು. ನೀನು ನನ್ನವ, ನಾನು ನಿನ್ನವಳು ನಮ್ಮಿಬ್ಬರನ್ನು ಯಾರೂ ಅಗಲಿಸಲಾರರು. ಹುಲಿಯೇ ಬರಲಿ, ಮೃತ್ಯುವೇ ಬರಲಿ" ಎಂದು ವತ್ಸಲೆಯು ನಾಗಾನಂದ ನನ್ನು ಬಿಗಿಯಾಗಿ ಅಪ್ಪಿಕೊಂಡಳು. ಅವನೂ ಆಕೆಯನ್ನು ಗಟ್ಟಿಯಾಗಿ ಅಪ್ಪಿಕೊಂಡನು.

೧೦

ಅಂದು ವತ್ಸಲೆಯು ಗೆಳತಿಯರೊಡನೆ ವನವಿಹಾರಕ್ಕಾಗಿ ಹೋಗಿದ್ದಳು. ಮನೆಯಲ್ಲಿ ಸುಶ್ಮಿತೆಯೊಬ್ಬಳೇ ಇದ್ದಳು. ಸ್ವಲ್ಪ ಸಮಯದ ನಂತರ ನಾಗಾನಂದನು ಬಂದನು. ಇಬ್ಬರೂ ಮಾತನಾಡುತ್ತ ಕುಳಿತರು.

“ನಾಗಾನಂದಾ ! ನೀನು ಅಡವಿಯಲ್ಲಿರುವಿ. ಕೈಯಿಂದ ಅಡಿಗೆ ಮಾಡಿಕೊಳ್ಳುವಿ. ನೀನು ಇಲ್ಲಿಗೆ ಊಟಕ್ಕೆ ಏಕೆ ಬರುವದಿಲ್ಲ ? ನೀನು ಊಟಕ್ಕೆ ಬರುವಿಯಾದರೆ ಆಕೆಯೂ ಹೊಟ್ಟೆ ತುಂಬ ಉಣ್ಣುವಳು. ಆಕೆಯು ನಗುವಳು. ಆನಂದದಿಂದ ನಲಿಯುವಳು. ಆದರೆ ಆಕೆಯ ಹೊಟ್ಟೆಯಲ್ಲಿ ಯಾವುದೋ ಒಂದು ಮಾತು ಕೊರೆಯುತ್ತಲಿರುವದು. ನೀನೇಕೆ ದಯ ದೋರುವದಿಲ್ಲ ? ” ಎಂದಳು ಅಜ್ಜಿ.

“ನಾನು ಇಲ್ಲಿಯೇ ಬಂದಿರಬೇಕೇ ? ನಾನು ಇಲ್ಲಿಯೇ ಉಣ್ಣಲು ಬರ ಬೇಕೇ ? ಬೇಡ, ಅಜ್ಜೀ ಬೇಡ. ನನಗೆ ಹೇಡಿತನವು ಬೇಡ. ಸ್ವಾವಲಂಬನವೇ ಒಳ್ಳೇದು. ನಿಮ್ಮ ಸಹಾನುಭೂತಿಯಿದೆ ಇಷ್ಟೇ ಸಾಕು. ನನಗೆ ತಂದೆ ಯಿಲ್ಲ. ತಾಯಿಯಿಲ್ಲ. ನಾನು ನಿಮ್ಮ ಕಡೆಗೆ ಯಾಕೆ ಬರುವನೆಂಬದು ನಿಮಗೆ ಗೊತ್ತಿದೆಯೇ ? ತಾಯಿಯ ನೆನಪನ್ನು ಮರೆಯುವದಕ್ಕಾಗಿ, ನನ್ನ ಮನಸ್ಸಿನಲ್ಲಿರುವದನ್ನು ಯಾರ ಮುಂದೆ ಹೇಳಲಿ ? ” ಎಂದನು.

“ನಾಗಾನಂದಾ, ನಿಮ್ಮ ತಂದೆಯು ಏನು ಮಾಡುತ್ತಿದ್ದನು ? ಎಲ್ಲಿ ಇರುತ್ತಿದ್ದನು ? ” ಎಂದು ಪ್ರಶ್ನಿಸಿದಳು.

“ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯನ್ನು ನೋಡಿಲ್ಲ. ನೋಡಿ ದ್ದರೂ ನನಗೆ ನೆನಪಿಲ್ಲ. ಯಾರೋ ಆರ್ಯರು ನಮ್ಮ ತಾಯಿಯನ್ನು

ಪೋಷಿಸ ಗೊಳಿಸಿರಬೇಕು. ನಮ್ಮ ತಂದೆಯ ಹೆಸರನ್ನು ಆಕೆಯು ಹೇಳಲಿಲ್ಲ. 'ನಿಮ್ಮ ತಂದೆಯ ಹೆಸರನ್ನು ಹೇಳಿದರೆ ಜಗತ್ತೆಲ್ಲವೂ ಅನಾದರ ಮಾಡು ವದು. ಅದು ನನ್ನ ಮನಸ್ಸಿನಲ್ಲಿಯೇ ಇರಲಿ' ಎಂದು ಆಕೆಯು ಹೇಳು ತ್ತಿದ್ದಳು. ಅವರನ್ನು ಆಕೆಯು ಮನಃ ಪೂರ್ವಕವಾಗಿ ಪೂಜಿಸುತ್ತಿದ್ದಳು. ತಾನು ಊಟಕ್ಕೆ ಕೂಡುವ ಮುಂದೆ, ತನ್ನ ಹತ್ತಿರವೇ ಇನ್ನೊಂದು ಎಲೆ ಯನ್ನು ಬಡಿಸಿ, ಅದನ್ನು ನೈವೇದ್ಯ ತೋರಿಸುತ್ತಿದ್ದಳು. 'ಈ ಎಲೆಯು ಯಾರದು?' ಎಂದು ನಾನು ಕೇಳುತ್ತಿದ್ದೆ. 'ನಿನ್ನ ತಂದೆಯದು. ನಿನ್ನ ಜನ್ಮದಾತೃವಿನದು' ಎಂದು ಅವಳು ಹೇಳುತ್ತಿದ್ದಳು. ಕೊನೆಗೆ ಆ ಎಲೆಯ ಲ್ಲಿಯ ಒಂದು ತುತ್ತನ್ನು ಉಂಡು ಏಳುತ್ತಿದ್ದಳು. ಒಮ್ಮೊಮ್ಮೆ ಆಕೆಯು ಕಣ್ಣು ಮುಚ್ಚಿಕೊಂಡು ಕೂಡುತ್ತಿದ್ದಳು. 'ಅವ್ವಾ ನೀನು ಕಣ್ಣು ಮುಚ್ಚಿಕೊಂಡು ಯಾರನ್ನು ನೋಡುತ್ತಿರುವೆ?' ಎಂದು ಕೇಳಿದರೆ 'ನನ್ನ ಹೃದಯದಲ್ಲಿರುವ ದೇವವನ್ನು, ನಿನ್ನ ಜನ್ಮದಾತೃವನ್ನು' ಎಂದು ಕಣ್ಣೀರಿಡುವಳು. ಅಂತಹ ಪತಿವ್ರತೆಯು ಆಕೆ. ತುಚ್ಛರೆಂದು ತಿಳಿಯುವ ನಾಗ ಜಾತಿಯಲ್ಲಿ ಇಂತಹ ದೇವತೆಯರು ಅವತರಿಸುತ್ತಾರೆ. ಅಹಂಕಾರಿಗಳಾದ ಆರ್ಯರಿಗೆ ಮಾತ್ರ ಅವರು ಕಾಣುವದಿಲ್ಲ. ಪವಿತ್ರ ಮೂರ್ತಿಯವಳು. ಪ್ರೇಮದ ಕಣಿ ಅವಳು." ಎಂದನು ನಾಗಾನಂದ.

"ನಿನಗೆ ಅಣ್ಣ ತಮ್ಮಂದಿರಿಲ್ಲವೇ?" ಎಂದಳು ಸುಶ್ರುತೆ.

"ನಾವು ಅವಳಿ ಜವಳಿ ಇದ್ದೆವು. 'ಅಕ್ಕ ಹಾಗು ನಾನು. ನನ್ನ ಅಕ್ಕ ಕೆಂಪು ಕೆಂಪಾಗಿದ್ದಳು. ನಾನು ಸಾದಗಪ್ಪು. ಆದರೆ ಅವಳ ನೆನಪು ನನ ಗಿಲ್ಲ. ಚಿಕ್ಕವಳಿರುವಾಗಲೇ ದೇವರ ಕಡೆಗೆ ಹೋದಳು. ಇದೆಲ್ಲವನ್ನು ನಮ್ಮ ಅವ್ವನು ನನಗೆ ಹೇಳುತ್ತಿದ್ದಳು. 'ನಿನ್ನ ಬಣ್ಣವು ನನ್ನ ಹಾಗೆ ಆಕೆಯ ಬಣ್ಣವು ಅವರ ಹಾಗೆ ಇದ್ದಿತು' ಎಂದು ಹೇಳುತ್ತಿದ್ದಳು. ನಾವು ಎರಡು ಮೂರು ವರ್ಷದವರಾಗಿರ ಬಹುದು. ಒಂದು ದಿನ ನನ್ನ ತಾಯಿಯು ನಮ್ಮಿಬ್ಬರನ್ನು ಮಲಗಿಸಿ ಕೆಲಸಕ್ಕೆ ಹೋಗಿದ್ದಳು. ಇತ್ತ ಮನೆಗೆ ಬೆಂಕಿ ಹತ್ತಿತು. ನಮ್ಮ ವಸತಿಯೆಲ್ಲ ಭಸ್ಮವಾಯಿತು. ಆರ್ಯರೇ ಬೆಂಕಿಯನ್ನು ಹಚ್ಚಿದ್ದರು. ಊರ ಜನರೆಲ್ಲ ಹೊಲದಲ್ಲಿದ್ದರು. ಅವರೆಲ್ಲರೂ ಓಡಿಬಂದರು.

ನನ್ನ ತಾಯಿ ಬಂದು ಬಿಕ್ಕಿ ಬಿಕ್ಕಿ ಅಳಹತ್ತಿದಳು. ನಮ್ಮ ಮನೆಗೆ ಬೆಂಕಿ ಹತ್ತಿತ್ತು. ನಾವಿಬ್ಬರೂ ಒಳಗೆ ಸುಟ್ಟುಕೊಂಡು ಸಾಯುವೆವೆಂಬ ಭಾವನೆಯಿಂದ ಆಕೆಯು ಮೂರ್ಛಿತಳಾದಳು. ಆದರೆ ಕರುಣಾಳುವಾದ ಒಬ್ಬ ಆರ್ಯನು ಬೆಂಕಿಯಲ್ಲಿ ಹೊಕ್ಕು ನಮ್ಮನ್ನು ಉಳಿಸಿದನು. ಆದರೆ ಅವನೂ ಬೆಂದನು. ಅವನು ತನ್ನ ಮನೆಗೆ ಹೋದನು. ಅವನದು ಮುಂದೆ ಏನಾಯಿತೆಂಬದು ನಮಗೆ ಗೊತ್ತಾಗಲಿಲ್ಲ. ನನ್ನ ತಾಯಿಯು ನಮ್ಮಿಬ್ಬರನ್ನು ಕರೆದುಕೊಂಡು ಬೇರೆ ಕಡೆಗೆ ಬಂದಳು. ಮುಂದೆ ಕೆಲದಿನಗಳ ನಂತರ ನಮ್ಮ ಅಕ್ಕನು ಹೋದಳು. ಆಗ ನನ್ನ ತಾಯಿಗೆ ನಾನೇ ಆಧಾರ. ಆದರೆ ಒಬ್ಬ ತಾಯಿಯ ಸಂದೇಶವನ್ನು ತೆಗೆದುಕೊಂಡು ಹೋಗುತ್ತಿರುವಾಗ ಆಕೆಗೆ ಸಿಡಿಲು ಬಡಿದು ಸತ್ತಳು. ನನ್ನನ್ನು ಬಿಟ್ಟು ಹೋದಳು. ಈ ಕಥೆಯನ್ನು ಹಿಂದೆಯೇ ಹೇಳಿದ್ದೇನೆ." ಎಂದನು ನಾಗಾನಂದ.

"ನಾಗಾನಂದಾ!" ಎಂದು ಸುಶ್ರುತೆಯು ಭಾವಪೂರ್ಣ ಶಬ್ದಗಳಿಂದ ಉಸರುಗರೆದಳು.

"ಏನು ಅಜ್ಜೀ?" ಎಂದು ವಿಚಾರಿಸಿದನು.

"ಒಹೋ ಅವನೇ ನನ್ನ ಮಗ. ವತ್ಸಲೆಯ ತಂದೆ. ಅವನು ನಿಮ್ಮನ್ನು ಉಳಿಸುವ ಕಾರ್ಯದಲ್ಲಿ ತಾನು ಅಳಿದ. ತಾನು ಬೆಂಕಿಯಲ್ಲಿ ಬೆಂದು, ಮನೆಗೆ ಬಂದ. ಅವನಿಗೆ ಗುಣವಾಗಲಿಲ್ಲ. ಅವನು ಸತ್ತನು. ಅವನೊಡನೆಯೇ ವತ್ಸಲೆಯ ತಾಯಿಯು ಸತಿಹೋದಳು. ಆಗ ವತ್ಸಲೆಯು ವರುಷದವಳುಕೂಡ ಇರಲಿಲ್ಲ. ಅವಳ ಪರದೇಶಿಯಾದಳು. 'ಆ ಅವಳಿ ಜವಳಿ ಮಕ್ಕಳು ಎಂಥವರಿದ್ದರು ಒಂದು ಅತ್ಯಂತ ಕೆಂಪು' ಇನ್ನೊಂದು ಸಾದುಗಪ್ಪು ರಾತ್ರಿಹಗಲು ಹುಟ್ಟಿದಂತೆ ಇದ್ದವು.? ಎಂದು ಜ್ವರದಲ್ಲಿಯೇ ಅವನು ಬಡಬಡಿಸುತ್ತಿದ್ದನು. ನಾಗಾನಂದಾ! ಅಂದು ನೀವು ಅವನಿಂದ ರಕ್ಷಿಸಲ್ಪಟ್ಟಿರಿ. ಇಂದು ವತ್ಸಲೆಯು ನಿಮ್ಮಿಂದ ಬದುಕಿಸಲ್ಪಟ್ಟಳು. ಎಂಥಹ ಯೋಗಾಯೋಗವಿದು! ರತ್ನಾಕರನು ನಿನ್ನನ್ನು ಬೆಂಕಿಯಿಂದ ಉಳಿಸಿದ, ನೀನು ವತ್ಸಲೆಯನ್ನು ನೀರಿನಿಂದ ಉಳಿಸಿದೆ. ನಾಗಾನಂದಾ! ಅಳಬೇಡ. ಆದದ್ದು ಆಗಿ ಹೋಯಿತು. ಮಗು ಅಳಬೇಡ." ಎಂದು ಅವನನ್ನು

ಹತ್ತರ ಕರೆದು ಕೂಡಿಸಿಕೊಂಡಳು. "ಅಜ್ಜೀ, ನಾವು ಅಭಾಗಿಗಳು. ನಾನು ನಾನು ಅಭಾಗಿ. ವತ್ಸಲೆಯನ್ನು ಪರದೇಶಿಯನ್ನಾಗಿ ಮಾಡಿದೆ. ನನ್ನನ್ನು ಉಳಿಸುವದಕ್ಕಾಗಿ ಆಕೆಯ ತಂದೆಯು ಬರದಿದ್ದರೆ, ಅವನು ಬದುಕುತ್ತಿದ್ದ. ವತ್ಸಲೆಯ ತಾಯಿಯು ಬದುಕುತ್ತಿದ್ದಳು. ಎಲಾ, ಏನಿದು, ನನ್ನ ಸಲುವಾಗಿ ಇಷ್ಟೆಲ್ಲ ಅನರ್ಥ. ನಾನು ದುರ್ದೈವಿ, ಕರಿಗಾಲ." ಎಂದು ನಾಗಾನಂದನು ಹಣೆ ಹಣೆ ಬಡೆದುಕೊಳ್ಳಹತ್ತಿದನು. ಸುಶ್ರುತೆಯು ಅವನನ್ನು ಶಾಂತಗೊಳಿಸಿದಳು. ಚಿಕ್ಕ ಮಗುವಿನಂತೆ ಅವನು ಸುಮ್ಮನೆ ಕುಳಿತನು. ಸುಶ್ರುತೆಯ ತೊಡೆಯ ಮೇಲೆ ಮಲಗಿಕೊಂಡನು.

ವತ್ಸಲೆಯು ಹಾಡುತ್ತ ಹಾಡುತ್ತ ಹೊರಗಿನಿಂದ ಬಂದಳು. ವನದೇವತೆಯಂತೆ ಶೃಂಗಾರವಾಗಿದ್ದಳು. ತಲೆಯಲ್ಲಿ ಹೂವನ್ನು ಮುಡಿದಿದ್ದಳು. ಕಿವಿಯಲ್ಲಿ ಹೂಗಳನ್ನು ಸಿಗಿಸಿಕೊಂಡಿದ್ದಳು. ಕೊರಳಲ್ಲಿ ಹೂಮಾಲೆಗಳನ್ನು ಧರಿಸಿದ್ದಳು. ಚಿತ್ರ ವಿಚಿತ್ರವಾದ ನಾನಾವರ್ಣದ ಸುಗಂಧವುಳ್ಳ ಹೂಮಾಲೆಗಳನ್ನು ಅವಳು ಧರಿಸಿದ್ದಳು. ವತ್ಸಲೆಯು ಬಂದೊಡನೆಯೆ ಮನೆಯಲ್ಲಿ ಆಕೆಗೆ ಶಾಂತ ಹಾಗೂ ಗಂಭೀರ ವಾತಾವರಣವು ಕಣ್ಣಿಗೆಬಿತ್ತು.

'ವತ್ಸಲೇ, ಗದ್ದಲಮಾಡಬೇಡ; ಎಂದಳು ಅಜ್ಜಿ.

'ಇವರನ್ನು ನೋಡಲು, ಗುಡಿಸಿಲಿಗೆ ಹೋಗಿದ್ದೆ. ಅಲ್ಲಿ ಯಾರೂ ಇರಲಿಲ್ಲ. ಅಲ್ಲಿ ಇವರ ಕೊಳಲು ಇದ್ದಿತು. ಅದನ್ನು ಊದಿದೆವು. ಆದರೆ ನಮಗಾರಿಗೂ ಅದನ್ನು ಚನ್ನಾಗಿ ಊದಲು ಬರಲಿಲ್ಲ. ಇವರು ಯಾವಾಗ ಬಂದರು? ಮಲಗಿರುವರೇಕೆ? ಮೈಯ್ಯಲ್ಲಿ ನೆಟ್ಟಗಿಲ್ಲವೆ? ಇಲ್ಲಿ ನೋಡು, ಕಾಲಿಗೆ ಆದ ಘಾಯದ ಗುರುತನ್ನು. ಅದಕ್ಕೆ ನನ್ನ ಶೆರಗನ್ನು ಹರಿದು ಕಟ್ಟಿದ್ದೆನು. ಅವರನ್ನು ಎಬ್ಬಿಸಲಾ? 'ಕಟ್ಟಾಡಿಸಲ್ಯಾ? ಕಿವಿಯಲ್ಲಿ ಈ ಹೂವಿನ ದೇಟನ್ನು ಹಾಕಲ್ಯಾ?" ಎಂದು ಮೆಲ್ಲಗೆ ಅಜ್ಜಿಯ ಕೈಗಳನ್ನು ಜಗ್ಗುತ್ತ ವತ್ಸಲೆಯು ಮಾತನಾಡಿದಳು.

"ವತ್ಸಲೇ, ನನಗೆ ಇಂದು ಒಂದು ಮಹತ್ವವಾದ ಮಾತು ತಿಳಿಯಿತು. ಸಹಜವಾಗಿ ಅವನ ಮಾತಿನಲ್ಲಿ ಅದು ಹೊರಬಿದ್ದಿತು. ಸುಡುವ ಮನೆಯಿಂದ

ನಿನ್ನ ತಂದೆಯು ಹೊರತೆಗೆದ ಇಬ್ಬರಲ್ಲಿ ಈ ನಾಗಾನಂದನೊಬ್ಬ. ನಿನ್ನ ತಂದೆಯು ತನ್ನನ್ನು ಬದುಕಿಸಿದವನೆಂದು, ಅವನಿಗೆ ತಿಳಿದೊಡನೆಯೇ ಅವನಿಗೆ ಬಹಳ ಬಹಳ ದುಃಖವಾಯಿತು. ತನ್ನಿಂದಲೇ ವತ್ಸಲೆಯ ತಂದೆ ತಾಯಿಗಳು ಸತ್ತರೆಂಬ ಸಂಗತಿಯನ್ನು ಅರಿತು, ಅವನು ಅಳಹತ್ತಿದನು. ಹಣೆ ಹಣೆ ಬಡೆದುಕೊಳ್ಳಹತ್ತಿದನು. ನಾನು ಅವನನ್ನು ಶಾಂತಗೊಳಿಸಿದೆ. ಈಗ ಅವನು ಹುಡುಗನಂತೆ ಮಲಗಿದ್ದಾನೆ." ಎಂದಳು ಅಜ್ಜಿ.

'ನನ್ನ ತಂದೆಯು ಇವನನ್ನು ಬದುಕಿಸಿದ, ಇವನು ನನ್ನನ್ನು ಬದುಕಿಸಿದ, ಹೇಗಿದೆ ನೋಡಿರಿ ಈ ಯೋಗಾಯೋಗ! ಅಜ್ಜೀ ಇದರಲ್ಲಿ ಏನು ಗೂಢವಿದೆ? ಎಂದು ವಿಚಾರಿಸಿದಳು ವತ್ಸಲೆ.

ವತ್ಸಲೆಯು ಆನಂದದಿಂದ ಬಂದಿದ್ದಳು. ಆದರೆ ಗಂಭೀರಳಾದಳು. ಆಕೆಯು ಅವಳ ಹತ್ತಿರವೇ ಕುಳಿತಳು. ಆಕೆಯೂ ಮಲಗಿದಳು. ಇಬ್ಬರ ಕಡೆಗೂ ಅವಳು ನೋಡುತ್ತಿದ್ದಳು. ಇಬ್ಬರ ತಲೆಯ ಮೇಲೂ ಕೈಯಾಡಿಸುತ್ತಿದ್ದಳು. ನಿದ್ದೆಯಲ್ಲಿ ನಾಗಾನಂದನ ಕೈಯು ವತ್ಸಲೆಯ ಹತ್ತರ ಬಿದ್ದಿತು. ಇಬ್ಬರ ಕೈಗಳು ಒಂದೆಡೆ ಕೂಡಿದವು. ನಾಗಾನಂದನಿಗೆ ಎಚ್ಚರವಾಯಿತು. ಅವನ ಕೈಯಲ್ಲಿ ಯಾರ ಕೈಯಿತ್ತು? ಅವನು ನೋಡಿದನು. ಅದು ಕೆಂಪಾದ ಕೈಯು. ತನ್ನ ಕೈಯನ್ನು ದೂರ ಸರಿಸಿಕೊಂಡನು. ವತ್ಸಲೆಯು ಎಚ್ಚರಾದಳು. ಆಕೆಯೂ ಅವನ ಕಡೆಗೆ ನೋಡಿದಳು.

' ಇಬ್ಬರೂ ಕೈ ಕೈ ಹಿಡಿಯಿರಿ. ನಾನು ನಿಮ್ಮ ಕೈಗಳನ್ನು ಹಿಡಿಸುವೆನು. ಪಾಣಿಗ್ರಹಣವನ್ನು ಮಾಡಿರಿ. ಅಜ್ಜಿಯ ತೊಡೆಯ ಮೇಲೆಯೇ ಪಾಣಿಗ್ರಹಣವಾಗಲಿ. ನೀವು ಪರಸ್ಪರರ ಸಲುವಾಗಿಯೇ ಹುಟ್ಟಿರುವಿರಿ. ನೀವಿಬ್ಬರೂ ಒಬ್ಬರನ್ನೊಬ್ಬರು ಬಿಟ್ಟು ದೂರ ಇರಲಾರಿರಿ. ಇಬ್ಬರೂ ಕೂಡಿಕೊಂಡರೇ ಸುಖವಾಗುವದು. ವತ್ಸಲೇ ಇಲ್ಲಿ ಬಾ. ನಿನ್ನ ಕೊರಳಲ್ಲಿಯ ಮಾಲೆಯೊಂದನ್ನು ತೆಗೆದು, ಈ ನಾಗಾನಂದನ ಕೈಯಲ್ಲಿ ಕೊಡು. ಹಾಗೂ ನೀನೊಂದನ್ನು ಕೈಯಲ್ಲಿ ತೆಗೆದುಕೊ. ಇಬ್ಬರೂ ಪರಸ್ಪರರಿಗೆ ಮಾಲೆಯನ್ನು ಹಾಕಿರಿ. ಏನು ವಿಚಾರ ಮಾಡುವಿರಿ? ನಾನು ಹೇಳುತ್ತೇನೆ ಹಾಕಿರಿ." ಎಂದು ಪ್ರೇಮದಿಂದ ಅಜ್ಜಿಯು ನುಡಿದಳು.

ವತ್ಸಲೆಯು ತನ್ನ ಕೊರಳೊಳಗಿನ ಮಾಲೆಯೊಂದನ್ನು ತೆಗೆದು ನಾಗಾನಂದನ ಕೈಯಲ್ಲಿ ಕೊಟ್ಟಳು. ತಾನೊಂದನ್ನು ಹಿಡಿದುಕೊಂಡಳು. ಇಬ್ಬರೂ ಒಬ್ಬರಿಗೊಬ್ಬರು ಮಾಲೆಯನ್ನು ಹಾಕಿದರು. ಇಬ್ಬರೂ ಅಜ್ಜಿ ಸುಶ್ರುತೆಗೆ ನಮಸ್ಕರಿಸಿದರು. ಅಜ್ಜಿಯ ಕಣ್ಣು ಆನಂದದಿಂದ ತುಂಬಿ ಬಂದವು. ಆಕೆಗೆ ಹಿಂದಿನ ನೂರಾರು ಸ್ಮೃತಿಗಳು ನೆನಪಾದವು. ಆಕೆಯು ಇಬ್ಬರಿಗೂ ಶುಭಾಶೀರ್ವಾದಗಳನ್ನು ಮಾಡಿದಳು- ವತ್ಸಲಾ ಹಾಗೂ ನಾಗಾನಂದರ ವಿವಾಹವಾಯಿತು.

———

೧೧

ರಾಜಾ ಪರೀಕ್ಷಿತನು ಒಮ್ಮೊಮ್ಮೆ ಉಚ್ಚ ವಿಚಾರಗಳನ್ನು ಮಾಡಿದರೆ, ಒಮ್ಮೊಮ್ಮೆ ತೀರ ಕೀಳು ವಿಚಾರಕ್ಕಿಳಿಯುತ್ತಿದ್ದನು. ಅವನು ಚಂಚಲನಾಗಿದ್ದನು. ಅವನು ಇಂದು ಏನು ಮಾಡ್ಯಾನು, ನಾಳಿಗೆ ಏನು ಮಾಡುವನು ಎಂಬುವ ನಿಯಮವಿದ್ದಿಲ್ಲ. ಎಷ್ಟೋಸಾರೆ ತನ್ನ ಸ್ವತಃದ ವಿಚಾರ ಮಾಡಲು ಅವನಿಗೆ ಆಗುತ್ತಿದ್ದಿಲ್ಲ. ಇಂಥ ಮನಸ್ಸಿನ ಜನರ ಸ್ಥಿತಿಯು ಬಹಳ ವಿಚಿತ್ರವಾಗಿರುತ್ತದೆ. ಹೋದಲ್ಲೆಲ್ಲ ಬುದ್ಧಿವಂತ ಜನರು ಹೇಳಿದಂತೆ ಹೂಗುಟ್ಟುತ್ತಿದ್ದ. ಹಿಂದುಗಡೆ ಪಶ್ಚಾತ್ತಾಪ ಬಡುತ್ತಿದ್ದನು. ನಾನು ಹೀಗೆಯೇಕೆ ಮಾಡಿದೆ? ಎಂದು ತನ್ನಷ್ಟಕ್ಕೆ ತಾನೆ ಆಶ್ಚರ್ಯಚಕಿತನಾಗುತ್ತಿದ್ದ.

ಒಂದು ದಿವಸ ಪರೀಕ್ಷಿತನು ಜಗತ್ತಿನಲ್ಲಿ ಏನೂ ಅರ್ಥವೇ ಇಲ್ಲ ಎಂಬ ಬಗ್ಗೆ ವಿಚಾರ ಮಾಡುತ್ತಲಿದ್ದನು. ಇಂಥ ಮನಸ್ಥಿತಿಯಲ್ಲಿಯೇ ಅವನು ಬೇಟೆಗೆ ಹೋದ. ಗಂಡು ಚಿಗರಿ ಇರಲಿ, ಹೆಣ್ಣು ಚಿಗರಿ ಇರಲಿ, ಅದನ್ನು ಗುರಿಯಿಟ್ಟು ಹೊಡೆದುಬಿಡುವನು. ಅವನು ಇಂದು ಎಲ್ಲವನ್ನು ಕೊಲ್ಲುತ್ತಿದ್ದ. ಪಶುಪಕ್ಷಿಗಳೆನ್ನದೆ ಎಲ್ಲವನ್ನೂ ಕೊಲ್ಲತೊಡಗಿದ. ಜೀವನವೆಂದರೆ ನಿಸ್ಸಾರವೆಂದು ಅವನು ತಿಳಿದಿದ್ದನು.

ಒಂದು ಗಿಡದ ಮೇಲೆ ಒಂದು ಸರ್ಪವು ಸುರುಳಿ ಸುತ್ತಿಕೊಂಡು ಕುಳಿತಿತ್ತು. ಪರೀಕ್ಷಿತನು ಅದನ್ನು ನೋಡಿದನು. ಅವನು ಬಾಣಬಿಟ್ಟನು. ಸರ್ಪವು ಗಿಡದ ಹೊದರಿನಲ್ಲಿ ಅಡಗಿ ಕುಳಿತಿತು. ಮತ್ತೆ ಬಾಣಬಿಟ್ಟನು. ಆ ಹಾವು ಸತ್ತಿತು. ಪ್ರಚಂಡವಾದ ಹಾವು ಇತ್ತು. ಆ ಸತ್ತ ಹಾವನ್ನು ತನ್ನ ಸಂಗಡ ತೆಗೆದುಕೊಂಡು ಹೊರಟನು.

" ಅಲ್ಲಿ, ಗಿಡದ ಬುಡದಲ್ಲಿ ಕೂತವರಾರು ? " ಎಂದು ಪರೀಕ್ಷಿತನು ವಿಚಾರಿಸಿದನು.

" ಅವನು ಒಬ್ಬ ನಾಗಜಾತಿಯ ಋಷಿಯು. ಅವನು ಈ ಗಿಡದ ಬುಡದಲ್ಲಿ ಕುಳಿತು ತಪಶ್ಚರ್ಯೆ ಮಾಡುತ್ತಿದ್ದಾನೆ. " ಎಂದನು ಸೇವಕ.

" ಅವನಿಗೆ ನಾಗಪೂಜೆಯು ಪ್ರಿಯವಲ್ಲವೆ! ಈ ಸತ್ತ ಹಾವನ್ನು ಅವನ ಕೊರಳಲ್ಲಿ ಹಾಕಿರಿ! ಜೀವಂತ ಸರ್ಪವನ್ನು ಹತ್ತರವಿಟ್ಟುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಸತ್ತದ್ದಾದರೂ ಹತ್ತರವಿರಲಿ. ಇವರ ದೇವರ ಮೈಮೇಲೆ ಹಾವುಗಳಿರುತ್ತವೆ. ಇವರ ಪಶುಪತಿಯ ಕಲ್ಲಿನ ಮೂರ್ತಿಯ ಕೊರಳಲ್ಲಿ ಹಾವುಗಳಿರುತ್ತವೆ. ಅದಕ್ಕೆ ಅವರು ಮಹಾದೇವನೆನ್ನುವರು. ಇವರಲ್ಲಿ ಬಹಳ ದೇವತೆಗಳಿವೆ. ಚಿತ್ರವಿಚಿತ್ರವಾದ ದೈವತಗಳಿವೆ. ನಾವು ಈ ಎಲ್ಲ ದೇವತೆಗಳನ್ನು ಒಂದೆಡೆಗೆ ತರುವ ಬಗೆ ಹೇಗೆ? ಇದನ್ನು ಆಸ್ತಿಕನು ಮಾಡಬಲ್ಲ. ನಾವು ಸ್ವಲ್ಪ ವಿನೋದ ಮಾಡುವಾ. ತನ್ನಿರಿ ಸಾಕಷ್ಟು ಉದ್ದವಾಗಿದೆ. ಆ ಸತ್ತ ಹಾವನ್ನು ಈ ಋಷಿಯನ್ನು ಮಹಾದೇವನನ್ನಾಗಿ ಮಾಡುವಾ. " ಎಂದು ಪರೀಕ್ಷಿತನು ಸೇವಕರಿಗೆ ಅಂದನು.

ಸತ್ತ ಹಾವನ್ನು ತೆಗೆದು ರಾಜನು ಋಷಿಗೆ ಅಲಂಕರಿಸುವನೇನೋ ಅಂಬುವಂತೆ ಅದನ್ನು ಅವನ ಕೊರಳಿಗೆ ಹಾಕಿದನು. ಸೇವಕರೆಲ್ಲ ನಕ್ಕರು. ಕೆಲವರು ಗಂಭೀರರಾದರು. ' ರಾಜನಿಗೆ ಇದು ಆಟವಾಗಬಹುದು, ಆದರೆ ಮುಂದೆ ಕಾಲವು ಕಠಿಣವಾದೀತು ' ಎಂದು ಕೆಲವರ ಮನಸ್ಸಿನಲ್ಲಿ ಬಂದಿತು. ಆದರೆ ಸ್ಪಷ್ಟವಾಗಿ ಯಾರೂ ಮಾತನಾಡಲಿಲ್ಲ.

ರಾಜನು ರಥವನ್ನೇರಿದನು. ರಾಹುತರು ಕುದುರೆಯನ್ನೇರಿದರು. ವಾಯು ವೇಗದಿಂದ ಹೊರಟುಹೋದರು. ನಾಗತರುಣರಿಗೆ ಆ ಋಷಿಯಬಗ್ಗೆ ಬಹಳ ಆದರವಿತ್ತು. ಆದರಲ್ಲಿಯೂ ತಕ್ಷಕಕುಲದ ನಾಗತರುಣರಿಗಂತೂ ಅಪೂರ್ವ ಭಕ್ತಿಯಿತ್ತು. ಒಬ್ಬ ನಾಗತರುಣನು ಪ್ರತಿದಿನ ಸಂಜೆಗೆ ಅಲ್ಲಿಗೆ ಬರುತ್ತಿದ್ದ. ಅವನು ಆ ಋಷಿಯ ಮುಖದಲ್ಲಿ ಹಾಲನ್ನು ಹಾಕುತ್ತಿದ್ದ. ಸ್ವಲ್ಪ ವೇಳೆ ಅಲ್ಲಿ ಕುಳಿತು, ನಮಸ್ಕಾರಮಾಡಿ ಹೋಗುತ್ತಿದ್ದ. ಅಂದು ಸಂಜೆಗೆ ಆ ತರುಣನು

ಅಲ್ಲಿಗೆ ಬಂದ. ಅಲ್ಲಿ ಅಸಂಬದ್ಧ ನೋಟವು ಅವನಕಣ್ಣಿಗೆ ಬಿತ್ತು. ಅದು ಅವನ ದೇವರ ವಿಡಂಬನೆಯಾಗಿತ್ತು. ನಾಗರು ಸರ್ಪವನ್ನು ಕೊಲ್ಲುವದಿಲ್ಲ. ಹೊಡೆದ ಮೇಲೆ ಅದರ ಚೇಷ್ಟೆಯನ್ನು ಮಾಡುವದಿಲ್ಲ. ಅದನ್ನು ಸುಡುತ್ತಿದ್ದರು. ಹಾವುಗಳೆಂದರೆ ದೇವರೆಂದು ತಿಳಿದು ಅವರು ಅವುಗಳನ್ನು ಪೂಜಿಸುತ್ತಿದ್ದರು. ' ಹೇ ನಾಗರೂಪಿ ಪರಮಾತ್ಮನೆ ! ಹೇ ಸರ್ಪಸ್ವರೂಪಿ ದೇವಾ, ನಮ್ಮನ್ನು ಹಾವುಗಳಿಂದ ರಕ್ಷಿಸು, ಎಂದು ಪ್ರಾರ್ಥಿಸುತ್ತಿದ್ದರು.

ಋಷಿಯ ಹಾಗೂ ಹಾವಿನ ವಿಡಂಬನೆಯು ಆ ತರುಣನಿಗೆ ಸಹನವಾಗಲಿಲ್ಲ. ಅವನು ಸತ್ತಹಾವನ್ನು ಮೆಲ್ಲನೆ ತೆಗೆದ. ಅವನು ಅದನ್ನು ಹುಗಿದನು. ಅದರ ಮೇಲೆ ಹೂಗಳನ್ನೇರಿಸಿದನು. ಋಷಿಯ ಮೈಮೇಲೆ ರಕ್ತವು ಬಿದ್ದಿತ್ತು. ಅವನು ಅದನ್ನು ಮೆಲ್ಲನೆ ಒರಿಸಿದನು. ಆಮೇಲೆ ಋಷಿಯ ಮುಖದಲ್ಲಿ ಹಾಲನ್ನು ಹಾಕಿದನು. ಅವನ ಬಳಿಯಲ್ಲಿ ಶಾಂತ ಮನಸ್ಸಿನಿಂದ ಕುಳಿತ. ನಂತರ ಎದ್ದು ಹೊರಟು ಹೋದನು.

ಆದರೆ ಅವನ ಮನಸ್ಸಿನಲ್ಲಿ ಆ ಅಪಮಾನವು ಸುಡುತ್ತಲಿತ್ತು. ಈ ಚೇಷ್ಟೆಯನ್ನು ಮಾಡಿದವರಾರು ? ಅವನು ಅವರನ್ನು ಹುಡುಕಹತ್ತಿದ. ಸ್ವತಃ ರಾಜಾ ಪರೀಕ್ಷಿತನೇ ಈ ಕಾರ್ಯವನ್ನೆಸಗಿದನೆಂದು ಅವನಿಗೆ ತಿಳಿದು ಬಂತು. ವಕ್ರತುಂಡನು ಇದರ ಲಾಭವನ್ನು ಮಾಡಿಕೊಂಡನು. ' ರಾಜನಿಗೆ ' ನಾಗಪೂಜೆಯು ಮಾನ್ಯವಿಲ್ಲ. ' ನಾಗಜಾತಿಯ ಸಂಸ್ಕೃತಿಯು ಮಾನ್ಯವಿಲ್ಲ ' ಎಂದು ಅವನೂ ಅವನ ಅನುಯಾಯಿಗಳೂ ಪ್ರಚಾರ ಮಾಡಹತ್ತಿದರು. ಹಾವುಗಳನ್ನು ಹೊಡೆಯುವದು ಅವುಗಳನ್ನು ಎತ್ತಿಕೊಂಡು ಹೋಗಿ, ನಾಗರ ಮೂರ್ತಿಮೇಲೆ ಒಗೆಯುವದು, ಎಲ್ಲೆಡೆಯಲ್ಲಿಯೂ ಆರಂಭವಾಯಿತು. ಹಾವುಗಳನ್ನು ಹೊಡೆದು ನಾಗರ ಮೈ ಮೇಲೆ ತೂರತೊಡಗಿದರು. ರಾಜನ ಬೆಂಬಲವು ತಮಗಿದೆಯೆಂದು ಅವರು ತಿಳಿದಿದ್ದರಿಂದ ಒಳಗೆ ಹುದುಗಿದ ಅವರ ದ್ವೇಷಾಗ್ನಿಯು ಹೊರಗೆಬೀಳಹತ್ತಿತ್ತು.

ನಾಗತರುಣರಲ್ಲಿಯೂ ಪ್ರಚಂಡವಾದ ಚಟುವಟಿಕೆಗಳಾಗಹತ್ತಿದವು. ಆರ್ಯರ ಆಕಳುಗಳನ್ನು ಕದಿಯುವದೂ ಆರ್ಯರ ಮೇಲೆ ದಾಳಿಮಾಡು

ವದೂ ಮೊದಲಾಯಿತು. ಜೀವನವು ಸುರಕ್ಷಿತವಾಗಿ ನಡೆಯು ದಾಯಿತು.

ಒಂದು ದಿವಸ ಕೆಲವು ತಕ್ಷಕ ಜಾತಿಯ ನಾಗ ತರುಣರ ಗುಪ್ತ ಸಭೆ ಯೊಂದು ಅರಣ್ಯದಲ್ಲಿ ಕೂಡಿತ್ತು. ಆರ್ಯರ ಮೇಲಿನ ಸೇಡನ್ನು ಹೇಗೆ ತಿರಿಸಬೇಕೆಂಬ ಬಗ್ಗೆ ಚರ್ಚೆಗಳಾಗಹತ್ತಿದವು. ' ರಾಜಾ ಪರೀಕ್ಷಿತನನ್ನು ಕೊಲ್ಲಬೇಕು. ' ಎಂದು ಕೆಲವರು ಅನ್ನಹತ್ತಿದರು, ಇದೆಲ್ಲವೂ ರಾಜನ ಕುತಂತ್ರವು. ಅವನಿಗೆ ನಮ್ಮ ಸಂಗಡ ಜಗಳಾಡ ಬೇಕಾಗಿದೆ ' ಎಂದು ಒಬ್ಬನು ಅಂದು ತೋರಿಸಿದನು. ಚರ್ಚೆಗಳು ಜೋರಿನಿಂದ ನಡೆದವು.

' ಆರ್ಯರ ವಿರುದ್ಧವಾಗಿ ಎಲ್ಲ ನಾಗರೂ ಸಂಘಟಿತರಾಗಬೇಕು. ಮಣಿಪುರ ಮೊದಲಾದ ನಾಗರಾಜ್ಯಗಳಲ್ಲಿಯೇ ಹೆಚ್ಚಾಗಿ ಸಂಘಟನೆ ಮಾಡಬೇಕು ' ಎಂದು ಮಣಿನಾಗನೆಂದನು

' ಇಂದ್ರ ಮೊದಲಾದ ಆರ್ಯರಾಜರು ನಮಗೆ ಅನೂಕೂಲರಾಗಿ ದ್ದಾರೆ. ಅವರ ಸಂಗಡ ಹೆಚ್ಚು ಸ್ನೇಹ ಬೆಳಿಸಬೇಕು. ಇಂದ್ರನ ರಾಜ್ಯದಲ್ಲಿ ಆರ್ಯ, ನಾಗರೆಂಬ ಬೇಧವಿಲ್ಲ. ಅಲ್ಲಿ ನಾಗರು ದೊಡ್ಡ ದೊಡ್ಡ ಅಧಿ ಕಾರಿಗಳಾಗಿದ್ದಾರೆ ' ಎಂದು ತೇಜಸ್ವಿಯಾದ ವಾಸುಕಿಯೆಂದನು.

" ಇಂದ್ರನಲ್ಲಿ ನಾಗರಿಬ್ಬರು ಮಂತ್ರಿಗಳಾಗಿದ್ದಾರೆ, ಮತ್ತು ಇಂದ್ರನು ಅವರಿಗೆ ಅಲ್ಲಿ ಬಹಳ ಮರ್ಯಾದೆಯನ್ನು ಕೊಡುತ್ತಾನೆ ' ಎಂದು ಅನಂತ ನೆಂದನು,

' ನಮ್ಮ ಮಹೋತ್ಸವಗಳಲ್ಲಿಯೂ ನಮ್ಮ ಜಾತ್ರೆಗಳಲ್ಲಿಯೂ ನಾವು ಇದನ್ನು ಪ್ರಚಾರ ಮಾಡಬೇಕು ' ಎಂದು ತಕ್ಷಕನು ಆವೇಶದಿಂದ ನುಡಿದನು.

' ಆದರೆ ಏನೆಂದು ಪ್ರಚಾರ ಮಾಡಬೇಕು ? ಕಾರಣವೆಂದರೆ ನಾಗರ ಮಹೋತ್ಸವಗಳಿಗೆ ಆರ್ಯರೂ, ಆರ್ಯರ ಮಹೋತ್ಸವಗಳಿಗೆ ನಾಗರೂ ಹೋಗುತ್ತಾರೆ. ಬಹಳ ಜನರು ಒಬ್ಬರಿಗೊಬ್ಬರು ಒಳ್ಳೇ ರೀತಿಯಿಂದ ನಡೆದುಕೊಳ್ಳುತ್ತಾರೆ. ಸಂಬಂಧವು ಧೃಢವಾಗುತ್ತಲಿದೆ. ಆದ್ದರಿಂದ ನಾವು ಬಹಳ ಜಾಗರೂಕತೆಯಿಂದ ಪ್ರಚಾರ ಮಾಡಬೇಕು. ನಾಗರು ಸಂಘಟಿತ ರಾಗಬೇಕು. ಆದರೆ ಆರ್ಯರೊಡನೆ ದ್ವೇಷವನ್ನು ಮಾಡಕೂಡದು.

ಆರ್ಯರು ಹೊರಗಿನಿಂದ ಬಂದವರಾದ್ದರಿಂದ ಅವರನ್ನು ಹೊಡೆದೋಡಿಸ ಬೇಕೆಂದು ನಾವು ಅನ್ನಕೂಡದು. ಆರ್ಯರು ನಾಗರ ಮೇಲೆ ಒತ್ತಾಯ ವನ್ನು ಮಾಡಿದರೆ, ಹಾಗು ನಾಗರ ಧಾರ್ಮಿಕಭಾವನೆಗಳಿಗೆ ಆತಂಕವನ್ನುಂಟು ಮಾಡಿದರೆ ಮಾತ್ರ ಅವರ ಪ್ರತಿಕಾರ ಮಾಡಬೇಕು. ಎರಡೂ ಸಮಾಜ ದವರು ಶಾಂತಿಯಿಂದಿರಬೇಕೆಂದು ನಮ್ಮ ಇಚ್ಛೆಯಿದೆಯೆಂದು ಹೇಳಬೇಕು.

ದ್ವೇಷಕ್ಕಾಗಿ ದ್ವೇಷ ಮಾಡುವದು ಬೇಡ. ಒಳ್ಳೆಯ ಆರ್ಯರನ್ನು ನಾವು ಹೊಗಳಬೇಕು. ಎಲ್ಲ ಆರ್ಯರು ದುಷ್ಟರೇ ಎಂದು ಅನ್ನಲು ಬರುವ ದಿಲ್ಲ. ನಮ್ಮಲ್ಲಿ ಕೆಲವು ನಾಗರು 'ಈ ದೇಶವು ನಾಗರದೇ' ಎಂದು ಚಳ ವಳಿಯನ್ನು ಹೂಡಿದ್ದಾರೆ. ಅತ್ತಕಡೆಗೆ ವಕ್ರತುಂಡ ಮೊದಲಾದ ಕೆಲವು ಆರ್ಯರೂ 'ಇದು ಆರ್ಯಾವರ್ತವಿದೆ. ಇಲ್ಲಿ ವಾಸ ಮಾಡಿಕೊಂಡಿರುವ ನಾಗರನ್ನೂ ಹಾಗೂ ಇತರರನ್ನೂ ಸಮುದ್ರದ ಆಚೆಗೆ ಓಡಿಸಿಬಿಡೋಣ' ಎಂದು ಅನ್ನತೊಡಗಿದ್ದಾರೆ. ನಾವು ಈ ಎರಡೂ ತಳಬುಡವಿಲ್ಲದ ಪ್ರಚಾರ ವನ್ನು ನಿಲ್ಲಿಸಬೇಕು, ಎಂದು ನನಗೆ ಅನಿಸುತ್ತದೆ. ಒಂದೇ ನೀಲಾಕಾಶದ ಕೆಳಗೆ ನಮ್ಮೆಲ್ಲರಿಗೆ ಆನಂದದಿಂದಿರಲು ಏಕೆ ಬರುವದಿಲ್ಲ?" ಎಂದು ಗಂಭೀರ ನಾದ ನೀಲಾಂಗನು ನುಡಿದನು.

'ನಾನು ಪರೀಕ್ಷಿತನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದ್ದೇನೆ' ಎಂದು ಒಬ್ಬ ಯುವಕನು ಅಂದನು.

'ಒಬ್ಬನನ್ನು ಕೊಂದರೇನಾಗುವದು? ಒಮ್ಮೆ ಹೊಡೆದಾಟವು ಸುರು ವಾಯಿತೆಂದರೆ ಮುಂದೆ ಕಠಿಣವಾದೀತು. ಸಾಧ್ಯವಾದಷ್ಟು ಹೊಡೆದಾಟ ವನ್ನು ನಿಲ್ಲಿಸಲು ಯತ್ನಿಸಬೇಕು. ಮತ್ತು ಈ ವೈಯ್ಯಕ್ತಿಕ ಕೊಲೆಯನ್ನು ತಡೆಹಿಡಿಯಬೇಕು. ಪ್ರತ್ಯಕ್ಷವಾಗಿ ಯುದ್ಧವನ್ನು ಮಾಡಲೇಬೇಕಾದರೆ ಅದಕ್ಕೆ ಉಪಾಯವಿಲ್ಲ.' ಎಂದು ಅನಂತನು ಸೂಚಿಸಿದನು.

'ಈ ದೇಶವನ್ನೆಲ್ಲ ಎತ್ತಿಹಾಕಬೇಕೆಂದು ಆರ್ಯರು ಮುಂಚಿನಿಂದಲೂ ಹೊಂಚು ಹಾಕಿದ್ದಾರೆ. 'ಕೃಣ್ವತೊ ವಿಶ್ವಮಾರ್ಯಂ' ಎಂಬುದೇ ಅವರ ಮಂತ್ರವು. ಆರ್ಯರು ಜಗತ್ತನ್ನೆಲ್ಲ ವ್ಯಾಪಿಸಬೇಕೆಂಬ ಮಹತ್ವಾ ಕಾಂಕ್ಷೆಯುಳ್ಳವರಾಗಿದ್ದಾರೆ. ಕೆಲವು ದಿನಗಳಲ್ಲಿ ಅವರು ನಮ್ಮನ್ನು

ಓಡಿಸುವರು. ಅಥವಾ ನಮ್ಮ ನಾಗರ ಶಿಷ್ಟಾಚಾರಗಳನ್ನಾದರೂ ನಾಶ ಮಾಡುವರು. ಅವರೆಲ್ಲರ ಅಭಿಪ್ರಾಯ ಹೀಗೇ ಇದೆಯೆಂದು ನಾನನ್ನುವದಿಲ್ಲ. ಅವರಲ್ಲಿಯೂ ಕೆಲವು ದೊಡ್ಡವರು " ನಾವೆಲ್ಲರೂ ಒಬ್ಬ ದೇವರ ಮಕ್ಕಳು. ಪರಸ್ಪರರು ಒಳ್ಳೆಯದನ್ನು ಸ್ವೀಕರಿಸಿ ಆನಂದದಿಂದ ಇರೋಣ, " ಎನ್ನುವರು ಎಂದು ನಿಲಾಂಗನು ಹೇಳಿದನು.

' ನಾವು ಯಾವ ದೇವರನ್ನು ಪೂಜಿಸಬೇಕು ? ಮಳೆತರುವ ವರುಣನನ್ನೊ? ಸುಡುವ ಅಗ್ನಿಯನ್ನೊ ? ಹಾರಿಸುವ ವಾಯುವನ್ನೊ ? ಉಕ್ಕೇರುವ ಈ ಸಮುದ್ರ ರಾಜನನ್ನೊ? ಎಂದು ಅನೇಕರು ಈ ಆರ್ಯಾವರ್ತದಲ್ಲಿ ಪ್ರಶ್ನೆಯನ್ನು ಕೇಳುತ್ತಾರೆ. ' ಒಬ್ಬನೇ ದೇವರಿಗೆ ಇವೆಲ್ಲ ಅನೇಕ ಹೆಸರುಗಳು. ಪ್ರತಿಯೊಂದು ಶಬ್ದವು ದೇವರನ್ನೇ ಸ್ತುತಿಸುತ್ತದೆ. ನಾಗನೆನ್ನಿರಿ, ಇಂದ್ರನೆನ್ನಿರಿ, ಇವೆಲ್ಲವೂ ಅನಂತ ಶಕ್ತಿಯನ್ನೇ ವರ್ಣಿಸುತ್ತವೆ.' ಎಂದು ಒಬ್ಬ ಮಹ ಋಷಿಯು ಹೇಳಿದನು. ಆರ್ಯರಲ್ಲಿ ಅನೇಕರು ಈ ಮತದವರಿರುತ್ತಾರೆ. ಆದರೆ ಸ್ವಾರ್ಥಿಗಳಾದ ಸಂಕುಚಿತ ವೃತ್ತಿಯ ಆರ್ಯರು, ಬೇರೆ ಧೋರಣವನ್ನು ಸ್ವೀಕಾರಮಾಡಿದ್ದಾರೆ. ಉದಾರ ಚರಿತರಾದ ಆರ್ಯರು ನಮ್ಮ ಪಕ್ಷವನ್ನು ವಹಿಸುವಂತೆ, ನಾವು ನಮ್ಮ ಚಳವಳಿಯ ಉದ್ದೇಶವನ್ನು ವಿಶಾಲಗೊಳಿಸಬೇಕು. ಅಂದರೆ ಅವರು ನಮ್ಮಂತೆಯೇ ಮಾತನಾಡುವರು. ಆರ್ಯ ಹಾಗು ನಾಗರ ಸಂಯುಕ್ತ ಪ್ರಚಾರದಿಂದ ವಕ್ರತುಂಡನ ಮೋರೆಯು ಸರಳವಾದೀತು ? " ಎಂದನು ವಾಸುಕಿ.

ನಾಗರ ಸಂಘಟನೆಯನ್ನು ಮಾಡಬೇಕು. ಆರ್ಯರ ಸಹಕಾರವನ್ನು ಪಡೆಯಬೇಕು ಎಂದು ಪರಿಷತ್ತಿನಲ್ಲಿ ನಿರ್ಣಯವಾಯಿತು. ಎಲ್ಲರೂ ಹೊರಟರು. ಆದರೆ ಪರೀಕ್ಷಿತನನ್ನು ಕೊಲೆಮಾಡುವ ಪ್ರತಿಜ್ಞೆಗೈದ ಆ ನವ ಯುವಕನು ಅಲ್ಲಿಯೇ ಉಳಿದ. ಮನಸ್ಸಿನಲ್ಲಿ ಏನೇನೋ ಗುಣಿಸುತ್ತಿದ್ದ. ಏನೋ ಹೊಳೆಯಿತು. ಚಪ್ಪಾಳೆಯನ್ನು ಬಾರಿಸಿದ. ಅವನಿಗೆ ಬಹಳ ಆನಂದವಾಯಿತು. ಅವನು ಹಸ್ತಿನಾಪುರಕ್ಕೆ ಹೊರಟ. ಅವನು ಬಹಳ

ಸುಂದರ. ಸವಿಮಾತುಗಾರ, ಬಹಳ ಚುರುಕು. ಅವನು ಪರೀಕ್ಷಿತನ ಮನೆಯಲ್ಲಿ ಅಡಿಗೆಯುವನಾದ, ' ಪಕ್ವಾನ್ನಗಳನ್ನು ಮಾಡುವದರಲ್ಲಿ ಅವನು ಒಳ್ಳೇ ಬಲ್ಲಿದ. ಅವನ ಕೈಯಿಂದ ಅಮೃತವೇ ರಸವಾಗುತ್ತಿತ್ತು. ಪರೀಕ್ಷಿತನು ಅವನಿಗೆ ಬಹಳ ಮೆಚ್ಚಿದನು. ಅವನ ರಾಣಿಯರಂತೂ ಅವನನ್ನು ಕಂಡರೆ ಬಲುಪ್ರೀತಿ.

ಕೆಲವು ದಿನಗಳು ಗತಿಸಿದವು. ಪರೀಕ್ಷಿತನು ಚಿತ್ರಶಾಲೆಯಲ್ಲಿ ಉತ್ತರೆಯ ಚಿತ್ರವನ್ನು ನೋಡುತ್ತ ನಿಂತಿದ್ದನು. ಅವನ ಮನಸ್ಸಿನಲ್ಲಿ ಏನೋ ವಿಚಾರಗಳು ಬರಹತ್ತಿದವು. ನನ್ನ ಆಯುಷ್ಯದಲ್ಲಿ ನಾನು ಏನು ಮಾಡಿದೆ ? ಎಂಬ ವಿಚಾರಗಳು ಬರಹತ್ತಿದವು. ಮನಸ್ಸು ಉದ್ವಿಗ್ನ ವಾಯಿತು. ಅವನ ಸೇವಕರು ಅವನನ್ನು ಉಪವನಕ್ಕೆ ಕರೆದೊಯ್ದರು. ಅಲ್ಲಿರುವ ಸುಂದರ ಹೂಗಳಿಂದ ಅವನಿಗೆ ಆನಂದವಾಗಲಿಲ್ಲ. ಒಬ್ಬ ಸೇವಕನು ಅತ್ಯಂತ ಸುಗಂಧಯುಕ್ತವಾದ ನಾಗಸಂಪಿಗೆಯನ್ನು ತಂದು ಕೊಟ್ಟನು.

" ಇದಕ್ಕೆ ನಾಗಸಂಪಿಗೆ ಎನ್ನುವರು. ನಾಗರು ಇದನ್ನು ತಮ್ಮ ದೇವರಿಗೆ ಏರಿಸುವರು. ಈ ಹೂವು ಹಾವಿನ ಹೆಡೆಯಂತಿಲ್ಲವೇ ? ಮಹಾ ರಾಜ ! ಇದನ್ನು ತಕ್ಕೊಳ್ಳಿರಿ. " ಎಂದನು ಒಬ್ಬ ಸೇವಕ.

' ಈ ಹೂವನ್ನು ನನಗೇಕೆ ಕೊಡುವಿ ? ಇದನ್ನು ಹರಿದೊಗೆದರೂ ಅದು ಸುಗಂಧವನ್ನು ಬೀರುವದು. ಹರಿಯುವವನನ್ನೂ ಪ್ರಸನ್ನಗೊಳಿಸು ವದು. ನೀನು ನನ್ನನ್ನು ಹೊಡೆಯಲು ಬಂದರೂ ನಾನು ನಿನ್ನ ಕಲ್ಯಾಣ ವನ್ನು ಚಿಂತಿಸುವೆನೆ ? ಈ ಚಿಕ್ಕ ಹೂವಿನಲ್ಲಿ ಇದ್ದ ದೊಡ್ಡಿಸ್ತನವು ಮಾನವ ರಾದ ನಮ್ಮಲ್ಲಿರುವದೇ ? ಈ ಚಿಕ್ಕ ಹೂವಿನಲ್ಲಿ ಪರಿಪೂರ್ಣ ಜೀವನವು ತುಂಬಿದೆ. ನಾವು ನಮ್ಮ ಜೀವನವನ್ನು ಪರಿಪೂರ್ಣಗೊಳಿಸಿರುವೆವೇ ? ವ್ಯರ್ಥ ನಮ್ಮ ಜೀವನ. " ಎಂದು ಪರೀಕ್ಷಿತನು ಕೆಳಗೆ ಕುಳಿತುಕೊಂಡನು.

ಒಂದು ದಿನ ತನ್ನ ಪ್ರಧಾನಿಗಳನ್ನೆಲ್ಲ ಕರೆದು, ' ನನ್ನ ದುಃಖಗಳನ್ನೆಲ್ಲ ಮರೆಸುವವರಾರು ? ನನ್ನ ಅಶಾಂತ ಜೀವನಕ್ಕೆ ಶಾಂತಿಯನ್ನೀಯುವವ ರಾರು ? ಒಳಗಿನ ನನ್ನ ಜೀವನಕ್ಕೆ ಚಿಗುರೊಡೆಸುವ ವಸಂತನು ಯಾರು ?

ಇಂಥ ಮಹಾತ್ಮನು ಯಾವನಾದರೂ ಇರುವನೇ? ಯಾವನು ಆ ಪುಣ್ಯಾತ್ಮಾ? ಜೀವನದಲ್ಲಿ ಅನುಪಮ ಶಾಂತಿಯು ತುಂಬಿದವರಾರಾದರೂ ಇರುವರೇ?' ಎಂದು ವಿಚಾರಿಸಿದನು.

'ಮಹಾರಾಜನೆ, ಶುಕ್ರಾಚಾರ್ಯರಲ್ಲಿ ಈ ಎಲ್ಲ ಗುಣಗಳಿವೆ. ಅವರು ಬಾಲಬ್ರಹ್ಮಚಾರಿಗಳು. ಅವರು ಎಂಥ ಸಂಯಮಿ; ಎಂಥ ವಿರಕ್ತರು! ಅವರನ್ನು ಕರೆಯಿಸಿರಿ. ಅವರ ಜೀವನವೇ ಪರೋಪಕಾರಕ್ಕಿದೆ. ಅವರು ಒಲ್ಲೆನೆನ್ನುವದಿಲ್ಲ.' ಎಂದು ಮುಖ್ಯ ಪ್ರಧಾನಿಯು ಹೇಳಿದನು.

'ಶುಕ್ರಾಚಾರ್ಯರನ್ನು ಕರೆಯಿಸಿರಿ. ಕರೆಯಲು ರಥವನ್ನು ಕಳುಹಿಸಿರಿ. ಸ್ವಾಗತದ ಸಿದ್ಧತೆಯನ್ನು ಮಾಡಿರಿ. ಅವರನ್ನು ಕರೆತರಲು ನಾವೆಲ್ಲ ಎದುರಿಗೆ ಹೋಗೋಣ. ನಗರವನ್ನು ಶೃಂಗರಿಸಿರಿ. ಕೇಶರ, ಕಸ್ತೂರಿಗಳ ಥಳಿಯನ್ನು ಹಾಕಿರಿ. ಗಗನಚುಂಬಿತವಾದ ಧ್ವಜವನ್ನು ನಿಲ್ಲಿಸಿರಿ. ದಾರಿಯಲ್ಲಿ ಅಲ್ಲಲ್ಲಿ ಕಮಾನುಗಳನ್ನು ಕಟ್ಟಿಸಿರಿ. ಎಲ್ಲ ಮಂಗಳ ವಾದ್ಯಗಳು ಬರಲಿ, ಆ ಕಾಲಕ್ಕೆ. ನಾಗರ ಮಂಜುಳವಾದ ವಾದ್ಯಗಳು ಹಾವನ್ನು ತಲೆದೂಗಿಸುವ ಆ ಪುಂಗಿಯೂ ಭಿಲ್ಲರ ವಾದ್ಯಗಳೂ ಬರಲಿ ಅಭೂತಪೂರ್ವವಾದ ಉತ್ಸವವನ್ನು ಮಾಡಿರಿ.' ಶುಕ್ರಾಚಾರ್ಯರು. ಜ್ಞಾನಸೂರ್ಯರು. ಅವರ ಪೂಜೆಯು ನಡೆಯಲಿ. ಅವರು ಬರಲಿ. ಅಂಧಃಕಾರವನ್ನು ಕಳೆಯಲಿ" ಎಂದನು ಪರೀಕ್ಷಿತ.

ಶುಕರನ್ನು ಕರೆಯಲು ರಥವು ಹೋಯಿತು. ಶುಕಾಚಾರ್ಯರು ಬರುವರೆಂಬ ವಾರ್ತೆಯು ಎಲ್ಲೆಡೆಯಲ್ಲಿಯೂ ಹಬ್ಬಿತು. ಎಲ್ಲರ ಬಾಯಿಯಲ್ಲಿಯೂ ಅದೇ ಮಾತು. ಶುಕಾಚಾರ್ಯರ ಜ್ಞಾನ ಹಾಗೂ ವೈರಾಗ್ಯದ ಮಾತುಗಳನ್ನು ಎಲ್ಲರೂ ಕೇಳಿದ್ದರು. ಆದರೆ ಪ್ರತ್ಯಕ್ಷವಾಗಿ ಅವರನ್ನು ಯಾರೂ ನೋಡಿದ್ದಿಲ್ಲ. ಕಥೆಯನ್ನು ಕೇಳಿ ಕಿವಿಗಳು ಪುನೀತವಾಗಿದ್ದವು. ಇಂದು ದರ್ಶನದಿಂದ ಪಾವನವಾಗುವವಿದ್ದವು. ಹಳ್ಳಿ ಹಳ್ಳಿಗಳಿಂದ ಜನರು ಗುಂಪು ಗುಂಪಾಗಿ ಹಸ್ತಿನಾವತಿಗೆ ಬರಹತ್ತಿದರು. ಇಡೀ ಪಟ್ಟಣವೆಲ್ಲ ಗದಗಮಿಸಿತು. ಮನೆ ಮನೆಗೆ ತೋರಣಗಳನ್ನು ಕಟ್ಟಿದ್ದರು. ಹೂಬಳ್ಳಿ

ಗಳ, ಚಿಗುರೆಲೆಗಳ, ಬಾಳೇಗಿಡಗಳ ಕಮಾನುಗಳು ಅಲ್ಲಲ್ಲಿ ಕಂಗೊಳಿಸುತ್ತಿದ್ದವು. ಮುತ್ತು ಮಾಣಿಕಗಳಿಂದ ವಜ್ರ, ವೈಡೂರ್ಯಗಳಿಂದ, ವಾಪಾರಸ್ಥರು ಕಮಾನುಗಳನ್ನು ರಚಿಸಿದ್ದರು. ಪಚ್ಚ, ಇಂದ್ರನೀಲ, ಗೋಮೇಧ, ರತ್ನ, ಪುಷ್ಯರಾಗ ಮೊದಲಾದ ಅನೇಕ ರತ್ನಗಳಿಂದ ಮಂಟಪಗಳು ರಚಿಸಲ್ಪಟ್ಟಿದ್ದವು. ನವಿಲು, ಗಿಳಿ. ಹಂಸ, ಮೊದಲಾದ ಪಕ್ಷಿಗಳ ಆಕೃತಿಗಳನ್ನು ರತ್ನಗಳಿಂದ ಸಿದ್ಧಪಡಿಸಿ, ಅವುಗಳಿಂದ ತೋರಣಗಳನ್ನು ಶೃಂಗರಿಸಿದ್ದರು. ಜವಳೀ ಪೇಟಿಯಲ್ಲಿ ವಿವಿಧ ಚಿತ್ರವಿಚಿತ್ರವಾದ ವಸ್ತ್ರಗಳಿಂದ ಕಮಾನುಗಳನ್ನು ರಚಿಸಿದ್ದರು. ಚಿನಿವಾಲರು ಬೆಳ್ಳಿ, ಬಂಗಾರದ ಸಾಮಾನುಗಳಿಂದ ಕಮಾನುಗಳನ್ನು ಸಿದ್ಧಪಡಿಸಿದ್ದರು. ಎಲ್ಲಿ ನೋಡಿದಲ್ಲಿ ಅಪಾರವಾದ ಉತ್ಸಾಹ. ಅಪೂರ್ವವಾದ ಶೋಭೆ.

ಇಂದು ಪ್ರಭಾತ ಸಮಯದಲ್ಲಿ ರಥವು ಬರುವದಿತ್ತು. ಇತ್ತ ಉದಯಾಚಲದಲ್ಲಿ ಸೂರ್ಯನು ಮೇಲೆ ಬರಹತ್ತಿದನು. ಅತ್ತ ಶುಕಾಚಾರ್ಯರು ರಥದಲ್ಲಿ ಬರಹತ್ತಿದರು. ರಥವು ದೂರದಲ್ಲಿ ಕಂಡೊಡನೆಯೇ ಪ್ರಚಂಡನಾದ ಜಯಘೋಷವಾಯಿತು. ಆಕಾಶವೇ ಕೆಳಗೆ ಬೀಳುವದೋ ಏನೋ ಎನಿಸಿತು. ನಗರದ ಮಹಾದ್ವಾರವು ಉತ್ಕೃಷ್ಟವಾಗಿ ಶೃಂಗರಿಸಲ್ಪಟ್ಟಿತ್ತು. ಸೇವಕರು ಕೈಯಲ್ಲಿ ಹೂಬುಟ್ಟಿಗಳನ್ನು ಹಿಡಿದುಕೊಂಡು., ಮಹಾದ್ವಾರದ ಉಪ್ಪರಿಗೆಯ ಮೇಲೆ ಹೂಮಳೆಗರೆಯಲ ಸಿದ್ಧರಾಗಿದ್ದರು. ವಾದ್ಯಗಳು ಮೊಳಗಹತ್ತಿದವು. ಅವುಗಳ ಸಮ್ಮಿಶ್ರ ಧ್ವನಿಯು ಆನಂದವನ್ನೀಯುತ್ತಿತ್ತು. ಪರೀಕ್ಷಿತನು ಎದುರಿಗೆ ಹೋದನು. ಶುಕಾಚಾರ್ಯರು ಹೊರಬಂದರು. ಪರೀಕ್ಷಿತನು ಸಾಷ್ಟಾಂಗ ಪ್ರಣಾಮ ಮಾಡಿದನು. ಆಚಾರ್ಯರು ಅವನನ್ನು ಅಪ್ಪಿಕೊಂಡರು.

ಶೃಂಗರಿಸಿದ ಒಂದು ಬೈಲು ರಥದಲ್ಲಿ ಶುಕಾಚಾರ್ಯರು ಕುಳಿತರು. ಮೇಲೆ ಬಂಗಾರದ ಛತ್ರಿಯು ಶೋಭಿಸುತ್ತಿತ್ತು. ರಥ ನಡೆಯಿತು. ವಾದ್ಯಗಳೂ ಧ್ವನಿಗೈದವು. ಪುಷ್ಪವೃಷ್ಟಿಯಾಗಹತ್ತಿತು. ಯಾರು ಬಂಗಾರದ ಹೂಗಳನ್ನು ತೂರುತ್ತಿದ್ದಾರೆ. ಯಾರು ಮುತ್ತು ಮಾಣಿಕಗಳನ್ನು ತೂರುತ್ತಿದ್ದಾರೆ. ಬಡವರಾದ ಪುರಜನರು ಅರಳುಗಳನ್ನು ತೂರಹತ್ತಿದರು. ಯಾರ ಹತ್ತರ ಏನು ಇತ್ತೋ, ಅವರು ಅದನ್ನೆಲ್ಲ

ತೂರಿದರು. ಲಕ್ಷಾವಧಿ ಕೈಗಳು ಕೈಜೋಡಿಸಲ್ಪಟ್ಟವು. ಲಕ್ಷಾವಧಿ ಜನರಿಂದ ಕಣ್ಣಲ್ಲಿ ಭಕ್ತಿ, ಪ್ರೇಮಗಳ ಆನಂದಾಶ್ರುಗಳು ಸುರಿಸಲ್ಪಟ್ಟವು. ಶುಕಾಚಾರ್ಯರು ಶಾಂತರಾಗಿದ್ದರು. ಸನ್ಮಾನದ ಮಂದಸ್ಮಿತೆಯು ಅವರ ಮುಖಮುದ್ರೆಯ ಮೇಲೆ ಹೊಳೆಯುತ್ತಿತ್ತು. ಅವರ ಕಣ್ಣುಗಳು ಎಷ್ಟು ಶಾಂತ ! ಎಷ್ಟು ಗಂಭೀರ ! ಎಷ್ಟು ಪವಿತ್ರ ! ಆಕಾಶದಲ್ಲಿ ಹೊಳೆಯುವ ನಕ್ಷತ್ರದಂತೆ ತೇಜಃಪುಂಜವಾಗಿದ್ದವು. ಅವರ ವಿಶಾಲವಾದ ಹಣೆಯು ಜ್ಞಾನಪ್ರಭೆಯನ್ನು ಹೊರಸೂಸುತ್ತಲಿತ್ತು. ಅವರ ಮುಖಮಂಡಲವು ಎಂತಹ ಕೋಮಲ ! ಎಂತಹ ಮೋಹಕ ! ಚಂದ್ರ ಸೂರ್ಯರ ಸಂಮಿಶ್ರ ಪ್ರಭೆಯೋ ಅವರ ಮೈಬಣ್ಣ. ಸೂರ್ಯನ ತೇಜ, ಚಂದ್ರನ ರಮಣೀಯತೆ ಇವೆರಡು ಸಂಮಿಶ್ರವಾಗಿದ್ದವು. ಎಷ್ಟು ನೋಡಿದರೂ ಕಣ್ಣಿಗೆ ತೃಪ್ತಿಯಿಲ್ಲ.

ಅರಮನೆಗೆ ಶುಕಾಚಾರ್ಯರು ಬಂದರು. ಜನಸಮ್ಮರ್ದವು ದೂರವಾಯಿತು.

ಮೂರನೇ ಪ್ರಹರದಲ್ಲಿ ಪರೀಕ್ಷಿತನು ಶುಕಾಚಾರ್ಯರ ಹತ್ತರ ಬಂದು ನಮಸ್ಕರಿಸಿ ಅವರ ಕಾಲ ಹತ್ತರ ಕುಳಿತುಕೊಂಡನು.

‘ ರಾಜಾ, ನನ್ನನ್ನು ಏಕೆ ಕರೆಸಿದೆ ? ಏನು ಕೆಲಸವಿದೆ ? ನಾನು ಎಲ್ಲಿದ್ದರೂ ಸಕಲ ಚರಾಚರಗಳ ಮಂಗಲವನ್ನು ಚಿಂತಿಸುತ್ತಿರುತ್ತೇನೆ. ಈ ದೃಷ್ಟಿಯಿಂದ ನಾನು ಎಲ್ಲರ ಸಮೀಪದಲ್ಲಿರುವೆ. ದೂರ ಹಾಗೂ ಸಮೀಪವೆಂಬ ಶಬ್ದಗಳೇ ನನ್ನ ಹತ್ತಿರವಿಲ್ಲ ’ ಎಂದರು ಶುಕಾಚಾರ್ಯರು.

“ ಭಗವಾನ್, ನನಗೆ ಅತ್ಯಂತ ಅಸಮಾಧಾನವಾಗಿದೆ. ಜೀವನದಲ್ಲಿ ಹುರುಳಿಲ್ಲವೆನಿಸುತ್ತದೆ. ನನಗೆ ಶಾಂತಿಯನ್ನು ಕೊಡಿರಿ. ನಿಮ್ಮ ಶಾಂತಿ ಸಾಗರದಲ್ಲಿಯ ಒಂದು ಬಿಂದು ದೊರೆತರೆ ಸಾಕು. ಅಮೃತಸಾಗರವೇ ನನ್ನ ಎದುರಿಗೆ ಬಂದಿದೆ. ಆದರಲ್ಲಿಯ ಒಂದು ಹನಿಯನ್ನು ನನಗೆ ಕೊಡಿರಿ.” ಎಂದು ಪರೀಕ್ಷಿತನು ಅತ್ಯಂತ ನಮ್ರತೆಯಿಂದ ಬೇಡಿಕೊಂಡನು.

“ ರಾಜಾ, ನಾನು ಸಹಸಾ ಬಹಳ ಮಾತುಗಳನ್ನಾಡುವದಿಲ್ಲ. ನಾನು ಯಾವುದೊಂದು ವಿಷಯದ ಮೇಲೆ ಗಂಭೀರ ಮಾತುಗಳನ್ನಾಡಹತ್ತಿದರೆ, ಆದು ನನ್ನ ಕೈಯಲ್ಲಿ ಉಳಿಯುವದಿಲ್ಲ, ಹಸಿವೆ ನೀರಡಿಕೆಗಳ ಅರಿವು ಕೂಡ

ಆಗುವದಿಲ್ಲ. ರಾಗವು ಪೂರ್ಣವಾಗದೆ ಗಾಯಕರು ಹೇಗೆ ನಿಲ್ಲುವದಿಲ್ಲವೋ ಹಾಗೆಯೇ ನನ್ನ ಬ್ರಹ್ಮಜ್ಞಾನ ಪ್ರಾರಂಭವಾದರೆ, ನನ್ನ ಬ್ರಹ್ಮವೀಣೆಯು ಸುರುವಾದರೆ, ಮನಸ್ಸಿನೊಳಗಿನ ಕಲ್ಪನೆಗಳೆಲ್ಲ ಹೊರಬೀಳುವವರೆಗೆ ಅದು ನಿಲ್ಲುವದಿಲ್ಲ. ಆದುದರಿಂದ ಅಷ್ಟು ಹೊತ್ತು ಕೇಳ ಕೂಡಲು, ನಿನ್ನ ಸಿದ್ಧತೆ ಇದೆಯೇ ?" ಎಂದರು ಶುಕಾಚಾರ್ಯರು.

'ಭಗವಾನ್ ತಾವು ಯಾವ ವಿಷಯದಲ್ಲಿ ಆನಂದಿತರಾಗುವಿರೋ ಆದರಲ್ಲಿಯೇ ನಾನೂ ಆನಂದಿತನಾಗುವೆನು. ತಮ್ಮ ಉಪದೇಶದಿಂದ ಎಂತಹ ಪಾಮರನೂ ಜಗತ್ತನ್ನು ಮರೆಯುವನು. ನಾವು ಎಂದಿನಿಂದ ಕೂಡಬೇಕು ? ನಾನೊಬ್ಬನೇ ಬರುವೆ. ಅಂದರೆ ಅಪಾರವಾದ ಶಾಂತಿಯು ದೊರೆಯುವದು. ವ್ಯತ್ಯಯಗಳು ಬರುವದಿಲ್ಲ. ಇಲ್ಲಿ ನೋಡಿರಿ. ಕಮಲ ಮಹಾಲು ಇವೆ. ಪುಷ್ಕರಣಿಯಲ್ಲಿಯ ಕಮಲಗಳ ಗಂಧ ಹಾಗೂ ಶೀತಲವಾದ ಮಂದಮಾರುತ ಬರುತ್ತಿದೆ. ಸುತ್ತು ಮುತ್ತು ಪ್ರಸನ್ನ ವಾತಾವರಣವಿದೆ.' ಎಂದನು ಪರೀಕ್ಷಿತ.

'ಒಳ್ಳೇದು ನಾಳೆ ಸೂರ್ಯೋದಯದಿಂದ ನಾವು ಕೂಡೋಣ' ಎಂದರು ಶುಕಾಚಾರ್ಯರು.

ಬಹಳ ದೂರದಿಂದ ಜನರು ದರ್ಶನವನ್ನು ತೆಗೆದುಕೊಳ್ಳುತ್ತಿದ್ದರು. ರಾಜದೂತರು ಅಲ್ಲಲ್ಲಿ ನಿಂತು 'ಗದ್ದಲವನ್ನು ಮಾಡಬೇಡಿರಿ' ಎಂದು ಹೇಳುತ್ತಿದ್ದರು. ಅಲ್ಲಿ ಒಂದು ದೊಡ್ಡ ಜಾತ್ರೆಯೇ ನೆರೆಯಿತು. ಸಾವಿರಾರು ನರನಾರಿಯರು ಬಂದು ಹೋಗುತ್ತಿದ್ದರು. ಆದರೆ ಶುಕಾಚಾರ್ಯರ ಲಕ್ಷ್ಯವು ಇದರ ಕಡೆಗಿರಲಿಲ್ಲ. ರಾಜನಿಗೆ ಉಪದೇಶಿಸುವದರಲ್ಲಿ ಮಗ್ನರಾಗಿದ್ದರು. ರಾಜನು ಸರ್ವೇಂದ್ರಿಯಗಳನ್ನು ಕಿವಿಗಳನ್ನಾಗಿಮಾಡಿ ಕೇಳುತ್ತಿದ್ದನು. ನೀರಡಿಸಿದವನು ನೀರಿಗೆ, ಹಸಿದವನು ಅನ್ನಕ್ಕೆ, ಉತ್ಸುಕರಾದಂತೆ ಪರೀಕ್ಷಿತನು ಶುಕಾಚಾರ್ಯರ ಶಬ್ದಗಳಿಗೆ ಉತ್ಸುಕನಾಗಿದ್ದನು. ಇಬ್ಬರ ಹಸಿವೆ, ನೀರಡಿಕೆಗಳು ಮಾಯವಾಗಿದ್ದವು. ಜ್ಞಾನಾಮೃತದ ಭೋಜನವು ನಡೆದಿತ್ತು. ವಿಶ್ರಾಂತಿಯಿಲ್ಲ, ನಿದ್ರೆಯಿಲ್ಲ. ಶುಕಾಚಾರ್ಯರ ಕಣ್ಣಿನಿಂದ ಆನಂದಾಶ್ರುಗಳು ನಡುನಡುವೆ ಉದುರುತ್ತಿದ್ದವು. ಯಾವ ದಿವ್ಯ ಕಥೆಯನ್ನು ಅವರು ಹೇಳು

ತ್ತಿದ್ದರು ? ನೋಡಿರಿ, ಎಂತಹ ಸುಂದರವಾದ ಪಕ್ಷಿಯು, ಶುಕಾಚಾರ್ಯರ ತೊಡೆಯ ಮೇಲೆ ಕುಳಿತು, ಆನಂದಾಶ್ರುಗಳನ್ನೆಲ್ಲ ಕುಡಿಯುತ್ತಿತ್ತು. ಮುತ್ತುಗಳು ಉದುರುತ್ತಿದ್ದವು, ಪಾರಿವಾಳವು ನುಂಗುತ್ತಿತ್ತು. ಆ ಪಕ್ಷಿಯೇ ಧನ್ಯ! ಹೀಗೆ ಏಳು ದಿವಸ ನಡೆಯಿತು, ಏಳನೆಯ ದಿವಸವು ಮುಗಿಯಲು ಬಂದಿತ್ತು. ಬೆಳಗಿನ ತಂಗಾಳಿಯು ಬೀಸುತ್ತಿತ್ತು. ಆಕಾಶವು ಹೆಚ್ಚು ಗಂಭೀರವಾಗಿತ್ತು. ಮುಖ್ಯ ಮುಖ್ಯ ನಕ್ಷತ್ರಗಳು ಕಾಣುತ್ತಿದ್ದವು. ಪಕ್ಷಿಗಳ ಕಿಲಕಿಲಾಟವು ಸ್ವಲ್ಪ ಕೇಳಿಸುತ್ತಿತ್ತು. ಶುಕಾಚಾರ್ಯರು ಸಮಾರೋಪವನ್ನು ಮಾಡುತ್ತಿದ್ದರು.

‘ ರಾಜಾ, ಹೇಳುವದನ್ನೆಲ್ಲ ಹೇಳಿಯಾಯಿತು. ನನ್ನ ಹೃದಯವನ್ನೇ ನಿನ್ನೆದುರಿಗಿಟ್ಟಿದ್ದೇನೆ. ನನ್ನ ಬುದ್ಧಿಯನ್ನೆಲ್ಲ ನಿನಗೆ ಕೊಟ್ಟಿದ್ದೇನೆ. ನನ್ನ ಅನುಭವವನ್ನೆಲ್ಲ ನಿನ್ನ ಎದುರಿಗಿಟ್ಟಿದ್ದೇನೆ. ಇನ್ನು ಕತ್ತಲೆಯನ್ನು ಓಡಿಸಿ ಉಷೆಯು ಬರುವಳು. ನಿನ್ನ ಜೀವನದಲ್ಲಿ ಜ್ಞಾನಪ್ರಭೆಯು ಬೆಳಗಲಿ. ಮಾಲಿನ್ಯವು ನಾಶವಾಗಲಿ. ನಿನ್ನ ಕಲ್ಯಾಣವಾಗಲಿ· ಇಂದಿಗೆ ಏಳು ದಿನಗಳಾದವು. ಸಂಗೀತದಲ್ಲಿ ಸಪ್ತ ಸ್ವರಗಳಿರುತ್ತವೆ. ಇಂದ್ರಧನುಸ್ಸದಲ್ಲಿ ಏಳು ಬಣ್ಣಗಳಿರುತ್ತವೆ. ನಿನಗೆ ಎಲ್ಲ ಸ್ವರಗಳನ್ನು ಹೇಳಿದ್ದೇನೆ. ಎಲ್ಲ ಬಣ್ಣಗಳನ್ನೂ ತೋರಿಸಿದ್ದೇನೆ. ಇನ್ನು ಜೀವನದಲ್ಲಿ ಸಂಗೀತವನ್ನು ನಿರ್ಮಾಣ ಮಾಡು. ಸೌಂದರ್ಯವನ್ನು ಹುಟ್ಟಿಸು. ಸಂಗೀತವನ್ನು ಹೇಗೆ ನಿರ್ಮಿಸಬೇಕು ? ಸ್ವರಗಳನ್ನು ಹೇಗೆ ಕೂಡಿಸಬೇಕು ? ವಿವಿಧ ಬಣ್ಣಗಳ ಪ್ರಮಾಣಬದ್ಧ ಬೆರಿಕೆಯನ್ನು ಹೇಗೆ ಮಾಡಬೇಕು ? ಇದೆಲ್ಲವನ್ನು ನಿನಗೆ ಹೇಳಿದೆನು. ಅನೇಕ ಉದಾಹರಣೆ ಹಾಗೂ ಕಥೆಗಳಿಂದ ನಿನಗೆ ತಿಳಿಯುವಂತೆ ಹೇಳಿದ್ದೇನೆ. ಅನನ ಭಕ್ತಿಯಿಂದ ನೀನು ಕೇಳಿರುವೆ. ನಿನ್ನಂತಹ ಶ್ರೋತೃವು ನನಗೆ ದೊರೆತಿದ್ದಿಲ್ಲ. ನನ್ನನ್ನು ನೀನು ಧನ್ಯಗೊಳಿಸಿದೆ. ಇನ್ನು ಪಾರಣೆಮಾಡು. ವಿಶ್ರಾಂತಿ ತೆಗೆದುಕೋ ” ಎಂದರು ಶುಕಾಚಾರ್ಯರು.

‘ ಭಗವಾನ್, ನಾನು ಮಾತನಾಡಲು ಸಮರ್ಥನಿಲ್ಲ. ನನ್ನ ಅಂತಃಕರಣವು ಉಕ್ಕೇರಿ ಬಂದಿದೆ. ನಾನೇನು ಹೇಳಲಿ ’ ಎಂದು ಅವರ ಚರಣಗಳ ಮೇಲೆ ಮಸ್ತಕವನ್ನಿಟ್ಟು, ಆನಂದಾಶ್ರುಗಳಿಂದ ಪಾದಗಳನ್ನು ತೊಳೆದನು.

ಇಬ್ಬರೂ ಶಾಂತಿ ಮಂದಿರದಿಂದ ಹೊರಬಂದರು. ಮಂಗಲವಾದ್ಯಗಳು ಬಾರಿಸಹತ್ತಿದವು. ಶುಕಾಚಾರ್ಯರಿಗೆ ನಮಿಸಲು, ಲಕ್ಷಾವಧಿ ಜನರು ಗದ್ದಲವನ್ನು ಮಾಡುತ್ತಿದ್ದರು. ರಾಜದೂತರು ವ್ಯವಸ್ಥೆಯನ್ನು ಮಾಡಿ ದಣಿದರು. ಇಬ್ಬರ ಸ್ನಾನವೂಆಯಿತು. ಇಬ್ಬರೂ ಆಸನಗಳ ಮೇಲೆ ಕುಳಿತರು.

' ತಾವೂ ಪಾರಣೆಯನ್ನು ಮಾಡುವಿರಲ್ಲವೇ ? ' ಎಂದನು ಪರೀಕ್ಷಿತ.

' ನನಗೆ ಸ್ವಲ್ಪ ನೀರು ಕೊಡಿರಿ ' ಎಂದರು ಶುಕಾಚಾರ್ಯರು.

' ಒಂದು ಹಣ್ಣು ಬೇಡವೆ ? ' ಎಂದು ಭಕ್ತಿಯಿಂದ ಪರೀಕ್ಷಿತನು ವಿಚಾರಿಸಿದನು.

' ರಾಜಾ, ನೀನು ತೆಗೆದುಕೊ ಹಣ್ಣನ್ನು. ಗಂಗಾಜಲ ಹಾಗೂ ಜಗತ್ತಿನ ಹಿತಚಿಂತನೆ ಇವೇ ನನ್ನ ಆಹಾರ. ಸ್ವಲ್ಪ ನೀರನ್ನು ನನಗೆ ಕೊಡು.' ಸಾಕು. ಎಂದರು ಶುಕಾಚಾರ್ಯರು.

ಸ್ವಚ್ಛವಾದ ಝರಿಯ ನೀರನ್ನು ಒಬ್ಬ ನಾಗಯುವಕನು ತಂದನು. ಪರೀಕ್ಷಿತನ ಸಲುವಾಗಿ ಬೆಳ್ಳಿಯ ತಾಟಿನಲ್ಲಿ ದ್ರಾಕ್ಷೆಯ ಹಣ್ಣುಗಳನ್ನು ತಂದಿದ್ದನು.

' ರಾಜಾ, ನಾನು ನೀರು ಕುಡಿಯುವೆನು. ನೀನು ದ್ರಾಕ್ಷೆಗಳನ್ನು ತೆಗೆದುಕೋ ' ಎಂದರು ಶುಕಾಚಾರ್ಯರು.

ಅವರು ನೀರನ್ನು ಕುಡಿದರು. ರಾಜನು ದ್ರಾಕ್ಷಿಯೊಂದನ್ನು ಬಾಯಿಯಲ್ಲಿ ಹಾಕಿದನು. ಆದರೆ ಆವನಿಗೆ ಒಬ್ಬನೇ ಹಣ್ಣನ್ನು ತೆಗದುಕೊಳ್ಳಲು ಸಂಕೋಚವೆನಿಸಿತು.

' ರಾಜಾ, ಸಂಕೋಚಪಡಬೇಡ. ಅವುಗಳನ್ನು ತೆಗೆದುಕೋ. ಅಪಾಯವಿಲ್ಲ. ' ಎಂದರು ಶುಕಾಚಾರ್ಯರು.

' ಮಹಾರಾಜರೇ, ನಾನು ಪ್ರಯತ್ನಪಟ್ಟು ನಿಮ್ಮ ಸಲುವಾಗಿಯೇ ಇವುಗಳನ್ನು ಆರಿಸಿ ತಂದಿದ್ದೇನೆ. ಈ ಏಳು ದಿವಸಗಳಲ್ಲಿ ತಾವು ಏನೂ ತಿಂದಿಲ್ಲ. ನಾಲ್ಕು ದ್ರಾಕ್ಷಿಗಳೇನು ಹೆಚ್ಚಾಗುವದಿಲ್ಲ. ' ಎಂದು ಆ ನಾಗ ತರುಣನು ಸವಿ ಮಾತುಗಳನ್ನಾಡಿದನು.

'ನೀನು ಎಷ್ಟು ಸವಿ ಮಾತನಾಡುವೆ' ಎಂದನು ಪರೀಕ್ಷಿತ.

ಶುಕಾಚಾರ್ಯರು ಇನ್ನು ತೆರಳುವವರಿದ್ದರು. ರಾಜಮನೆತನದವರೆಲ್ಲರೂ ಜನಮೇಜಯನು ಬಂದನು. ಎಲ್ಲರೂ ನಮಸ್ಕರಿಸಿ, ಆಶೀರ್ವಾದಗಳನ್ನು ಪಡೆದರು. ಆದರೆ ಪರೀಕ್ಷಿತನು ಹೀಗೇಕೆ? ಅವನ ಮುಖಮುದ್ರೆಯು ಹೀಗೇಕಾಗಿದೆ? ಅವನಿಗೆ ಏನು ಕೆಡುಕೆನಿಸಿದೆ?

"ರಾಜಾ ಖಿನ್ನನಾಗಬೇಡ" ಎಂದರು ಶುಕಾಚಾರ್ಯರು. ರಾಜನು ಒಮ್ಮೆಲೆ ಕೆಳಕ್ಕೆ ಬಿದ್ದನು.

'ಏನಾಯಿತು ರಾಜಾ?' ಎಂದರು ಶುಕಾಚಾರ್ಯರು.

'ಮೈಯೆಲ್ಲ ಬೆಂಕಿ? ನನ್ನ ಹೃದಯದ ಬೆಂಕಿಯನ್ನೇನೋ ತಾವು ತಣಿಸಿದಿರಿ. ಆದರೆ ದೇಹದ ಉರಿಯನ್ನು ಆರಿಸುವವರಾರು? ಏನಾಯಿತು ಒಮ್ಮೆಲೆ. ಛೀ ನಾನು ಸುಡುತ್ತಿದ್ದೇನೆ. ಬೇಯುತ್ತಿದ್ದೇನೆ. ಈ ವೇದನೆಯನ್ನು ನಾನು ತಾಳಲಾರೆ. ಮುಂದೆ ಅವನಿಗೆ ಮಾತನಾಡುವದಾಗಲಿಲ್ಲ.'

ಓಡಾಟಕ್ಕೆ ಪ್ರಾರಂಭವಾಯಿತು. ರಾಜವೈದ್ಯನು ಬಂದನು. ದ್ರಾಕ್ಷಿಗಳನ್ನು ಪರೀಕ್ಷಿಸಿದನು. ಅವನು ಗಂಭಿರನಾದನು.

'ರಾಜಾ, ಇದು ವಿಷಪ್ರಯೋಗವು. ಈ ದ್ರಾಕ್ಷಿಗಳಲ್ಲಿ ವಿಷ ತುಂಬಿದೆ. ಪ್ರಖರವಾದ ವಿಷವಿದೆ. ಇದರಲ್ಲಿ ಏನೋ ಮೋಸವಿದೆ. ಈ ದ್ರಾಕ್ಷಿಗಳನ್ನು ತಂದವರಾರು? ಅವನನ್ನು ತೆಗೆದುಕೊಂಡು ಬನ್ನಿರಿ' ಎಂದನು ರಾಜವೈದ್ಯ.

ರಾಜದೂತರು ಆ ಅಡಿಗೆಯವನನ್ನು ಹಿಡತಂದರು. ಅವನು ಅಲ್ಲಿಯೇ ನಿಂತಿದ್ದನು.

'ಈ ಹಣ್ಣುಗಳನ್ನು ಎಲ್ಲಿಂದ ತಂದಿರುವಿ?' ಎಂದು ಜನಮೇಜಯನು ವಿಚಾರಿಸಿದನು.

'ನಿಲ್ಲಿರಿ ಎಲ್ಲವನ್ನೂ ಹೇಳುವೆ. ನಾಗತರುಣರು ನಿರ್ಭಯರಿರುತ್ತಾರೆ' ಎಂದನು.

' ಏನು ನೀನು ನಾಗನೇ ? ನೋಡಲು ಕೆಂಪಿರುವಿಯಲ್ಲ? ' ಎಂದನು ವೈದ್ಯ.

' ಅನೇಕ ನಾಗರು ಗೌರವ ವರ್ಣದವರಿರುತ್ತಾರೆ. ಕೆಂಪು ನಾಗರನ್ನು ನೀವು ನಿಮ್ಮಲ್ಲಿ ತೆಗೆದುಕೊಂಡಿರುತ್ತೀರಿ. ಆದರೆ ನನ್ನಂತಹ ಎಷ್ಟೋ ಸ್ವಾಭಿಮಾನಿಗಳಾದ ಗೌರ ನಾಗರಿದ್ದಾರೆ. ಈ ನಿಮ್ಮ ರಾಜನು, ನಾಗರ ಅಪಮಾನ ಗೊಳಿಸಿದ್ದಾನೆ. ನಾಗರಿಗೆಲ್ಲ ಅತ್ಯಂತ ಪೂಜ್ಯರೂ ಆದರ್ಶಿಗಳೂ ಆದ ನಾಗಮಹರ್ಷಿಗಳನ್ನು ಈ ಪಾಪಿ ಮಹಾರಾಜನು ಅಪಮಾನಗೊಳಿಸಿದ್ದಾನೆ. ಅವರು ತಪಶ್ಚರ್ಯದಲ್ಲಿ ಮಗ್ನರಾದಾಗ ಈ ಪಾಪಿಯು ಒಂದು ಹಾವನ್ನು ಕೊಂದು ಆದನ್ನು ಅವರ ಕೊರಳಿಗೆ ಹಾಕಿ ಚೇಷ್ಟೆಮಾಡಿದ್ದಾನೆ. ಎಂದು ಹಿಂದಿನ ಕಥೆಯನ್ನೆಲ್ಲ ಹೇಳುತ್ತ ಜಾತಿವಂತನಾಗನು ಈ ಅಪಮಾನವನ್ನು ಸಹಿಸುವದೆಂತು ? ನನಗಂತು ಇದು ಸಹನವಾಗಲಿಲ್ಲ. ಈ ರಾಜನ ಕೊಲೆ ಗೈಯ್ಯುವ ಪ್ರತಿಜ್ಞೆಯನ್ನು ಮಾಡಿದೆ. ಆದು ಈಗ ಪೂರ್ಣವಾಗುತ್ತಲಿದೆ. ನೋಡಿರಿ, ಆ ಪಾಪಾತ್ಮನು ಬೀಳಹತ್ತಿದ್ದಾನೆ. ಸಾಯಹತ್ತಿದ್ದಾನೆ. ನನಗೆ ಬೇಕಾದ ಶಿಕ್ಷೆಯನ್ನು ಕೊಡಿರಿ. ನನ್ನ ಶರೀರವನ್ನು ಕಡಿದು ತುಂಡು ತುಂಡುಮಾಡಿರಿ. ಬೇಕಾದರೆ ಬೆಂಕಿಯಲ್ಲಿ ಹಾಕಿ ಸುಡಿರಿ. ನನ್ನ ಧ್ಯೇಯವು ಪೂರ್ಣವಾಗಿ ಸಾಧಿಸಿತು. ನಾನು ಕೃತಕೃತ್ಯನಾಗಿರುವೆ. ನಾನು ನಿರ್ಭಯನಿರುವೆ. ನಾಗರು ಓಡಿಹೋಗುವ ಹೇಡಿಗಳಲ್ಲ ' ಎಂದನು ಆ ತರುಣ.

ರಾಜದೂತರು ಅವನನ್ನು ಮುತ್ತಿದರು. ಅವನ ಕೈಕಾಲುಗಳನ್ನು ಬಿಗಿದರು. ಕತ್ತಿಗಳನ್ನು ಹಿರಿಯ ಹೋದರು. ಜನಮೇಜಯನು ಸಿಟ್ಟಿನಿಂದ ಬೆಂಕಿಯಾಗಿದ್ದನು. ರಾಜಪತ್ನಿಯರು ಗೋಳಿಡಹತ್ತಿದರು. ಪರೀಕ್ಷಿತನು ಕೊನೆಯ ಕಾಲದ ವೇದನೆಯನ್ನು ಅನುಭವಿಸುತ್ತಿದ್ದನು. ಶುಕಾಚಾರ್ಯರು ಶಾಂತವಾಗಿದ್ದರು.

' ರಾಜಾ, ನಿನ್ನ ಆಯುಷ್ಯವು ಇನ್ನೊಂದು ಕ್ಷಣವುಳಿದಿದೆ. ಮರಣವು ಎದುರಿಗೆ ನಿಂತಿದೆ. ಮರಣಕಾಲದಲ್ಲಿ ಶತ್ರುಮಿತ್ರರನ್ನು ಸಮಾನದೃಷ್ಟಿಯಿಂದ ನೋಡುವ ಸುವರ್ಣಸಂಧಿಯನ್ನು ದೇವರು ನಿನಗೆ ಒದಗಿಸಿಕೊಟ್ಟಿ

ದ್ದಾನೆ. ಮನಸ್ಸಿನಲ್ಲಿಯ ದ್ವೇಷಾಸೂಯಗಳನ್ನೆಲ್ಲ ಕಿತ್ತೊಗೆ. ಈ ಏಳು ದಿವಸ ನಿನಗೆ ಭಗವಂತನ ಮಹಿಮೆಯನ್ನು ಹೇಳಿದ್ದೇನೆ. ಜ್ಞಾನ ಹಾಗೂ ಪ್ರೇಮದ ಮುರಲಿಯನ್ನು ನೀನು ಕೇಳಿರುವಿ. ನೀನು ಕೇಳಿದ್ದರ ಪರೀಕ್ಷೆ ಈಗ ಬಂದಿದೆ. ಅದರಲ್ಲಿ ನೀನು ಉತ್ತೀರ್ಣನಾಗು. ಶತ್ರುಗಳಿಗೂ ಕೂಡ ಪ್ರೇಮವನ್ನು ತೋರಿಸುತ್ತ, ತೋರಿಸುತ್ತ ಈ ದೇಹವನ್ನು ಬಿಟ್ಟು ಬಿಡು. ಚೈತನ್ಯಮಯನಾದ ಶ್ರೀ ಹರಿಯ ಚರಣಗಳನ್ನು ಸೇರು. ನಿರ್ಮಲ ನಾಗು. ನಿರ್ಮತ್ಸರನಾಗು. ಇವನನ್ನು ಕ್ಷಮಿಸು. 'ಎಲೋ ತರುಣನೇ ನೀನು ನನಗೆ ವಿಷವನ್ನು ಕೊಟ್ಟರೆ, ನಾನು ನಿನಗೆ ಪ್ರೇಮದ ಅಮೃತವನ್ನು ಕೊಡುವೆ' ಹೋಗು, ಎಂದು ಹೇಳು. ಕ್ಷಮಿಸು ಅವನನ್ನು' ಎಂದರು ಶುಕಾಚಾರ್ಯರು.

ಪರೀಕ್ಷಿತನು ಪ್ರೇಮಪೂರ್ಣದೃಷ್ಟಿಯಿಂದ ಆ ತರುಣನ ಕಡೆಗೆ ನೋಡ ಹತ್ತಿದನು. ತನ್ನ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಮಾತನಾಡಹತ್ತಿದನು. "ಎಲೈ ತರುಣನೇ ಹೋಗು. ನಿನಗೆ ನಾನು ದಯತೋರಿಸಿದ್ದೇನೆ. ಸಾಯುವ ಪರೀಕ್ಷಿತನು ಕೊಲ್ಲುವವರಿಗೆ ಪ್ರೇಮವನ್ನು ಕೊಟ್ಟು ಹೋಗುತ್ತಿದ್ದಾನೆ. ಎಲ್ಲರಿಗೂ ಪ್ರೇಮದ ಸಂದೇಶವನ್ನು ಕೊಟ್ಟು ಹೋಗುತ್ತಿದ್ದಾನೆ. ನಾನು ಇನ್ನೂ ರಾಜನಿರುವೆ. ಈಗ್ಯೂ ನನ್ನ ಶಾಸನವಿದೆ. ನಾನು ನಿನ್ನ ಅಪರಾಧ ವನ್ನು ಕ್ಷಮಿಸುತ್ತೇನೆ. ಜನಮೇಜಯಾ, ಇವನನ್ನು ಬಿಟ್ಟುಬಿಡು. ಅವನನ್ನು ಬಿಟ್ಟುಬಿಡಿರಿ. ಮರಣೋನ್ಮುಖನಾದ ರಾಜನ ಆಜ್ಞೆಯನ್ನು ಪಾಲಿಸಿರಿ. ಸರ್ವ ಜೀವನವು ನನಗೆ ನಿಸ್ಸಾರವಾಗಿ ಕಾಣುತ್ತದೆ. ಆದರೆ ನನ್ನ ಜೀವನವು ಇಂದು ಕೃತಾರ್ಥವಾಗಿದೆ. ಇಡೀ ಜೀವಮಾನದಲ್ಲೆಲ್ಲ ನನಗೆ ಜೀವವು ಬರಿಬರಿದಾಗೆನಿಸುತ್ತಿತ್ತು. ಆದರೆ ಈ ಮರಣ ಸಮಯದಲ್ಲಿ ಅದು ಪ್ರೇಮ ದಿಂದ ತುಂಬಿ ತುಳುಕುತ್ತಿದೆ. ಕೊನೆಯಕ್ಷಣವು ಬಹಳ ಸವಿಯಾಗಿದೆ. ನನ್ನ ಜೀವಿತದ ಕಾರ್ಯವೇನು? ಎಂದು ನನಗೆ ಮೇಲಿಂದ ಮೇಲೆ ಅನಿಸು ತ್ತಿತ್ತು. ಆದರೆ ಸಾಯುವಾಗ ಅದು ನನಗೆ ತಿಳಿದಿದೆ. 'ವಿಷಕೊಡುವವರಿಗೆ ಪ್ರೇಮವನ್ನು ಕೊಡು' ಎಂಬುದನ್ನು ಜಗತ್ತಿಗೆ ಸಾರುವದಕ್ಕಾಗಿಯೇ ನನ್ನ ಜನ್ಮವಿದ್ದಿತು. ನಾನು ಕೃತಾರ್ಥನಾದೆ. ನನ್ನ ಜೀವಿತಕಾರ್ಯವು ಇಂದು

ಸಿದ್ಧಿಯಾಯಿತು. ನಾನು ಸುಖದಿಂದ ಪ್ರಾಣಬಿಡುವೆ. ಏಕೆಂದರೆ ಜೀವಿತ ಕಾರ್ಯವು ಪೂರ್ಣವಾದೊಡನೆಯೇ ಅವನ ಜೀವನವೂ ಪೂರ್ಣವಾಗುವದು. ಭಗವಾನ್ ಶುಕಾಚಾರ್ಯರೇ! ನಿಮಗೆ ನಮಸ್ಕರಿಸುವೆ. ನಿಮ್ಮ ಪಾದಕಮಲ ಗಳಿಂದಲೇ ಈ ಪ್ರಾಣಹಂಸವು ಹಾರಿಹೋಗಲಿ' ಎಂದನು ಪರೀಕ್ಷಿತ.

ಆ ತರುಣನನ್ನು ಬಿಟ್ಟು ಬಿಟ್ಟರು. ಆ ತರುಣನು ಶುಕಾಚಾರ್ಯರಿಗೂ ರಾಜನಿಗೂ ನಮಸ್ಕರಿಸಿದನು. 'ರಾಜಾ ನಾನು ಹೋಗಿಬರುವೆ. ಆರ್ಯರ ಬಗ್ಗೆ ದ್ವೇಷವು ನಾಗರಲ್ಲಿ ಹಬ್ಬುತ್ತ ನಡೆದಿದೆ. ನಿನ್ನ ಮರಣದ ಈ ದಿವ್ಯ ಸಂದೇಶವನ್ನು ಅವರಿಗೆ ಹೇಳಿ, ದ್ವೇಷಾಗ್ನಿಯಿಂದ ಅವರನ್ನು ಪರಾಂಙ್ಮುಖ ರನ್ನಾಗಿ ಮಾಡುವೆ. ನೀನು ಇತ್ತ ಈ ಸಂದೇಶವು ವ್ಯರ್ಥವಾಗಲಾರದು. ನನ್ನನ್ನು ಕ್ಷಮಿಸು ಎಂದನು.

'ಕ್ಷಮಾ' ಎಂದನು ಪರೀಕ್ಷಿತ.

ಆ ತರುಣನು ಹೊರಟುಹೋದನು. ಪರೀಕ್ಷಿತನು ಶುಕಾಚಾರ್ಯರ ಚರಣದ ಮೇಲೆ ಪ್ರಾಣವನ್ನು ಬಿಟ್ಟನು. ಗಂಭೀರವಾದ ಪ್ರಸಂಗ. ಅದೇನು ಮರಣವಿದ್ದಿತೋ ? ನವಜೀವನವಿದ್ದಿತೋ ?

'ಜನಮೇಜಯಾ, ನಾನು ಹೋಗಿ ಬರುತ್ತೇನೆ. ಶೋಕಮಾಡಬೇಡ. ಯಾವಮರಣವು ಪ್ರೇಮದ ಮಳೆಗರಿಯಿತೋ ಆ ಮರಣವು ಅಪೂರ್ವವಿದೆ. ಅಮರ ವಿದೆ ಎಂದು ಹೇಳಿ ಶುಕಾಚಾರ್ಯರು ಹೊರಟುಹೋದರು.

—:XXX ● XXX:—

೧೨

" ವತ್ಸಲೇ ನೀನು ನಾಗನನ್ನೆ ಮದುವೆಯಾಗುವೆನೆಂದು ಪ್ರತಿಜ್ಞೆಯನ್ನು ಮಾಡಿದ್ದೆ, ಆದರೆ ಕಡೆಗೆ ನಾಗನನ್ನು ಬಿಟ್ಟು ಆರ್ಯನನ್ನೇ ಮದುವೆಯಾದೆ " ಎಂದನು ಕಾರ್ತೀಕ.

' ನಾಗಾನಂದನು ನಾಗಜಾತಿಯವನೇ ಇದ್ದಾನೆ. ಅವನು ಸ್ವತಃ ನಾಗನೆಂದೇ ಹೇಳಿಕೊಳ್ಳುತ್ತಾನೆ. ಅವನು ಆರ್ಯನೆಂದು ನಿನಗೆ ಹೇಳಿದವರಾರು ? ' ಎಂದು ವತ್ಸಲೆಯು ಕೇಳಿದಳು.

' ಅಜ್ಜಿ ಸುಶ್ರುತೆಯೇ ಅನ್ನುತ್ತಿದ್ದಳು. ಅವನ ತಂದೆಯು ಆರ್ಯನು. ಅವನ ತಾಯಿಯು ನಾಗಕನ್ಯೆ. ' ತಂದೆಯ ಜಾತಿಯು ಯಾವುದೋ ಅದೇ ಮಗನದು. ' ಎಂದು ಆರ್ಯರು ತಿಳಿಯುತ್ತಾರೆ. ತಾಯಿ ಯಾವ ಜಾತಿಯವಳಿದ್ದರೇನು ? ಆದ್ದರಿಂದ ನಾಗಾನಂದನು ಆರ್ಯನಿದ್ದಾನೆ. ' ಎಂದು ಅವನು ಹೇಳಿದನು.

' ಕಾರ್ತೀಕಾ, ನಾನು ನಾಗಾನಂದನನ್ನು ಪ್ರೀತಿಸುತ್ತೇನೆ. ಅವನು ನಾಗನೇ ಇರಲಿ ಆರ್ಯನೇ ಇರಲಿ, ಅದನ್ನು ತಕ್ಕೊಂಡು ನನಗೇನು ಮಾಡುವದಿದೆ. ಅವನು ನನ್ನವನಿದ್ದಾನೆ, ನನಗಾಗಿಯೇ ಹುಟ್ಟಿದ್ದಾನೆ, ಹೀಗೆ ನನಗೆ ಅನಿಸಿದ್ದರಿಂದ ನಾನು ಅವರನ್ನು ಮದುವೆಯಾದೆ. ಪ್ರೀತಿಗೆ ಜಾತಿಯಿಲ್ಲ. ಗೋತ್ರವಿಲ್ಲ. ಪ್ರೇಮವು ಪೂರ್ಣತೆಯನ್ನು ಕೊಡುತ್ತದೆ. ಅಪೂರ್ಣನಿದ್ದವನನ್ನು ಪೂರ್ಣನನ್ನಾಗಿ ಮಾಡುತ್ತದೆ. ನಾಗಾನಂದನು ತಾನು ನಾಗನೆಂದು ತಿಳಿಯುತ್ತಾನೆ. ನಾಗರ ಪಕ್ಷವನ್ನು ಕಟ್ಟುತ್ತಾನೆ. ಯಾವನಾದರೊಬ್ಬ ನಾಗನು ಸ್ವಾರ್ಥದ ಸಲುವಾಗಿ, ಕೆಲವು ದುಷ್ಟ ಆರ್ಯರ

ಸ್ನೇಹಕ್ಕೆ ಬಿದ್ದು, ನಾಗರನ್ನೇ ದ್ವೇಷಿಸ ಹತ್ತಿದರೆ, ಅವನು ನಾಗನೇ? ನಮ್ಮ ಜಾತಿಯಾವದು? ಧರ್ಮವಾವುದು? ನಮ್ಮವರು ಯಾರು? ಯಾರ ಸಲುವಾಗಿ ನಾವು ಸಾಯುವೆವೊ ಅವರೇ ನಮ್ಮವರು. ನಾಗಾನಂದನು ನಾಗರ ಸಲುವಾಗಿ ಚಡಪಡಿಸುತ್ತಾನೆ. ಆದ ಕಾರಣ ಅವನು ನಾಗನು. ಪ್ರತಿಜ್ಞೆಯ ಅರ್ಥವನ್ನು ತಿಳಿಯಬೇಕು. ಬರೆ ಅಕ್ಷರಗಳನ್ನೋದಿದರಾಗದು" ಎಂದಳು ವತ್ಸಲೆ.

'ನಿನಗೆ ಸಿಟ್ಟುಬಂದಿತೆ? ನೀನು ನನ್ನ ಮೇಲೆ ಸಿಟ್ಟಾಗುತ್ತಲೇ ನಡೆ. ನೀನು ನನಗೆ ಪ್ರೇಮವನ್ನು ತೋರಿಸದಿದ್ದರೂ ಸಿಟ್ಟಾದರೂ ಆಗು. ನಿನ್ನದೇನನ್ನಾದರೂ ಕೊಡು. ನೀನು ನನ್ನನ್ನು ತೀರ ಉಪೇಕ್ಷಿಸಬೇಡ." ಎಂದನು ಕಾರ್ತೀಕ.

'ಕಾರ್ತೀಕಾ, ಇತ್ತೀಚೆಗೆ ನೀನು ನೂಲುತ್ತಲೇ ಕೂಡುವಿಯೇಕೆ? ಎಂದಳು.

'ನಿನಗೆ ಮದುವೆಯ ಕಾಣಿಕೆಯನ್ನು ಕೊಡಲಿಕ್ಕೆ, ನಿನಗೆ ಯಾವ ಬಣ್ಣವು ಸೇರುತ್ತದೆ? ನಿನಗೆ ಬಿಳೀ ವಸ್ತ್ರಗಳೇ ಒಪ್ಪುತ್ತವೆ.' ಎಂದನು ಕಾರ್ತೀಕ.

'ಆದರೆ ಅವರಿಗೆ ಹಸರು ಬಣ್ಣ ಸೇರುತ್ತದೆ' ಎಂದಳು.

'ಅವರಿಗೆ ಸೇರುವದನ್ನೇ ಉಡು. ಹಸರು ಬಣ್ಣದ ವಸ್ತ್ರವನ್ನೇ ನಿನಗೆ ನಾನು ಕೊಡುವೆನು. ಅದನ್ನು ನೀನು ಉಡುವಿಯಾ? ನನಗೆ ಅಷ್ಟರಿಂದಲೇ ಸಮಾಧಾನ. ನಾನು ನಿನ್ನನ್ನು ಮುಟ್ಟಲು ಶಕ್ಯವಿಲ್ಲ. ನಿನ್ನನ್ನು ಪ್ರೀತಿಸಲು ಶಕ್ಯವಿಲ್ಲ. ಆದರೆ ನಾನು ನೂತ ವಸ್ತ್ರವನ್ನಾದರೂ ನೀನು ಉಡು. ಉಡುವಿಯಾ! ಇಷ್ಟಾದರೂ ದಯೆಯನ್ನು ತೋರಿಸುವಿಯಾ ನನ್ನ ಮೇಲೆ? ಎಂದು ಕಾರ್ತೀಕನು ಕೇಳಿದನು.

'ಉಡುವೆನು, ಆದರೆ ನೀನು ಬೊಬ್ಬಾಟ ಮಾಡಬೇಡ. ಇದನ್ನು ಗುಪ್ತವಾಗಿರಿಸು. ಯಾರಿಗೂ ಹೇಳಬೇಡ." ಎಂದಳು.

'ವತ್ಸಲೇ, ನಿನ್ನ ಹೊಲದಲ್ಲಿಯ ಗುಡಿಸಲದಲ್ಲಿ ನಾನು ಇರಲೇ? ಈಗ ನಾಗಾನಂದನು ಅಲ್ಲಿರುವದಿಲ್ಲ. ನಾಗನಂದನಿದ್ದಲ್ಲಿ ನಾನಿದ್ದರೆ

ನನ್ನನ್ನು ಮುಂದಿನ ಜನ್ಮದಲ್ಲಿಯಾದರೂ ನೀನು ಪ್ರೀತಿಸುವೆ!' ಎಂದನು.

' ಎಲ್ಲಿಯ ಮುಂದಿನ ಜನ್ಮ? ಮುಂದಿನ ಜನ್ಮದ ಕಲ್ಪನೆ ಮಾಡ್ಕುವದು ಹೇಡಿತನವು. ' ನಾನು ಮಾಡುವದನ್ನೆಲ್ಲ ಇದೇ ಜನ್ಮದಲ್ಲಿ ಮಾಡುವೆನು ' ಎಂದು ಅನ್ನಬೇಕು· ಮುಂದಿನ ಜನ್ಮವನ್ನು ಮನ್ನಿಸದವನು ಹೆಚ್ಚ್ಟಿ ನಿಶ್ಚಯವುಳ್ಳವನೂ, ಹೆಚ್ಚು ತೇಜಸ್ವಿಯೂ, ಹೆಚ್ಚು ಪ್ರಯತ್ನವಾದಿಯೂ ಇರುತ್ತಾನೆ. ಅವನ ಜೀವನದಲ್ಲಿ ಒಂದು ಪ್ರಕಾರದ ತೇಜವಿರುತ್ತದೆ. ಪುನರ್ಜನ್ಮದ ವಾದವು ನನಗೆ ಸೇರುವದಿಲ್ಲ. ನಾಗಾನಂದನ ಮತವೂ ಹೀಗೇ ಇದೆ. ಈ ಕಾರ್ಯದಲ್ಲಿಯೇ ಪುನರ್ಜನ್ಮವು ತೂಗಾಡುತ್ತಲಿದೆ. ಅದರಲ್ಲಿ ನಿನಗೆ ಸಮಾಧಾನವಾಗುತ್ತಿದ್ದರೆ ಅದನ್ನೇ ಜಪಿಸುತ್ತ ಕೂಡ್ರು. ನೀನು ಅದರಂತೆ ನಡೆ. ಅದು ಕಲ್ಪನೆಯ ಸಮಾಧಾನ! ಅದು ಅಶಕ್ತ ಹಾಗೂ ಭ್ರಮಿಷ್ಟ ಸಮಾಧಾನ! " ಎಂದಳು ಆಕೆ.

' ವತ್ಸಲೇ, ಹಾಗೆ ವಿಚಾರ ಮಾಡಿದರೆ ಎಲ್ಲವೂ ಕಲ್ಪನಾಮಯವೇ ಆದೆ. ನಾವು ನಮ್ಮ ಕಲ್ಪನೆಗಳಿಂದಲೇ ಎಲ್ಲವನ್ನು ನಿರ್ಮಿಸುತ್ತೇವೆ. ನೀನು ಆಳವಾಗಿ ವಿಚಾರ ಮಾಡಿದರೆ ಅದನ್ನು ನೀನು ಒಪ್ಪಲೇಬೇಕಾದೀತು. " ಎಂದನು ಕಾರ್ತಿಕ.

" ನೀರಿನ. ಅಡಿಯಲ್ಲಿ ಕೆಸರುಯಿರುತ್ತದೆ. ಮೇಲೆಯೇ ಆಡುವಾ." ಎಂದಳು ಆಕೆ.

" ಆದರೆ ಮುತ್ತುಗಳು ಸಮುದ್ರದ ಅಡಿಯಲ್ಲಿಯೇ ಇರುತ್ತವೆ. " ಎಂದನು ಕಾರ್ತಿಕ.

' ಮುತ್ತೊಂದು ಇರಬಹುದು. ಆದರೆ ಕೆಸರೇ ಬಹಳ.' ಎಂದಳು ವತ್ಸಲೆ.

" ಕೆಸರಲ್ಲಿ ಕ್ವಚಿತ್ತಾಗಿ ಸಿಗುವುದಾದ್ದರಿಂದಲೇ ಆ ಮುತ್ತಿಗೆ ಬೆಲೆ ಹೆಚ್ಚು. ಎಲ್ಲರೂ ನಾಗಾನಂದನಂತೆಯೇ ಇದ್ದರೆ, ನೀನು ಅವರನ್ನೆಲ್ಲ ಆದರಿಸುತ್ತಿದ್ದೆಯಾ? ಪ್ರೀತಿಸುತ್ತಿದ್ದೆಯಾ? ಅಂಥವರು ಸಾವಿರಕ್ಕೊಬ್ಬರು ಲಕ್ಷಕ್ಕೊಬ್ಬರು ಸಿಗುತ್ತಾರೆಂದು ನಿನಗೆ ಅನಿಸುವದೆಂದೇ ನೀನು ಅವರಿಗೆ ಇಷ್ಟು ಬೆಲೆ ಕೊಡುವಿ. ' ಎಂದನು ಕಾರ್ತಿಕ.

'ನಾನು ಅವರ ಬೆಲೆಯನ್ನು ಎಂದೂ ಕಟ್ಟಿಲ್ಲ. ನನ್ನ ಹೃದಯವು ಅವರ ಕಡೆಗೆ ಹೋಯಿತು. ನಾನು ನನ್ನ ಜೀವನವನ್ನು ಅವರ ಚರಣಗಳ ಮೇಲೆ ಅರ್ಪಿಸಿದೆ. ನಾನು ಅವರನ್ನು ತಕ್ಕಡಿಯಲ್ಲಿಟ್ಟು ತೂಗಿ ನೋಡಲಿಲ್ಲ. ಅವರು ಗುಣಿಗಳೊ ದುರ್ಗುಣಿಗಳೊ ಪರಾಕ್ರಮಿಗಳೊ ಹೇಡಿಗಳೊ ಎಂಬುದನ್ನು ನಾನು ನೋಡಲಿಲ್ಲ. ಪ್ರೇಮವು ಅಳೆದು ನೋಡತಕ್ಕ ವಸ್ತುವಲ್ಲ. ಪ್ರೇಮವು ಮಾರುವ ವಸ್ತುವೇ ಅಲ್ಲ." ಎಂದು ವತ್ಸಲೆ ನುಡಿದಳು.

"ನಿನ್ನ ಹೊಲದಲ್ಲಿರುವ ಗುಡಿಸಲಿನಲ್ಲಿ ನಾನು ಇರಲೇ ? ಕೆಲಸವನ್ನು ಮಾಡುವೆ. ನಿನಗೆ ಹೂಗಳನ್ನು ತಂದು ಕೊಡುವೆನು. ಉದ್ಯೋಗವಿಲ್ಲದೆ ಮನೆಯಲ್ಲಿ ಹೇಗೆ ಇರಲಿ ? " ಎಂದು ವಿಚಾರಿಸಿದನು.

'ಆದರೆ ನೀನು ಅಂಜಬಹುದು. ಹುಲಿಗಳೂ ಹಾವುಗಳೂ ಬರಬಹುದು, ಹೇಗೆ ಮಾಡುವಿ ?' ಎಂದಳು.

'ಹುಲಿಯು ಬರಬೇಕು ಮತ್ತು ನನ್ನನ್ನು ತಿನ್ನಬೇಕು, ಹಾವು ಬರಬೇಕು ನನ್ನನ್ನು ಕಚ್ಚಬೇಕು ಎಂಬ ಉದ್ದೇಶದಿಂದಲೇ ನಾನು ಅಲ್ಲಿರಬೇಕೆನ್ನುವೆ. ನಿನ್ನ ತಲೆಯಲ್ಲಿ ಶೋಭಿಸುವ ಹೂಗಳು ಬೆಳೆಯುವ ತೋಟದಲ್ಲಿ ನನಗೆ ಮರಣ ಬಂದರೆ ಅದು ನನ್ನ ಭಾಗ್ಯ." ಎಂದನು ಕಾರ್ತೀಕ.

"ನಾನು ಅಜ್ಜಿಯನ್ನು ವಿಚಾರಿಸುವೆನು" ಎಂದಳು ವತ್ಸಲೆ.

ಕಾರ್ತೀಕನು ಹೊರಟುಹೋದನು. ಅವನು ಹೋಗಿ ನೂಲುತ್ತ ಕುಳಿತನು. ನನ್ನ ಕೈಗಳು ವತ್ಸಲೆಯು ಸಲುವಾಗಿ ಒಂದೇ ಸವನೇ ನೂಲುತ್ತಲಿವೆ. ಮನಸ್ಸು ಒಂದೇಸವನೆ ಅವಳ ಚಿಂತನೆಯನ್ನು ಮಾಡುತ್ತಲಿದೆ. ನೀವು ಕಣ್ಣೀರಿನ ಮಾಲೆಯನ್ನು ಹೆಣೆಯಿರಿ. ವಸ್ತ್ರಗಳನ್ನು ಒಯ್ದು ಕೊಡಲು ಬರುತ್ತದೆ. ಕಣ್ಣೀರಿನ ಮಾಲೆಯನ್ನು ಹೇಗೆ ಹೆಣೆಯುಬೆಕು. ಹೇಗೆ ಒಯ್ದು ಕೊಡಬೇಕು?' ಎಂದು ಅವನು ತನ್ನ ಕಣ್ಣುಗಳನ್ನುದ್ದೇಶಿಸಿ ಅಂದನು. ಕಡೆಗೆ ಒಂದು ಹಸರು ಸೀರೆಯನ್ನು ತಯಾರಿಸಿದನು. ಅಂದು ವತ್ಸಲೆಯು ಹೊಲಕ್ಕೆ ಹೋಗಿದ್ದಳು. ಆಗ ಕಾರ್ತೀಕನು ಆ ಸೀರೆಯನ್ನು ತಕ್ಕೊಂಡು ಅಲ್ಲಿಗೆ ಬಂದನು.

' ವತ್ಸಲೆಯೇ ತೆಗೆದುಕೋ ಈ ಹಸರು ಸೀರೆಯನ್ನು. ಆ ಹಚ್ಚಸ್ನ ಗಿಡದ ಬುಡದಲ್ಲಿ ಹೋಗಿ ಇದನ್ನು ಉಟ್ಟುಕೊ. ಗರ್ಭಿಣಿಯರು ಹಸರು ಸೀರೆ ಯನ್ನುಡಬೇಕೆಂದು ಅನ್ನುವರಲ್ಲವೇ ? ಎಂದನು ಕಾರ್ತೀಕ.

' ಡಾಳಿಂಬರ ಬಣ್ಣದ ಸೀರೆ, ಅಂಜೂರಿ ಬಣ್ಣದ ಸೀರೆ ಉಡಬೇಕು. ಹಾಗು ಹಸರು ಕುಪ್ಪಸವನ್ನು ತೊಡಬೇಕು. ಕಾರ್ತೀಕಾ ನೀನು ಹೋಗು. ನೀನು ನನ್ನನ್ನು ಪ್ರೀತಿಸುವಿ. ನನಗೆ ನಿನ್ನನ್ನು ನೋಡಿ ಕಸಿಕರವೆನಿಸುತ್ತದೆ. ಆದರೆ ಈಗ ನೀನು ಹೋಗು. ವಿಚಾರ ಮಾಡಿ ಮಾತಾಡು, ಎಚ್ಚರಿಕೆ ಯಿಂದ ನಡೆ, ಇಲ್ಲದಿದ್ದರೆ ನಾನು ನಿನ್ನನ್ನು ಹತ್ತಿರ ಬರಗೊಡಲಿಕ್ಕಿಲ್ಲ. ನಿನ್ನ ಕೂಡ ಮಾತನಾಡಲಿಕ್ಕಿಲ್ಲ. ' ಎಂದು ಅವಳು ಸಿಟ್ಟಿನಿಂದ ಮಾತನಾಡಿದಳು.

' ಕ್ಷಮಿಸು, ನಾನು ಹೋಗುತ್ತೇನೆ ' ಎಂದನು. ಅವನ ಕಣ್ಣಲ್ಲಿ ನೀರು ಬಂದವು. ಅವನು ಹೊರಟು ಹೋದ. ವತ್ಸಲೆಯ ಕಡೆಗೆ ತಿರುಗಿ ಸಹ ನೋಡಲಿಲ್ಲ.

ವತ್ಸಲೆಯು ಗಿಡದ ಹತ್ತಿರ ಹೋದಳು. ಆ ಹಸರು ಸೀರೆಯನ್ನು ಟ್ಟಳು. ನಾಗಾನಂದನು ಬಂದನು. ನೋಡಿ ಚಕಿತನಾದ.

' ಕೆಂಪು ಬಣ್ಣದ ಸೀರೆಯನ್ನುಟ್ಟು ಬಂದ ನೀನು, ಹಸರು ಸೀರಯಲ್ಲಿ ಕಾಣುವಿಯಲ್ಲ? ಎಂದನು ನಾಗಾನಂದ.

' ನಿಮಗೆ ಹಸರು ಬಣ್ಣವು ಸೇರುವದರಿಂದ ಎಲ್ಲೆಡೆಗೂ ಹಸರೇ ಕಾಣು ತ್ತದೆ. ಇದು ಹಸರು ಸೀರೆಯಲ್ಲ, ಕೆಂಪು ವರ್ಣದ್ದೇ ಆದೆ. ಚನ್ನಾಗಿ ನೋಡಿರಿ.' ಎಂದು ನಗುತ್ತ ನುಡಿದಳು.

' ಇದನ್ನು ಯಾರು ಕೊಟ್ಟರು ? ' ಎಂದನು ಆತ

' ತೌರೂರಿನ ಉಡಗೊರೆ.' ಎಂದಳಾಕೆ

' ನಿನ್ನ ತೌರೂರೆಲ್ಲಿದೆ ? ' ಎಂದು ಅವನು ಕೇಳಿದನು.

' ಎಲ್ಲೆಡೆಯಲ್ಲಿ ' ಎಂದಳು ವತ್ಸಲೆ

' ವತ್ಸಲೇ, ನೀನು ಏನನ್ನು ಇಚ್ಛಿಸುವಿ ? ನಿನಗೆ ಏನು ಬೇಕು ? ಆದನ್ನೆಲ್ಲ ಹೇಳು. ನಿನ್ನ ಬಯಕೆಯನ್ನು ಪೂರೈಸಬೇಕು. ಹೇಳು ' ಎಂದು ಪ್ರೇಮದಿಂದ ನಾಗಾನಂದನು ಕೇಳಿದನು.

‘ ಏನು ಹೇಳಲಿ ? ಆರ್ಯ ಹಾಗೂ ನಾಗರಲ್ಲಿ, ಪ್ರೇಮುವನ್ನು ಹುಟ್ಟಿಸುವದಕ್ಕಾಗಿ ನಾನು ಸಾಯಬೇಕೆನಿಸುತ್ತದೆ. ನೀವು ಪ್ರಚಾರಕ್ಕಾಗಿ, ಯಾವಾಗ ಹೊರಡುವಿರಿ ? ಎಲ್ಲಡೆಯಲ್ಲಿಯೂ ಪ್ರೇಮಧ್ವಜವನ್ನು ಒಯ್ಯೋಣ ” ಎಂದಳು.

‘ ಈಗ ಹೋಗುವದೆಲ್ಲಿ? ಈಗ ನಿನಗೆ ಬೇಗನೆ ನಡೆಯಲೂ ಸಹ ಆಗುವದಿಲ್ಲ. ಇಷ್ಟು ದೂರವೇಕೆ ಬಂದೆ ? ನೀರನ್ನು ಹಾಕಲಿಲ್ಲವಷ್ಟೆ ? ಹೆಚ್ಚು ದುಡಿಯುವದು ಒಳ್ಳೆದಲ್ಲ. ’ ಎಂದನು.

‘ ಸ್ವಲ್ಪ ದುಡಿದರೇನೆ ಎಲ್ಲವೂ ಒಳಿತಾಗುವದು. ದುಡಿಯದಿದ್ದರೆ ಮೋಸವಾದೀತು. ಇಂದು ಗಾಳಿಯೋ ಇಲ್ಲ. ಬಹಳ ಸೆಕೆಯಾಗುತ್ತದೆ ’ ಎಂದಳು.

‘ ಗಾಳಿಯನ್ನು ಹಾಕಲಾ ? ಎಂದನು

‘ ಎಲೆಯನ್ನು ಹರಿದು ತನ್ನಿರಿ, ಹಾಗೂ ಗಾಳಿಯನ್ನು ಹಾಕಿರಿ. ’ ಎಂದು ನಗುತ್ತ ನುಡಿದಳು.

ಅವಳು ಕಾಲನ್ನು ಚಾಚಿ ಕುಳಿತಿದ್ದಳು. ಅವನು ಅವಳಿಗೆ ಗಾಳಿಯನ್ನು ಹಾಕುತ್ತಿದ್ದನು. ಸಂಜೆಯಾಗುತ್ತ ಬಂದಿತು. ಗಂಡನ ಕೈಹಿಡಕೊಂಡು ವತ್ಸಲೆಯು ಮನೆಗೆ ಬಂದಳು. ಅವಳು ದಣಿದುಹೋಗಿದ್ದಳು.

ಕೆಲವು ದಿನಗಳಾದ ಮೇಲೆ ವತ್ಸಲೆಯು ಗಂಡು ಮಗುವನ್ನು ಹೆತ್ತಳು. ಸುಶ್ರುತೆಗೆ ಆನಂದವಾಯಿತು. ಅವಳಿಗೆ ಮರಿಮಗನಾದನು. ಯಾವ ಹೆಸರನ್ನಿಡಬೇಕೆಂಬ ಚರ್ಚೆಯಾಯಿತು. ಶಶಾಂಕನೆಂದು ಹೆಸರಿಟ್ಟರು. ಹುಡುಗನು ಬಹಳ ಸುಂದರನಾಗಿದ್ದನು. ಅವನು ಕೆಂಪಗಿದ್ದನು. ತಾಯಿಯ ಬಣ್ಣದವನಿದ್ದ. ಕಣ್ಣು ಮೂಗುಗಳು ತಂದೆಯಂತಿದ್ದವು.

‘ನನ್ನ ವರ್ಣದವನಿದ್ದಾನೆ. ಹುಡುಗ ನನ್ನವ’ ಎಂದಳು ವತ್ಸಲೆ.

‘ ಆದರೆ ಕಣ್ಣುಗಳು ನನ್ನಂತಿವೆ. ಬಣ್ಣವು ಮುಖ್ಯವೋ ? ದೃಷ್ಟಿಗಳು ಮುಖ್ಯವೊ? ದೃಷ್ಟಿಯಂತೆ ಸೃಷ್ಟಿಯು. ದೃಷ್ಟಿಯಂತೆ ಬಣ್ಣ ಜಗತ್ತಿನಲ್ಲಿ ದೃಷ್ಟಿ ಮುಖ್ಯವಾದದ್ದು, ಬಣ್ಣವಲ್ಲ ’ ಎಂದನು ನಾಗಾನಂದ.

‘ ಇರಲಿ. ಜಗಳಾಡಬೇಡಿರಿ’ ಎಂದಳಾಕೆ.

ಶಶಾಂಕನು ನಗಹತ್ತಿದ. ಎಂಟನೆ ತಿಂಗಳಲ್ಲಿಯೇ ನಡೆಯಹತ್ತಿದ. ಮಾತನಾಡಹತ್ತಿದ. ಎರಡು ವರ್ಷಗಳು ಕಳೆದವು. ಶಶಾಂಕನು ಹೊರಗೆ ಆಡ್ಡಾಡಹತ್ತಿದನು.

ಆವನು ಹಾಲು ಚಲ್ಲುವನು. ಹೂಗಳನ್ನು ಕೊಸರುವನು. ಸುಶ್ರುತೆಯು ಸಿಟ್ಟುಮಾಡತೊಡಗಿದಳು. ಅವನ ಕಣ್ಣಲ್ಲಿ ನೀರ ಬರಹತ್ತಿದವು. ಆವನ ಮೋರೆಯು ಕೆಂಪಾಗುವದು. ಆಗ ಸುಶ್ರುತೆಯು ಅವನನ್ನು ಕೂಡಲೆ ಎದೆಗವಚಿಕೊಂಡು ಮುದ್ದಿಸುವಳು.

ತಂದೆ ತಾಯಿಗಳ ಹಾಗೂ ಆಜ್ಜಿಯ ಸಹವಾಸದಲ್ಲಿ ಅವನು ಬೆಳೆಯುತ್ತ ನಡೆದ. ಅವನನ್ನು ಒಮ್ಮೊಮ್ಮೆ ಹೊಲಕ್ಕೆ ಕರೆದೊಯ್ಯುವರು. ಅಲ್ಲಿ ಅವನು ಆಕಳ ಕರುವಿನೊಡನೆ ಆಟವಾಡುವನು. ಆಕಳ ಮೈಮೇಲೆ ಕೈಯಾಡಿಸುವನು. ಸಣ್ಣ ಪಾತ್ರೆಯಲ್ಲಿ ನೀರನ್ನು ತುಂಬಿಕೊಂಡು ಗಿಡಗಳಿಗೆ ಹಾಕುವನು· ಸುತ್ತಲಿನ ಸೃಷ್ಟಿಯ ಸೊಬಗನ್ನು ಆ ಹುಡುಗನು ಆಸ್ಥೆಯಿಂದ ನೋಡುವನು. ಎತ್ತರವಾದ ಗಿಡಗಳ ಕಡೆಗೆ ನೋಡಿ ತಾನೂ ಎತ್ತರವಾಗಬೇಕೆನ್ನುತ್ತಿದ್ದನು. ಚಪಲ ಚಿಗರಿಯೊಡನಾಡಿ ಚಪಲನಾಗುತ್ತಿದ್ದ. ನವಿಲುಗಳ ಸೌಂದರ್ಯವನ್ನು ನೋಡಿ ತಾನೂ ಸುಂದರನಾಗಬೇಕೆನ್ನುತ್ತಿದ್ದ.

ಆವನು ನೆರೆಮನೆಯ ಹುಡುಗರ ಸಂಗಡ ಆಡಲು ಹೋಗುವನು. ಅವರೂ ಆವನ ಸಂಗಡ ಆಡುತ್ತಿದ್ದರು. ಆದರೆ ಒಂದು ದಿವಸ ಒಂದು ಘಟನೆಯು ನಡೆಯಿತು.

‘ ಈ ಶಶಾಂಕನನ್ನು ಆಟಕ್ಕೆ ಕರೆದು ಕೊಳ್ಳಬಾರದು. ಅವನ ಸಂಗಡ ಮಾತನಾಡಬಾರದು. ಶಶಾಂಕನೇ ಹೋಗು! ಇಲ್ಲಿಗೆ ಬರಬೇಡ. ನೀನು ಆರ್ಯಜಾತಿಯವನಲ್ಲ. ನೀನು ಕೀಳು ಜಾತಿಯವನಿರುವೆ. ಹೋಗು ಇಲ್ಲಿಂದ ’ ಎಂದು ಒಬ್ಬ ಹುಡುಗನ ತಂದೆಯು ಅಂದನು.

ಹುಡುಗರೆಲ್ಲ ನೋಡುತ್ತ ನಿಂತರು. ಶಶಾಂಕನು ಅಳಹತ್ತಿದ. ಆವನಿಗೆ ಏನೂ ತಿಳಿಯಲಿಲ್ಲ. ನಿನ್ನೆಯತನಕ ಎಲ್ಲರೂ ಕೂಡಿ ಆಡಿದೆವು. ಇಂದು ಬೇಡವೇ ?

'ನಾವು ಅವನ ಸಂಗಡ ಆಡುವೆವು! ಶಶಾಂಕಾ ಬಾ. ಶಶಾಂಕನು ನಮ್ಮ ಗೆಳೆಯನಿದ್ದಾನೆ.' ಎಂದು ಒಬ್ಬ ಸಣ್ಣ ಹುಡುಗನೆಂದನು.

'ತಂದೆಯು ಶಿಕ್ಷೆ ಮಾಡಿದಾಗ ತಿಳಿದೀತು?' ಎಂದ ಆ ಸಾಹಸೀಯು

'ನಾನು ಮನೆಗೆ ಹೋಗುವೆನು. ನನ್ನಸಲುವಾಗಿ ನೀವೆಲ್ಲ ಹೊಡಿಸಿ ಕೊಳ್ಳುವದು ಬೇಡ' ಎಂದು ಹೇಳಿ ಶಂಶಾಂಕನು ಮನೆಗೆ ಹೋದನು. ಆವನು ಅಳುತ್ತ ಅಳುತ್ತ ಹೋದನು. ಹೋದವನೇ ಅಜ್ಜಿಯ ಕೊರಳಿಗೆ ಬಿದ್ದನು. ಸುಶ್ರುತೆಯು ಅವನನ್ನು ಅಪ್ಪಿಕೊಂಡಳು,

'ಏನಾಯಿತು ಮಗನೆ? ಬಿದ್ದಿಯಾ? ಯಾರಾದರೂ ಹೊಡೆದರೇ? ಯಾರಾದರೂ ಏನಾದರೂ ಅಂದರೇ?' ಎಂದು ಸುಶ್ರುತೆಯು ವಿಚಾರಿ ಸಿದಳು

'ನೀನು ಕೀಳನಿರುವಿ, ನೀಚನಿರುವಿ' ಎಂದೇಕೆ ನನಗೆ ಅನ್ನುತ್ತಾರೆ? ನಮ್ಮ ಹುಡುಗರ ಸಂಗಡ ಆಡಲು ಬರಬೇಡ? ಎಂದೇಕೆ ಅನ್ನುತ್ತಾರೆ? ನಾನೇನು ಕೆಡುಕನಿರುವೆನೇ? ಹೀಗೇಕೆ ನನಗೆನ್ನುವರು? ಶಶಾಂಕ ಕೇಳಿ ದನು.

'ನೀನು ಮನೆಯಲ್ಲಿಯೇ ಆಡು. ಅವರು ದುಷ್ಟರಿದ್ದಾರೆ. ಅವರ ಸಂಗಡ ಹೋಗಬೇಡ. ನಿನ್ನನ್ನು ಹೊಡೆಯಬಹುದು. ಮನೆಯಲ್ಲಿಯೇ ಆಡಬೇಕು.' ಎಂದಳು ಅಜ್ಜಿ

'ಮನೆಯಲ್ಲಿ ಯಾರೊಡನೆ ಆಡಲಿ?' ಎಂದು ಅವನು ಅಳುತ್ತ ಕೇಳಿದ

'ನನ್ನ ಸಂಗಡ ಆಡು. ನಾನು ನಿನ್ನ ಸಂಗಡ ಆಡುವೆನು. ನನಗೆ ಬೇಸರಿಕೆ ಬರುವದಿಲ್ಲ. ನಾನು ಅಡಗುವೆ. ನೀನು ನನ್ನನ್ನು ಹುಡುಕು. ನೀನು ಅಡಗು, ನಾನು ಹುಡುಕುವೆನು. ನಾನು ನಿನ್ನನ್ನು ಹಿಡಿಯುವೆನು. ನೀನೂ ನನ್ನನ್ನು ಹಿಡಿ. ಇಬ್ಬರೂ ಕೂಡಿ ಆಡೋಣ. ನೀನು ಅಳಬೇಡ.' ಎಂದು ಸುಶ್ರುತೆಯು ರಮಿಸತೊಡಗಿದಳು.

'ದೊಡ್ಡವರ ಸಂಗಡ ಆಡುವದು ನನಗೆ ಸೇರುವದಿಲ್ಲ. ನಾನು ನಿನ್ನ ಹತ್ತರ ಮಲಗಬಲ್ಲೆ, ಆದರೆ ಆಟವಾಡಲಾರೆ. ಹುಡುಗರ ಸಂಗಡ

ಆಡುವದರಲ್ಲಿ ಮೋಜು ಇರುತ್ತದೆ. ನನಗೆ ಅಣ್ಣತಮ್ಮಂದಿರಿಲ್ಲವೇನು ? ಸಣ್ಣವನೂ ಇಲ್ಲ, ದೊಡ್ಡವನೂ ಇಲ್ಲ ನಾನೊಬ್ಬನೆ. ಉಳಿದ ಹುಡುಗರಿಗೆಲ್ಲ ಅಣ್ಣತಮ್ಮಂದಿರಿದ್ದಾರೆ, ಅಕ್ಕತಂಗಿಯರಿದ್ದಾರೆ. ನೀನು ನಗುವಿಯಾದರೆ ನಾನು ಮಾತನ್ನೇ ಆಡುವದಿಲ್ಲ.' ಹೀಗೆ ಅಂದು ಶಶಾಂಕನು ಶಟಗೊಂಡನು.

' ನೀನು ನಮ್ಮ ಹೊಲಕ್ಕೆ ಹೋಗು. ಅಲ್ಲಿ ಆಕಳ ಕರುಗಳಿವೆ. ಹತ್ತರದ ಅಡವಿಯಲ್ಲಿ ನವಿಲುಗಳಿವೆ. ಮಂಗಗಳಿವೆ. ಚಿಗರಿಗಳೂ ಕೂಡಾ ಇವೆ. ಅಲ್ಲಿಗೆ ಹೋಗು. ಅವುಗಳ ಸಂಗಡ ಆಡು. ಆಕಳಕರುಗಳು ಸಣ್ಣವಿವೆಯಲ್ಲವೇ ? ಅವು ನಿನಗೆ ಹೆಸರಿಡುವದಿಲ್ಲ.' ಎಂದು ಸುಶ್ರುತೆಯು ಹೇಳಿದಳು.

' ಅವು ನನ್ನನ್ನು ನೀಚನೆಂದು ಬಗೆಯಲಾರವಷ್ಟೇ ? ಕೀಳನೆಂದು ಬಗೆಯಲಾರವೆ ? ನವಿಲುಗಳು ಸುಂದರವಾಗಿದ್ದರೂ ಸಹ ನನ್ನನ್ನು ನೋಡಿ ನಗಲಿಕ್ಕಿಲ್ಲವಷ್ಟೇ ? ಮನುಷ್ಯರಿಗಿಂತಲೂ ಆಕಳು, ನವಿಲು, ಹಾಗೂ ಚಿಗರೆಗಳು ಒಳ್ಳೆಯವಿರುತ್ತವಲ್ಲವೇ ?' ಎಂದು ಶಶಾಂಕನು ಕೇಳಿದ.

' ನವಿಲು ನಗುವದಿಲ್ಲ. ಅವು ನಿನಗೆ ಗರಿಗಳನ್ನು ಕೊಡುವವು. ನನ್ನ ಬಳಿಯಲ್ಲಿ ಸಾಕಷ್ಟು ನವಿಲುಗರಿಗಳಿವೆ. ನಾನು ನಿನಗೆ ಅವುಗಳ ಟೊಪ್ಪಿಗೆಯೊಂದನ್ನು ಸಿದ್ಧಪಡಿಸುವೆ. ಅದು ನಿನಗೆ ಒಪ್ಪೀತು. ನಿನ್ನನ್ನು ನೋಡಿ ನವಿಲು ಹೆಚ್ಚಾಗಿ ಕುಣಿದೀತು, ಎಂದಳು ಸುಶ್ರುತೆ.

' ಆಕಾಶದಲ್ಲಿ ಮೋಡಗಳು ಕವಿದವೆಂದರೆ ನವಿಲುಗಳು ನರ್ತಿಸುತ್ತವೆ. ಅಂದು ನಾನು ಅವ್ವನ ಸಂಗಡ ಹೊಲಕ್ಕೆ ಹೋಗಿದ್ದೆ. ಆಕಾಶದಲ್ಲಿ ಗುಡುಗಿನ ಸಪ್ಪಳವಾಯಿತು. ನನಗೆ ಅಂಜಿಕೆಯಾಯಿತು. ನಾನು ಅವ್ವನನ್ನು ಅಪ್ಪಿಕೊಂಡೆ. ಆದರೆ ನವಿಲುಗಳು ಕುಣಿಯಹತ್ತಿದವು. ನವಿಲುಗಳಿಗೆ ಮೋಡಗಳು ಸೇರುವವೇನು ?' ಗುಡುಗು ಸೇರುವದೇ ? ಅವ್ವನೆಂದಳು ' ಆಕಾಶದಲ್ಲಿ ದೇವರ ತಾಯಿಯು ಬೀಸುತ್ತಿದ್ದಾಳೆ ' ಅದು ನಿಜವೇ ?' ಎಂದು ಶಶಾಂಕನು ವಿಚಾರಿಸಿದನು.

' ದೇವರಿಗೆ ಊಟ ಬೇಡವೇನು ?' ಎಂದಳು ಸುಶ್ರುತೆ.

‘ ಆದರೆ ಗಡಗಡವೆಂದಕೂಡಲೆ ಮಳೆ ಬೀಳುತ್ತದೆ. ಹಿಟ್ಟು ಬೀಳುವದಿಲ್ಲ. ’ ಎಂದನು ಶಶಾಂಕ.

‘ ನವಿಲುಗಳಿಗೆ ಮಳೆಯು ಬಹಳ ಸೇರುತ್ತದೆ ’ ಎಂದಳು ಸುಶ್ರುತೆ.

‘ ನನಗೂ ಮಳೆ ಸೇರುತ್ತದೆ. ಆದರೆ ಹೋಗಗೊಡುವದಿಲ್ಲ. “ ಅಂದು ಅವ್ವನು ನನ್ನನ್ನು ಎತ್ತಿಕೊಂಡು ನನ್ನ ಮೇಲೆ ಶೆರಗನ್ನು ಹೊಚ್ಚಿದಳು. ಹೀಗೆ ಮಾಡುವದು ನನಗೆ ಸೇರುವದಿಲ್ಲ. ತಲೆಯ ಮೇಲೆ ಮಳೆ ಬಿದ್ದರೆ ಏನಾಗುವದು ? ” ಎಂದು ಅವನು ವಿಚಾರಿಸಿದನು.

‘ ಮಳೆಯಿಂದ ನಮಗೆ ಬೇನೆ ಬರುವದು. ನವಿಲುಗಳಿಗೆ ಬೇನೆ ಬರುವದಿಲ್ಲ. ನೋಡವು ನವಿಲಿನ ಗೆಳೆಯನಿದ್ದಾನೆ. ’ ಎಂದಳು ಸುಶ್ರುತೆ.

‘ ಅದುಕೂಡ ನನ್ನ ಗೆಳೆಯ. ಅವನ ಕಡೆಗೆ ನಾನು ನೋಡುತ್ತಿರುತ್ತೇನೆ. ಅದು ಒಮ್ಮೆ ಕುದರಿಯಂತೆ ಕಂಡರೆ, ಮತ್ತೊಮ್ಮೆ ಆನೆಯಂತೆ ಕಾಣುವದು. ಆದರ ಬಣ್ಣವು ಕೂಡ ಬಹಳ ಸುಂದರವಾಗಿ ಕಾಣುವದು. ನಾವು ಗುಡ್ಡದ ಮೇಲೆ ಹತ್ತಿದರೆ ನಮ್ಮ ಕೈಗೆ ಆದು ಸಿಗುವದು. ಆದರ ಮೈಯು ಯಾವಾಗಲೂ ಹಸಿ ಇರಬಹುದಲ್ಲವೇ ?, ಎಂದು ಅಜ್ಜಿಯ ತಲೆಯನ್ನು ಅಲ್ಲಾಡಿಸುತ್ತ ನುಡಿದನು.

‘ ಎಲಾ ನನ್ನ ಗೋಣು ನೊಂದೀತು? ’ ಎಂದಳು ಸುಶ್ರುತೆ.

‘ ಅಜ್ಜೀ ನಾನು ಆಡಲಿಕ್ಕೆ ಹೋಗಲೋ ಹೊಲಕ್ಕೆ ಹೋಗಲೋ ? ಹೊಲಕ್ಕೇ ಹೋಗುತ್ತೇನೆ. ಗಿಡದ ಮರೆಗೆ ನಿಂತು, ನವಿಲಿನಂತೆಯೂ ಕೋಕಿಲೆಯಂತೆಯೂ ಕೂಗುವೆ ’ ಎಂದನು ಶಶಾಂಕ.

‘ ಹೋಗು ಹೊಲಕ್ಕೆ ’ ಎಂದಳು ಸುಶ್ರುತೆ.

‘ ಹೋಗುವೆ ’ ಎಂದು ಬಣ್ಣದ ಕೋಲು ಹಿಡಿದುಕೊಂಡು ಹೋಗುವನು.

ವತ್ಸಲೆ ಹಾಗೂ ನಾಗಾನಂದರು ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಸೂರ್ಯಾಸ್ತದ ಸಮಯ. ಆಕಾಶದಲ್ಲಿ ಕಾಮನಬಿಲ್ಲು ಮೂಡಿತ್ತು. ಆಕಾಶವು ರಮಣೀಯವಾಗಿದ್ದಿತು. ಆದರೆ ಗಂಭೀರವಾಗಿತ್ತು.

'ಆ ಶೋಭೆಯನ್ನು ನೋಡಿರಿ. ಕಾಮನಬಿಲ್ಲು ಪೂರ್ಣವಾಗಿ ಕಾಣಿಸುತ್ತಿದೆ. ಇದು ದೇವರಾಜ್ಯದ ಕಮಾನು. ದೇವರು ಯಾರ ಸ್ವಾಗತಕ್ಕಾಗಿ ಇದನ್ನು ನಿರ್ಮಿಸಿರುವನು ? ಇತ್ತಕಡೆಗೆ ನೋಡಿರಿ, ಹಳದೀ ಹೂಬಿಸಿಲು ಎಷ್ಟು ಚಂದ ಕಾಣುತ್ತಿದೆ. ಜಗನ್ಮಾತೆಯು ಪೀತಾಂಬರವನ್ನುಟ್ಟಂತೆ ಶೋಭಿಸುತ್ತಿದೆಯಲ್ಲವೆ? ಆ ಸಿಂಹಾಸನದ ಮೇಲೆ ಯಾರು ಕೂಡುವರು ? ದೇವರ ರಾಜ್ಯದಲ್ಲಿ ಎಷ್ಟು ವೈಭವವಿದೆಯೋ? ಎಷ್ಟು ಸೌಂದರ್ಯವಿದೆಯೊ?' ಎಂದು ಸೃಷ್ಟಿಯ ಕಡೆಗೆ ನೋಡುತ್ತ ವತ್ಸಲೆ ಎಂದಳು.

ಜಗತ್ತಿನಲ್ಲಿಯ ದುಃಖಿಗಳು ನಗುವದಕ್ಕಾಗಿ, ಆನಂದಿಸುವದಕ್ಕಾಗಿ ದೇವರು ಇಂತಹ ಸುಂದರ ಪ್ರದರ್ಶನಗಳನ್ನು ನಿರ್ಮಿಸುತ್ತಾನೆ. ಪ್ರಾತಃ ಕಾಲದ ಉಷೆಯನ್ನು ನೋಡಿ ಯಾರಿಗೆ ಪ್ರಸನ್ನತೆ ಎನಿಸಲಿಕ್ಕಿಲ್ಲ ? ಸಾಯಂ ಕಾಲದ ಈ ಬಣ್ಣವು ಯಾರನ್ನು ರಮಿಸಲಿಕ್ಕಿಲ್ಲ ? ರಾತ್ರಿಯಲ್ಲಿಯ ಈ ನಕ್ಷತ್ರಗಳನ್ನು ನೋಡಿ ಯಾರ ದುಃಖವು ದೂರವಾಗಲಿಕ್ಕಿಲ್ಲ ? ಹಸರು ಗಿಡಬಳ್ಳಿಗಳನ್ನು ನೋಡಿ ಯಾರ ಕಣ್ಣುಗಳು ನಲಿಯಲಿಕ್ಕಿಲ್ಲ ? ಪ್ರಸನ್ನವಾದ ನದಿಗಳನ್ನು ನೋಡಿ, ಯಾರ ಮನಸ್ಸು ನಿರ್ಮಲವಾಗಲಿಕ್ಕಿಲ್ಲ ? ಈ ಹೂಗಳನ್ನೂ ಈ ವಿಧದ ಬಣ್ಣಗಳನ್ನೂ ಈ ಸುಗಂಧದ್ರವ್ಯಗಳನ್ನೂ ನೋಡಿ ಎಲ್ಲರ ಚಿಂತೆಗಳು ದೂರಾಗುತ್ತವೆ. ದುಃಖವು ಓಡಿಹೋಗುತ್ತದೆ. ಅರಳಿದ ಹೂಗಳಲ್ಲಿ ಆನಂದವು ತುಂಬಿತುಳುಕುತ್ತದೆ. ಪಕಳಿ ಪಕಳಿಗಳಲ್ಲಿ ಅದು ವ್ಯಾಪಿಸಿರುತ್ತದೆ. ಅದು ನೋಡಿರಿ ಎಷ್ಟು ಚಂದಕಾಣುತ್ತದೆ. ಗಾಳಿಗೆ ತಲೆದೂಗುತ್ತಲಿದೆ. ದೇವರು ಈ ಆನಂದವನ್ನು ನಮ್ಮ ಸುತ್ತುಮುತ್ತಲೂ ನಿರ್ಮಿಸಿರುತ್ತಾನೆ. ಆದರೆ ಅದು ನಮಗೆ ಕಾಣುವದಿಲ್ಲ.' ಎಂದನು ನಾಗಾನಂದ.

'ನೀವು ಎಷ್ಟು ಸುಂದರವಾಗಿ ವರ್ಣಿಸುತ್ತೀರಿ ? ನೀವು ನಿಜವಾಗಿ ಆಶ್ರಮದಲ್ಲಿದ್ದಿರಾ ?' ಎಂದಳು ವತ್ಸಲೆ.

'ನಾನು ನಿನಗೆ ಮೊದಲೇ ಇದ್ದೆನೆಂದು ಹೇಳಿಲ್ಲವೇ ? ಅವರು ಬಹಳ ದೊಡ್ಡ ಗುರುಗಳು, ಆಚಾರ್ಯರು. 'ನಾಗಾನಂದಾ ಸೃಷ್ಟಿಯೇ

ನಿಜವಾದ ಗುರುವು. ಅವರ ಹತ್ತಿರ ಕಲಿ. ಈ ಸೃಷ್ಟಿಯು ನಿನಗೆ ಎಲ್ಲ ವನ್ನೂ ಕಲಿಸುವದು' ಎಂದು ಅವರು ನನಗೆ ಹೇಳುತ್ತಿದ್ದರು. ಅವರ ಆ ಮಾತನ್ನು ನಾನು ಒಂದೂ ಮರೆಯುವದಿಲ್ಲ. ಈ ಹಚ್ಚಗಿನ ಹುಲ್ಲು! ಅದರ ಕಡೆಗೆ ನೋಡು : ಅದರ ಮೌನದಲ್ಲಿ ಅರ್ಥವಿದೆ! ಇದು ಭೂಮಾತೆಯ ಹೊಟ್ಟೆಯೊಳಗಿನ ಪ್ರೀತಿಯಂತೆ ಹೊರಬಿದ್ದಿದೆ. ಭೂಮಾತೆಯ ಸರಳತೆ, ಸೌಂದರ್ಯತೆಯೇ ಹೊರಗೆ ಬಿದ್ದಂತಿದೆ. ಮಳೆ ಬಿದ್ದೊಡನೆ ಭೂಮಾತೆಯು ಮೈಮೇಲೆ ರೋಮಾಂಚನಗಳೆದ್ದಿವೆಯೋ? ಎಂಬತೆ ಕಾಣುತ್ತದೆ, ಬಹಳ ವಿನೋದವಿದೆ." ಎಂದನು ನಾಗಾನಂದ.

"ನೀವು ಕವಿಗಳಂತೆ ಮಾತಾಡುವಿರಿ. ವಾಲ್ಮೀಕಿಯಂತೆ ನೀವೂ ರಾಮಾಯಣವನ್ನು ಬರೆಯಿರಿ" ಎಂದಳು ವತ್ಸಲೆ.

'ನನ್ನ ಜೀವನವೇ ನನ್ನ ರಾಮಾಯಣ, ಸರ್ವೋತ್ಕೃಷ್ಟ ಕಾವ್ಯ. ನಾನು ಈ ಹೊಲವನ್ನು ಸಾಗುಮಾಡುತ್ತೇನೆ. ನಾನು ಕೊಳಲೂದುತ್ತೇನೆ. ಇವೇ ನನ್ನ ಕವಿತೆ. ಹೂಗಳನ್ನು ಅರಳಿಸುವೆನು, ಆಕಳುಗಳನ್ನು ಕಾಯುವೆನು. ಇದೇ ನನ್ನ ಕಾವ್ಯ." ಎಂದನು ನಾಗಾನಂದ.

"ಎರಡನೆಯವರ ಸಲುವಾಗಿ ನದಿಯಲ್ಲಿ ಹಾರುವಿರಿ, ಹುಲಿಯೊಡನೆ ಕಾದುವಿರಿ, ಇದೂ ನಿಮ್ಮ ಕಾವ್ಯವಲ್ಲವೆ." ಎಂದಳು ವತ್ಸಲೆ.

"ನೀನು ಕೂಡಾ ಅಂದು ರಾತ್ರಿ ಎಂಥ ಕಾವ್ಯವನ್ನು ಮಾಡಿದೆ! ಪ್ರೇಮದ ಸುಂದರವಾದ ಹೂವನ್ನು ಅರಳಿಸಿದೆ. ಶೃಂಗಾರ-ವೀರ-ಕರುಣ ರಸಗಳಿಂದ ಕೂಡಿದ ಮಹಾ ಕಾವ್ಯವನ್ನು ರಚಿಸಿದೆ. ಅಲ್ಲವೇ? ಎಂದು ಅವನು ಪ್ರೀತಿಯಿಂದ ಅವಳ ಕೈಹಿಡಿಯುತ್ತ ಅಂದನು.

"ನಮ್ಮ ಶಶಾಂಕನನ್ನು ಆಶ್ರಮಕ್ಕೆ ಕಳಿಸಬೇಕು. ನಿಮಗೆ ಹೇಗೆ ಅನಿಸುತ್ತದೆ" ಎಂದಳು ವತ್ಸಲೆ.

"ಇಷ್ಟು ಬೇಗನೆ ಬೇಡ. ಇನ್ನೆರಡು ವರ್ಷಗಳಾಗಲಿ ಆ ಮೇಲೆ ಕಳಿಸೋಣ' ಎಂದನು ನಾಗಾನಂದ.

'ನಾವಿಬ್ಬರೂ ಸಂಚರಿಸಬೇಕೆಂದು ನನಗೆ ಅನಿಸುತ್ತದೆ. ಶಶಾಂಕನ ಆಶ್ರಮದಲ್ಲಿರಲಿ. ಹೊಲವನ್ನು ಕಾರ್ತಿಕನು ನೋಡಿಕೊಳ್ಳುವನು. ಅವನ

ಆಜ್ಜಿಗೆ ಆಧಾರವಾಗುವನು. ನಾವಿಬ್ಬರೂ ಹೋಗೋಣ. ಪ್ರೇಮಧರ್ಮದ ಪ್ರಚಾರವನ್ನು ಮಾಡೋಣ. ನಾಗ ಮತ್ತು ಆರ್ಯರಲ್ಲಿ ಮಿತ್ರತ್ವವನ್ನು ಬೆಳೆಸೋಣ. ಇದೇ ನಿಜವಾದ ಕಾವ್ಯ. ಈ ಕಾರ್ಯಮಾಡುವಾಗ ನಮಗೆ ತೊಂದರೆಗಳು ಬರಬಹುದು. ಮರಣವು ಬಂದರೂ ಬರಬಹುದು ! ಆದರೆ ಜೀವನ ಮಹಾಕಾವ್ಯದಲ್ಲಿ ಅದು ಕಟ್ಟಕಡೆಯ ಅಮರಗೀತೆಯಾದೀತು. ನಾನು ಚಿಕ್ಕವಳಿರುವಾಗ ಆಜ್ಜಿಗೆ ಅನ್ನುತ್ತಿದ್ದೆ. ' ಅಜ್ಜೀ, ಪರಬ್ರಹ್ಮವನ್ನು ನಾನು ಬೆಳೆಸುವೆ. ವತ್ಸಲೆಯು ಪರಬ್ರಹ್ಮನ ತಾಯಿಯಾಗುವಳು. ನನಗೆ ಪರಬ್ರಹ್ಮನ ಮಾತೆಯಾಗಲುಗೊಡು. ಪ್ರೇಮವೆಂದರೇನೆ ಪರಬ್ರಹ್ಮ. ಆರ್ಯ ಹಾಗು ನಾಗಜಾತಿಯ ಪ್ರೇಮ. ಎಲ್ಲದರಲ್ಲಿ ಸೌಂದರ್ಯ ಹಾಗು ಮಂಗಳವನ್ನು ನೋಡುವದೇ ಪ್ರೇಮ ' ಎಂದು ವತ್ಸಲೆಯ ಮನಸ್ಸಿನಲ್ಲಿಯ ಮಾತನ್ನು ಹೇಳಿದಳು. ಅಷ್ಟರಲ್ಲಿಯೇ ಕೂ ಎಂಬ ಸಪ್ಪಳವಾಗತೊಡಗಿತು.

' ಈಗ ಎಲ್ಲಿಯ ಕೋಕಿಲೆ ? ' ಎಂದನು ನಾಗಾನಂದ

' ಒಂದೇಸವನೆ ಕೂಗುತ್ತಿದೆ. ಇದು ಕೊಕಿಲೆಯಲ್ಲ ' ಎಂದಳು ವತ್ಸಲೆ.

' ಈಗ ನವಿಲಿನ ಕೂಗು! ಶಶಾಂಕನು ಬಂದಿಲ್ಲವಷ್ಟೇ ? ನವಿಲಿನಂತೆ ಕೂಗಲು ಅವನಿಗೆ ಬರುತ್ತದೆ ' ಎಂದನು ನಾಗಾನಂದ

' ಗಿಡದ ಮರೆಯಲ್ಲಿ ಶಶಾಂಕನಿದ್ದನು. ವತ್ಸಲೆಯು ಓಡುತ್ತ ಹೋದಳು.

' ಎಲಾ. ಕಳ್ಳಾ ' ಎಂದಳು ವತ್ಸಲೆ

' ಅವ್ವಾ ನಿನ್ನನ್ನು ಹೇಗೆ ಎಳತಂದೆ ? ' ಎಂದನು ಶಶಾಂಕ

' ಇಷ್ಟು ತಡಮಾಡಿ ಏಕೆ ಬಂದೆ ? ' ಎಂದಳು.

' ಇಷ್ಟು ತಡವಾದರೂ ನೀವು ಏಕೆ ಇಲ್ಲಿ ? ನಿಮಗೆ ಹೊತ್ತಾಗುವದಿಲ್ಲವೇನು ? ಹಾಗಾದರೆ ನನಗೂ ಇಲ್ಲ. ಕತ್ತಲೆಯಾದರೂ ನಾನು ನಡೆಯುವೆ. ನಾನು ನಿನಗೆ ಎತ್ತಿಕೊಳ್ಳಲು ಹೇಳುವದಿಲ್ಲ ' ಎಂದನು ಶಶಾಂಕ

' ಅಪ್ಪಾ ಹಾಲು ಹಿಂಡಿಲ್ಲವೇ ? ' ಎಂದನು ಶಶಾಂಕ

' ಈಗ ಹಿಂಡುವೆನು ' ಎಂದನು

' ನಿನಗೆ ಇಲ್ಲಿಯೇ ದೊನ್ನೆಯಲ್ಲಿ ಹಾಲು ಕುಡಿಯಲು ಕೊಟ್ಟಿದ್ದಿಲ್ಲವೇ ? ' ಎಂದು ನಾಗಾನಂದನು ವತ್ಸಲೆಯನ್ನು ವಿಚಾರಿಸಿದನು.

' ಹಾಗೂ ಕೊಳಲನ್ನೂದಿ ಹುಚ್ಚಿಯನ್ನು ಮಾಡಿದ್ದಿರಿ ' ಎಂದಳು ವತ್ಸಲೆ.

' ಅಪ್ಪಾ, ನನಗೂ ಕೊಳಲೂದಲು ಕಲಿಸುವಿಯಾ ? ' ಎಂದನು ಶಶಾಂಕ.

" ನಾನು ಎರಡನೆಯವರ ಬಳಿಯಲ್ಲಿ ಕಲಿತಿಲ್ಲ. ನಾನೇ ಕಲಿತೆ " ಎಂದನು ತಂದೆ

" ನೀನು ದೊಡ್ಡವ, ನಾನು ಚಿಕ್ಕವ. ನನ್ನ ಕೈಯ್ಯನ್ನು ಇನ್ನೂ ಅವ್ವನು ಹಿಡಿಯುತ್ತಿದ್ದಾಳೆ. ನಿನ್ನ ಕೈಯ್ಯನ್ನೇನು ಹಿಡಿಯ ಬೇಕಾಗುವದಿಲ್ಲ. ದೊಡ್ಡವರಿಗೆ ಎಲ್ಲವೂ ಬರುತ್ತದೆ. ನನಗೆ ಕಲಿಸಬಾರದೇ ? " ಎಂದನು ಶಶಾಂಕ.

' ಆಶ್ರಮದಲ್ಲಿ ನಿನಗೆ ಕಲಿಸುವರು. ನೀನು ಆಶ್ರಮಕ್ಕೆ ಹೋಗುವಿಯಲ್ಲವೇ ? " ಎಂದು ವತ್ಸಲೆಯು ಕೇಳಿದಳು.

" ಅಲ್ಲಿ ಕೊಳಲೂದಲು ಕಲಿಸುವರೇ ? ನನ್ನೊಡನೆ ಆಡಲು ಅನೇಕ ಹುಡುಗರು ಬರುವರೇ ? " ನೀನು ನಾಗನಿರುವಿ. ನೀಚ ಜಾತಿಯವನು " ಎಂದು ಯಾರೂ ಅನ್ನುವದಿಲ್ಲವಷ್ಟೇ ? ಇಂದು ನನ್ನೊಡನೆ ಹುಡುಗರು ಆಡುತ್ತಿದ್ದರು. ಒಬ್ಬ ಲತ್ತ ಹುಡುಗನು ಬಂದು " ಅವನನ್ನು ಆಟಕ್ಕೆ ಕರೆದು ಕೊಳ್ಳಬೇಡಿರಿ. ಅವನು ನಾಗನಿದ್ದಾನೆ. ಕೀಳು ಜಾತಿಯವನು, ಕೀಳು ತರಗತಿಯವನು ಎಂದನು. " ಅವ್ವಾ, ಹೀಗೇಕೆ ಅನ್ನುತ್ತಾರೆ ? ಎಂದು ವಿಚಾರಿಸಿದನು.

" ಆಶ್ರಮದಲ್ಲಿ ಹೀಗೆಲ್ಲ ನಡೆಯುವದಿಲ್ಲ. ಅಲ್ಲಿ ಆರ್ಯರೇ ಇರಲಿ, ನಾಗರೇ ಇರಲಿ ಎಲ್ಲರೂ ಕೂಡಿ ಕಲಿಯುತ್ತಾರೆ. ಆಡುತ್ತಾರೆ. ಅಲ್ಲಿಗೇ ನೀನು ಹೋಗು " ಎಂದಳು ವತ್ಸಲೆ.

" ನೀನು ಬರುವಿಯಲ್ಲವೇ ? ಅಜ್ಜಿ, ಅಪ್ಪನು ಬರುವರಲ್ಲವೇ ? ನನಗೆ ಆಜ್ಜಿಯ ಹತ್ತರ ಮಲಗಬೇಕೆನಿಸುತ್ತದೆ. ಒಬ್ಬನೇ ಮಲಗಲು ಆಗು ವದಿಲ್ಲ. ನಾನು ಒಬ್ಬನೇಯಾಕೆ ? ನನಗೆ ಅಣ್ಣ ತಮ್ಮಂದಿರಿಲ್ಲ. ಅಕ್ಕ ತಂಗಿಯರಿಲ್ಲ. ನಾನು ಒಬ್ಬನೇಯೇಕೆ ? ನೀನು ಒಬ್ಬಳೇ ಏಕೆ ? ಅಪ್ಪನು ಒಬ್ಬನೇ ಏಕೆ ? " ಎಂದನು ಶಶಾಂಕ

" ಹೌದು ಮಗುವೇ ನಾನು ಒಬ್ಬಳೇ ಇದ್ದೇನೆ ಅವರೂ ಒಬ್ಬರೇ ಇದ್ದರು ? ಎಂದಳು ವತ್ಸಲೆ.

' ಆದ್ದರಿಂದ ನಾನು ಒಬ್ಬನೇ ಏನು ನಿನ್ನಂತೆ ? " ಎಂದನು

" ನನ್ನಂತೆ ಎಲ್ಲಿ ಇರುವಿ ? ನಾನು ಕಪ್ಪಿರುವೆ, ನೀನು ಕೆಂಪಿರುವೆ " ಎಂದನ್ನುತ್ತ ನಾಗಾನಂದನು ಹಾಲು ತೆಗೆದುಕೊಂಡು ಬಂದನು.

' ನಿಜ ಆದರೆ ನಾನು ಇಬ್ಬರಂತೆಯೂ ಇರುವೆನು. ಅಂದು ಅವ್ವನು ' ಆವರಂತೆ ನಿನ್ನ ಕಣ್ಣು ಹಾಗೂ ಮೂಗುಗಳಿವೆ ' ಎಂದು ಹೇಳಿದ್ದಳು. ಅಂದರೆ ನಿನ್ನಂತೆ ಅಲ್ಲವೆ ? ' ಎಂದು ವಿಚಾರಿಸಿದನು.

' ಮಗುವೇ ಈ ಹಾಲು ಕುಡಿ ಹುಲಿಗಿಲಿ ಬಂದೀತು ? ' ಎಂದನು ನಾಗಾನಂದ.

' ಬಂದರೆ ಹೊಡೆಯುವೆನು. ನಾನು ದಿನಾಲು ಬೆಕ್ಕನ್ನು ಹೊಡೆಯು ತ್ತೇನೆ. ಅದು ನನಗೆ ಕಡಿಯುವದಿಲ್ಲ. ಹುಲಿಯನ್ನು ಹೊಡೆಯುವೆನು " ಎಂದನು ಶಶಾಂಕ.

" ಮಗುವೇ ಹುಲಿಯು ಕಡಿದರೆ " ಎಂದು ವಿಚಾರಿಸಿದಳು.

" ಕಡಿದರೆ ಅದಕ್ಕೆ ಹಾಕುವೆನು ಏಳೆಂಟು ಏಟು. ನಾನು ಅಂಜುವದಿಲ್ಲ ನಾನೊಬ್ಬನೇ ಕತ್ತಲೆಯಲ್ಲಿ ಮುಂದೆ ಹೋಗುವೆನು " ಎಂದನು ಶಶಾಂಕ.

" ಕತ್ತಲೆಯೊಳಗಿಂದ ನಾವೆಲ್ಲರೂ ಕೂಡಿಯೇ ಹೋಗೋಣ " ಎಂದನು ನಾಗಾನಂದ.

" ಕತ್ತಲೆಯೊಳಗಿಂದ ಬೆಳಕಿನ ಕಡೆಗೆ " ಎಂದಳು ವತ್ಸಲೆ.

"ಮನೆಯ ದೀಪವು ದೂರಿಂದಲೇ ಕಾಣುತ್ತಲಿದೆ" ಎಂದನು ಶಶಾಂಕ.

೧೩

ಆಸ್ತಿಕನು ಆಶ್ರಮದಲ್ಲಿದ್ದನು. ಎಲ್ಲ ಹುಡುಗರು ನಾಗದೇವಿಯ ಜಾತ್ರೆಗೆ ಹೋಗಿದ್ದರು. ಅದು ಬಹಳ ದೊಡ್ಡ ಜಾತ್ರೆ. ಒಬ್ಬ ನಾಗ ಜಾತಿಯ ರೈತನಿದ್ದ. ಒಮ್ಮೆ ಅವನು ಗುದ್ದಲಿಯಿಂದ ಬಣಿಯನ್ನು ಅಗಿಯುತ್ತಿದ್ದ. ಅಲ್ಲಿ ಒಂದು ಹಾವಿನ ಮರಿಯಿದ್ದಿತು. ಗುದ್ದಲಿಯು ಅದರ ಮೇಲೆ ಬಿದ್ದಿತು. ರಕ್ತ ಸುರಿಯಹತ್ತಿತು. ಆ ಒಕ್ಕಲಿಗನಿಗೆ ಬಹಳ ಕೆಡಕೆನಿಸಿತು. ಅವನು ಅಲ್ಲಿ ಅಳುತ್ತ ಕುಳಿತನು. ಒಳಗಿನಿಂದ ದೊಡ್ಡ ನಾಗರ ಹಾವು ಬಂದಿತು. ಸತ್ತ ಮರಿಯನ್ನು ನೋಡಿತು. ಸಿಟ್ಟಿಗೆದ್ದು ಭುಸಗುಡಹತ್ತಿತು. ಅತ್ತಿತ್ತ ಸುಳಿದಾಡಿತು. ಎದುರಿಗೆ ಒಕ್ಕಲಿಗನು ಅಳುತ್ತ ಕುಳಿತಿದ್ದ. ' ನನ್ನ ಮರಿಯು ಸತ್ತಿತೆಂದು ನಿನಗೂ ಕೆಡುಕೆನಿಸುತ್ತದೆ. ಅಂದಮೇಲೆ ನನಗೆಷ್ಟು ದುಃಖವಾಗಿರಬೇಕು ? ಇದನ್ನು ಹೊಡೆದವರಾರು ? ಇದು ಸತ್ತದ್ದನ್ನು ನೋಡಿ ·ನೀನೇಕೆ ಅಳುವೆ " ಎಂದು ಆ ಹಾವು ಕೇಳಿತು. " ತಾಯಿಯೇ, ನನ್ನಿಂದಲೇ ಈ ಹಾವು ಸತ್ತಿತು· ನಾನು ಅಗಿಯುತ್ತಿದ್ದೆ. ಕೆಳಗೆ ಹಾವಿರಬಹುದೆಂಬ ಕಲ್ಪನೆ ನನಗಿರಲಿಲ್ಲ. ನಾನು ಗುದ್ದಲಿ ಹಾಕಿದೆ ಅದು ಈ ಮರಿಗೆ ಬಡಿಯಿತು. ತಾಯೀ ನನ್ನನ್ನು ಕ್ಷಮಿಸು " ಎಂದನು. ಆದಕ್ಕೆ " ನೀನು ಮರಿಯನ್ನು ಕೊಂದು ಓಡಿ ಹೋಗಿಲ್ಲ. ತಾಯಿಯುಬಂದು ಕಡೆಯುವದು ಎಂಬ ಭಾವನೆಯನ್ನು ಮನಸ್ಸಿನಲ್ಲಿ ತರದೆ ನೀನು ಅಳುತ್ತ ಕುಳಿತಿರುವೆ. ನಿನ್ನ ಅಂತಃಕರುಣವು ಶುದ್ಧವಿದೆ. ನಿನ್ನ ಜೀವನವು ಪವಿತ್ರ ವಿದೆ. ಇಂಥ ಮನುಷ್ಯನನ್ನು ನಾನು ನೋಡಿಲ್ಲ. ನೀನು ಹೋಗು ನಾನು ನಿನ್ನನ್ನು

ಕ್ಷಮಿಸಿರುವೆ" ಎಂದಿತು ನಾಗಿಣಿ. ಅವನು ನಮಸ್ಕಾರ ಮಾಡಿ ಹೊರಟು ಹೋದನು. ಆದರೆ ಎರಡನೆಯದಿವಸ ಬಂದು ನೋಡುತ್ತಾನೆ. ಆ ಹಾವೂ ಸತ್ತು ಬಿದ್ದಿತ್ತು. ಅದು ಏಕೆ ಪ್ರಾಣ ಬಿಟ್ಟಿತು? ಮರಿಯು ಸತ್ತೊಡನೆ ಅದು ಏಕೆ ಸತ್ತಿತು? ಅವನ ಅಂತಃಕರಣವು ಉಕ್ಕಿ ಬಂದಿತು. ತಿಳವಳಿಕೆ ಇಲ್ಲದ ಜಾತಿಯಾದರೂ ಮಕ್ಕಳ ಮೇಲೆ ಎಷ್ಟು ಮಾಯೆ! ಮತ್ತು ಮರಿಯನ್ನು ಕೊಂದವರನ್ನು ಕ್ಷಮಿಸುವ ಎಂಥ ದೊಡ್ಡ ಮನಸ್ಸು! ಅವನು ಹೂ, ಗಂಧವನ್ನು ತಂದನು. ಚಂದನ ಕಟ್ಟಿಗೆಗಳನ್ನು ಕೂಡಿಸಿ ಆ ತಾಯಿ ಮಕ್ಕಳಿಬ್ಬರಿಗೂ ಅಗ್ನಿ ಸಂಸ್ಕಾರವನ್ನು ಮಾಡಿದನು. ತಾಯಿಯ ಹತ್ತರ ಮರಿಯು ಆಡುತ್ತಿರುವಂತೆ ಮೂರ್ತಿಯನ್ನು ಕೊರೆಸಿದನು. ದೊಡ್ಡ ವಟ ವೃಕ್ಷದ ಕೆಳಗೆ ಈ ಮೂರ್ತಿ ಇದ್ದಿತು. ಅಲ್ಲಿಯೇ ಈ ದೊಡ್ಡ ಜಾತ್ರೆಯು ನೆರೆಯುತ್ತ ನಡೆಯಿತು. ಊರೂರಿಂದ ಜನ ಬರುತ್ತಾರೆ. ನಾಗರೂ ಆರ್ಯರೂ ಬರುತ್ತಾರೆ. ಅಂಗಡಿಕಾರರು ಅಂಗಡಿಯೊಂದಿಗೆ ಬರುತ್ತಾರೆ. ಹಣ್ಣು ಹಂಪಲಗಳ, ಹೂಗಳ ಮಿಠಾಯಿಗಳ ಅಂಗಡಿಗಳೂ ಭಾಂಡಿಯ ಅಂಗಡಿಗಳು ಬರುತ್ತವೆ. ಶಸ್ತ್ರಗಳನ್ನು ಮಾರುವ ಜನರು ಬರುತ್ತಾರೆ. ಕಂಬಾರರೂ ಕುಂಬಾರರೂ ಎಲ್ಲ ಉದ್ಯೋಗಸ್ಥರು ತಮ್ಮತಮ್ಮ ಸಾಮಾನು ಗಳನ್ನು ತೆಗೆದುಕೊಂಡು ಬರುತ್ತಾರೆ. ಜಟ್ಟಿಗಳು ಕುಸ್ತಿಯನ್ನಾಡುತ್ತಾರೆ ಮಕ್ಕಳು ಕೋಲು ಹಾಕುತ್ತಾರೆ. ಹುಡುಗೆಯರು ಗೋಪು ಹೆಣೆಯುತ್ತಾರೆ. ಎಷ್ಟು ಆನಂದ! ಆನಂದದ ಹೊಳೆಯೇ ಅಲ್ಲಿ ಹರಿಯುತ್ತದೆ.

ನಾಗಮೂರ್ತಿಯ ಮೇಲೆ ಹೂವಿನ ರಾಸಿಯೇ ಬೀಳುತ್ತದೆ. ಬಿಲ್ವ ಪತ್ರಿಯ ಪರ್ವತವೇ ಬೀಳುತ್ತದೆ. ಹಾಲಿನ ನದಿಯೇ ಹರಿಯುವಷ್ಟು ಹಾಲನ್ನು ಎರೆಯುವರು.

ಇಂಥ ಜಾತ್ರೆಗೆ ಆಶ್ರಮದ ದೊಡ್ಡ ಹುಡುಗರೆಲ್ಲರೂ ಹೋಗಿದ್ದರು. ಸಣ್ಣ ಮಕ್ಕಳು ಆಶ್ರಮದಲ್ಲಿದ್ದರು. ಅವರಿಗೆ ಬೇಸರ ಬರಬಾರದೆಂದು ಅವ ರನ್ನು ಕರೆದುಕೊಂಡು ಆಸ್ತಿಕರು ನದಿಗೆ ಹೋದರು. ನದಿಯ ನೀರಲ್ಲಿ ಆಟವಾಡಲು ಪ್ರಾರಂಭಿಸಿದರು. ರೊಟ್ಟಿ ಆಟವನ್ನು ಸುರುವು ಮಾಡಿದರು.

"ನೋಡಿರಿ, ನನ್ನ ಕಲ್ಲು ನೀರಲ್ಲಿ ಪುಟಿಯುತ್ತ ಹೊಗುತ್ತವೆ" ಎಂದನು ಶಶಾಂಕ.

"ಒಗೆ ಹಾಗಾದರೆ" ಎಂದನು ಆಸ್ತಿಕ.

ಶಶಾಂಕನು ಹಲಚಿಗಲ್ಲನ್ನೊಂದು ಒಗೆದನು. ಅದು ಏಳು ಸಲ ಪುಟಿಯಿತು. ಆಸ್ತಿಕರು ಒಂದು ಕಲ್ಲನ್ನು ತೆಗೆದುಕೊಂಡು ಒಗೆದರು. ಆದರೆ ಅದು ಒಮ್ಮೆಲೇ ಮುಳುಗಿತು.

'ನಿಮ್ಮದು ಮುಳುಗಿತು' ಎಂದನು ಶಶಾಂಕ.

"ನಿಲ್ಲು ನಾನು ಇನ್ನೊಂದು ಒಗೆಯುತ್ತೇನೆ" ಎಂದು ಎರಡನೆ ಕಲ್ಲನ್ನು ಒಗೆದರು. ಅದು ಟಣ್ ಟಣ್ ಜಿಗಿಯುತ್ತ ಹೋಯಿತು. ಕೊನೆಗೆ ಅದು ಕಾಣಿಸಲೇ ಇಲ್ಲ.

"ನಿಮ್ಮ ಕಲ್ಲು ಎಷ್ಟು ಚಂದವಾಗಿ ಹೋಯಿತು? ರತ್ನಾಕರನು ಅಂದನು.

"ಯೋಗ್ಯ ರೀತಿಯಿಂದ ಚಾಲನೆಯನ್ನು ಕೊಟ್ಟರೆ ಕಲ್ಲು ಹಾರುವದು, ನೀರಿನಲ್ಲಿ ತೇಲುವದು ಆದರಂತೆಯೇ ಮನುಷ್ಯನು ತನ್ನ ಜೀವನಕ್ಕೆ ಯೋಗ್ಯ ಗತಿಯನ್ನೂ ವೇಗವನ್ನೂ ಕೊಟ್ಟರೆ ಅದು ಮುಳುಗುವದಿಲ್ಲ. ಕೆಸರಲ್ಲಿ ಬೀಳುವದಿಲ್ಲ. ಆನಂದದ ಕಡೆಗೆ ಹೋಗುವದು" ಎಂದನು ಆಸ್ತಿಕ.

"ಕೆಲವು ಜನರು ಕೆಟ್ಟವರಿರುತ್ತಾರೆ" ಎಂದನು ಶಶಾಂಕ.

"ಅವರು ಒಳ್ಳೆಯವರಾಗುವದಿಲ್ಲವೆ?" ಎಂದನು ರತ್ನಾಕರ.

"ಏನು ಶಶಾಂಕ! ಮಾವಿನ ಮಿಡಿಯು ಹೇಗಿರುತ್ತದೆ?" ಎಂದು ಆಸ್ತಿಕನು ವಿಚಾರಿಸಿದನು.

"ಅದು ಒಗರು ಇರುತ್ತದೆ" ಎಂದನು ಶಶಾಂಕ.

"ಅದು ಸ್ವಲ್ಪ ದೊಡ್ಡದಾದರೆ ಹೇಗೆ ಹತ್ತುತ್ತದೆ?"

"ಅದು ಸ್ವಲ್ಪ ಹುಳಿಯಾಗುತ್ತದೆ."

"ಇನ್ನೂ ಸ್ವಲ್ಪ ದೊಡ್ಡದಾದರೆ?"

"ಅದು ಬಹಳ ಹುಳಿಯಾಗುತ್ತದೆ. ಹಲ್ಲುಗಳು ಚಳಿಯುತ್ತವೆ,"

" ಅದು ಇನ್ನು ದೊಡ್ಡದಾಗಿ ಹಣ್ಣಾದರೆ ? "

" ಒಳ್ಳೇ ರುಚಿ ಯಾಗುತ್ತದೆ. ಅದರ ಮೇಲಿನ ಬಣ್ಣ ಎಷ್ಟುಚಂದ ? ಅದರ ರಸವೆಷ್ಟು ಸವಿ ! " ಎಂದನು ಶಶಾಂಕ

" ಶಶಾಂಕಾ, ಒಗರು ಮಿಡಿಯು ಹುಳಿಯಾಯಿತು. ಹುಳಿಯೇ ಮುಂದೆ ಸವಿಯಾಯಿತು. ಅದರಂತೆಯೇ ಮನುಷ್ಯ. ಕೆಟ್ಟಮನುಷ್ಯನು ಮುಂದೆ ಒಳ್ಳೆಯವನಾಗುವನು. ಅವನಿಗೆ ಅನುಭವಗಳು ಬರುತ್ತ ಹೋದಂತೆ ಅವನು ಬುದ್ಧಿವಂತನಾಗುವನು. ಮಿಡಿಗಳು ಹುಳಿಯೆಂದು ಹರಿದೊಗೆದರೆ ಮುಂದೆ ಸವಿಯಾದ ಹಣ್ಣುಗಳೇ ಸಿಗಲಾರವು ಅಲ್ಲವೇ ? " ಎಂದು ಆಚಾರ್ಯರು ವಿಚಾರಿಸಿದರು.

" ಮಿಡಿಯು ೨-೩ ತಿಂಗಳಲ್ಲಿಯೇ ಹಣ್ಣಾಗುತ್ತದೆ. ಮನುಷ್ಯನು ಎಷ್ಟು ದಿವಸಗಳಲ್ಲಿ ಹಣ್ಣಾಗುವನು ಮತ್ತು ಸವಿಯಾಗುವನು ?

" ಎಷ್ಟೇದಿನಗಳು ಹಿಡಿಯಲಿ, ಮನುಷ್ಯನ ಜೀವನವು ಒಮ್ಮೆ ಹಣ್ಣಾಗುವದು ನಿಶ್ಚಿತ. ಇದನ್ನು ಮರೆಯಲಾಗದು. ನೀನು ಹಣ್ಣಾಗುವಿ. ನಾನೂ ಹಣ್ಣಾಗುವೆ. ಎಲ್ಲರೂ ಹಣ್ಣಾಗುವರು " ಎಂದರು ಆಸ್ತಿಕರು.

" ಹುಳಿ ಮಿಡಿಯು ಸವಿ ಯಾಗುವದು. ಬತ್ತಿದ ನದಿಯು ತುಂಬಿ ಬರುವದು " ಎಂದನು ಶಶಾಂಕ.

' ಒಣಗಿದ ಗಿಡವು ಚಿಗುರುವುದು. ಕತ್ತಲೆ ಕಳೆದು ಪ್ರಕಾಶವು ಬರುವದು' " ಮೊಗ್ಗೆಯಿಂದ ಹೂ, ಹೂವಿನಿಂದ ಫಲ." ಎಂದನು ರತ್ನಾಕರ.

" ಸರುವಿನಿಂದ ಹಳ್ಳ, ಹಳ್ಳದಿಂದ ನದಿ. ನದಿಯಿಂದ ಸಮುದ್ರ ? ಎಂದನು ಶಶಾಂಕ.

" ಈ ಗಂಗೆಗೆ ಎಷ್ಟು ನದಿಗಳು ಕೂಡಿವೆ ಎಂಬುದು ಗೊತ್ತೇ ನಿಮಗೆ ?' ಎಂದನು ಆಸ್ತಿಕ.

" ಯಮುನಾ, ಘೋಗ್ರಾ, ಗಂಡಕಿ, ಶೋಣ ಮೊದಲಾದ ನದಿಗಳು ಕೂಡಿರುತ್ತವೆ " ಎಂದರು.

"ಗಂಗೆಯು ಅಭಿಮಾನದಿಂದ ಸರ್ವ ಪ್ರವಾಹಗಳಿಂದ ದೂರವಿದ್ದರೆ

ಯಮುನೆಯು ಕಪ್ಪಿದೆ. ಗಂಡಕಿಯಲ್ಲಿ ಕಲ್ಲುಗಳು ಬಹಳ ಇವೆ. ಘೋಗ್ರಾ ದೊಡ್ಡ ಸಪ್ಪಳವನ್ನು ಮಾಡುತ್ತದೆ, ಶೋಣವು ಎಚ್ಚರಿಲ್ಲದೆ ಹರಿಯುತ್ತವೆ." ಎಂದು ಗಂಗೆಯು ಅನ್ನುತ್ತ ಈ ನದಿಗಳನ್ನು ತನ್ನಲ್ಲಿ ಸೇರಿಸಿಕೊಳ್ಳದಿದ್ದರೆ ಏನಾಗುತ್ತಿತ್ತು? ಎಂದು ಆಸ್ತಿಕನು ವಿಚಾರಿಸಿದನು.

"ಗಂಗೆಯು ಕಾವಲಿಯಂತಿರುತ್ತಿತ್ತು. ಮತ್ತು ಕೂಡಲೇ ಬತ್ತುತ್ತಿತ್ತು" ಎಂದನು ಶಶಾಂಕ.

"ಅಭಿಮಾನದಿಂದ ಅಗಲಿ ಬೇರೆ ಉಳಿದರೆ ಅಳಿಯುವಿರಿ. ಪ್ರೇಮದಿಂದ ಸರ್ವ ಸಂಗ್ರಾಹಕರಾದರೆ ಉಳಿಯುವಿರಿ. ಎಂದು ಸೃಷ್ಟಿಯ ಸಂದೇಶವಿದೆ" ಎಂದು ಆಸ್ತಿಕನು ನುಡಿದನು.

"ಶಂಕರನ ಜಟಾಜೂಟದಿಂದ ಗಂಗೆ ಹೊರಟಳು ಎಂದರೆ ಏನು?" ಎಂದನು ಶಶಾಂಕ.

"ವಿಷ್ಣುವಿನ ಪಾದದಿಂದ ಹುಟ್ಟಿದಳು ಎಂದು ರಾಮಾಯಣದಲ್ಲಿದೆ" ಎಂದನು ರತ್ನಾಕರ.

"ವಿಷ್ಣುವೆಂದರೆ ಸೂರ್ಯ. ವಿಷ್ಣುವೆಂದರೆ ಎಲ್ಲ ಕಡೆಗೆ ಪ್ರವೇಶಿಸುವವ. ಸೂರ್ಯನ ಪ್ರಕಾಶವು ಎಲ್ಲೆಡೆಗೂ ಹೋಗುತ್ತದೆ. ಪ್ರಕಾಶ ಸಿಗದಿದ್ದರೆ ವೃಕ್ಷಗಳೂ ವನಸ್ಪತಿಗಳೂ ಬೆಳೆಯಲಾರವು. ಹೂಗಳೂ ಹಣ್ಣುಗಳೂ ಆಗಲಾರವು. ನಾವೂ ಬದುಕಲಾರೆವು. ಉಷ್ಣತೆಯಿಲ್ಲದೆ ಬದುಕುವದಿಲ್ಲ. ಆದ್ದರಿಂದ ವಿಷ್ಣುವು ಎಲ್ಲರ ರಕ್ಷಕನಾಗಿದ್ದಾನೆ. ಸೂರ್ಯನು ಎಲ್ಲರ ಜೀವನವನ್ನು ನಡೆಸುತ್ತಾನೆ. ಸೂರ್ಯನೆಂದರೇನೇ ವಿಷ್ಣು, ಸೂರ್ಯನ ಕಿರಣಗಳೆಂದರೆ ವಿಷ್ಣುವಿನ ಪಾದಗಳು. ಕಿರಣಗಳಿಂದ ನೀರು ಉಗಿಯಾಗುತ್ತದೆ. ಆ ಉಗಿಯಿಂದ ಮೋಡಗಳಾಗುವವು. ಆ ಮೋಡಗಳಿಂದ ನಮಗೆ ಪುನಃ ನೀರು ಸಿಗುತ್ತದೆ. ನದಿಗಳು ತುಂಬಿ ಹರಿಯುತ್ತವೆ. ಆದ್ದರಿಂದಲೇ ಇವು ವಿಷ್ಣುವಿನ ಪಾದಗಳಿಂದ ಹುಟ್ಟಿರುತ್ತವೆ. ಗಂಗೆಯೊಬ್ಬಳೇಯೇಕೆ? ಎಲ್ಲ ನದಿಗಳೂ ವಿಷ್ಣುವಿನ ಪಾದದಿಂದಲೇ ಹುಟ್ಟಿರುತ್ತವೆ, ಆದರೆ ಗಂಗೆಗೆ ಮಾತ್ರ ಹೀಗೆ ಅನ್ನುತ್ತಾರೆ. ಇದಕ್ಕೆ ಒಂದು ಕಾರಣವಿದೆ. ಬೆಸಿಗೆಯಲ್ಲಿಯೂ ಸಹ ಗಂಗೆಗೆ ಮಹಾಪೂರ ಬರುತ್ತದೆ.

ವಿಷ್ಣುವಿನ ಪಾದವು ಅದನ್ನು ಪೋಷಿಸುತ್ತದೆ. ಆದ್ದರಿಂದಲೇ ಅವಳು ವಿಷ್ಣುಪಾದೋದ್ಭವೆಯೆನಿಸುವಳು. ಮತ್ತು ಶಂಕರನ ಜಟಾಜೂಟವೆಂಬುದೆ ಒಂದು ದೊಡ್ಡ ಕಾವ್ಯವಾಗಿದೆ. ಈ ಹಿಮಾಲಯದಲ್ಲಿರುವ ಕೈಲಾಸದಲ್ಲಿ ಶಿವಶಂಕರನಿರುವನೆಂದು ಹೇಳುತ್ತಾರೆ. ಈ ಶಂಕರನಾರು ? ಎಲಾ, ಆ ಕೈಲಾಸ ಶಿಖರವೆಂದರೇನೆ ಶಿವನು. ಭಸ್ಮ ಭೂಷಿತನೂ ಚಂದ್ರ ಚೂಡನೂ ಆದವನು ಶಿವನಲ್ಲದೆ ಮತ್ತಾರು ? ಹಾಲಿನ ನೊರೆಯಂತೆ ಬೆಳ್ಳಗಿರುವವನೂ ಕರ್ಪೂರ ಗೌರನೂ ಎಂಬ ವಿಶೇಷಣಗಳು ಈ ಶಿಖರಕ್ಕೇನೆ ಅನ್ವಯಿಸುತ್ತವೆ. ಇವಕ್ಕೆ ಶಿವ, ಶಂಕರ ಅನ್ನುತ್ತೇವೆ. ಯಾಕಂದರೆ ಈ ಶಿಖರಗಳು ಮೋಡಗಳನ್ನು ತಡೆಯುತ್ತವೆ. ಈ ಮೋಡಗಳು ಮುದ್ದಿಯಾಗುತ್ತವೆ. ಹಾಗು ಭಾರತ ವರ್ಷಕ್ಕೆ ಮಳೆ ಸುರಿಯುತ್ತದೆ. ಈ ಹಿಮಾಲಯದ ಶಿಖರಗಳು ಇರದಿದ್ದರೆ, ಎಲ್ಲಿಯ ಮಳೆ ? ಎಲ್ಲಿಯ ಜೀವನ ? ಆದುದರಿಂದಲೇ ಇದಕ್ಕೆ ಶಿವ, ಮೃತ್ಯುಂಜಯ, ಎಂಬ ಹೆಸರನ್ನು ಕೊಟ್ಟಿರುವರು. ಈ ಶಂಕರನ ತಲೆಯಿಂದ ನೀರು ಹೊರಟಿತು, ಅಂದರೆ ಶಿಖರದಿಂದ ನೀರು ಹೊರಟಿತು. ಎಂದರ್ಥ. ಜಟಾಜೂಟವೆಂದರೆ ಹಿಮಾಲಯದಲ್ಲಿ ಹಬ್ಬಿದ ಪ್ರಚಂಡವನ. ಇದೆಲ್ಲವೂ ಕಾವ್ಯ. ನಮ್ಮ ಪೂರ್ವಜರು ಕವಿ ಹೃದಯರು. ದಟ್ಟವಾಗಿ ಮಂಜು ಮುಸುಕಿದೊಡನೆ ಈ ಹಿಮಾಲಯವು ಭಸ್ಮಾಚ್ಛಾದಿತ ಮುನಿಯಂತೆ ಕಾಣುವದು. ಹಿಮಾಲಯದಂಥ ಯೋಗಿಗಳಾರು ? ಕೈಲಾಸ ರಾಣಿಯಂಥ ತಪಸ್ವಿನಿಯಾರು ? ಎಂದು ವರ್ಣಿಸಿದರು. ಆದಕ್ಕೆ ಶಶಿಖಂಡಶಿಖಂಡಮಂಡನ, ಚಂದ್ರಶೇಖರ ಮೊದಲಾದ ಅನೇಕ ಹೆಸರುಗಳನ್ನು ಕೊಟ್ಟರು. ಅನೇಕ ಪಶುಗಳಿಗೆ ಆಧಾರವಾದುದರಿಂದ ಪಶುಪತಿಯಾದನು. ಈ ಹಿಮಾಲಯದಲ್ಲಿ ಯಾರೋ ಯೋಗಿಗಳು ಧ್ಯಾನ ಮಾಡುತ್ತಾರೆಂದು ಮೂಲ ಕಲ್ಪನೆ. ಇದರಿಂದ ಆವನಿಗೆ ಧೂರ್ಜಟಿ ಮೊದಲಾದ ಹೆಸರುಗಳನ್ನು ಕೊಟ್ಟರು. ಹಿಮಾಲಯದಲ್ಲಿ ಹರಿಯುವ ನದಿಗಳು ತಾಯಿಯಂತೆ ಜಗತ್ತನ್ನು ಪೋಷಿಸುವವು. ಆ ಎಲ್ಲವುಗಳನ್ನು ಈ ಯೋಗಿರಾಜನು ತನ್ನ ಹತ್ತರ ಇಟ್ಟುಕೊಂಡಿದ್ದಾನೆ. ಅವುಗಳನ್ನು ರಕ್ಷಿಸುತ್ತಾನೆ. ಆದುದರಿಂದ ಸಾಂಬ, ಗಿರಿಜಾಪತಿ, ಗಿರಿಜಾರಮಣ ಎಂಬ ಹೆಸರುಗಳು

ಆವನಿಗೆ ಬಂದಿವೆ. ಸೃಷ್ಟಿಯಲ್ಲಿ ಯಾವ ಯಾವ ಉದಾತ್ತ ಸುಂದರ ಹಾಗೂ ಕಲ್ಯಾಣಮಯವಿರುವವೋ ಅವನ್ನೆಲ್ಲ ದೇವರೆಂದು ನಮ್ಮಜನ ಭಾವಿಸುತ್ತಿದ್ದರು" ಎಂದನು ಆಸ್ತಿಕ.

ಇಷ್ಟರಲ್ಲಿ ಹುಡುಗರು ಬರುವ ಧ್ವನಿ ಕೇಳಿಸಿತು. ಎಲ್ಲರೂ ಆಸ್ತಿಕನ ದರ್ಶನಕ್ಕಾಗಿ ಗಂಗಾನದಿಗೇ ಬಂದರು.

'ಎಲ್ಲರೂ ಬಂದರು' ಎಂದು ಶಶಾಂಕನು ಕುಣಿಯ ಹತ್ತಿದನು.

ಎಲ್ಲರೂ ಬಂದು ನಮಸ್ಕರಿಸಿದರು ಆಸ್ತಿಕನ ಸುತ್ತು ಮುತ್ತಲೂ ಕುಳಿತರು.

"ಏನು, ಜಾತ್ರೆಯು ಹೇಗಿತ್ತು? ಅಲ್ಲಿ ಬಹು ಆಂದವಿದ್ದಿಲ್ಲವೆ?" ಎಂದನು ಆಸ್ತಿಕ.

"ಈ ಯಾತ್ರೆಯನ್ನು ನಾವು ಎಂದೂ ಮರೆಯುವದಿಲ್ಲ. ಅಮರವಾದ ಯಾತ್ರೆ ಇದು." ಎಂದನು ನಾಗೇಶ.

"ಇಂದು ಅಲ್ಲಿ ಏನೇನು ನಡೆಯಿತು?" ಎಂದನು ಆಸ್ತಿಕ.

"ಎಲ್ಲವನ್ನು ಸಿದ್ಧಮತಿಯು ಹೇಳುವಳು" ಎಂದನು ಭೋಧಾಯನ.

"ಗುರು ದೇವಾ, ನೀವು ಇಲ್ಲಿ ಇದ್ದರೂ ನಿಮ್ಮ ಪ್ರೇಮದ ಸಂದೇಶವು ಎಲ್ಲೆಡೆಗೂ ಹಬ್ಬುತ್ತಲಿದೆ. ಪ್ರತಿ ವರ್ಷದಂತೆ ಸಾವಿರಾರು ಆರ್ಯ ಹಾಗು ನಾಗರು ಇದರಲ್ಲಿ ಭಾಗವಹಿಸಿದ್ದರು. ಸ್ತ್ರೀ ಪುರುಷರು ಮಕ್ಕಳು ಮರಿಗಳು ಗುಂಪು ಗುಂಪಾಗಿ ಬಂದು ಕೂಡಿದ್ದರು. ಯಾರು ರಥದಲ್ಲಿ, ಯಾರು ಚಕ್ಕಡಿಯಲ್ಲಿ, ಯಾರು ಕುದುರೆಗಳ ಮೇಲೆ ಬಂದಿದ್ದರು. ನಾಗಜಾತಿಯ ಕೆಲವು ತರುಣರು ಚಿಕ್ಕ ಚಿಕ್ಕ ಗದೆಗಳನ್ನು ತೆಗೆದುಕೊಂಡು ಬಂದಿದ್ದರು. ಆವರಲ್ಲಿ ಒಬ್ಬನು 'ನಾಗರೆಲ್ಲರೂ ಒಂದಾಗಿರಿ, ಇದು ನಾಗರ ದೇಶ. ನಮ್ಮ ಬೆಳೆಯುಳ್ಳ ಭೂಮಿಗಳನ್ನು ಆರ್ಯರು ತಕ್ಕೊಳ್ಳ ಹತ್ತಿದ್ದಾರೆ. ತಿರುಗಿ ಮತ್ತೆ ನಮಗೇ ದಸ್ಯುಗಳೆಂದೆನ್ನುತ್ತಾರೆ. ನಾಗರ ದೇವತೆಗಳ ವಿಡಂಬನೆ ಮಾಡುತ್ತಾರೆ. ಹಾವುಗಳನ್ನು ಹೊಡೆಯುತ್ತಾರೆ. ಅವುಗಳನ್ನು ನಾಗರ ದೇವರ ಮೇಲೆ ಒಗೆಯುತ್ತಾರೆ. ನಾಗಸ್ತ್ರೀಯರನ್ನು ದುರ್ದಶೆಗೊಳಿಸುತಾರೆ. ಮೊದಲು ವಿಶ್ವಾಸವನ್ನು ತೋರಿಸಿ ಹಿಂದುಗಡೆ ಮೋಸಗೊಳಿಸುತ್ತಾರೆ. ಆರ್ಯ

ಸ್ತ್ರೀಯರಿಗಿದ್ದ ಸ್ಥಾನವನ್ನು ಇವರಿಗೆ ಕೊಡುವದಿಲ್ಲ. ಅವರು ನಮ್ಮನ್ನು ಕೀಳರೆಂದು ಬಗೆಯುತ್ತಾರೆ. ಹೀಗಿರುವಾಗ ನಾವು ಅವರೊಳಗೇಕೆ ಸೇರ ಬೇಕು ? ಹೊಸ ಸಮ್ರಾಟನಾದ ಜನಮೇಜಯನಂತೂ ನಾಗರಿಗೆ ತೀರ ವಿರೋಧಿಯಾಗಿದ್ದಾನೆ. ಎಚ್ಚರಾಗಬೇಕು. ನಾಗರು ಸಂಘಟನೆಯನ್ನು ಎಲ್ಲ ಕಡೆಗೆ ಹಬ್ಬಿಸಬೇಕು,' ಎಂದು ಮುಂತಾಗಿ ಅವನ ಭಾಷಣವು ನಡೆದಿತ್ತು. ಇಷ್ಟರಲ್ಲಿ ಆರ್ಯರ ಗುಂಪೊಂದು ಅಲ್ಲಿಗೆ ಬಂದಿತು. ಬಿಲ್ಲು ಬಾಣಗಳನ್ನು ಅವರು ಧರಿಸಿದ್ದರು. ಅವರ ಮುಂದೆ ಗದ್ದಲವಾಯಿತು. ಅದರ ನಾಯಕನು ಮಾತನಾಡತೊಡಗಿದ. ಆರ್ಯ ಸ್ತ್ರೀ-ಪುರುಷರೇ, ಕೇಳಿರಿ. ನಾಗರ ಉತ್ಸವಗಳಿಗೆ ಬರಬೇಡಿರಿ. ನಾಗರನ್ನು ಕೂಡಿಕೊಳ್ಳುವದು ಪಾಪವು. ನಾಗಪೂಜೆ ಮಾಡಿ ದುಷ್ಟರಾಗಬೇಡಿರಿ. ಮನಸ್ಸು ಕೆಟ್ಟೀತು. ನಾಗ ಇದು ಹೀನಜಾತಿ. ನಾವು ಶ್ರೇಷ್ಠರಿದ್ದೇವೆ. ನಮ್ಮ ಬಣ್ಣವು ಬಿಳಿದು. ಆದರೆ ಇವರ ಸಹವಾಸದಿಂದ ಅದು ಮೆಲ್ಲಮೆಲ್ಲನೆ ಕಪ್ಪಾಗಬಹುದು. ನಾವು ಜ್ಞಾನಿಗಳು, ಗಾಯತ್ರಿ ಮಂತ್ರೋಪಾಸಕರು, ನಾವು ನಮ್ಮ ಅಧಃಪಾತ ವನ್ನು ಮಾಡಿಕೊಳ್ಳಬಾರದು. ಆರ್ಯಕನ್ಯೆಯರು ನಾಗರನ್ನು ಮದುವೆ ಯಾಗಬಾರದು. ಇದು ಬಹಳ ಕೆಡುಕು. ಅನೇಕ ಆರ್ಯಕನ್ಯೆಯರನ್ನು ಒಬ್ಬನೇ ಒಬ್ಬ ಆರ್ಯತರುಣನು ಮದುವೆಯಾಗಲು ಸಿದ್ಧನಿದ್ದಾನೆ. ಆರ್ಯರಲ್ಲಿ ಪುರುಷರ ಕೊರತೆ ಎಂಬ ನೆವವನ್ನು ಹೇಳಬಾರದು. ಆರ್ಯ ಕುಮಾರರೂ ನಾಗಕನ್ಯೆಯರೊಡನೆ ಸಂಬಂಧವನ್ನಿಟ್ಟುಕೊಳ್ಳಬಾರದು. ನಾಗಗಳಂತೆ ಈ ನಾಗಸ್ತ್ರೀಯರೂ ಹಾವಭಾವಗಳನ್ನು ತೋರಿಸುತ್ತಾರೆ. ಆದರೆ ಅವರಿಗೆ ಮೋಹಿಸಬಾರದು. ಎಲ್ಲ ಆರ್ಯರನ್ನು ಕಪ್ಪಾಗಿ ಮಾಡ ಬೇಕೆಂದು ಅವರ ಮನೀಷೆ" ಈ ಎರಡೂ ವಿರೋಧದ ಭಾಷಣಗಳು ನಡೆ ದಿದ್ದವು. ಕಟ್ಟ ಕಡೆಗೆ ಹೊಡೆದಾಟವು ಸುರುವಾಯಿತು. ಹೆಂಗಸರು ಹುಡುಗರನ್ನು ಕರಕೊಂಡು ಓಡಹತ್ತಿದರು. ಮುದುಕರು ಗದ್ದಲದಲ್ಲಿ ಒದ್ದಾಡತೊಡಗಿದರು. ದೂರಿದ್ದರೆ ಬಾಣವನ್ನು ಹೊಡೆಯಬಹುದು ಆದರೆ ಹತ್ತಿರವಿದ್ದರೆ ಅದರ ಉಪಯೋಗವೇನು ? ನಾಗತರುಣರು ಗದೆಗಳಿಂದ ಆರ್ಯರ ತಲೆಗೆ ಹೊಡೆಯ ಹತ್ತಿದರು. ಕೆಲವರು ಕಲ್ಲುಗಳನ್ನೊಗೆಯ

ಹತ್ತಿದರು. ಇಷ್ಟರಲ್ಲಿ ಒಂದು ಆಶ್ಚರ್ಯ ನಡೆಯಿತು. ಮಧುರವಾದ ಗಾಯನವು ಕೇಳಬಂದಿತು. ಕೊಳಲಿನ ಇಂಪಾದ ಧ್ವನಿಯು ಕೇಳಿಸಿತು. ಒಬ್ಬ ಸುಂದರ ಸ್ತ್ರೀಯು ಹಾಡುತ್ತಿದ್ದಳು. ಅವಳ ಪತಿಯು ಕೊಳಲೂದು ತಿದ್ದನು. ಅವರಿಬ್ಬರು ನಿರ್ಭಯದಿಂದ ಆ ಗದ್ದಲದಲ್ಲಿ ಹೊಕ್ಕರು. ಮಂಜುಳ ಧ್ವನಿ, ಇಂಪಾದ ಗಾನ! ಜಗಳಾಟವಾಡುವವರು ಒಬ್ಬರಿಗೊಬ್ಬರು ಅಪ್ಪಿ ಕೊಳ್ಳತೊಡಗಿದರು. ಹಗೆತನ ಮರೆಯಿತು. ದ್ವೇಷವು ಶಾಂತವಾಯಿತು. ಪ್ರೇಮದ ವಾತಾವರಣವು ತುಂಬಿತು. ಜನರ ಮೋರೆಗಳು ಅರಳಿದವು. ಆ ಇಬ್ಬರ ಎದುರು ಸಾವಿರಾರು ಜನರು ನಿಂತರು. ಹುಡುಗರು ಕುಣಿಯ ಹತ್ತಿದರು. ಸ್ತ್ರೀಯರು ನರ್ತಿಸತೊಡಗಿದರು. ಪುರುಷರೂ ಕುಣಿಯಹತ್ತಿ ದರು. ನಟರಾಜನ ವಿರಾಟ ನೃತ್ಯ! ಸುತ್ತುಮುತ್ತಲಿನ ಗಿಡ, ಕಲ್ಲುಗಳೆ ಲ್ಲವೂ ಕುಣಿಯುತ್ತಿರುವಂತೆನಿಸಿತು. ದೊಡ್ಡ ಸಂಗೀತದ ಸಮುದ್ರವೇ ಉಕ್ಕೇರಿತು.

ಶುದ್ಧಮತಿಯು ಸುಮ್ಮನಾದಳು. ಆಸ್ತಿಕನಿಗೆ ಸಮಾಧಿ ಹತ್ತಿದಂತಾ ಗಿತ್ತು. ಅವನು ಕಣ್ಣು ತೆರೆದನು. ಎಲ್ಲಕಡೆಗೂ ಪ್ರಸನ್ನತೆಯು ವ್ಯಾಪಿ ಸಿತು. ಗಂಗಾಪ್ರವಾಹವು ಹರಿಯುತ್ತಿತ್ತು. ಆಕಾಶವು ಕೆಂಪಾಗಿತ್ತು. ಎಲ್ಲಕಡೆಗೂ ಬಂಗಾರದಂತೆ ಹೊಳೆಯುತ್ತಿತ್ತು.

‘ ಸಂಗೀತವು ದೈವೀಕಲೆಯು. ಮೋಕ್ಷವನ್ನೀಯುವ ಕಲೆಯು. ಸಂಗೀತವೆಂದರೆ ಮಾನವನ ಪಕ್ಕ. ಈ ಪಕ್ಕಗಳಿಂದ ಅವನು ಮೋಕ್ಷವನ್ನು ಮುಟ್ಟುವನು. ಸಂಗೀತಕ್ಕೆ ಈ ಶಕ್ತಿಯು ಎಲ್ಲಿಂದ ಬಂದಿತು? ಪಕ್ಷಿಗಳ ಕಿಲಕಿಲಾಟವನ್ನೇ ಕೇಳಿರಿ, ನದಿಗಳ ಗುಣಗುಣ ಶಬ್ದಗಳನ್ನೇ ಕೇಳಿರಿ, ಎಲೆಗಳ ಮರಮರ ಧ್ವನಿಯನ್ನೇ ಕೇಳಿರಿ. ಆದರಿಂದ ಒಂದು ಬಗೆಯ ಪ್ರಸನ್ನತೆಯು ಉಂಟಾಗುತ್ತದೆ. ಸಂಗೀತದಲ್ಲಿ ಮೇಳವಿದೆ. ಸಂಗೀತ ವೆಂದರೆ ಸಂಯಮ ಹಾಗೂ ಸಹಕಾರ. ಸಂಗೀತವೆಂದರೆ ವಿರೋಧಗಳ ಕೊನೆ. ನಮ್ಮ ಜೀವನಕ್ಕೂ ಸಂಗೀತಕ್ಕೂ ಸಂಬಂಧವಿದೆ. ಸಂಗೀತಕೇಳಿ ಮನುಷ್ಯನೇಕೆ ಮುಗ್ಧನಾಗುತ್ತಾನೆ? ಯಾವದೇ ಕಲೆಯು ಮನುಷ್ಯನನ್ನು ಏಕೆ ಮುಗ್ಧಗೊಳಿಸುತ್ತದೆ? ಕಲೆಯೆಂದರೆ ಸತ್ಯ, ಶಿವ ಹಾಗೂ ಸುಂದರಗಳ

ಸಮ್ಮೇಲನ. ಕಲೆಯು ಸರ್ವವನ್ನು ಸಂಯಮಪೂರ್ವಕವಾಗಿ ಸ್ವೀಕರಿಸುತ್ತದೆ. ಸಂಗೀತದಿಂದ ನಮ್ಮ ಜೀವನಕ್ಕೆ ಆದರ್ಶವು ದೊರೆಯುತ್ತದೆ. ನಮ್ಮ ಜೀವನವೆಂದರೆ, ಒಂದು ಮಧುರವಾದ ಸಂಗೀತವೆಂದರ್ಥ! ಆದರೆ ನಾವು ಇದನ್ನು ಮರೆಯುತ್ತೇವೆ. ವಿರೋಧವನ್ನು ಮುಂದೆ ಮಾಡುತ್ತೇವೆ. ಪರಸ್ಪರರಲ್ಲಿ ಕೊಡಕೊಳ್ಳುವದಕ್ಕೆ ಸಿದ್ಧರಾಗುವದಿಲ್ಲ. ಇಬ್ಬರ ಜೀವನದಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ, ಮಾಡಬೇಕಾಗುತ್ತದೆ. ಪರಸ್ಪರರ ವ್ಯವಹಾರವೆಂದರೆ ತಕ್ಕಡಿಯ ತೂಕವಲ್ಲ. ಅಷ್ಟಕ್ಕಷ್ಟೇ ನಡೆದರೆ, ವವಹಾರಲ್ಲಿ ಮಾಧುರ್ಯವು ಉಂಟಾಗುವದಿಲ್ಲ. ಆದರೆ ಇದು ಮನುಷ್ಯರಿಗೆ ಎಂದು ತಿಳಿಯುವದು? ಕೊಳಲಿಗೆ ಏಳು ಸ್ವರಗಳು. ಆದರೆ ಮಾನವೀ ಜೀವನಕ್ಕೆ ಅನಂತ ಸ್ವರಗಳು. ಆ ಎಲ್ಲ ಸ್ವರಗಳನ್ನು ಕೂಡಿಸಲು ಸ್ವಲ್ಪ ವೇಳೆ ಬೇಕು. ಶಶಾಂಕಾ, ಈ ಗಂಗಾತೀರದಲ್ಲಿ ನೂರಾರು ಮೈಲು ವ್ಯಾಪಿಸಿದ ಈ ಭೂಮಿಯು ಬೆಳೆಯುಳ್ಳದ್ದಾಗಲು ಎಷ್ಟು ವರ್ಷಗಳು ಹಿಡಿದವೆಂಬುದನ್ನು ಹೇಳಬಲ್ಲೆಯಾ? ಈ ಭೂಮಿಯನ್ನು ಬೆಳೆಯುಳ್ಳದ್ದನ್ನಾಗಿ ಯಾರು ಮಾಡಿದರು? ಎಂಬುದು ಗೊತ್ತಿದೆಯೇ? ಇದನ್ನು ಯಾರಾದರೂ ಹೇಳಬಲ್ಲಿರಾ?' ಎಂದನು ಆಸ್ತಿಕ.

"ಮಹಾಪೂರದೊಡನೆ ರೇವೆಯು ಬಂದು ಬೀಳುವದು. ಅದರಿಂದ ಭೂಮಿಯು ಬೆಳೆಯುಳ್ಳದ್ದಾಗುವದು." ಎಂದಳು ಶುದ್ಧಮತಿ.

"ಆಹುದು, ಸರಿಯಾಗಿ ಹೇಳಿದೆ. ಆದರೆ ಈ ಕಾರ್ಯವು ಸಾವಿರಾರ ವರುಷ ಶಾಂತರೀತಿಯಿಂದ ನಡೆದಿರುತ್ತದೆ. ಅಂದಿನಿಂದ ರೇವೆಯು ಹಬ್ಬುತ್ತ ಹಬ್ಬುತ್ತ ಸಾವಿರಾರು ಮೈಲು ವ್ಯಾಪಿಸಿಲ್ಲವೇ? ಸೃಷ್ಟಿಯಲ್ಲಿ ದೊಡ್ಡ ದೊಡ್ಡ ಬದಲಾವಣೆಗಳಾಗಬೇಕಾದರೆ ನೂರಾರು ವರ್ಷಗಳನ್ನು ಶಾಂತರೀತಿಯಿಂದ ಕಳೆಯ ಬೇಕಾಗುತ್ತದೆ. ಪಂಚ ಮಹಾಭೂತಗಳಲ್ಲಿ ನೀರು, ಗಾಳಿ ಉಷ್ಣತೆಯಿಂದ ದೊಡ್ಡ ದೊಡ್ಡ ಬದಲಾವಣೆಗಳಾಗುತ್ತಿರುತ್ತವೆ. ಮನುಷ್ಯನಿಗೂ ಸಮಾಜದಲ್ಲಿ ಕ್ರಾಂತಿಯನ್ನುಂಟು ಮಾಡಬೇಕಾಗಿದ್ದರೆ, ಈ ಮೂರು ಶಕ್ತಿಗಳು ಅವನಲ್ಲಿ ಬೇಕು. ಉದಾರ ಭಾವನೆಯ ಗಾಳಿಯೂ ಬೇಕು. ಬುದ್ಧಿಪ್ರಖರತೆಯ ತೇಜವು ಬೇಕು. ಆಶೆಯ ನೀರಿರಬೇಕು. ಈ ಮೂರೂ ಶಕ್ತಿಗಳಿದ್ದವನೇ ಕ್ರಾಂತಿಯನ್ನುಂಟು ಮಾಡುವನು.

ಗಾಳಿ ತೇಜ, ಹಾಗೂ ನೀರು; ಭಾವನಾ, ಬುದ್ಧಿ ಮತ್ತು ಆಶೆ ಈ ಮೂರನ್ನು ಜೀವನದಲ್ಲಿ, ಉಂಟುಮಾಡಿಕೊಳ್ಳಿರಿ. ಆಶ್ರಮದಿಂದ ಈ ಮೂರನ್ನು ಒಯ್ಯಿರಿ ಅಂದರೆ ನೀವು ಕ್ರಾಂತಿಕಾರಕರಾಗುವಿರಿ. " ಎಂದನು ಆಸ್ತಿಕ.

—:xxx●xxx:—

೧೪

ಜನಮೇಜಯನು ಸಾಮ್ರಾಟನಾಗಿದ್ದನು. ಅವನ ರಾಜ್ಯದ ವಿಸ್ತಾರವು ಬಹಳವಾಗಿದ್ದಿತು. ಅನೇಕ ಜನ ಮಾಂಡಲಿಕರು ಕಪ್ಪಕಾಣಿಕೆಗಳನ್ನೊಪ್ಪಿಸುತ್ತಿದ್ದರು. ಚಿಕ್ಕಂದಿನಿಂದ ಜನಮೇಜಯನು, ನಾಗರ ದ್ವೇಷವನ್ನು ಮಾಡುತ್ತಿದ್ದ. ಆದಕೆಲ್ಲ ವಕ್ರತುಂಡನೇ ಕಾರಣ. ತಂದೆಯು ಮರಣದಿಂದಂತೂ ಆ ದ್ವೇಷವು ಶಿಖರಕ್ಕೆ ಮುಟ್ಟಿತು. "ಈ ಭೂಮಿಯನ್ನು ನಿರ್ನಾಗರನ್ನಾಗಿ ಮಾಡುವೆ" ನೆಂದು ಅವನು ಪ್ರತಿಜ್ಞೆಗೈದಿದ್ದನು. ಆದರ ಸಿದ್ಧತೆಯನ್ನು ನಡೆಸಿದ್ದನು. ನನ್ನ ತಂದೆಯ ಕೊಲೆಗೈದ ಜಾತಿಯು ದುಷ್ಟವಿರಲೇ ಬೇಕು. ನಾಗ ಪೂಜೆಯನ್ನು ಮಾಡುವವರೆಲ್ಲ ನಾಗನಂತೆಯೇ ದುಷ್ಟವಿರಬೇಕು. ಹಾವಿನ ಹಾಗೆಯೇ ವಕ್ರಗತಿಯುಳ್ಳ ಹಾಗೂ ವಿಷಕಾರುವಂಥವರಿರಬೇಕು. ಎಂದು ಅನ್ನುತ್ತಿದ್ದನು. ಆಧಿಕಾರವು ಕೈಯಲ್ಲಿ ಬರುವದಾರಿಯನ್ನೇ ನೋಡುತ್ತಿದ್ದನು. ಈಗ ಅವನ ಕೈ ಹಿಡಿಯುವರಾರು?

"ಸಾಮ್ರಾಜ್ಯದಲ್ಲಿ ಯಾರೂ ನಾಗಪೂಜೆಯನ್ನು ಮಾಡಕೂಡದು" ಎಂದು ಆಜ್ಞೆಯನ್ನು ಹೊರಡಿಸಿದನು. ನಾಗರ ಉತ್ಸವ ಹಾಗೂ ಯಾತ್ರೆಗಳನ್ನು ನಿಲ್ಲಿಸಿದನು. ಅಧಿಕಾರದ ಸ್ಥಳದಮೇಲೆ ನಾಗರನ್ನು ನಿಯಮಿಸಕೂಡದೆಂದು ಅಪ್ಪಣೆ ವಿಧಿಸಿದನು. ನಾಗರೊಡನೆ ಯಾರೂ ಮದುವೆಯಾಗಕೂಡದೆಂದು ಘೋಷಿಸಿದನು. ಆದರಂತೆಯೇ ಸರ್ವ ಮಾಂಡಲಿಕರೂ ನಡೆಯಬೇಕೆಂದು ಆಜ್ಞಾಪಿಸಿದನು"

ಎಲ್ಲ ಕಡೆಗೂ ನಾಗರ ಛಲವಾಗ ಹತ್ತಿತು. ಸರ್ವ ಮಾಂಡಲಿಕರು ರಾಜಾಜ್ಞೆಯನ್ನು ಸರಿಯಾಗಿ ಪಾಲಿಸುವರೋ ಇಲ್ಲವೊ ಎಂಬುದನ್ನು ವಕ್ರ

ತುಂಡ ಹಾಗೂ ಅವರ ಪ್ರಚಾರಕರು ಅಲ್ಲಲ್ಲಿ ಸಂಚರಿಸಿ ಜನ ಮೇಜಯನಿಗೆ ತಿಳಿಸುತ್ತಿದ್ದರು. ನಾಗ ಮೂರ್ತಿಗಳ ಧ್ವಂಸಕ್ಕೆ ಪ್ರಾರಂಭವಾಯಿತು. ಎಲ್ಲ ಕಡೆಗೂ ಅಸಂತೋಷವು ಹಬ್ಬಿತು.

ಆರ್ಯರ ಅನೇಕ ಹೆಣ್ಣು ಮಕ್ಕಳು ನಾಗ ಪೂಜಕರಿದ್ದರು. ಅವರು ಹೂ ಹಾಲುಗಳನ್ನು ತೆಗೆದುಕೊಂಡು ಊರ ಹೊರಗೆ ಹೋಗಿ ಹುತ್ತನ್ನು ಪೂಜಿಸಿ ಬರುತ್ತಿದ್ದರು. ಅದನ್ನು ನಿಲ್ಲಿಸಲಾಯಿತು. ಆರ್ಯ ಸ್ತ್ರೀಯರು ಗೋಡೆಯ ಮೇಲೆ ಗಂಧದಿಂದ ಹಾವಿನ ಚಿತ್ರವನ್ನು ತೆಗೆದು ಪೂಜಿಸ ಹತ್ತಿದರು. ಈ ಸುದ್ದಿಯು ರಾಜನಿಗೆ ತಿಳಿದರೆ ದಂಡ ವಾಗುತ್ತಿತು. ಎಲ್ಲಿ ನೋಡಿದಲ್ಲಿ ಗುಪ್ತ ಪೋಲೀಸರ ಸುಳಿದಾಟ. ಗೋಡೆಗೆ ಕೂಡ ಕಿವಿ ಬಂದವು. ಎಲ್ಲಿಯೂ ಶಾಂತತೆಯಿಲ್ಲ.

ಜನಮೇಜಯನ ಸಾಮ್ರಾಜ್ಯದಲ್ಲಿ ನಾಗರದೊಂದು ದೊಡ್ಡ ಪಟ್ಟಣವಿತ್ತು. ಅವರು ಆಜ್ಞಾ ಭಂಗವನ್ನು ಮಾಡಲು ನಿಶ್ಚಯಿಸಿದರು. ಅಲ್ಲಿ ಐದು ಹೆಡೆಯ ಒಂದು ದೊಡ್ಡ ಹಾವಿನ ಮೂರ್ತಿಯಿದ್ದಿತು. ಅದರ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತಿತು. "ಉತ್ಸವವನ್ನು ನಿಲ್ಲಿಸಬೇಕೆಂದು ಜನಮೇಜಯ ರಾಜನ ಆಜ್ಞೆಯಾಗಿದೆ. ಇಲ್ಲದಿದ್ದರೆ, ಮೂರ್ತಿಯನ್ನೇ ಕಿತ್ತುಗೆಯುವೆವು". ಎಂಬ ಬೆದರಿಕೆಯ ಪತ್ರವು ನಾಗ ನಾಯಕರಿಗೆ ಬಂದಿತು. ಊರಲ್ಲಿಯ ನಾಗ ಸ್ತ್ರೀ ಪುರುಷರ ಪ್ರಚಂಡ ಸಭೆ ಸೇರಿತು. ಆ ಸಭೆಯಲ್ಲಿ ರಾಜಾಜ್ಞೆಯು ಪ್ರಕಟವಾಗಿಯೇ ಸುಡಲ್ಪಟ್ಟಿತು. ಉತ್ಸವವನ್ನು ಮಾಡಿಯೇ ತೀರಬೇಕೆಂದು ನಾಗರು ನಿಶ್ಚಯಿಸಿದರು. ರಾಜನ ಸೈನ್ಯವು ಬಂದರೆ ಅದರ ಸಮಾಚಾರವನ್ನು ತೆಗೆದು ಕೊಳ್ಳಲು, ನಾಗ ತರುಣರು ಸಿದ್ಧರಾದರು. ಗದೆ, ಕತ್ತಿ, ಢಾಲು, ಬಾಣ ಮೊದಲಾದ ಶಸ್ತ್ರಾಸ್ತ್ರಗಳು ಸಂಗ್ರಹಿಸಲ್ಪಟ್ಟವು. ಮಹಾ ದ್ವಾರದ ಬಳಿಯಲ್ಲಿ ಕಲ್ಲುಗಳು ಕೂಡಿಸಲ್ಪಟ್ಟವು.

ಉತ್ಸವದ ದಿವಸ ಬಂದಿತು. ಊರಲ್ಲಿ ಸಂಮಿಶ್ರ ಆನಂದ ವಿದ್ದಿತು. ಮಂಗಳ ವಾದ್ಯಗಳು ಬಾರಿಸಹತ್ತಿದವು. ಶಂಖಗಳು ಊದಲ್ಪಟ್ಟವು. ಊರೆಲ್ಲ ಶೃಂಗರಿಸಲ್ಪಟ್ಟಿತು. ಇಂದು ನಾಗೇಶ್ವರನ ಪೂಜೆ. ಈ ಪೂಜೆಯು

ಸಾದಾ ಪುಷ್ಪಗಳಿಂದಲೋ ಅಥವಾ ಶಿರಕಮಲಗಳಿಂದಲೋ? ಇಂದು ರಕ್ತ ಪ್ರವಾಹವು ಹರಿಯುವದೇ?

ಜನಮೇಜಯನ ಸೈನ್ಯವು ಬರುತ್ತಿದೆ, ಎಂಬ ಸುದ್ದಿಯು ಹತ್ತಿತು ಆಕಾಶದಲ್ಲಿ ಧೂಳಿಯು ಎದ್ದು ಕಾಣುತ್ತಿತ್ತು. ನಾಗರು ಎದುರಾಳಿಗಳನ್ನು ಎದುರಿಸಲು ಸಿದ್ಧರಾದರು. ಹೊಡೆಯೋಣ ಇಲ್ಲವೆ ಮಡಿಯೋಣವೆಂದು ಅವರು ಪ್ರತಿಜ್ಞೆಗೈದರು. ಬುದ್ಧಿವಂತರಾದ ನಾಗರು ಒಂದು ಸೈನ್ಯದ ತುಂಡನ್ನು ಜನಮೇಜಯನ ಸೈನ್ಯದ ಹಿಂದೆ ಹೋಗಿ ಅವರ ಮೇಲೆ ಬೀಳಲು ಕಳಿಸಿಕೊಟ್ಟರು. ಆ ಗುಂಪು ಗುಪ್ತವಾಗಿ ನಡೆಯಿತು. ಉಳಿದ ನಾಗರು ಹೊರಬಿದ್ದರು. ಶತ್ರುಗಳಿಂದ ಬಾಣಗಳು ಬರಹತ್ತಿದವು. ನಾಗರೂ ಅದಕ್ಕೆ ಉತ್ತರವಿತ್ತರು. ಸಾವಿರಾರು ಕವಣಿಗಳಿಂದ ಕಲ್ಲುಗಳು ಒಗೆಯಲ್ಪಡಹತ್ತಿದವು. ತಲೆಗಳು ಒಡೆಯಹತ್ತಿದವು. ಇಷ್ಟರಲ್ಲಿಯೇ ಜನಮೇಜಯನ ಸೈನ್ಯದ ಮೇಲೆ ನಾಗರ ಗುಪ್ತಸೈನ್ಯವು ಹಿಂದಿನಿಂದ ಎರಗಿತು. ಕತ್ತರಿಯಲ್ಲಿ ಸಿಕ್ಕಿತು ರಾಜನ ಸೈನ್ಯ. ಅವರು ಗಾಬರಿಗೊಂಡರು. ಸಿಕ್ಕ ಸಿಕ್ಕ ಕಡೆಗೆ ಓಡಿಹೋದರು. ಅವರಲ್ಲಿ ಜೀವಂತ ಉಳಿದವರು ಬಹಳ ಕಡಿಮೆ.

ನಾಗರಿಗೆ ವಿಜಯವೇನೋ ಆಯಿತು. ಆದರೆ ಅದು ತಾತ್ಪೂರ್ತಿಕ ವಿದ್ದಿತು. ಇದರಿಂದ ರಾಜನು ಸಂತಾಪಗೊಳ್ಳುವನು, ದೊಡ್ಡ ಸೈನ್ಯವನ್ನು ತಕ್ಕೊಂಡು ಬರುವನು, ಎಂಬ ಸಂಗತಿಯು ನಾಗರಿಗೆ ನಿಶ್ಚಯವಾಗಿತ್ತು. ಅವರು ಊರು ಬಿಡುವ ನಿಶ್ಚಯ ಮಾಡಿದರು. ಯಾವ ಊರು ತಮ್ಮ ಲೀಲಾಭೂಮಿಯಾಗಿತ್ತೋ, ಆ ಊರನ್ನು ಬಿಡಲು ಅವರಿಗೆ ಬಹಳ ದುಃಖ ವಾಯಿತು. ಆದರೆ ಊರು ಬಿಡದೆ ಗತ್ಯಂತರವಿರಲಿಲ್ಲ.

ಹಿಮಾಲಯದ ಇಳುಕಲಿನಲ್ಲಿರುವ ಇಂದ್ರರಾಜನ ಆಶ್ರಯವನ್ನು ಪಡೆಯಬೇಕೆಂದು ಅವರು ನಿಶ್ಚಯಿಸಿದರು. ಎಲ್ಲರೂ ಹೊರಟರು. ಹುಡುಗರು ಮುದುಕರು ಮೊದಲಾದವರನ್ನು ರಥ ಅಥವಾ ಗಾಡಿಗಳಲ್ಲಿ ಕರೆದೊಯ್ದರು. ಕೆಲವರು ಕುದುರೆಗಳನ್ನೇರಿ ನಡೆದರು. ಬಹಳ ಜನರು ನಡೆಯುತ್ತಲೇ ಹೊರಟರು. ಅವಶ್ಯವಿದ್ದಷ್ಟೇ ಸಾಮಾನುಗಳನ್ನು ಸಂಗಡ

ತಕ್ಕೊಂಡರು. ನಾಯಿ, ಬೆಕ್ಕುಗಳನ್ನು ಒಯ್ದರು. ಮಾರ್ಗ ಕ್ರಮಿಸಹತ್ತಿದರು. ಹೆಂಗಸರು ದಣಿದರು. ಅವರ ಕಾಲುಗಳು ಒಡೆದವು. ಚಿಗುರೆಲೆಗಳನ್ನು ಅವರು ಕಾಲಿಗೆ ಸುತ್ತಿಗೊಂಡು ನಡೆದರು. ದಾರಿಯಲ್ಲಿ ವೇಳೆಗಳೆದರೆ ಗಂಡಾಂತರ ಒದಗುತ್ತಿತ್ತು.

ಹೋಗುವ ಮುಂದೆ ಆ ಭವ್ಯ ನಾಗಮೂರ್ತಿಯನ್ನು ಒಂದು ದೊಡ್ಡ ತೆಗ್ಗಿನಲ್ಲಿ ಹೂಳಿ ಹೋದರು. ಅದು ಅವರ ಪ್ರಾಣವನ್ನೇ ಹೂಳಿದಂತೆ ಅವರಿಗೆ ಅನಿಸಿತು. ಆ ಮೂರ್ತಿಗೆ ಕಣ್ಣೀರಿನಿಂದಲೂ ಹೂಗಳಿಂದಲೂ ಕಟ್ಟ ಕಡೆಯ ಪೂಜೆಯನ್ನು ಮಾಡಿದ ನಂತರ ಅದನ್ನು ಮಣ್ಣಿನಿಂದ ಮುಚ್ಚಿದರು.

ಇಂದ್ರರಾಜನ ಮನೆತನವು ಬಹಳ ಪ್ರಸಿದ್ಧವಿತ್ತು. ಆರ್ಯ ಮತ್ತು ನಾಗರೀರ್ವರೊಡನೆಯೂ ಅವನ ಸ್ನೇಹವಿತ್ತು. ಇಂದ್ರನು ನಮಗೆ ಆಶ್ರಯ ಕೊಡುವನೆಂಬ ಶ್ರದ್ಧೆಯು ನಾಗರಿಗಿತ್ತು. ಅತ್ಯಂತ ಕಷ್ಟ ನಷ್ಟಗಳನ್ನು ಸಹಿಸಿ, ಈ ಸ್ವಾತಂತ್ರ್ಯದ ಯಾತ್ರಿಕರು ಇಂದ್ರನ ರಾಜಧಾನಿಗೆ ಮುಟ್ಟಿದರು. ಇಂದ್ರನು ಇವರನ್ನು ಸ್ವಾಗತಿಸಿದನು. ಅವರಿಗೆ ಅಭಯದಾನ ಮಾಡಿದನು.

ಜನಮೇಜಯ ರಾಜನಿಗೆ ಇವೆಲ್ಲವೂ ತಿಳಿಯಿತು. ಜನಮೇಜಯ ಹಾಗು ವಕ್ರತುಂಡರು ಮಾತಾಡುತ್ತ ಕುಳಿತಾಗ ಪತ್ರವನ್ನು ಸುಟ್ಟ ಸುದ್ದಿಯನ್ನು ಸುದ್ದಿಗಾರನು ತಿಳಿಸಿದನು.

" ರಾಜನೆ, ಎಷ್ಟು ದಿನ ಸೌಮ್ಯವೃತ್ತಿಯನ್ನು ತೋರಿಸುವಿ ? " ಎಂದನು ವಕ್ರತುಂಡ.

" ಸೌಮ್ಯವೃತ್ತಿಯನ್ನು ತೋರಿಸುವದು ಇನ್ನು ಮುಗಿಯಿತು. ನನ್ನ ಪತ್ರ ಸುಟ್ಟವರನ್ನು ನಾನು ಸುಡುವೆ. ಸೇಡು ತೀರಿಸಿಕೊಳ್ಳುವೆ. ಸರ್ಪ ಯಜ್ಞವನ್ನು ಪ್ರಾರಂಭ ಮಾಡುವೆ, ನಾಗರನ್ನು ಸುಡುವ ಯಜ್ಞ ! " ಎಂದನು. ಜನಮೇಜಯ.

" ಮಹಾರಾಜರೆ, ನಾಗರು ನಮ್ಮ ಸೈನ್ಯವನ್ನೆಲ್ಲ ಸಂಹಾರಮಾಡಿದರು. ಮತ್ತು ಈಗ ನಾಗರು ಇಂದ್ರನ ಆಶ್ರಯ ಪಡೆಯಲು ಹೋದರು " ಎಂದು ಸುದ್ದಿಗಾರನು ಸುದ್ದಿಯನ್ನು ಹೇಳಿದನು.

" ಏನು ! ಇಂದ್ರನು ನಮ್ಮ ಶತ್ರುಗಳಿಗೆ ಆಶ್ರಯವಿತ್ತನೇ? " ಎಂದು ಜನಮೇಜಯನು ಕಿಡಿಕಾರಿದನು.

" ರಾಜನೆ, ಇನ್ನು ಉಗ್ರೋಪಾಯವನ್ನು ಕೈಕೊಳ್ಳು. ಇಂದ್ರನಿಗೆ ಸ್ಪಷ್ಟವಾಗಿ ಪತ್ರ ಬರೆ. ನಾಗರ ಬಗ್ಗೆ ತೀಕ್ಷ್ಣೋಪಾಯಗಳನ್ನು ಯೋಜಿಸುವಂತೆ ಇತರ ಮಾಂಡಲೀಕರಿಗೂ ಪತ್ರ ಬರೆ. ಅವರ ಧೋರಣೆಯು ಅಷ್ಟೊಂದು ತೀಕ್ಷ್ಣವಾಗಿಲ್ಲವೆಂದು ಕಾಣುತ್ತದೆ " ಎಂದನು ವಕ್ರತುಂಡ.

" ನಾಗರನ್ನೆಲ್ಲ ಹಿಡಿದು ಇಲ್ಲಿಗೇ ಕಳಿಸಲು ಬರೆಯುವೆ. ನಾಗರಿಗೆ ಶಿಕ್ಷೆ ಕೊಡುವ ಧೈರ್ಯವು ಆ ಮೂರ್ಖರಿಗಿಲ್ಲ. ಸಾವಿರಾರು ಜೇಲುಗಳನ್ನು ಇಲ್ಲಿ ಕಟ್ಟಿಸೋಣ.

" ಸೇಡನ್ನು ಪೂರ್ತಿಯಾಗಿ ತೀರಿಸಿಗೊಳ್ಳೋಣ. ಸರ್ಪಯಾಗ ಪ್ರಾರಂಭಿಸೋಣ ಎಂದನು ಜನಮೇಜಯ.

" ಬಹಳ ಒಳ್ಳೇದು. ಎಲ್ಲ ನಾಗರನ್ನು ಬಿಗಿದು ಇಲ್ಲಿಗೆ ತರಿಸಿರಿ. ರಾಜದೂತರು ಊರೂರಿಗೆ ಹೋಗಲಿ. ಸೈನಿಕರೂ ಹೋಗಲಿ " ಎಂದನು ವಕ್ರತುಂಡ.

" ಇಂದ್ರನ ಕೂಡ ಯುದ್ಧವನ್ನೇ ಮಾಡಬೇಕಾದೀತು " ಎಂದನು ಜನಮೇಜಯ.

" ಯುದ್ಧ ಮಾಡೋಣ. ನಿನ್ನ ಎಲ್ಲ ಮಾಂಡಲೀಕರೂ ಸೈನ್ಯಸಹಿತರಾಗಿ ನಿನ್ನ ಸಹಾಯಕ್ಕೆ ಬರುವರು. ಸೈನ್ಯ ಸಹಿತವಾಗಿ ಸಿದ್ಧರಾಗಿರಲು ಅವರಿಗೆ ಪತ್ರವನ್ನು ಬರೆ " ಎಂದನು ವಕ್ರತುಂಡ.

ಜನಮೇಜಯನು ಅತ್ಯಂತ ಉನ್ಮತ್ತನಾಗಿ ಇಂದ್ರನಿಗೆ ಪತ್ರ ಬರೆದನು.
" ಮಹಾರಾಜ ಇಂದ್ರನಿಗೆ—

ನಾಗಜಾತಿಯ ಜನರು ನಿಮ್ಮ ಆಶ್ರಯ ಪಡೆಯಲು ನಿಮ್ಮಲ್ಲಿಗೆ ಬಂದಿರುವರೆಂದು ತಿಳಿಯುತ್ತದೆ. ನಮಗೂ ನಾಗರಿಗೂ ವಿರೋಧವಿದೆ, ಎಂಬುದನ್ನು ತಾವು ಬಲ್ಲಿರಿ. ನೀವು ಅವರಿಗೆ ಆಶ್ರಯವೀಯ ಬಾರದಾಗಿತ್ತು. ನಾಗಜಾತಿಯು ದುಷ್ಟವಿದೆ. ಕ್ಷಮಿಸಲು ಯೋಗ್ಯವಿರದೆ, ಕೊಲ್ಲಲು ಯೋಗ್ಯವಿದೆ. ಅವರು ನನ್ನ ಆಜ್ಞೆಯನ್ನು ಉಲ್ಲಂಘಿಸಿದ್ದಾರೆ; ಇಷ್ಟೇ ಅಲ್ಲ, ನಾನು

ಕಳಿಸಿದ ಆಜ್ಞಾಪತ್ರವನ್ನು ಕೂಡಿದ ಸಭೆಯಲ್ಲಿ ತಿರಸ್ಕಾರದಿಂದ ಸುಟ್ಟಿದ್ದಾರೆ. ನನ್ನ ಪತ್ರ ಸುಟ್ಟ ಜಾತಿಯನ್ನು ನಾನೂ ಸುಡಬೇಕೆಂಬ ನಿಶ್ಚಯ ಮಾಡಿದ್ದೇನೆ. ನಾಗರ ನಿಃಪಾತವನ್ನು ಮಾಡುವ ಪ್ರತಿಜ್ಞೆಗೈದಿದ್ದೇನೆ. ನಮ್ಮ ನಿಮ್ಮ ಮನೆತನಗಳ ಪೂರ್ವಾಪರ ಸಂಬಂಧವು ಬಹಳ ಸ್ನೇಹಮಯವಾಗಿತ್ತು ನನ್ನ ಮುತ್ತಜ್ಜನು ತಮ್ಮ ರಾಜಧಾನಿಯಲ್ಲಿದ್ದು ನೃತ್ಯ ಕಲೆಯನ್ನು ಕಲಿತು ಅನೇಕ ಶಸ್ತ್ರಾಸ್ತ್ರಗಳನ್ನು ಸಂಪಾದಿಸಿದ್ದನು. ನರಕೇಸರಿಯಾದ ಅರ್ಜುನನ ಮಹಿಮೆಯೆಂತೂ ತಿಳಿದ ವಿಷಯ. ಕುಂತಿಯ ವ್ರತದ ಪ್ರಿತ್ಯರ್ಥವಾಗಿ ತಾವು ಐರಾವತವನ್ನು ಕಳಿಸಿದ್ದಿರಿ. ನಾಗರಿಗೆ ಆಶ್ರಯವನ್ನಿತ್ತರೆ ಮೋಸ ಹೋಗುವಿರಿ. ಅವರು ನಿಮ್ಮ ಮೇಲೆಯೇ ತಿರುಗಿ ಬೀಳಬಹುದು ' ನನ್ನ ತಂದೆಯನ್ನು ಹೇಗೆ ಮೋಸಗೊಳಿಸಿದರೆಂಬದು ತಮಗೆ ಗೊತ್ತೇ ಇದೆ, ಇರಲಿ, ನಾಗರನ್ನು ಈ ಪತ್ರ ಕಂಡಕೂಡಲೆ ಹೊರಗೆ ಹಾಕುವಿರೆಂದು ನಂಬುವೆ.

ಮಹಾರಾಜಾಧಿರಾಜ ಜನಮೇಜಯ

ಜನಮೇಜಯನ ಪತ್ರಕ್ಕೆ ಇಂದ್ರನು ಬೆದರಲಿಲ್ಲ. ಪ್ರಮುಖ ನಾಗರನ್ನೆಲ್ಲ ಕರಿಸಿ, ಅವರೊಡನೆ ವಿಚಾರವಿನಿಮಯ ಮಾಡಿದನು. ಎಲ್ಲ ನಾಗರೂ ಅವನಿಗೆ ಬೆಂಬಲವೀಯಲು ಸಿದ್ಧರಿದ್ದರು. ಮತ್ತು ಮಣಿಪುರ ಮೊದಲಾದ ರಾಜ್ಯಗಳ ರಾಜರೂ ನಿಮಗೆ ಸಹಾಯ ಮಾಡುವರೆಂದು ಅವರು ಹೇಳಿದರು. ಒಂದು ವೇಳೆ ಯುದ್ಧಮಾಡುವ ಪ್ರಸಂಗ ಬಂದರೆ, ನಾಗರು ತಮ್ಮ ಸರ್ವಸ್ವವನ್ನು ಅರ್ಪಿಸಲು ಸಿದ್ಧರಿದ್ದಾರೆಂದು ವಚನವಿತ್ತರು.

ಇಂದ್ರನು ಜನಮೇಜಯನಿಗೆ ಉತ್ತರ ಬರೆದನು.

ರಾಜಾಧಿರಾಜ ಜನಮೇಜಯರಿಗೆ—

ನಿರಾಧಾರರಿಗೆ ಆಧಾರವೀಯುವದು, ಆಶ್ರಯಕ್ಕಾಗಿ ಬಂದವರಿಗೆ ಆಶ್ರಯವನ್ನು ಕೊಡುವದು ನಮ್ಮ ಕುಲವ್ರತವಾಗಿದೆ. ಆರ್ಯ ಹಾಗೂ ನಾಗರ ಸಂಬಂಧವು ಇಷ್ಟು ವಿಕೋಪಕ್ಕೆ ಎಂದೂ ಹೋಗಿಲ್ಲ. ಅಲ್ಲದೆ ಎರಡೂ ಸಮಾಜಗಳು ತೀರ ಹತ್ತಿರ ಬರಹತ್ತಿದ್ದವು. ಒಂದರಲ್ಲೊಂದು ಕೂಡಹತ್ತಿದ್ದವು. ಇಬ್ಬರ ಮಿಶ್ರಣದಿಂದ ಒಂದು ಸುಂದರ ಸಂಸ್ಕೃತಿಯು

ಹುಟ್ಟುತ್ತ ನಡೆದಿತ್ತು. ನೀವು ಪ್ರವಾಹದ ವಿರುದ್ಧ ಈಸಲು ಬಯಸುತ್ತೀರಿ. ಹೀಗೆ ಮಾಡಿದ್ದಾದರೆ ಮೋಸ ಹೋಗುವಿರಿ. ವ್ಯರ್ಥವಾಗಿ ಶ್ರಮ ವಾಗುವದು ತಾವು ತಳೆದ ಧೋರಣವು ಆರ್ಯರಿಗೆ ಶೋಭಿಸುವದಿಲ್ಲ. 'ಏಕಂ ಸದ್ವಿಪ್ರಾ ಬಹುಧಾ ವದಂತಿ' ಎಂದೆನ್ನುವ ಆರ್ಯರಿಗೆ ತಮ್ಮ ಧೋರಣದಿಂದ ದುಃಖ ವಾಗಬಹುದು. ಸಂಗ್ರಾಹಕ ಹಾಗು ಸಹಾನುಭೂತಿಯ ಧೋರಣವನ್ನು ಸ್ವೀಕರಿಸಿ, ಸರ್ವತ್ರ ಶಾಂತಿಯನ್ನು ಪ್ರಸ್ಥಾಪಿಸುವಿರೆಂದು ನಾನು ಆಶಿಸುತ್ತೇನೆ. ಆರ್ಯ ಹಾಗೂ ನಾಗರಲ್ಲಿ ಸ್ನೇಹ ಸಂಬಂಧವನ್ನು ನಿರ್ಮಿಸಲು, ತಾವು ಮುಂದಾದದ್ದಾದರೆ ನಾನು ತಮಗೆ ಆ ಕಾರ್ಯದಲ್ಲಿ ಪೂರ್ಣ ಸಹಾಯ ಮಾಡುವೆ.

ತಮ್ಮ
ಇಂದ್ರ.

ಜನಮೇಜಯನಿಗೆ ಪತ್ರ ಸಿಕ್ಕಿತು. ಅದನ್ನು ಅವನ್ನು ಕಾಲಿನಿಂದ ತುಳಿದನು. 'ಇಂದ್ರನ ಸಹಿತವಾಗಿ ನಾಗರ ಹೋಳಿಯನ್ನು ಮಾಡುವೆ, ಎಂದು ಗರ್ಜಿಸಿದನು. ಇಂದ್ರನನ್ನು ಹೆಡಮುರಿಗೆ ಕಟ್ಟಿ ತಂದು ಬೆಂಕಿಯಲ್ಲಿ ಹಾಕುವೆ ಎಂದನು. ಸರ್ವ ಮಾಂಡಲೀಕರಿಗೆ ಸೈನ್ಯ ತೆಗೆದುಕೊಂಡು ಬರಲು ಪತ್ರವನ್ನು ಬರೆದನು. ಇತ್ತ ಇಂದ್ರನೂ ಸುಮ್ಮನೆ ಕೂಡಲಿಲ್ಲ. ಅವನು ಸಿದ್ಧತೆ ನಡಿಸಿದನು. ಬೇರೆ ಬೇರೆ ಸ್ಥಳಗಳಿಂದ ನಾಗರು ಇಂದ್ರನ ರಾಜ ಧಾನಿಗೆ ಬರಹತ್ತಿದ್ದರು. ಮಣಿಪುರದ ರಾಜನು ಇಂದ್ರನ ಸಹಾಯಕ್ಕೆ ಸಿದ್ಧನಾದನು. ಇಂದ್ರನ ಬಗ್ಗೆ ನಾಗರಲ್ಲಿ ಕೃತಜ್ಞತೆಯುಂಟಾಯಿತು. ಇಂದ್ರನ ಚತುರಂಗದಲವು ಸಿದ್ಧವಾಯಿತು.

ಮತ್ತೆ ಮಹಾಭಾರತವಾಗುವದೇ? ಪುನಃ ಕುರುಕ್ಷೇತ್ರವೇ? ಪುನಃ ಲಕ್ಷಾವಧಿ ಜನರು, ಒಬ್ಬ ವ್ಯಕ್ತಿಯ ಸಲುವಾಗಿ ರಣಕುಂಡದಲ್ಲಿ ಬೀಳಬೇಕೇ? ಲಕ್ಷಾವಧಿ ಸ್ತ್ರೀಯರು ಪತಿಹೀನರಾಗಬೇಕೆ? ಮತ್ತೆ ಶೋಕ ಸಾಗರವು ಮನೆ ಮನೆಗೆ ಬಂದು ಮುಟ್ಟುವದೇ? ಜನಮೇಜಯನ ಆಸುರೀ ಅಹಂಕಾರವನ್ನು ತಡೆಯುವವರಾರು? ಈ ಮಹಾನ್ ಸಂಹಾರವನ್ನು ನಿಲ್ಲಿಸುವವರಾರು?

ತನ್ನ ಸಾಮ್ರಾಜ್ಯದಿಂದಲೂ ಮಾಂಡಲೀಕರ ರಾಜ್ಯದಿಂದಲೂ ನಾಗರು ಇಂದ್ರನ ಕಡೆಗೆ ಹೋಗುತ್ತಿರುವರೆಂಬ ಸುದ್ದಿಯನ್ನು ಕೇಳಿ, ಜನಮೇಜಯನು ಹಲ್ಲು ಕಡಿಯಹತ್ತಿದನು. ಊರೂರಿಗೆ ಇರುವ ನಾಗರನ್ನೆಲ್ಲ ಬಂಧಿಸಿ, ರಾಜಧಾನಿಗೆ ಕಳಿಸಬೇಕೆಂದು ಕಟ್ಟಪ್ಪಣೆಯನ್ನು ಮಾಡಿದನು. ನಾಗರು ಮನೆ ಬಿಟ್ಟು ಹೊರಬೀಳಕೂಡದೆಂದು ಆಜ್ಞೆಯನ್ನು ವಿಧಿಸಿದನು. ಬಂಧಿತವಾದ ನಾಗರ ತಂಡಗಳು ರಾಜಧಾನಿಗೆ ಬರಹತ್ತಿದವು. ಕಾರಾಗ್ರಹಗಳೆಲ್ಲ ತುಂಬಿದವು.

೧೫

ಕಾರ್ತೀಕನು ವತ್ಸಲೆಯ ಹೊಲದಲ್ಲಿರುತ್ತಿದ್ದ ಹೊಲವಾಡುತ್ತಿದ್ದ. ನಾಗ ಹಾಗೂ ಆರ್ಯರಲ್ಲಿ ಸಖ್ಯವು ಬೆಳೆಯಲಿ, ಯುದ್ಧ ಆಗದಿರಲಿ, ನಾಗಾನಂದರ ಪ್ರಚಾರಕ್ಕೆ ಯಶ ದೊರೆಯಲಿ, ಆಸ್ತಿಕನ ಉದ್ದೇಶವು ಪೂರ್ಣವಾಗಲಿ. ಎಂದು ಮನಸ್ಸಿನಲ್ಲಿ ಅನ್ನುತ್ತಿದ್ದನು. ವತ್ಸಲೆಯು ಆವನ ಕಣ್ಣೆದುರಿಗೆ ಕಟ್ಟುತ್ತಿದ್ದಳು. ಧ್ಯೇಯವಾದಿಯಾದ ವತ್ಸಲೆ. ಸುಖ ಸಂಸಾರವನ್ನು ಬಿಟ್ಟು ಸಂಕಟವನ್ನಪ್ಪಿಕೊಳ್ಳುವ ವತ್ಸಲೆ. ನಿರ್ಭಯಳಾದ ವತ್ಸಲೆಗೆ ನಾಗಾನಂದನೇ ಯೋಗ್ಯ. ನಾನಲ್ಲ. ಎಂದು ಅನ್ನುತ್ತಿದ್ದನು.

ಆ ಊರಲ್ಲಿ ಒಬ್ಬ ನಾಗಕನ್ಯೆಯಿದ್ದಳು. ಅವಳ ಹೆಸರು ಕೃಷ್ಣೆ. ಅವಳ ಮೈಬಣ್ಣ ಸಾದಗಪ್ಪು. ಬಹಳ ಆಟಗಾರ್ತಿ. ಆದರೆ ಅವಳ ತಾಯಿಯು ಅವಳನ್ನು ಹೊರಗೆ ಹೋಗಗೊಡುತ್ತಿದ್ದಿಲ್ಲ. ಆದರೂ ತಾಯಿಯ ಕಣ್ಣು ತಪ್ಪಿಸಿ ಅವಳು ಹೋಗುತ್ತಿದ್ದಳು. ಕಾರ್ತೀಕನನ್ನು ನೋಡುವದಕ್ಕೆ ಕೃಷ್ಣೆಯು ಬರುತ್ತಿದ್ದಳು. ದೂರದಲ್ಲಿ ಗಿಡದ ಮರೆಗೆ ನಿಂತು ಅವನನ್ನು ನೋಡುತ್ತಿದ್ದಳು. ಒಮ್ಮೊಮ್ಮೆ ಅವಳು ಗಟ್ಟಿಯಾಗಿ ಚಪ್ಪಾಳೆ ಬಾರಿಸುತ್ತಿದ್ದಳು, ಗಟ್ಟಿಯಾಗಿ ನಗುತ್ತಿದ್ದಳು. ಕಾರ್ತೀಕ ಅತ್ತಿತ್ತ ನೋಡುವ, ಆದರೆ ಅವನಿಗೆ ಯಾರೂ ಕಾಣುತ್ತಿದ್ದಿಲ್ಲ.

ಕೃಷ್ಣೆಯು ಈಗ ಧಿಟ್ಟಳಾಗಿದ್ದಾಳೆ. ರಾತ್ರಿ ತಾಯಿಯು ಮಲಗಿದ ಮೇಲೆ ಏಳುವಳು. ಅವಳು ಆ ಹೊಲಕ್ಕೆ ಹೋಗುವಳು. ಪ್ರೇಮದ ದೀವಟಿಗೆಯನ್ನು ಹಿಡಕೊಂಡು ಹೋಗುತ್ತಿದ್ದಳು. ಮುಳ್ಳುಗಳು ನಡುತ್ತಿದ್ದಿಲ್ಲ. ಅಂಜಿಕೆ ಬರುತ್ತಿದ್ದಿಲ್ಲ. ಅವಳು ಕಾರ್ತೀಕನ ಗುಡಿಸಲಕ್ಕೆ ಪ್ರದಕ್ಷಿಣೆ

ಹಾಕುತ್ತ ಅಲ್ಲಿಯೇ ಇರುತ್ತಿದ್ದಳು. ಬೆಳಿಗ್ಗೆ ಕೋಳಿ ಕೂಗಿತೆಂದರೆ, ಅವಳು ಹೊರಡುವಳು. ಆದರೆ ಹೊರಡುವ ಮೊದಲು ನಾಲ್ಕಾರು ಹೂಗಳನ್ನು ಗುಡಿಸಲಿನಲ್ಲಿ ಒಗೆದು, ನಮಸ್ಕಾರಮಾಡಿ ಹೋಗುವಳು.

ಒಂದು ದಿವಸ ಕಾರ್ತೀಕನು ತನ್ನ ಹಾಸಿಗೆಮೇಲಿದ್ದ ಹೂಗಳನ್ನು ನೋಡಿದನು. ಈ ಹೂಗಳು ಎಲ್ಲಿಂದ ಬಂದವು? ಯಾರಾದರೂ ಒಗೆದರೊ, ಅಥವಾ ಮೇಲಿಂದ ಬಿದ್ದವೊ? ಅಥವಾ ಗಾಳಿಗೆ ಹಾರಿ ಒಳಗೆ ಬಂದಿವೆಯೋ? ಅವನಿಗೆ ತಿಳಿಯಲಿಲ್ಲ. ಅವನು ಆ ಹೂಗಳನ್ನು ಕೈಯ್ಯಲ್ಲಿ ಹಿಡಿದುಕೊಂಡು ಕುಳಿತನು. ಕಾರ್ತೀಕನಿಗೆ ಈ ಹೂಗಳನ್ನಾರು ಕೊಟ್ಟರು? ನಾನಾರ ದೇವರು? ನಾನಾರ ಮಿತ್ರ?

ಒಂದು ದಿನ ಕೃಷ್ಣೆಯು ಒಂದು ಸುಂದರ ಹೂವಿನ ಹಾರವನ್ನು ಮನೆಯಲ್ಲಿ ಸಿದ್ಧಪಡಿಸಿದಳು. ಎಷ್ಟು ಹಾರಗಳು! ಎಷ್ಟು ಮಾಲೆಗಳು!

'ಕೃಷ್ಣೆ! ಈ ಹಾರಗಳು ಏತಕ್ಕಾಗಿ?' ಎಂದಳು ತಾಯಿ

'ನನ್ನ ದೇವರಿಗಾಗಿ' ಎಂದಳು ಆಕೆ

'ನಿನ್ನ ದೇವರೆಲ್ಲಿದ್ದಾನೆ' ಎಂದು ಪ್ರಶ್ನಿಸಿದಳು.

'ನಾಗರ ದೇವರು ಅಡವಿಯಲ್ಲಿರುತ್ತಾನೆ' ಎಂದಳಾಕೆ

'ಪೂಜೆಗಾಗಿ ಯಾವಾಗ ಹೋಗುವಿ? ರಾಜದೂತರು ಬರುವರು, ಮತ್ತು ಹಿಡಿಯುವರು! ನಾಗಪೂಜೆಯು ನಿಲ್ಲಿಸಲ್ಪಟ್ಟಿದೆ. ಸುಮ್ಮನೆ ತೊಂದರೆ ತರಬೇಡ. ಮುಂದೆ ಏನೇನಾಗುವದೋ ದೇವರಿಗೆ ಗೊತ್ತು' ಎಂದಳು ತಾಯಿ.

'ದೇವರ ಪೂಜೆಯನ್ನು ಮಾಡುತ್ತಿರುವಾಗ ಮರಣ ಬಂದರೆ ಕೆಡುಕೇ? ಅದು ನಿಜವಾದ ಪೂಜೆಯಾಗುವದು. ಆದರೆ ನಾನು ರಾತ್ರಿಯಲ್ಲಿ ಪೂಜೆಗಾಗಿ ಹೋಗುವೆನು, ಅಂದರೆ ಯಾರೂ ನೋಡಲಿಕ್ಕಿಲ್ಲ. ಅವ್ವಾ, ನಾನು ಹೋಗಲ್ಯಾ? ದಿನಾಲು ಹೋಗುವೆನು?' ಎಂದಳು

'ಒಬ್ಬಳೇ ಹೋಗುವಿಯೊ?' ಎಂದಳು ತಾಯಿ

'ದೇವರ ಹೆಸರು ಮತ್ತು ನಾನು. ಅಲ್ಲದೆ ಈ ಹೂವಿನಹಾರಗಳನ್ನೂ ಸಂಗಡ ಒಯ್ಯುವೆನಲ್ಲ? ಅಂದಮೇಲೆ ನಾನು ಒಬ್ಬಳೇ ಹೇಗೆ? ಭಕ್ತ ಯಾವಾಗಲೂ ಒಬ್ಬನೇ ಇರುವದಿಲ್ಲ' ಎಂದಳು ಆಕೆ.

' ಕೃಷ್ಣೆ, ನಾವೆಲ್ಲರೂ ಇಲ್ಲಿಂದ ಬೇಗನೇ ಹೋಗಬೇಕಾದೀತು. ಈ ಆರ್ಯರ ರಾಜ್ಯವೇಬೇಡ. ಪ್ರಸಂಗವು ಜೀವದ ಮೇಲೆ ಬಂದೀತು. ಎಂದು ನಮ್ಮ ಜನರು ಮಾತನಾಡುತ್ತಿದ್ದರು ' ಎಂದಳು ತಾಯಿ

' ತಾಯಿ ನೀವು ಹೋಗಿರಿ. ನಾನು ಇಲ್ಲಿಯೇ ಇರುವೆ. ದೇವರನ್ನು ಭಕ್ತಿಯಿಂದ ಭಜಿಸುವೆ. ನೀವು ನಿಮ್ಮ ಯೋಗಕ್ಷೇಮವನ್ನು ನೋಡಿ ಕೊಳ್ಳಿರಿ ' ಎಂದಳು ಕೃಷ್ಣಿ

ಆ ದಿವಸ ರಾತ್ರಿ ಕೃಷ್ಣಿಯು ಆ ಹಾರಗಳನ್ನು ತಕ್ಕೊಂಡು ಪೊಲಕ್ಕೆ ಬಂದಳು. ಅವಳು ದೇವರ ಗುಡಿಯನ್ನು ಶೃಂಗರಿಸುವಂತೆ ಗುಡಿಸಲದ ಬಾಗಿಲಿಗೆ ಆ ಮಾಲೆಯನ್ನು ಕಟ್ಟಿದಳು. ಪ್ರದಕ್ಷಿಣೆ ಹಾಕಿದಳು. ಬೆಳಗಿನ ಸಮಯ ಸಮೀಪಿಸಿತು. ಒಂದು ಸುಂದರ ಹಾರವನ್ನು ಗುಡಿಸಲದೊಳಗೆ ಒಗೆದು ಅವಳು ಹೊರಟಳು.

ಕಾರ್ತೀಕನು ಎದ್ದನು. ಇಂದು ಹೂಗಳ ಬದಲು ಮಾಲೆಯನ್ನು ಕಂಡನು! ಹಾಸಿಗೆಯಲ್ಲಿ ಮಾಲೆ! ಬಾಗಿಲಕ್ಕೆ ಮಾಲೆಯ ತೋರಣ, ಎನಿದ್ದೀತಿದು? ಅವನಿಗೆ ಅಂಜಿಕೆ ಬಂದಿತು. ಆ ಹಾರವನ್ನು ತಕ್ಕೊಂಡು ಅವನು ಸುಶ್ರುತೆಯ ಕಡೆಗೆ ಬಂದನು.

" ಅಜ್ಜಿ, ಅಜ್ಜಿ, ಒಂದು ಆಶ್ಚರ್ಯದ ಸಂಗತಿಯಿದೆ " ಎಂದನು.

" ಏನು ಚಮತ್ಕಾರ? ವತ್ಸಲೆ ನಾಗಾನಂದರು ಚಕ್ಕಂದದಿಂದ ಇದ್ದಾರೆ. ಅವರು ಜಾತ್ರೆಯಲ್ಲಿ ಹೊಕ್ಕರಂತೆ. ವತ್ಸಲೆಯು ಪ್ರೇಮಗೀತವನ್ನು ಹಾಡಿದಳಂತೆ. ನಾಗಾನಂದನು ಕೊಳಲೂದಿದನಂತೆ. ಜಗಳವು ನಿಂತಿ ತಂತೆ, ಹೀಗೆಯೇ ತಿರುಗುತ್ತಿದ್ದಾರೆ. ಮತ್ತೇನು ಚಮತ್ಕಾರ!" ಎಂದಳು ಸುಶ್ರುತೆ.

" ಅಂತಹ ಚಮತ್ಕಾರವಿದಲ್ಲ. ನನ್ನ ಹಾಸಿಗೆಯ ಮೇಲೆ ಏಳುವದ ರೊಳಗಾಗಿ ಹೂಗಳು ಬಿದ್ದಿರುತ್ತವೆ. ಎಲ್ಲಿಂದ ಬಂದವು ಎನಿಸಿತು. ಮರು ದಿನ ಹೂಗಳ ಬದಲು ಮಾಲೆಗಳು ಗುಡಿಸಲಿಗೆ ಹೂವಿನ ತೋರಣ. ಅಲ್ಲದೆ ಹಾಸಿಗೆಯ ಮೇಲೆಯೂ ಒಂದು ಮಾಲೆ. ಇದು ಏನಿರಬಹುದು? ನನಗೆ ಅಂಜಿಕೆ ಬರುತ್ತದೆ!" ಎಂದನು.

"ಗಂಧರ್ವರು ಒಮ್ಮೊಮ್ಮೆ ರಾತ್ರಿಯಲ್ಲಿ ಬರುತ್ತಿರುವರೆಂದು ಕೇಳಿದ್ದೇನೆ. ಅವರಾಗಿರಲಿಕ್ಕಿಲ್ಲವಷ್ಟೆ ?" ಎಂದಳು ಸುಶ್ರುತೆ.

ಇಷ್ಟರಲ್ಲಿ ಕೃಷ್ಣಿಯ ತಾಯಿಯು ಸುಶ್ರುತೆಯ ಕಡೆಗೆ ಬಂದಳು. ಅವಳು ಹೊರಗೆ ನಿಂತಳು. ಅವಳು ಮಾತನಾಡಲಿಲ್ಲ.

"ನಿಮಗೆ ಏನು ಬೇಕು ?" ಎಂದನು ಕಾರ್ತೀಕ.

"ಇಂದು ಕೃಷ್ಣಿಗೆ ಸಾಕಷ್ಟು ಹೂ ಸಿಗಲಿಲ್ಲವೆಂದು ಅವಳು ಅಳುತ್ತಿದ್ದಾಳೆ. ಅವಳು ದಿನಾಲು ಅಡವಿಯಲ್ಲಿರುವ ದೇವರಿಗೆ ಹಾರವನ್ನು ಏರಿಸುತ್ತಿದ್ದಾಳೆ. ನಾಗರಾದ ನಮಗೆ ತೊಂದರೆ ಬರಬಾರವೆಂದು ಅವಳು ರಾತ್ರಿಯಲ್ಲಿ ಹೋಗುವಳು. ಪೂಜೆಮಾಡಿ, ಪ್ರದಕ್ಷಿಣೆ ಹಾಕಿ ಬರುವಳು. ಇಂದು ಹೂಗಳು ಸಿಗದ್ದರಿಂದ ಮಾಲೆ ಮಾಡುವಂತಿಲ್ಲ. 'ವತ್ಸಲೆಯ ಅಜ್ಜಿಯ ಕಡೆಗೆ ಹೋಗು. ಅವರಲ್ಲಿದ್ದರೆ ತಕ್ಕೊಂಡು ಬಾ" ಎಂದು ನನಗೆ ಹೇಳಿದಳು ಹೂಗಳಿವೆಯೇ ?" ಎಂದಳು ಆಕೆ.

"ಹೊಲದಲ್ಲಿ ಸಾಕಷ್ಟು ಹೂಗಳಿವೆ.' ಕಾರ್ತೀಕ, ಒಂದು ಬುಟ್ಟಿ ತುಂಬ ಹೂಗಳನ್ನು ತಂದು ಇವರಿಗೆ ಕೊಡು. ವತ್ಸಲೆಗೆ ಹೂಗಳ ಹುಚ್ಚು ಬಹಳ. ನಿಮ್ಮ ಹುಡುಗೆಯೂ ಹಾಗೆಯೇ ಅಲ್ಲವೇ ? ಎಂದಳು ಅಜ್ಜಿ.

"ಊರಲ್ಲಿಯ ಹುಡುಗೆಯರೊಡನೆ ಈಸಾಡಲು ಕಲಿಯುತ್ತಿದ್ದಳಲ್ಲ, ಅವಳೆ ಏನು ನಿಮ್ಮ ಹುಡುಗೆ ?' ಎಂದನು ಕಾರ್ತೀಕ.

"ಹೌದು" ಎಂದಳಾಕೆ.

"ಅವಳು ಇಲ್ಲಿ ಬಹಳ ವರ್ಷಗಳಿಂದ ಇದ್ದಂತೆ ಕಾಣುವದಿಲ್ಲ." ಎಂದನಾತ.

"ಅವಳು ತಮ್ಮ ಅಜ್ಜಿಯ ಮನೆಯಲ್ಲಿದ್ದಳು. ಆದರೆ ಈಗ ಬಂದು ಕೆಲವು ತಿಂಗಳಾದವು. ಇತ್ತೀಚೆಗೆ ಅವಳಿಗೆ ದೇವರ ಪೂಜೆಯ ಹುಚ್ಚು ಹಿಡಿದಿದೆ.' ಎಂದಳಾಕೆ.

"ದೊಡ್ಡವಳಾಗಿರಬಹುದು" ಎಂದನು ಕಾರ್ತೀಕ.

"ಹೌದು. ದೊಡ್ಡವಳಾಗಿದ್ದಾಳೆ. ರಾಜನ ರಾಣಿಯಂತೆ ಶೋಭಿಸುತ್ತಿದ್ದಾಳೆ." ಎಂದಳು ಆಕೆ.

‘ ನಾನು ಹೂಗಳನ್ನು ತಂದು ಕೊಡುವೆ ’ ಎಂದು ಹೇಳಿ ಕಾರ್ತೀಕನು ಹೋದನು.

ಕೃಷ್ಣಿಯ ತಾಯಿಯೂ ಹೋದಳು.

“ ಹೂಗಳು ಸಿಕ್ಕವೇ ? ಕೈಬೀಸುತ್ತ ಹಾಗೇ ಬಂದೆಯಲ್ಲ ? ” ಎಂದಳು ಕೃಷ್ಣಿ.

“ ಕಾರ್ತೀಕನು ಹೊಲದಿಂದ ಹೂಗಳನ್ನು ತಂದು ಕೊಡುವನು. ಅವನಿಗೆ ನಿನ್ನ ಪರಿಚಯವಿದೆ. ನಿಮಗೆ ಈಸಲು ಕಲಿಸುತ್ತಿದ್ದನಂತೆ ” ಎಂದಳು ತಾಯಿ.

“ ಹೌದು. ಆರ್ಯಕನ್ಯೆಯರೊಡನೆ ನನಗೂ ಕಲಿಸುತ್ತಿದ್ದರು. ಆ ಮಾತಿಗೆ ಬಹಳ ವರ್ಷಗಳಾದವು ಆಗ ನಾನು ಚಿಕ್ಕವಳಿದ್ದೆ. ಅವರೀಗ ದೊಡ್ಡವರಾಗಿರಬಹುದು. ಅವರ ಅಪ್ಪನು ನಾಗರನ್ನು ದ್ವೇಷಿಸುತ್ತಿದ್ದ. ಆದರೆ ಒಮ್ಮೆ ಅವರು ನನಗೊಂದು ಸವಿಯಾದ ಹಣ್ಣನ್ನು ಕೊಟ್ಟಿದ್ದರು. ಅವರಿಗೆ ಇದು ನೆನಪು ಕೂಡಾ ಇರಲಿಕ್ಕಿಲ್ಲ ” ಎಂದಳು.

“ ಅವರೀಗ ಮನೆಬಿಟ್ಟು ವತ್ಸಲೆಯ ಹೊಲದಲ್ಲಿದ್ದಾರೆ. ಅವರು ವತ್ಸಲೆಯನ್ನು ಲಗ್ನವಾಗಬೇಕೆಂದಿದ್ದರು. ಆದರೆ ನಿರಾಶರಾದರು. ‘ ಮುಂದಿನ ಜನ್ಮದಲ್ಲಿಯಾದರೂ ವತ್ಸಲೆಯು ಸಿಗಬಹುದು ’ ಎಂದು ಅನ್ನುತ್ತಾರೆ. ಅವರನ್ನು ನೋಡಿ ಕನಿಕರವೆನಿಸುತ್ತದೆ ” ಎಂದಳು.

ಇತ್ತ ಕಾರ್ತೀಕನು ಮನೋಹರವಾದ ಹೂಗಳನ್ನು ಹರಿದು, ಬುಟ್ಟಿಯನ್ನು ತುಂಬಿದನು. ನಾಗಾನಂದನು ಹೆಣೆದ ಬುಟ್ಟಿ. ಅದನ್ನು ತುಂಬಿಕೊಂಡು ಕೃಷ್ಣಿಯ ಮನೆಗೆ ನಡೆದನು.

“ ಮನೆಯಲ್ಲಿ ಯಾರಿದ್ದೀರಿ ? ” ಎಂದನು ಕಾರ್ತೀಕ. ಕೃಷ್ಣಿಯು ಹೊರಬಂದಳು. ಕಾರ್ತೀಕನ ಕಡೆಗೆ ನೋಡಹತ್ತಿದಳು.

“ ನಿಮ್ಮ ತಾಯಿ ಎಲ್ಲಿದ್ದಾಳೆ ? ” ಎಂದು ಕಾರ್ತೀಕನು ವಿಚಾರಿಸಿದ.

“ ನೀರಿಗೆ ಹೋಗಿದ್ದಾಳೆ ” ಎಂದಳಾಕೆ.

“ ನಿನಗೇ ಅಲ್ಲವೆ, ಹೂಗಳು ಬೇಕಾಗಿದ್ದು ? ಇವನ್ನು ತೆಗೆದುಕೋ ” ಎಂದನಾತ.

"ನಿಮಗೆ ತೊಂದರೆಯಾಯಿತು" ಎಂದಳಾಕೆ.

"ದೇವರ ಪೂಜೆಗಾಗಿ ಹೂವನ್ನು ತರುವದೇನು ತೊಂದರೆಯಲ್ಲ" ಎಂದನಾತ.

"ಆದರೆ ಇವು ನಾಗರದೇವರಿಗೆ!" ಎಂದಳು.

"ನಾಗರು ಕೀಳರೆಂದು ನನಗೆ ಅನಿಸುವದಿಲ್ಲ. ನಾಗರು ದೊಡ್ಡ ಮನಸ್ಸಿನವರಿರುತ್ತಾರೆ. ಪ್ರೇಮಳ ಹೃದಯದವರಿರುತ್ತಾರೆ" ಎಂದನು.

"ಈ ಅನುಭವವು ನಿಮಗೆ ಎಂದು ಬಂದಿತು?" ಎಂದಳು.

"ನಾಗಾನಂದನು ಈ ಬಗ್ಗೆ ಎಷ್ಟೋ ಮಾತು ಹೇಳಿರುವನು" ಎಂದನು.

"ಆ ನಾಗಾನಂದನೆಲ್ಲಿದ್ದಾನೆ?" ಎಂದಳು.

"ವತ್ಸಲೆ ಹಾಗೂ ನಾಗಾನಂದರು ಪ್ರೇಮಧರ್ಮವನ್ನು ಪ್ರಸಾರ ಮಾಡುವದಕ್ಕಾಗಿ ಹೋಗಿದ್ದಾರೆ" ಎಂದನು.

"ನೀವೇಕೆ ಹೋಗುವದಿಲ್ಲ?" ಎಂದಳು.

"ನನಗೆ ಸ್ಫೂರ್ತಿಲ್ಲ" ಎಂದನು.

"ನಿಮ್ಮ ಸ್ಫೂರ್ತಿಯೆಲ್ಲಿ ಹೋಯಿತು?" ಎಂದಳು.

"ನನಗೆ ಗೊತ್ತಿಲ್ಲ. ಈ ಹೂಗಳನ್ನು ಸುರುವಿಕೊ." ಎಂದನು

"ಇರಲಿ ಬಿಡಿರಿ ಬುಟ್ಟಿ. ಬುಟ್ಟಿಯು ಸುಂದರವಾಗಿದೆ, ಇವನ್ನು ನನಗೆ ಕೊಡುವಿರಾ?" ಎಂದಳು.

‚ ನಿನಗೇತಕ್ಕೆ ಬೇಕು?' ಎಂದನು

'ನನಗೆ ಪ್ರಿತಿಯುಂಟಾಗಿದೆಯೆಂದು. ನಿಮ್ಮದಿದೆಯಂದು' ಎಂದಳು

"ನನ್ನದಿರುವದೆಂದೇ?" ಎಂದು ಪ್ರಶ್ನಿಸಿದನು

"ಹೌದು. ನೀವು ಒಳ್ಳೇಯವರು. ನನಗೆ ಈಸಲು ಕಲಿಸುತ್ತಿದ್ದಿರಿ. ನಾನು ಚಿಕ್ಕವಳಿದ್ದೆ. ನೀವು ಚಿಕ್ಕವರಿದ್ದಿರಿ. ನನಗೆ ಒಮ್ಮೆ ಎರಡು ಹಣ್ಣುಗಳನ್ನು ಕೊಟ್ಟಿದ್ದಿರಿ. ನೆನಪಿದೆಯೋ? ನಾನು ಅಜ್ಜಿಯ ಊರಲ್ಲಿ ಭಾವಿಯಲ್ಲಿ ಮೇಲಿನಿಂದ ಜಿಗಿಯುತ್ತಿದ್ದೆ. ಜನರು ನನ್ನನ್ನು ಹೊಗಳುತ್ತಿದ್ದರು. ಕಾರ್ತೀಕನು ನನಗೆ ಕಲಿಸಿದನೆಂದು ಅವರಿಗೆ ಹೇಳುತ್ತಿದ್ದೆ. ಅರ್ಯನು

ನಾಗರಿಗೆ ಹೇಗೆ ಕಲಿಸಿದನೆಂದು ಅವರಿಗೆ ಆಶ್ಚರ್ಯವೆನಿಸಿತು. ಬುಟ್ಟಿಯನ್ನು ಇಟ್ಟುಕೊಳ್ಳಲಾ ? ಏನು ನಿಮಗೆ ಬೇಕೊ ?" ಎಂದು ಕೃಷ್ಣಿಯು ಪ್ರೇಮದಿಂದ ವಿಚಾರಿಸಿದಳು.

'ಈ ಬುಟ್ಟಿ ನನ್ನದಲ್ಲ' ಎಂದನು

'ಹಾಗಾದರೆ ಯಾರದು ?' ಎಂದಳು

"ಇದು ವತ್ಸಲೆಯದು. ನಾಗಾನಂದನು ಆಕೆಗೆ ಇದನ್ನು ಹೆಣೆದು ಕೊಟ್ಟಿದ್ದನು. ಅವಳ ಪ್ರೀತಿಯ ಬುಟ್ಟಿಯಿದು." ಎಂದನು

ಇಷ್ಟರಲ್ಲಿ ಕೃಷ್ಣೆಯ ತಾಯಿಯು ಕೊಡಹೊತ್ತುಕೊಂಡು ಮನೆಗೆ ಬಂದಳು. ಹಾಗು ಒಳಗೆ ಕೊಡವನ್ನಿಟ್ಟು ಅಲ್ಲಿಗೆ ಬಂದಳು.

"ಇಷ್ಟೊಂದು ಹೂಗಳೇಕೆ ?" ಎಂದಳು ತಾಯಿ

"ಇಷ್ಟು ಹೂಗಳು ಸಾಲಲಿಕ್ಕಿಲ್ಲವೆಂದು ನನಗೆ ಅನಿಸಿತ್ತು. ದಿನಾಲು ತಂದು ಕೊಡಲೇನು ?" ಎಂದನು ಕಾರ್ತೀಕ

'ದಿನಾಲು ನಿಮಗೇಕೆ ತೊಂದರೆ ? ಎಂದಳು ತಾಯಿ

'ತೊಂದರೆ ಯಾತರದು ? ವತ್ಸಲೆಯ ಅಜ್ಜಿಯ ಕಡೆಗೆ ಬೆಳಿಗ್ಗೆ ಬರುತ್ತೇನೆ. ಇಲ್ಲಿಯೂ ಬರುವೆ. ಚಿಕ್ಕಂದಿನ ಗೆಳತಿಯ ಸಲುವಾಗಿ ಬರ ಬೇಡವೇ ? ಎಂದನು ಕಾರ್ತೀಕ

'ಆದರೆ ಇದರಲ್ಲಿ ಸಂಕಟವಿದೆ. ರಾಜದೂತರ ಡಂಗುರ ಕೇಳಿಲ್ಲ ವೇನು ? ಈಗ ಬಂದಿರಲ್ಲ ! ಇಷ್ಟೇ ಸಾಕು, ಮತ್ತೆ ಬರಬೇಡಿರಿ.' ಎಂದಳು ತಾಯಿ

"ರಾಜದೂತರ ಆಜ್ಞೆಯನ್ನು ಉಲ್ಲಂಘಿಸಬೇಕು. ಪಾಪಕ್ಕೆ ಎಡೆ ಗೊಡಬೇಕೇ ? ಕಾರ್ತೀಕಾ, ನೀವು ಬನ್ನಿರಿ" ಎಂದಳು ಕೃಷ್ಣಿ.

"ನಾವು ಬೇಗನೆ ಈ ಊರು ಬಿಟ್ಟು ಹೋಗಲೇಬೇಕಾದೀತು. ಕೃಷ್ಣಿಯು ಇಲ್ಲಿಯೇ ಅಡವಿಯಲ್ಲಿರುವೆ, ಎನ್ನುತ್ತಾಳೆ" ಎಂದಳು ತಾಯಿ.

"ಅಡವಿಯಲ್ಲಿರುವೆ, ನನ್ನ ದೇವರನ್ನು ಪೂಜಿಸುವೆ" ಎಂದಳು ಕೃಷ್ಣಿ.

"ಆ ದೇವನು ಎಲ್ಲಿರುವನು ನನಗೆ ತೋರಿಸುವೆಯಾ ?" ಎಂದನು ಕಾರ್ತೀಕ.

"ನನ್ನ ದೇವರು ದಟ್ಟಡವಿಯಲ್ಲಿದ್ದಾನೆ. ನೀವು ಅಂಜಬಹುದು. ಅಲ್ಲಿ ಸೂರ್ಯನ ಕಿರಣಗಳೂ ಕೂಡ ಪ್ರವೇಶಿಸುವದಿಲ್ಲ. ನಿಜವಾಗಿ ಅದು ದಟ್ಟಡವಿ" ಎಂದಳು.

'ನಾನು ಅಂಜುಬುರುಕನೆಂದು ವತ್ಸಲೆಗೆ ಸೇರಲಿಲ್ಲ. ನಿನಗೂ ಹಾಗೆ ಅನಿಸುವದೇ? ನನ್ನ ಅಂಜಿಕೆಯು ಹೋಗಲೇಬೇಕು.' ಎಂದನು ಕಾರ್ತೀಕ

"ನಾನು ಅಂಜಿಕೆಯನ್ನು ಹೊಡೆದೋಡಿಸುವೆ. ಇಂದು ಮೂರನೆ ಪ್ರಹರದಲ್ಲಿ ಹೋಗೋಣ. ನನ್ನ ಸಂಗಡ ಬರುವಿರಾ? ಎಂದಳು ಕೃಷ್ಣೀ.

'ಒಳ್ಳೆಯದು. ನಿಶ್ಚಯವಾಗಿ ಬರುವೆ. ನೀನು ಹೊಲಕ್ಕೆ ಬಾ. ನಾನು ದಾರೀ ಕಾಯುತ್ತಿರುವೆ.' ಎಂದನು ಕಾರ್ತೀಕ.

ಮೂರು ಗಂಟೆಯಾಯಿತು. ಬುಟ್ಟಿಯಲ್ಲಿ ಪೂವಾಲೆಗಳನ್ನಿಟ್ಟು ಕೊಂಡು ಕೃಷ್ಣಿಯು ಹೊರಟಳು. ಕಾರ್ತೀಕನು ಗುಡಿಸಲದಲ್ಲಿ ದಾರಿ ಕಾಯುತ್ತ ಕುಳಿತಿದ್ದನು. ಕೃಷ್ಣಿಯು ಒಳಗೆ ಬಂದಳು.

'ನೀವು ಇಲ್ಲಿಯೇ ಅಡಿಗೆ ಮಾಡುವಿರಲ್ಲವೇ?' ಎಂದಳು.

'ನಾನೇ ಬೀಸುವೆ, ರೊಟ್ಟಿಯನ್ನು ಸುಡುವೆ. ಇಂದು ರೊಟ್ಟಿ ಮಾಡುವಾಗ್ಗೆ ಕೈ ಸುಟ್ಟಿತು.' ಎಂದನು

'ನೋಡುವಾ? ಎಂದಳು'

ಅವನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡಳು. ಅವಳು ಅವನ ಸುಟ್ಟ ಬೆರಳನ್ನು ತನ್ನ ಬಾಯೊಳಗಿಟ್ಟುಕೊಂಡಳು.

'ಏನುಮಾಡುವಿ ಕೃಷ್ಣೀ?' ಎಂದನು

'ಉರಿಯುತ್ತಿರಬಹುದೆಂದು ಬಾಯಲ್ಲಿಟ್ಟೆ. ನಾನು ದಿನಾಲು ನಿಮ ಗಾಗಿ ರೊಟ್ಟಿಯನ್ನು ತರುವೆ. ನಾನೇ ಬೀಸುವೆ.' ಎಂದಳು

'ನಡೆ, ದೇವರ ದರ್ಶನಕ್ಕೆ ಹೋಗಿ ಬರೋಣ ತಡವಾದೀತು! ಅಡ ವಿಯಲ್ಲಿಯ ದೇವ. ದಟ್ಟಡವಿಯಲ್ಲಿರುವ ನಾಗರದೇವ.' ಎಂದನು

ಇಬ್ಬರೂ ಹೊರಟರು. ಊರ ಹೊರಗಿದ್ದ ದಟ್ಟವಾದ ಅಡವಿಯ ಕಡೆಗೆ ನಡೆದರು. ಪಕ್ಷಿಗಳು ಕಿಲಕಿಲರವ ಗೈಯ್ಯುತ್ತಿದ್ದವು. ಎಷ್ಟು ಮಧುರ ವಾದ ಸಪ್ಪಳ! ಒಂದು ಪಕ್ಷಿಯ ಧ್ವನಿಯಂತೂ ಬಹಳ ಇಂಪಾಗಿತ್ತು.

" ಅದು ಗಂಡು ಪಕ್ಷಿಯಿದೆ. ತನ್ನ ಪ್ರೇಯಸಿಯನ್ನು ಕರೆಯುತ್ತಲಿದೆ. ಆದರ ಪ್ರೇಯಸಿಯು ಹತ್ತರದಲ್ಲಿಯೇ ಅಡಗಿ ಕುಳಿತಿದೆ. ಕೂಗಿ ಕೂಗಿ ದಣಿದ ಮೇಲೆ ಅದು ಮೆಲ್ಲನೆ ಬರುತ್ತದೆ. ಹಾಗು ಚುಂಚುವಿನಿಂದ ತಿವಿಯುತ್ತದೆ " ಎಂದಳು.

" ಇನ್ನೂ ಎಷ್ಟು ದೂರವಿದೆ ಆ ದೇವರು? ಹೊಲಕ್ಕೆ ಮರಳಿ ಹೋಗಲು ತಡವಾಗಬಹುದು. ನಿನಗೆ ಮನೆಗೆ ಹೋಗಲು ರಾತ್ರಿಯಾಗಬಹುದು " ಎಂದನು.

" ರಾತ್ರಿಯಂತೂ ನನ್ನ ಗೆಳತಿ, ದಿವಸವು ನನಗೆ ಹಗೆ " ಎಂದಳು.

" ಹಾವುಗಳು ರಾತ್ರಿಯಲ್ಲಿ ಹೊರ ಬರುತ್ತವೆ. ನಾಗ ಪೂಜಕರೂ ಹಾಗೇ ಮಾಡುವರೇನು ? " ಎಂದು ಕಾರ್ತೀಕನು ನಗುತ್ತ ಕೇಳಿದನು.

" ನನ್ನ ದೇವರು ದೂರೆಂದರೆ ದೂರ, ಹತ್ತರವೆಂದರೆ ಹತ್ತರವಿದ್ದಾನೆ" ಎಂದಳು.

" ಅಂದರೇನು ? " ಎಂದನು.

" ನಿಲ್ಲಿರಿ, ಅದೋ ಅಲ್ಲಿ ಹಾವು. ಅದನ್ನು ಹೋಗಗೊಡಿರಿ. ಈಗ ನಾವು ದೇವರ ಸಮೀಪಕ್ಕೆ ಬಂದೆವು.

ಅವನು ಅಂಜಿ ಅವಳ ಕೈಯ್ಯನ್ನು ಹಿಡಿದ.

" ಕೃಷ್ಣೇ, ತಿರುಗಿ ಹೋಗುವಾ " ಎಂದನು.

" ಅಂಜ ಬೇಡಿರಿ. ನಾನಿದ್ದೇನೆ. ದೇವದರ್ಶನವನ್ನು ತಕ್ಕೊಳ್ಳದೆ ಹೋಗಬಾರದು ? " ಎಂದಳು.

ಒಂದು ದೊಡ್ಡ ವೃಕ್ಷದ ಕೆಳಗೆ ಅವರು ನಿಂತರು.

" ನಿನ್ನ ದೇವರು ಬಂದಿತೇನು ? " ಎಂದನು.

" ನನ್ನ ದೇವರು, ನಿಮ್ಮ ದೇವರಲ್ಲವೇನು ? " ಎಂದಳು.

" ಬೇಗನೆ ಪೂಜೆಯನ್ನು ಮುಗಿಸು " ಎಂದನು.

ಅವಳು ಬುಟ್ಟಿಯಲ್ಲಿಯ ಹೂಮಾಲೆಯನ್ನು ಹೊರದೆಗೆದಳು.

' ನೀವು ಗಿಡದ ಬುಡದಲ್ಲಿ ಬನ್ನಿರಿ. ಬೊಡ್ಡೆಗಾತು ಕುಳಿತುಕೊಳ್ಳಿರಿ. ನಾನು ಈ ಗಿಡಕ್ಕೆ ಪ್ರದಕ್ಷಿಣೆಯನ್ನು ಹಾಕುವೆನು ' ಎಂದಳು.

ಆವನು ಗಿಡದ ಬುಡದಲ್ಲಿ ಕುಳಿತನು. ಕೈಯ್ಯಲ್ಲಿ ಮಾಲೆಯನ್ನು ಹಿಡಿದು ಆವಳು ಪ್ರದಕ್ಷಿಣೆ ಹಾಕುತ್ತಿದ್ದಳು. ದಣಿದ ಕಾರ್ತೀಕನು ಬೊಡ್ಡೆಗೆ ಆತು ಕಣ್ಣುಮುಚ್ಚಿ ಕುಳಿತನು. ಆವನಿಗೆ ನಿದ್ದೆ ಹತ್ತಿತ್ತೇನು ?

ಕೃಷ್ಣೆಯು ಎದುರಿಗೆ ನಿಂತಳು. ಕೈಯ್ಯಲ್ಲಿ ಮಾಲೆಹಿಡಿದು ಎದ್ದು ನಿಂತಿದ್ದಳು. ಕಾರ್ತೀಕನ ಕಡೆಗೆ ನೋಡುತ್ತಿದ್ದಳು.

" ಪೂಜೆ ಮುಗಿಯಿತೇ ? " ಎಂದನು.

ಆವಳು ಕೈಯ್ಯಲ್ಲಿಯ ಮಾಲೆಯನ್ನು ಆವನ ಕೊರಳಲ್ಲಿ ಹಾಕಿದಳು. ಆವನ ಚರಣಗಳ ಮೇಲೆ ಮಸ್ತಕವಿರಿಸಿದಳು.

" ಇದೇನು ? " ಎಂದನು.

" ಇದು ನನ್ನ ದೇವ ಪೂಜೆಯು " ಎಂದಳು.

" ಅಡವಿಯಲ್ಲಿಯ ದೇವರಲ್ಲಿದ್ದಾನೆ ? " ಎಂದು ಕೇಳಿದನು.

" ಈ ಜಗತ್ತಿನ ಅಡವಿಯಲ್ಲಿಯರುವ ನೀವೇ ನನ್ನ ದೇವರು. ನಾನು ನನ್ನ ಜೀವನವನ್ನು ನಿಮಗರ್ಪಿಸಿದ್ದೇನೆ. ನಾನು ನಿಮ್ಮ ಗುಡಿಸಲದಲ್ಲಿರುವೆ. ಬೀಸುವೆ, ರೊಟ್ಟಿಯನ್ನು ಸುಡುವೆ ನಿಮ್ಮ ಗಾಗಿ ಎಲ್ಲವನ್ನು ಮಾಡುವೆ. ನನ್ನ ಪಂಚ ಪ್ರಾಣಗಳನ್ನು ಅರ್ಪಿಸಿ, ನಿಮ್ಮನ್ನು ಪೂಜಿಸುವೆ. ಭಕ್ತನನ್ನು ದೂರ ಮಾಡದೆ ಪಾದದ ಬಳಿಯಲ್ಲಿರಿಸಿರಿ " ಎಂದಳು.

ಆವನು ಮಾತಾಡಲಿಲ್ಲ. ಮೌನವಾಗಿ ಕುಳಿತನು.

" ಮಾತಾಡುವದಿಲ್ಲವೇನು ? " ಎಂದಳು.

' ನಿನ್ನ ದೇವಪೂಜೆಯಂತೂ ಆಯಿತು. ಆದರೆ ನನ್ನ ಪೂಜೆಯು ಉಳಿಯಿತು. ನಡೆ, ಬೇಗನೆ ಹೊಲಕ್ಕೆ ಹೋಗೋಣ. ನನ್ನ ಸಾಯಂ ಕಾಲದ ದೇವಪೂಜೆಯು ತಪ್ಪೀತು. ' ಎಂದನು

ಇಬ್ಬರೂ ಹೊಲಕ್ಕೆ ಬಂದರು.

' ಕೃಷ್ಣೆ, ನಿನಗೆ ಹಿಂಡಲು ಬರುವದೇ ? ' ಎಂದನು

" ಓ ಹೋ, ನಾನು ಹಿಂಡುವೆ " ಎಂದಳು

" ಹಿಂಡು ಹಾಗಾದರೆ, ನಾನು ನನ್ನ ದೇವರ ಪೂಜೆಯ ಸಿದ್ಧತೆ ಯನ್ನು ಮಾಡುವೆನು " ಎಂದನು

“ಕೃಷ್ಣೆಯು ಹಿಂಡುತ್ತಲಿದ್ದಳು. ಪಾತ್ರೆಯು ತುಂಬಿದರೂ ಸಹ ಧಾರೆಯು ನಿಲ್ಲಲಿಲ್ಲ. ಕೃಷ್ಣೆಯ ಬೆರಳುಗಳು ನೋವಾಗತೊಡಗಿದವು.

“ಎರಡನೇ ಪಾತ್ರೆ ಕೊಡಿರಿ. ಇದು ತುಂಬಿತು.” ಎಂದಳು

ಕಾರ್ತೀಕನು ಪಾತ್ರೆ ತುಂಬಿದ್ದನ್ನು ನೋಡಿ ಆಶ್ಚರ್ಯಪಟ್ಟನು.

‘ಇಷ್ಟು ಹಾಲು ಹೇಗೆ ಬಂದವು ?’ ಎಂದನು

‘ಇನ್ನೂ ಕೆಚ್ಚಲು ತುಂಬಿದೆ’ ಎಂದಳು

“ನಿನ್ನ ಕೈಯಲ್ಲಿ ಮಂತ್ರತಂತ್ರವಿದೆಯೇ ?” ಎಂದನು.

‘ನನ್ನ ಕೈಯು ಪ್ರೇಮದಿಂದ ತುಂಬಿದೆ. ಇಂದು ನನ್ನ ಶರೀರದ ರೋಮರೋಮಗಳಲ್ಲಿಯೂ ಅನಂತ ಪ್ರೇಮವು ತಂಬಿತುಳುಕುತ್ತಿದೆ’ ಎಂದಳು.

‘ಹಿಂಡುವದನ್ನು ನಿಲ್ಲಿಸು.’ ಎಂದನು

ಇಬ್ಬರೂ ಗುಡಿಸಲದಲ್ಲಿ ಬಂದರು.

“ನಿಮ್ಮ ದೇವ ಪೂಜೆಯು ಮುಗಿಯಿತೇನು ?” ಎಂದಳು

“ಹೊರಗಿರುವ ಎತ್ತರವಾದ ಕಲ್ಲಿನ ಆಸನದ ಮೇಲೆ ನೀನು ಕೂಡ್ರು. ನಾನು ಬರುವೆ” ಎಂದನು.

ಅವಳು ಆ ಕಲ್ಲುಬಂಡೆಯ ಮೇಲೆ ಹೋಗಿ ಕುಳಿತಳು. ಇತ್ತ ಸೂರ್ಯನು ಪಶ್ಚಿಮಾಚಲವನ್ನು ಸೇರುತ್ತಲಿದ್ದ. ಕೆಂಪು ಬಣ್ಣವು ಹಬ್ಬಿತ್ತು. ತಂಗಾಳಿಯು ಬೀಸುತ್ತಲಿತ್ತು. ಸುಗಂಧ, ಹಾಗು ಶೀತಲವಾದ ಗಾಳಿ. ಕೃಷ್ಣೆಯ ಹೃದಯವು ಅರಳಿತ್ತು, ಮೋರೆಯ ಮೇಲೆ ಪ್ರೇಮದ ಹಾಗು ಪ್ರಸನ್ನತೆಯ ಕಳೆಯು ಸುರಿಯುತ್ತಿತ್ತು. ಕಣ್ಣುಗಳು ಹೊಳೆಯುತ್ತಲಿದ್ದವು. ಕಾರ್ತೀಕನು ಅತ್ತಕಡೆಯಿಂದ ಬಂದ. ಅವನು ಕೃಷ್ಣೆಯ ಕೊರಳಲ್ಲಿ ಸುಂದರವಾದ ಹೂವಿನ ಹಾರವನ್ನು ಹಾಕಿದ. ಕೃಷ್ಣೆಯು ಒಮ್ಮೆಲೆ ಚಕಿತಳಾಗಿ ಎದ್ದಳು. ಅವನು ಅವಳನ್ನು ಅಪ್ಪಿಕೊಂಡನು.

“ಕೃಷ್ಣೆ, ನೀನು ನನ್ನ ದೇವತೆ” ಎಂದನು.

“ನೀವು ನನ್ನ ದೇವರು” ಎಂದಳು

ಇಬ್ಬರೂ ಆ ಬಂಡೆಗಲ್ಲಿನ ಮೇಲೆ ಕುಳಿತಿದ್ದರು. ಗಾಳಿಯಿಂದ ಕೃಷ್ಣೆಯ ಮುಂಗುರುಳು ಹಾರಾಡುತ್ತಿದ್ದವು. ಅವಳ ಹೃದಯವು ಪ್ರೇಮ ಸಾಗರದಲ್ಲಿ ಮುಳುಗಿತ್ತು.

" ನಾವೀರ್ವರು ಮನೆಗೆ ಹೋಗೋಣ. ತಾಯಿಯು ಹಾಗು ಸುಶ್ರುತೆಯ ಆಶೀರ್ವಾದಗಳನ್ನು ಪಡೆಯೋಣ. ಎಂದಳು

" ನೀನೇ ಇಲ್ಲಿಗೆ ಬರುತ್ತಿದ್ದಿ, ಹೂಗಳನ್ನು ಒಗೆಯುತ್ತಿದ್ದಿ. ಬಾಗಲಲ್ಲಿ ತೋರಣವನ್ನು ಕಟ್ಟುತ್ತಿದ್ದಿ. ಅಜ್ಜಿ ಸುಶ್ರುತೆಯು ' ಗಂಧರ್ವರು ಹೀಗೆ ಮಾಡುತ್ತಿರುತ್ತಾರೆ ' ಎಂದಳು. ಆ ಗಂಧರ್ವನು ಇಂದು ಸಿಕ್ಕನು, ಆ ಅಪ್ಸರೆಯು ಸಿಕ್ಕಳು. ಕೃಷ್ಣೇ, ನಿನಗೆ ಅಂಜಿಕೆ ಬರಲಿಲ್ಲವೇ ? " ಎಂದನು.

" ಜೀವನವು ಪ್ರೇಮದಿಂದ ತುಂಬಿತೆಂದರೆ, ಅಂಜಿಕೆಯು ಹೋಗುತ್ತದೆ. ಯಾವದಾದರೊಂದು ಭಾವನೆಯು ಶಿಖರವನ್ನು ಮುಟ್ಟಿತೆಂದರೆ ಉಳಿದ ಭಾವನೆಗಳು ಅಳಿಯುವವು. " ಎಂದಳು.

ಇಬ್ಬರೂ ಕೈ ಕೈ ಹಿಡಕೊಂಡು ಹೊರಟರು. ಅಜ್ಜಿ ಸುಶ್ರುತೆಯು. ಕೃಷ್ಣಾಜಿನದ ಮೇಲೆ ಕುಳಿತು, ಜಪವನ್ನು ಮಾಡುತ್ತಿದ್ದಳು. ಆ ವಧುವರರಿಬ್ಬರೂ ಆಕೆಗೆ ನಮಸ್ಕರಿಸಿದರು.

' ಅಜ್ಜೀ, ಈ ಕೃಷ್ಣೆಯೇ ನನ್ನ ಗುಡಿಸಲವನ್ನು ಅಲಂಕರಿಸುತ್ತಿದ್ದಳು. ಒಳಗೆ ಹೂವನ್ನು ಒಗೆಯುತ್ತಿದ್ದಳು. ನಾನು ನಿದ್ರಿಸುವಾಗ ಇವಳು ನನಗೆ ಪ್ರೇಮಪೂಜೆ ಮಾಡಿ ಹೋಗುತ್ತಿದ್ದಳು. ಕಾರ್ತೀಕನಿಗೆ ಇವಳು ದೇವತ್ವವನ್ನು ತಂದು ಕೊಟ್ಟಿದ್ದಾಳೆ. ಈ ಮಣ್ಣುಮುದ್ದೆಯನ್ನು ಇವಳು ತನ್ನ ಪ್ರೇಮಶಕ್ತಿಯಿಂದ ಅಮೂಲ್ಯವಾದ ಮುತ್ತನ್ನಾಗಿ ಮಾಡಿದ್ದಾಳೆ. ಲೋಹವನ್ನು ಬಂಗಾರ ಮಾಡಿದ್ದಾಳೆ. ಅಜ್ಜಿ, ನಮಗೆ ಆಶೀರ್ವಾದವನ್ನುಕೊಡು ಸಾಯಂಕಾಲದಲ್ಲಿ ದೇವರು ಆಕಾಶದಲ್ಲಿ ಹೊತ್ತಿಸಿದ ಅಗ್ನಿಯ ಸಮಕ್ಷಮದಲ್ಲಿ ನಾವು ಸತಿಪತಿಗಳಾಗಿದ್ದೇವೆ. ' ಎಂದನು.

ಮುದುಕಿಯು ಕೃಷ್ಣೆಯನ್ನು ಹತ್ತರ ಕರೆದಳು. ಅವಳ ಮೈಮೇಲೆ ಕೈಯಾಡಿಸಿದಳು. ಆಶೀರ್ವದಿಸಿದಳು. ಹಣ್ಣು ತಿನ್ನಲು ಕೊಟ್ಟಳು.

ಅನಂತರ ಕೃಷ್ಣೆಯ ಮನೆಗೆ ಇಬ್ಬರೂ ಬಂದರು. ತಾಯಿಯು ದಾರಿ ಕಾಯುತ್ತಲಿದ್ದಳು.

'ಬಂದಿರಾ ಒಮ್ಮೆ ?' ಎಂದಳು

'ತಾಯಿಯೇ ಬಂದೆ. ಆದರೆ ಹೋಗುವದಕ್ಕಾಗಿಯೇ ಬಂದೆ. ನಾನು ಕಾರ್ತಿಕನನ್ನು ವರಿಸಿದೆ. ಒಮ್ಮೆ ಪ್ರೇಮವನ್ನು ಮಾಡಿದರೆ, ಅದು ಬಿಡಲಿಕ್ಕಾಗುವದಿಲ್ಲ. ಆಶೀರ್ವಾದಮಾಡು.' ಎಂದಳು ಕೃಷ್ಣೆ.

"ಕೃಷ್ಣೇ, ನಾನು ಆಶೀರ್ವದಿಸುವೆ. ಆದರೆ ನೀವು ವಿಚಾರ ಮಾಡದೆ ಅವಸರದಿಂದ ಎಲ್ಲವನ್ನೂ ಮುಗಿಸಿದಿರಿ" ಎಂದಳು ತಾಯಿ.

"ತಾಯೀ ಪ್ರೇಮವು ಯಾವಾಗಲೂ ಪೂರ್ಣವಿರುತ್ತದೆ. ಅದು ಯಾವಾಗಲೂ ಸರಿಯಾಗಿರುತ್ತದೆ. ಅದು ಎಂದೂ ಅವಸರಪಡಿಸುವದಿಲ್ಲ. ಎಂದೂ ತಡಮಾಡುವದಿಲ್ಲ ಸಮಯ ಬಂದೊಡನೆಯೆ ಮೊಗ್ಗೆಗಳು ಅರಳುವವು. ಪ್ರೇಮಕ್ಕೆ ವಿಚಾರವಿಲ್ಲ. ಮನನವಿಲ್ಲ. ಅಲ್ಲಿ ಸರ್ವಸ್ವವನ್ನು ಅರ್ಪಿಸುವದಿರುತ್ತವೆ. ಪ್ರೇಮವು ಹಿಂದೆ ಮುಂದೆ ನೋಡುವದಿಲ್ಲ. ಪ್ರೇಮಕ್ಕೆ ಎಲ್ಲೆಡೆಗೂ ಬೆಳಕೇ ಕಾಣುತ್ತದೆ. ಮಧುರ ಪ್ರಕಾಶ" ಎಂದಳು ಕೃಷ್ಣೆ.

"ಕಾರ್ತಿಕಾ, ಜನಮೇಜಯನ ಆಜ್ಞೆಯನ್ನು ನೀವು ಉಲ್ಲಂಘಿಸಿದ್ದಿರಿ. ನಾಗಕನ್ನೆಯೊಡನೆ ಲಗ್ನವಾಗಿ, ನೀವಿಬ್ಬರೂ ಅಪರಾಧಿಗಳಾಗಿದ್ದೀರಿ. ವಿಪತ್ತು ಬರುವದು. ಕೃಷ್ಣೆ! ನಾಗರೆಲ್ಲರೂ ಇಲ್ಲಿಂದ ನಾಳೆ ಹೊರಡುವ ನಿಶ್ಚಯ ಮಾಡಲಿದ್ದಾರೆ. ಆದರೆ ನೀನು ಇಂದು ಇದನ್ನೇನು ಮಾಡಿದೆ? ನೀವಿಬ್ಬರೂ ನಮ್ಮ ಸಂಗಡ ಬರುವಿರಾ?" ಎಂದಳಾತಾಯಿ.

"ನಾನು ಹೇಗೆ ಬರಲಿ ? ಅಜ್ಜಿ ಸುಶ್ರೂತೆಗೆ ಯಾರಿದ್ದಾರೆ? ನಾಗಾನಂದ ಹಾಗು ವತ್ಸಲೆಯರು, ಈ ಹೊಣೆಯನ್ನು ನನ್ನ ಮೇಲೆ ಹೊರಿಸಿದ್ದಾರೆ" ಎಂದನು.

"ಹೊತ್ತ ಹೊಣೆಯನ್ನು ಹೊರಬೇಕು. ವಿಶ್ವಾಸಘಾತದಂಥ ಪಾಪ ಇನ್ನೊಂದಿಲ್ಲ. ನೀವು ಇಲ್ಲಿಂದ ಹೊರಡಬಾರದು. ನಾನೂ ನಿಮ್ಮ ಸಂಗಡ ಇರುವೆ. ನಾವಿಬ್ಬರೂ ಈಗ ಲಗ್ನವಾಗಿದ್ದೇವೆ. ವಿವಾಹವು ಮಂಗಲ ದಾಯಕವಾಗಿದೆ. ಇನ್ನು ಜೀವಿಸಿದರೇನು, ಸತ್ತರೇನು, ಎಲ್ಲವೂ

ಮಂಗಲವೇ. ಆವ್ವಾ ನಾವು ಇಲ್ಲಿರುವೆವು. ಸಾವಿರ ಜನರಿಗಾದದ್ದು ನಮಗೂ ಆದೀತು." ಎಂದಳು ಕೃಷ್ಣೆ.

"ಸಾವಿರ ಜನರದೇನಾಗುವದು ? ಆ ಸಾವಿರ ಜನರೇ ಜನಮೇಜಯನ ರಾಜ್ಯ ಬಿಟ್ಟು ಹೋಗುತ್ತಾರೆ. ನಾವಾಗಿ ವಿಪತ್ತಿನಲ್ಲಿ ಏಕೆ ಇರಬೇಕು ? ಆಜ್ಜಿ, ಸುಶ್ರುತೆಯನ್ನೂ ಕರೆದೊಯ್ಯುವಾ" ಎಂದಳು ತಾಯಿ.

'ಅವರೇಕೆ ಬಂದಾರು ? ನಾಗಾನಂದ ವತ್ಸಲೆಯರು ಇಲ್ಲಿಗೆ ಬಂದರೆ? ನಾವೂ ಇಲ್ಲಿಯೇ ಇರೋಣ. ಕೃಷ್ಣೆಯು ನನಗೆ ಧೈರ್ಯಕೊಡುವಳು. ಚಿಂಕಿಯಲ್ಲಿ ಹೋಗಲು, ಮಹಾಪೂರದಲ್ಲಿ ಜಿಗಿಯಲು ಆವಳು ಧೈರ್ಯವನ್ನೀಯುವಳು.' ಎಂದನು ಕಾರ್ತಿಕ.

'ತಾಯಿ, ನಾವು ಹೋಗುತ್ತೇವೆ' ಎಂದಳು ಕೃಷ್ಣೆ

'ಸುಖಿಗಳಾಗಿರಿ' ಎಂದಳು ತಾಯಿ

ಕೃಷ್ಣಿ ಹಾಗೂ ಕಾರ್ತಿಕರು ಹೊಲಕ್ಕೆ ಹೊರಟರು.

'ನೀವು ಈ ಹೊಲದಲ್ಲೇಕೆ ಇರುವಿರಿ ? ನಿಮ್ಮ ಅಪ್ಪನು ನಿಮ್ಮನ್ನು ಮನೆಯಿಂದ ಹೊರಗೆ ಹಾಕಿದ್ದಾನೇ ? ನೀವು ಒಬ್ಬರೇ ದೂರ ಇರುವದನ್ನು ನೋಡಿ, ನಿಮ್ಮ ತಾಯಿಗೆ ದುಃಖವಾಗುವದಿಲ್ಲವೇ ?' ಎಂದು ಕೃಷ್ಣೆ ಪ್ರಶ್ನಿಸಿದಳು.

'ತಾಯಿಗೆ ಕೆಟ್ಟೆನಿಸುವದು, ಆದರೆ ಮಾಡುವಳೇನು ? ನಾನು ನಾಗರಿಗೆ ಸಹಾನುಭೂತಿಯನ್ನು ತೋರಿಸುವದು ನಮ್ಮ ತಂದೆಗೆ ಸೇರುವದಿಲ್ಲ. ಮನೆಯಲ್ಲಿಯ ಈ ತೊಂದರೆಯನ್ನು ಸಹಿಸುವದಕ್ಕಿಂತ ದೂರವಿರುವದೇ ನನಗೆ ಲೇಸೆನಿಸಿತು. ನಿನಗೊಂದು ಮಾತನ್ನು ಹೇಳಲಾ ? ವತ್ಸಲೆಯನ್ನು ನಾನು ಬಹಳ ಪ್ರೀತಿಸುತ್ತಿದ್ದೆ. ಆವಳು ಆಶ್ರಮ ಬಿಟ್ಟು ಮನೆಗೆ ಬಂದದ್ದು ಕೇಳಿ, ನಾನೂ ಮನೆಗೆ ಬಂದೆ. ನಾನು ಆವಳ ಹತ್ತರ ಹೋಗುತ್ತಿದ್ದೆ. ಕೆಲವು ದಿನಗಳಮೇಲೆ ನಾಗಾನಂದನು ಬಂದ. ಆವನು ಆವಳ ಸಲುವಾಗಿ ಮಹಾಪೂರದಲ್ಲಿ ಹಾರಿದ. ಹುಲಿಯನ್ನು ಕೊಂದ. ವತ್ಸಲೆಗೆ ಆವನ ಹುಚ್ಚುಹಿಡಿಯಿತು. ನನಗೆ ದುಃಖವಾಯಿತು. ವತ್ಸಲೆಯ ಕೃತಿಯೆಲ್ಲ ನನಗೆ ಸೇರಹತ್ತಿತು. ನನಗೆ ಆವಳ ಸೇವೆಯನ್ನು ಮಾಡಬೇಕೆನಿಸಿತು.

ನನಗೆ ವತ್ಸಲೆಯ ಹುಚ್ಚು ಹಿಡಿದಿತ್ತು. ನಾನು ಸ್ವತಃ ನೂತ ನೂಲಿನ ವಸ್ತ್ರವನ್ನು ಅವಳಿಗೆ ಕೊಟ್ಟೆ. ಅವಳು ಅದನ್ನು ಸ್ವೀಕರಿಸದಿರಲಿಲ್ಲ. ಅವಳು ನನಗೆ ಸಹಾನುಭೂತಿಯನ್ನು ತೋರಿಸಿದಳು. ಆದರೆ ಪ್ರೇಮವು ಬೇರೆಯಾಗಿರುತ್ತದೆ. ಅವಳ ಹೂವಿನ ಬುಟ್ಟಿಯನ್ನು ನಾನು ಪ್ರೇಮದಿಂದ ಕೈಯ್ಯಲ್ಲಿ ತಕ್ಕೊಳ್ಳುತ್ತಿದ್ದೆ. ಆದರೆ ಈಗ ಹೊಸ ಮಂತ್ರಜ್ಞಳಾದ ನೀನು ಬಂದಿರುವಿ. ಜೀವನದಲ್ಲಿಯ ಒಂದು ಅಂಕು ಮುಗಿಯಿತು. ಎರಡನೆಯ ಅಂಕು ಪ್ರಾರಂಭವಾಗಿದೆ. ಇಷ್ಟು ವರ್ಷಗಳಲ್ಲಿ ನನಗೆ ನಿನ್ನ ನೆನಪಾಗಲಿಲ್ಲ. ಆದರೆ ನನ್ನ ಜೀವನದಲ್ಲೆಲ್ಲಿಯೋ ನೀನು ಅಡಗಿದ್ದೆ. ಅಡಗಿದ್ದ ನೀನು ಎದುರಿಗೆ ಬಂದೊಡನೆ ನನ್ನವಳೆಂದು ಅನಿಸತೊಡಗಿದೆ. ನಾನರಿಯದಂತೆ ನನ್ನ ಹೃದಯದಲ್ಲಿ ಮೆಲ್ಲಮೆಲ್ಲನೆ ನೀನು ಬೆಳೆಯುತ್ತಲಿದ್ದೆ. ನೀನು ಇಲ್ಲಿ ಹೂಗಳನ್ನಿಡುತ್ತಿದ್ದೆ. ನನಗಾಗಿ ಹೂಗಳನ್ನಿಟ್ಟವರಾರು ? ಎಂದು ನನಗೆ ಅನಿಸುತ್ತಿತ್ತು. ನಾನು ಒಮ್ಮೆ ವತ್ಸಲೆಗೆಂದೆ " ನಾನು ನಿನ್ನ ಸಲುವಾಗಿ ಅಳುತ್ತೇನೆ, ಆದರೆ ನನ್ನ ಸಲುವಾಗಿ ಅಳುವವರು ಯಾರು ? ನೀನು ಅತ್ತ ಅಳುತ್ತಲಿದ್ದೆ. ನನ್ನನ್ನು ನೆನಿಸುತ್ತಲಿದ್ದೆ. ಆದರೆ ನಾನು ವತ್ಸಲೆಗಾಗಿ ತಪವನ್ನು ಮಾಡುತ್ತಿದ್ದೆ. ನೀನು ನನಗಾಗಿ ತಪವನ್ನು ಮಾಡುತ್ತಿದ್ದೆ. ಇಬ್ಬರ ತಪ ಶ್ಚರ್ಯವು ಫಲಿಸಿತು. ಜೀವನವನ್ನು ಪೂರ್ಣಗೊಳಿಸುವವಳೊಬ್ಬಳು ಸಿಕ್ಕಳು.

ಕೃಷ್ಣೆ, ಅನೇಕ ಸಾರೆ, ನಮ್ಮವರೆಂದೆನಿಸುವವರಲ್ಲಿ ನಮ್ಮರಿರುವದಿಲ್ಲ. ನಮ್ಮವರು ದೂರವಿರುತ್ತಾರೆ. ಅವರ ರೂಪವನ್ನೆ ನಾವು ಸಮೀಪದವರಲ್ಲಿ ನೋಡಲು ಬಯಸುತ್ತೇವೆ. ಮೋಸ ಹೋಗುತ್ತೇವೆ. ನಮ್ಮವರು ದೃಷ್ಟಿಗೆ ಬಿದ್ದೊಡನೆ, ನಮ್ಮ ಮೋಸವು ನಮಗೆ ತಿಳಿಯುತ್ತದೆ. ನಿನ್ನ ರೂಪವನ್ನೇ ನಾನು ವತ್ಸಲೆಯಲ್ಲಿ ನೋಡುತ್ತಿರಬೇಕು. ಅದು ಆಗ ನನಗೆ ತಿಳಿಯ ಲಿಲ್ಲ. ಮಹಾಪೂರದಲ್ಲಿ ಮುಳುಗುತ್ತಲಿರುವ ವತ್ಸಲೆಯು ಕರೆ ದಾಗ ನನಗೆ ಹೋಗುವ ಧೈರ್ಯವಾಗಲಿಲ್ಲ. ಆದರೆ ನೀನು ಕರೆದಲ್ಲಿ ನಾನು ಬರುವೆ. ಏಕೆಂದರೆ ನೀನು ಪೂರ್ಣವಾಗಿ ನನ್ನವಳೆನಿಸುವಿ. ನಿನ್ನೊಡನೆ ನಾನು ಬರದಿದ್ದರೆ ಸತ್ತೇನು. ನಿನ್ನೊಡನೆ ಅಡವಿಗೆ ಬಂದೆ. ಎಲ್ಲಿ ಬೇಕಾದಲ್ಲಿ ಬರುವೆ. ಈ ಬಟ್ಟು ಸುಟ್ಟಿತೆಂದು ಕುರುಕರು ಮಾಡುವ

ನಾನು ನಿನ್ನೊಡನೆ ಅಗ್ನಿಯಲ್ಲಿ ಪ್ರವೇಶಿಸುವೆ. ಆ ಅಗ್ನಿಯು ನನಗೆ ಶೀತಲ ವಾದೀತು. ನಿನ್ನನ್ನು ನೋಡಿದೊಡನೆಯೇ ಎಲ್ಲವೂ ಹೊಸದೆನಿಸಹತ್ತಿದೆ. ಮುದುಡಿದ ನನ್ನ ಮನಸ್ಸಿನಲ್ಲಿ ಅಪಾರ ಸ್ಫೂರ್ತಿಯುಂಟಾಗಿದೆ. ಸಾಯ ಬೇಕೆನ್ನುವ ನನಗೆ ಬದುಕ ಬೇಕೆನಿಸಿದೆ. ಜೀವನಕ್ಕೆ ಹೊಸ ಅರ್ಥ, ಹೊಸ ಬಣ್ಣ, ಸೌಂದರ್ಯ, ಸವಿಗಳು ಉಂಟಾಗಿವೆ. ವತ್ಸಲೆಯನ್ನು ನೋಡಿ ನನಗೆ ಆನಂದವಾಗುತ್ತಿತ್ತು. ಆದರೆ ಅದು ಕ್ಷಣಿಕವು. ನಿನ್ನನ್ನು ನೋಡಿ ಆಗುವ ಆನಂದವು, ವತ್ಸಲೆಯನ್ನು ನೋಡಿ ಆಗುವ ಆನಂದಕ್ಕಿಂತ ಸಾವಿರ ಪಟ್ಟು ಮೇಲು. ಕೃಷ್ಣೇ ಇಷ್ಟು ದಿವಸಗಳ ವರೆಗೆ ನನ್ನನ್ನು ಜೀವಂತವಿಟ್ಟು, ಸತ್ತವ ನಂತೇಕೆ ಮಾಡಿದೆ. ನೀನು ಬೇಗನೆ ಏಕೆ ಬರಲಿಲ್ಲ, ಹೇಳು." ಎಂದು ಅವಳನ್ನು ಗಟ್ಟಿಯಾಗಿ ಹಿಡಿದು ಅಂದನು.

"ಏನಿದು ? ನನ್ನನ್ನು ಹೊಡೆಯುವಿರೋ ?"

"ನೀನು ನನ್ನನ್ನು ಆಳಲು ಹಚ್ಚಿದ್ದೇಕೆ ? ಹೇಳು"

"ನಿಮಗೆ ನಿಜವಾದ ಹಸಿವೆಯು ಆಗಲೆಂದು. ನಾನು ಆಗಲೇ ಬಂದಿದ್ದರೆ, ನನ್ನನ್ನು ಓಡಿಸಿ ಬಿಡುತ್ತಿದ್ದಿರಿ. ನನ್ನ ಗುರುತನ್ನು ಸಹ ಹಿಡಿಯು ತ್ತಿದ್ದಿಲ್ಲ. ನಿಮ್ಮ ಜೀವನವು ಬರಿದಾದ ಸಮಯಕ್ಕೆ ನಾನು ಬಂದಿರುವೆ. ತಾನು ತುಂಬಿ ತುಳುಕಿದರೆ, ಎರಡನೆಯವರಿಗೆ ಕೊಡಲು ಬರುತ್ತದೆ. ನನ್ನ ಜೀವದಲ್ಲಿ, ಪ್ರೇಮಪ್ರವಾಹವು ಎರಡೂ ದಂಡೆಯನ್ನು ತುಂಬಿ ಹೊರಸೂಸುವ ಸಮಯಲ್ಲಿ ನಾನು ಬಂದೆ. ನಿಮ್ಮ ಜೀವನದಲ್ಲಿ ಅದು ಹಬ್ಬಿ,ನಿಮ್ಮ ಜೀವನವು ಹಸರು ಹಸರಾಗಿ ಕಂಡೀತೆಂದು ನನಗೆ ಅನಿಸಿದಾಗ ನಾನು ಬಂದೆ" ಎಂದಳು.

ನಾಲ್ಕು ದಿನಗಳುರುಳಿದವು. ಕೃಷ್ಣೀ ಹಾಗೂ ಕಾರ್ತೀಕರು ಹೊರಗೆ ಕುಳಿತಿದ್ದರು. ಇಷ್ಟರಲ್ಲಿಯೇ ಕೃಷ್ಣಿಯ ತಾಯಿಯು ಅಲ್ಲಿಗೆ ಬಂದಳು. ರಾತ್ರಿ ಯಲ್ಲಿ ತಾಯಿಯು ಏಕೆ ಬಂದಿದ್ದಾಳು? ಅವಳು ಗಾಬರಿಯಾಗಿದ್ದಳು. ಹುಚ್ಚ ಳಾಗಿದ್ದಳು 'ಕೃಷ್ಣೆ ನನ್ನೊಡನೆ ಹೊರಡು. ನೀವು ಹೊರಡಿರಿ. ಜನಮೇಜಯನ ಗುಪ್ತಚಾರರು ಬಂದಿದ್ದಾರೆ. ಗಾಳಿಗೆ ರಾಜದೂತರು ಬರುವರೆಂದು ತಿಳಿ ಯಿತು. ಎಲ್ಲ ನಾಗರು ಇಂದು ಇಲ್ಲಿಂದ ಹೋಗುತ್ತಾರೆ. ಇಲ್ಲಿರುವದು ಕಷ್ಟ. ಹೆಡಮುರಿಗೆ ಕಟ್ಟಿ ಒಯ್ಯುವರು. ಅಗ್ನಿಯಲ್ಲಿ ಒಗೆಯುವರು. ನಡೆ

ಯಿರಿ. ಎದ್ದೇಳಿರಿ. ವಿಚಾರಮಾಡುತ್ತ ಕೂಡುವ ವೇಳೆ ಇದಲ್ಲ. ಏಳು, ಮಗಳೇ. ನೀವೂ ಏಳಿರಿ.' ಎಂದಳು ತಾಯಿ.

'ಅವ್ವಾ, ನಾನು ಹೇಗೆ ಬರಲಿ ? ಇವರಾದರೂ ಹೇಗೆ ಬರುವರು ? ವತ್ಸಲಾ ಮತ್ತು ನಾಗಾನಂದರಿಗೆ ವಿಶ್ವಾಸಘಾತವನ್ನು ಮಾಡುವದು ಹೇಗೆ ? ನೀನು ಹೋಗು. ಏನಾಗುವದಿದೆಯೋ ಅದು ಆದೀತು.' ಎಂದಳು ಕೃಷ್ಣೆ

'ನಾನು ಅಜ್ಜಿ ಸುಶ್ಮಿತೆಯ ಅಪ್ಪಣೆಯನ್ನು ದೊರಕಿಸುತ್ತೇನೆ' ಎಂದಳು ತಾಯಿ

'ಅವರು ಹೋಗು ಎಂದು ಹೇಳಬಹುದು. ಅದು ಅವರ ದೊಡ್ಡಸ್ತನ. ಆದರೆ ನಾವು ಬಿಟ್ಟು ಹೋಗುವದು ಹೇಗೆ?' ಎಂದಳು ಕೃಷ್ಣೆ

'ಮಗಳೇ ಹಟ ಮಾಡಬೇಡ. ಈಗ ಸಮಯವಿಲ್ಲ.'

'ಬೇಡವ್ವಾ. ಈಗ ನನ್ನ ಜೀವನ ಪ್ರವಾಹವು ಬೇರೆಯಾಗಿರಲಾರದು. ನಾನೀಗ ಒಬ್ಬಳೇಯಿಲ್ಲ.' ಎಂದಳು

'ನಾಳಿಗೆ ರಾಜನ ಅಧಿಕಾರಿಗಳು ಬರುತ್ತಾರೆ. ಮತ್ತು ಅವರು ಕೋಪದಿಂದ ವಿಚಾರಿಸಿದರೆ' ಕಾರ್ತೀಕನಿಗೆ 'ಹೋಗು' ಅನ್ನ ಬಹುದು. ಯಾಕಂದರೆ ಅವನು ಆರ್ಯ. ಮೇಲಾಗಿ ಅವನ ತಂದೆಯು ಪ್ರಯತ್ನ ಮಾಡಿ ಅವನನ್ನು ಉಳಿಸಿ ಕೊಳ್ಳಬಹುದು. ಆದರೆ ನಿನ್ನ ಗತಿಯೇನು ? ಯಮದೂತರ ಕೈಯಲ್ಲಿ ನೀನು ಬೀಳುವೆ. ನಿನಗೆ ನಿನ್ನ ಜೀವವು ಬೇಡಾಗಿವೆಯೇ? ಅವ್ವನಮೊರೆ ಕೇಳು' ಎಂದಳು ತಾಯಿ

'ಅವ್ವಾ, ನೀನು ಇವರನ್ನು ಅವಮಾನಗೊಳಿಸಬೇಡ. ನನ್ನನ್ನು ರಾಜ್ಯಾಧಿಕಾರಿಗಳ ಕೈಗೆ ಒಪ್ಪಿಸುವಷ್ಟು ಇವರು ಅಂಜುಬುರುಕರೇ ? ಇವರು ಅಷ್ಟು ಹೇಡಿಗಳೇ ? ಅವ್ವಾ ನೀನು ನಿಶ್ಚಿಂತೆಯಿಂದಿರು. ಉಳಿದರೆ ಇಬ್ಬರೂ ಉಳಿಯುವೆವು. ಇಲ್ಲವೇ ಅಳಿಯುವೆವು. ಅವ್ವಾ ನೀನು ಹೋಗು' ಎಂದಳು.

"ತಾಯಿ, ನೀವು ಚಿಂತೆ ಮಾಡಬೇಡಿರಿ. ನಾನೀಗ ಮೊದಲಿನ ಅಂಜುಬುರುಕ ಕಾರ್ತೀಕನಲ್ಲ. ಕಾರ್ತಿಕ ಈಗ ಸಿಂಹದಂತಿದ್ದಾನೆ. ನಾನು

ನನ್ನ ಹೆಸರನ್ನು ಬೆಳಗಿಸುವೆ. ಕೈ ಹಿಡಿದವಳನ್ನು ಎಂದೂ ಬಿಡುವದಿಲ್ಲ. ” ಎಂದನು ಕಾರ್ತೀಕ

“ ಹಾಗಾದರೆ ನಾನು ಹೋಗಲಾ ” ಎಂದಳು ತಾಯಿ

“ ಹೋಗು ” ಎಂದು ಇಬ್ಬರೂ ಹೇಳಿದರು

ತಾಯಿಯು ಹೋದಳು. ಊರೊಳಗಿನ ನಾಗರೆಲ್ಲ ರಾತ್ರಿಯಲ್ಲಿಯೇ ಹೋದರು. ರಾತ್ರಿಯೆಲ್ಲ ಊರಲ್ಲಿ ನಿದ್ರೆಯಿಲ್ಲ. ಕಾರ್ತೀಕನ ತಂದೆ ತಾಯಿಗಳು ಅಸ್ವಸ್ಥರಾಗಿದ್ದರು. ನಾಳಿಗೆ ಏನಾಗುವದೋ ಎಂದು ಎಲ್ಲರೂ ಚಿಂತಿಸುತ್ತಿದ್ದರು.

ಮಾರನೆ ದಿನ ರಾಜದೂತರು ಬಂದರು. ಅವರ ಸಂಗಡ ಸೈನಿಕರೂ ಇದ್ದರು. ಮನೆಯಲ್ಲಿ ಯಾರೂ ಉಳಿಯಕೂಡದು ಯಾರಾದರು ಉಳಿದರೆ. ಅವರ ಶಿರಚ್ಛೇದ ಮಾಡಲಾಗುವದು. ಎಲ್ಲ ಸ್ತ್ರೀಪುರುಷರು ಸಭೆಗೆ ಬರಬೇಕೆಂದು ಡಂಗುರ ಸಾರಿಸಿದರು. ಸಭೆ ನೆರೆಯಿತು. ರಾಜದೂತರು ಉಚ್ಚಾಸದನದಲ್ಲಿ ಕುಳಿತಿದ್ದರು.

ಮುಖ್ಯ ರಾಜದೂತನು ಎದ್ದು ನಿಂತು. ‘ ಸಭಿಕರೆ ನಿಮ್ಮೂರಲ್ಲಿಯ ’ ನಾಗರನ್ನೆಲ್ಲ ಬಂಧಿಸುವದಕ್ಕಾಗಿ ಸೈನಿಕರರೊಡನೆ ನಾನಿಲ್ಲಿ ಬಂದಿದ್ದೇನೆ. ಜನಮೇಜಯನ ಆಜ್ಞೆಯು ನಿಮ್ಮೆಲ್ಲರಿಗೆ ಗೊತ್ತಿದೆ. ನಿನ್ನೆಯೇ ನಿಮ್ಮೂರಲ್ಲಿಯ ನಾಗರೆಲ್ಲರು ಹೊರಟು ಹೋಗಿದ್ದಾರೆ. ಅವರನ್ನು ಆರ್ಯರು ತಡೆಯಬೇಕಾಗಿತ್ತು. ಒಬ್ಬ ನಾಗನೂ ಹೊರಗೆ ಹೋಗಕೂಡದೆಂದು ರಾಜಾಜ್ಞೆಯಿದೆ. ಈ ದೃಷ್ಟಿಯಿಂದ ಈ ಊರೇ ಅಪರಾಧಿ. ಎಲ್ಲರನ್ನು ಬಂಧಿಸಿ ಒಯ್ಯಬೇಕು. ಆದರೆ ಈ ಮಟ್ಟಕ್ಕೆ ನಾನು ಹೋಗುವದಿಲ್ಲ. ಊರಲ್ಲಿ ಯಾರಾದರು ನಾಗರಿದ್ದರೆ, ಅವರು ತಾವಾಗಿಯೇ ಬಂದು ನಮ್ಮ ಸ್ವಾಧೀನರಾಗಬೇಕು. ಎಲ್ಲಿಯಾದರೂ ಅವರು ಇದ್ದರೆ, ಗೊತ್ತಿದ್ದವರು ಅವರನ್ನು ಹಿಡಿಯಲು ಸಹಾಯ ಮಾಡಬೇಕು. ವೇಳೆಯಿಲ್ಲ. ಕೆಲಸವು ಬೇಗನೆ ಮುಗಿಯಬೇಕಾಗಿದೆ’ ಎಂದನು. ಸಭೆಯು ಸ್ತಬ್ಧವಿದ್ದಿತು. ಯಾರೂ ಮಾತನಾಡಲಿಲ್ಲ.

ರಾಜದೂತನು ಸಂತಾಪಗೊಂಡನು. 'ಏನು ಇಲ್ಲಿ ಯಾರೂ ನಾಗರಿಲ್ಲವೇ ? ನಿರ್ನಾಗವಾಗಿದೆಯೋ ಈ ಊರು ?' ಎಂದನು. ಆದರೂ ಯಾರೂ ಮಾತನಾಡಲಿಲ್ಲ.

ರಾಜದೂತನಿಗೆ ಸಿಟ್ಟು ತಡೆಯದಾಯಿತು. ಆವನು ಈ ಊರಿಗೇ ಬೆಂಕಿ ಹಚ್ಚುವೆ. ಉರಿಯುವ ಪಂಜುಗಳನ್ನು ತನ್ನಿರಿ. ನಾಗರಿಗೆ ಆಶ್ರಯವನ್ನು ಕೊಡುವ ಈ ಊರನ್ನು ಭಸ್ಮ ಮಾಡೋಣ. ನಿಮ್ಮ ಊರು ಸುರಕ್ಷಿತವಾಗಿ ಇರಬೇಕಾಗಿದ್ದರೆ, ಇದ್ದ ನಾಗರನ್ನೆಲ್ಲ ನಮ್ಮ ವಶಕ್ಕೆ ಕೊಡಿರಿ. ಜನಮೇಜಯನು ಅವರ ಹೋಳಿಯನ್ನು ಮಾಡುವನು. ಅವನು ಸರ್ಪಪೂಜಕರ ಹವನವನ್ನು ಪ್ರಾರಂಭಿಸಿದ್ದಾನೆ. ನಿಮ್ಮ ಊರು ಹವನವಾಗ ಬಾರದೆಂದಿದ್ದರೆ, ಅವನ ಹವನಕ್ಕಾಗಿ ಬಲಿಯನ್ನು ಕೊಡಿರಿ' ಎಂದನು.

ತೇಜಸ್ವಿಯಾದ ಕೃಷ್ಣೆಯು ರಾಜದೂತನ ಕಡೆಗೆ ಹೊರಟಳು. ಎಲ್ಲರೂ ಆಕೆಯ ಕಡೆಗೆನೋಡ ಹತ್ತಿದರು. ಆಕೆಯು ನಿರ್ಭಯಳಾಗಿದ್ದಳು. ಆಕೆಯು ರಾಜದೂತನ ಎದುರು ಕ್ಷಣ ಹೊತ್ತು ನಿಂತು, ಮಾತನಾಡಲು ಪ್ರಾರಂಭಿಸಿದಳು.

ರಾಜನ ಸಿಟ್ಟನ್ನು ಇಳಿಸುವದಕ್ಕಾಗಿ ಬಲಿ ಬೇಕಾಗಿದ್ದರೆ ನಾನು ಬರುವೆ. ನಾನು ನಾಗಕನ್ಯೆ ಇರುವೆ. ಆದರೆ ನಾನು ಆರ್ಯನನ್ನು ಮದುವೆಯಾಗಿರುವೆ. ಪತ್ನಿಯು ಪತಿಯಲ್ಲಿ ಕೂಡಿ ಹೋಗುತ್ತಾಳೆ. ನನಗೆ ನಿಜವಾಗಿಯೂ ಸ್ವತಂತ್ರ ಅಸ್ತಿತ್ವವಿಲ್ಲ. ಈಗ ನಾನು ಆರ್ಯಳೋ ನಾಗಳೋ? ರಾಜದೂತನಿಗೆ ಹೇಳಲು ಬರುವದೇ ? ಪತಿಯು ಪತ್ನಿಯವನಾಗುವನು. ಪತ್ನಿಯು ಪತಿಯವಳಾಗುವಳು. ಈ ದೇಶದಲ್ಲಿ ಈಗ ನಿಜವಾದ ಆರ್ಯರಾರು ? ನಾಗರಾರು ? ನೂರಾರು ನಾಗಕನ್ಯೆಯರು ಆರ್ಯರನ್ನು ಲಗ್ನವಾಗಿದ್ದಾರೆ. ನೂರಾರು ಆರ್ಯಕನ್ಯೆಯರು ನಾಗರನ್ನು ಮದುವೆಯಾಗಿದ್ದಾರೆ. ಈ ಊರಲ್ಲಿಯ ಆರ್ಯಕನ್ಯೆಯಾದ ವತ್ಸಲೆಯು ನಾಗನನ್ನು ಮದುವೆಯಾಗಿದ್ದಾಳೆ. ನಾನು ನಾಗಕನ್ಯೆ, ಆರ್ಯನನ್ನು ಮದುವೆಯಾಗಿದ್ದೇನೆ. ನಾಗ ಹಾಗೂ ಆರ್ಯರಲ್ಲಿ ಏನು ಭೇದವಿದೆ ? ಆರ್ಯಮಾತೆಯರು ಮಕ್ಕಳನ್ನು ಬೆಳೆಸುವರು. ನಾಗರು ಹೊರಗೆ ಒಗೆಯುವರೋ ?

58

ಆರ್ಯರು ದೊಡ್ಡವರು, ನಾಗರು ಕೀಳರು, ಎಂದು ಎಲ್ಲಿ ಇದೆ? ಆರ್ಯ ಹಾಗು ನಾಗರಿಬ್ಬರು ಮಾನವರೆ.

ಇಡಿ ಊರುಸುಡುವದಕ್ಕಿಂತ ನಾನೊಬ್ಬಳೇ ಸಾಯುವೆ. ಸುಡಲಿ, ಜನಮೇಜಯನ ಅಗ್ನಿಕುಂಡವು. ಆ ಅಗ್ನಿಕುಂಡವು ಸರ್ವ ಆರ್ಯರನ್ನು ಒಂದು ದಿನ ಭಸ್ಮ ಮಾಡುವದು. ಈ ಅಗ್ನಿಕುಂಡವನ್ನು ಆರ್ಯರು ಆರಿಸಬೇಕು. ನಾಗರ ಹೋಳಿಯನ್ನು ಮಾಡಿದರೆ, ನಿಮ್ಮ ಹೋಳಿಯೂ ಆಗುವದೆಂಬದನ್ನು ಲಕ್ಷ್ಯದಲ್ಲಿಡಿರಿ. ಯಾವುದನ್ನು ಬಿತ್ತುವರೋ ಅದನ್ನೇ ಬೆಳೆಯಬೇಕು. ನಾಗರು ನಿರ್ಭಯರಿರುತ್ತಾರೆ. ನನಗೆ ಹೊಡೆಯುವವರ ಭೀತಿಯಿಲ್ಲ. ಎಲ್ಲಿದೆ ನಿಮ್ಮ ಆ ಪಂಜು. ತನ್ನಿರಿ ಇತ್ತ. ಆದರಲ್ಲಿ ನನ್ನ ಕೈಯ್ಯನ್ನಿಡುವೆ. ನೋಡಿರಿ, ಹೂವಿನಂತಿರುವ ಈ ಕೈಗಳು ಅಗ್ನಿಯನ್ನು ಹಿಡಿಯಲು ಸಮರ್ಥವಿವೆ. ಬೆಂಕಿಯನ್ನು ಹೂವೆಂದು ತಿಳಿಯುವೆ. ಯಾರನ್ನು ಬೆದರಿಸುವಿರಿ ಮಂಗಗಳೇ? ನಿಮಗೆ ವಿವೇಕ ಹಾಗು ಮನುಷ್ಯತ್ವವಿಲ್ಲವೇ? ನೋಡಿರಿ, ನೂರಾರು ಜನ ಅಕ್ಕ ತಂಗಿಯವರು ಇಲ್ಲಿ ಕುಳಿತಿದ್ದಾರೆ. ಇವರ ಶಾಪವು ನಿಮ್ಮನ್ನು ಸುಟ್ಟು ಬಿಟ್ಟೀತು. ನೀವು ನಾಗರನ್ನು ಸುಡುವದಿಲ್ಲ. ನೀವು ನಿಮ್ಮ ಭಾವೀ ಕಲ್ಯಾಣವನ್ನು ಸುಡುತ್ತಿರುವಿರಿ. ಹಿಡಿಯಿರಿ ನನ್ನನ್ನು. ಬಂಧಿಸಿರಿ. ಮೋರೆಯನ್ನು ಕೆಳಗೆ ಹಾಕಬೇಡಿರಿ. ಆ ಹೋಳಿಯಲ್ಲಿ ನನ್ನನ್ನು ಒಯ್ದು ಒಗೆಯಿರಿ? ಎಂದಳು.

ಸಭೆಯು ಪ್ರಕ್ಷುಬ್ಧವಾಯಿತು. ಸುಶ್ರುತೆಯು ಅಲ್ಲಿಗೆ ಬಂದಳು. ಆ ಮುದುಕಿಯು ಎದ್ದುನಿಂತು, "ನನ್ನನ್ನು ಒಯ್ಯಿರಿ. ನನ್ನ ಹುಡುಗನು ಎಷ್ಟೋ ವರ್ಷ ಮುಂಚೆ ನಾಗರ ವಸತಿಗೆ ಆರ್ಯರು ಬೆಂಕಿ ಹಚ್ಚಿದಾಗ, ಬೆಂಕಿಯಲ್ಲಿ ಹೊಕ್ಕು ನಾಗರನ್ನುಳಿಸಿರುವನು. ಅವನ ತಾಯಿಯು ನಾನು. ನನಗೆ ಬೆಂಕಿಯಲ್ಲಿ ಹೋಗಗೊಡಿರಿ. ನಾಗರು ಬೆಂಕಿಯಲ್ಲಿ ಹೋಗುತ್ತಿದ್ದಾರೆ. ಆರ್ಯರು ದೂರ ಹೇಗೆ ಉಳಿದಾರು? ನಾಗಮಾತೆಯರು ಸುಡ್ತುತ್ತಿರುವಾಗ, ಆರ್ಯಮಾತೆಯರು ಸುಮ್ಮನೆ ಉಳಿಯುವರೇ? ನಾಗಪತ್ನಿಯರು ಪತಿಗಳೊಡನೆ ಎಳೆಯಿಲ್ಪಡುವಾಗ ಆರ್ಯಪತ್ನಿಯರು ಪತಿಯ ಹತ್ತಿರ ಇರುವದು ಹೇಗೆ? ಸ್ತ್ರೀಯರು ಸ್ತ್ರೀಧರ್ಮವನ್ನರಿಯಬೇಕು.

ಮಾತೃಗಳು ಮಾತೃಧರ್ಮವನ್ನರಿಯಬೇಕು. ನಿನ್ನೆ ಮದುವೆಯಾದ ಈ ಕೃಷ್ಣೆಯು ಹೊರಟಳು. ಅಗ್ನಿಯನ್ನು ಪ್ರವೇಶಿಸಲು ಕೋಮಲೆಯಾದ ಈ ಬಾಲೆಯು ಹೊರಟಿದ್ದಾಳೆ. ನಗುತ್ತ ಬೆಂಕಿಯನ್ನು ಹಿಡಿಯುತ್ತಿದ್ದಾಳೆ. ಯಾರಿಗೆ ಇದನ್ನು ನೋಡಿ ಸಹನವಾಗುವದು? ಇಲ್ಲಿ ಯಾರಿಗಾದರೂ ನೋಡಲು ಆಗುತ್ತಿದೆಯೇ? ನಡೆಯಿರಿ ಎಲ್ಲರೂ ಹೋಗೋಣ. ಜನಮೇಜಯನೆದುರಿಗೆ ನಿಲ್ಲೋಣ. ಎಲ್ಲರನ್ನೂ ಸುಡು ಎನ್ನೋಣ. ಎಲ್ಲ ಅಕ್ಕತಂಗಿಯರನ್ನು ಸುಟ್ಟು, ನಿನ್ನ ಸಿಟ್ಟನ್ನು ಶಾಂತ ಮಾಡಿಕೊ, ಎಂದು ಹೇಳೋಣ. ಏಳಿರಿ. ಬನ್ನಿರಿ ಇತ್ತ ಕಡೆಗೆ. ರಾಜದೂತರೆ ನಮ್ಮನ್ನು ಹಿಡಿಯಿರಿ. ಒಯ್ಯಿರಿ ನನ್ನ ದೇಹವನ್ನು ಮೊದಲು ಯಜ್ಞಕುಂಡದಲ್ಲಿ ಒಗೆಯಿರಿ." ಎಂದಳು

ಕಾರ್ತಿಕನು ಒಮ್ಮೆಲೆ ಧಾವಿಸಿದನು. ಅವನೆಂದನು ಊರಲ್ಲಿಯ ಹೆಣ್ಣುಮಕ್ಕಳೆಲ್ಲ ಹೊರಟಿದ್ದಾರೆ. ಗಂಡಸರು ಏಕೆ ಹಿಂದೆ? ನಡೆಯಿರಿ ನಾವೂ ಹೋಗೋಣ. ಯಜ್ಞವನ್ನು ಪೂರ್ಣಗೊಳಿಸೋಣ. ಸ್ತ್ರೀಯರಿಗಿಂತಲೂ ಮೊದಲು ಪುರುಷರು ಹೋಗೋಣ. ಸ್ತ್ರೀಯರು ಬೆಂಕಿಗೆ ಅಂಜುವದಿಲ್ಲ. ಅವರು ನಗುತ್ತ ಸತಿಹೋಗುತ್ತಾರೆ. ಈಗ ಪುರುಷರು ತಮ್ಮ ತೇಜವನ್ನು ತೋರಿಸಬೇಕಾಗಿದೆ. ಏಳಲಿ ಊರಿಗೆ ಊರು."

ಇಡಿ ಸಭೆಯೇ ಎದ್ದಿತು. ರಾಜದೂತರು ಗಾಬರಿಗೊಂಡರು. ಅವರ ಸುತ್ತುಮುತ್ತಲು ಜನರಾದರು. ಇಷ್ಟರಲ್ಲಿ ಕೊಳಲಿನ ಮಂಜುಳವಾದ ಧ್ವನಿ ಕೇಳಿತು. ವತ್ಸಲೆ ಹಾಗೂ ನಾಗಾನಂದರು ಬಂದರು. ಪ್ರೇಮಧರ್ಮವನ್ನು ತೆಗೆದುಕೊಂಡು ಬಂದರು. ಜೀವಂತವಿರುವವರೆಗೆ ನಿಜವಾಗಿಯೂ ಜೀವಂತ ಮಾಡಲು ಬಂದರು. ಇಡೀ ಸಭೆಯೇ ಸ್ತಬ್ಧವಾಯಿತು. ವತ್ಸಲೆಯು ಹಾಡುತ್ತಿದ್ದಳು. ನಾಗಾನಂದನು ಕೊಳಲೂದುತ್ತಿದ್ದನು. ಅಪೂರ್ವವಾದ ಗಾಯನ! ಅಪೂರ್ವವಾದ ಕೊಳಲು!

ಆಕಾಶದಿಂದ ಜೀವನವನ್ನೀಯುವ ಮಳೆಯು ಬೀಳುತ್ತದೆ. ತೃಪ್ತಿಯನ್ನುಂಟುಮಾಡುವ ಪ್ರಕಾಶವು ದೊರೆಯುತ್ತದೆ. ಮಾನವನೇ, ನಿನ್ನ

ಹೃದಯಾಕಾಶದಿಂದ ಜೀವನ ಸಂಹಾರಕವಾದ ದ್ವೇಷವನ್ನು ಏಕೆ ಕೊಡುವೆ. ಜೀವನವನ್ನೇ ನಷ್ಟಗೊಳಿಸುವ ಕ್ರೋಧವನ್ನೇಕೆ ನಿರ್ಮಿಸುವೆ.

ಎಲಾ, ಅಂಥ ಇಂಥ ಹೊಲಸು ವಸ್ತುಗಳನ್ನು ಹೊಲಕ್ಕೆ ಹಾಕಿ, ಸುಂದರವಾದ ಧಾನ್ಯವನ್ನು ದೊರಕಿಸುವಿರಿ. ಮನುಷ್ಯನು ಅದಕ್ಕಿಂತ ಕೆಟ್ಟ ವನೇ ? ವಿಷದಲ್ಲಿ ಅಮೃತವನ್ನು ದೊರಕಿಸುವ, ಮಣ್ಣನ್ನು ಹೊನ್ನಾಗಿ ಮಾಡುವ, ಶಗಣಿಯ ಗೊಬ್ಬರದಿಂದ ಧಾನ್ಯವನ್ನು ನಿರ್ಮಿಸುತ, ಈ ಮಾನ ವನಿಗೆ, ಮಾನವರಲ್ಲಿ ಮಂಗಲ್ಯವು ಏಕೆ ಕಾಣಬಾರದು ?

ಬಂಧುಗಳೇ ಏಳಿರಿ, ತಾಯಂದಿರೇ ಏಳಿರಿ. ಎಲ್ಲಕಡೆಗೂ ಮಾಂಗಲ್ಯದ ಅನುಭವವನ್ನು ಪಡೆಯಿರಿ. ಎಲ್ಲವೂ ಸುಂದರವಿದೆ. ಶಿವವಿದೆ. ಸೂರ್ಯನು ತನ್ನ ಕಿರಣಗಳನ್ನು ಎಲ್ಲಡೆಗೆ ಹಬ್ಬಿಸುತ್ತಾನೆ. ಹಾಗು ಪ್ರಕಾಶವನ್ನು ಕೊಡು ತ್ತಾನೆ. ನಾವೂ ಪ್ರೇಮದ ಕಿರಣಗಳನ್ನು ಸರ್ವತ್ರ ಹಬ್ಬಿಸೋಣ. ಎಲ್ಲವನ್ನು ಸುಂದರವಾಗಿ ಮಾಡೋಣ.

ಬೆಂಕಿಯು ಹೊತ್ತಿದೆ. ನಡೆಯಿರಿ ಆರಿಸಲಿಕ್ಕೆ. ನಮ್ಮ ಜೀವವನ್ನು ತೆಗೆದುಕೊಂಡು ನಡೆಯಿರಿ. ಮನುಷ್ಯರಿದ್ದವರೆಲ್ಲ ಬರುವರು. ಪಶುಗಳೆಲ್ಲ ಓಡಿ ಹೋಗುವವು. ಯಾರು ಬರುವಿರಿ ಹೇಳಿರಿ. ಮಾಂಗಲ್ಯವು ಕರೆಯುತ್ತ ಲಿಗೆ. ಮನುಷ್ಯತ್ವವು ಕರೆಯುತ್ತಲಿದೆ. ನವಧರ್ಮವು ಕರೆಯುತ್ತಲಿದೆ. ಯಾರು ಬರುವಿರಿ? ಹೇಳಿರಿ.

ದ್ವೇಷದ ತೆರೆಯು ಬಂದಿದೆ. ಪ್ರೇಮಸಿಂಧುವನ್ನು ತೆಗೆದುಕೊಂಡು ಹೋಗಿರಿ. ಸಂಕುಚಿತ ವೃತ್ತಿಯು ಬರುತ್ತಿದೆ. ವಿಶಾಲತೆಯನ್ನು ತೆಗೆದು ಕೊಂಡು ನಡೆಯಿರಿ. ಕ್ಷುದ್ರತೆಯು ಮುತ್ತಲು ಯತ್ನಿಸುತ್ತಿದೆ. ಉದಾರ ತೆಯು ಹೊರಬರಲಿ. ಕತ್ತಲೆಯು ಕವಿಯುತ್ತಲಿದೆ. ಬೆಳಕನ್ನು ತನ್ನಿರಿ. ದುರ್ಗಂಧವು ಬರುತ್ತಲಿದೆ. ಸುಗಂಧವನ್ನು ಪಸರಿಸಿರಿ. ಮರಣದ ಬೇಗೆಯು ಉರಿಯುತ್ತಲಿದೆ. ಜೀವನ ವೃಷ್ಟಿಯನ್ನು ಸುರಿಸಿರಿ. ಬಂಧನವು ಸುತ್ತು ವರಿದಿದೆ. ಕಡಿಯಿರಿ ಆ ಬಂಧನವನ್ನು. ಮುಕ್ತರನ್ನಾಗಿ ಮಾಡಿರಿ. ಅಂದರೆ ಮುಕ್ತರಾಗುವಿರಿ. ಯಾರಾದರೂ ಮುಮುಕ್ಷುಗಳಿರುವರೇ ? ಇದ್ದವರೆಲ್ಲ ಏಳಿರಿ.

ಮೋಕ್ಷದ ನವಪ್ರಭಾತವು ಬರಲಿದೆ. ಜೀವನ ದೀಪವನ್ನು ಹೊತ್ತಿಸಿ ಸ್ವಾಗತಕ್ಕೆ ಹೋಗೋಣ. ನಡೆಯಿರಿ ಪರೀಕ್ಷೆಯನ್ನುಕೊಡಲು. ಬಂಗಾರ ವನ್ನು ಅಗ್ನಿಯಲ್ಲಿಯೇ ಪರೀಕ್ಷಿಸಬೇಕು. ನಮ್ಮ ಜೀವನವು ಬಂಗಾರವಿದೆ. ನಡೆಯಿರಿ. ಅದನ್ನು ಸಿದ್ಧಮಾಡಲಿಕ್ಕೆ. ಎಲ್ಲ ಮಾನವರು ನಡೆಯಿರಿ. ಸರ್ವ ತಂದೆತಾಯಿಗಳು ನಡೆಯಿರಿ. ಪತಿಪತ್ನಿಯರೆಲ್ಲ ನಡೆಯಿರಿ. ಅಕ್ಕತಂಗಿಯರೆಲ್ಲ ನಡೆಯಿರಿ. ಕಿರಿ ಹಿರಿಯರೆಲ್ಲ ನಡೆಯಿರಿ. ಆರ್ಯ, ನಾಗರೆಲ್ಲ ನಡೆಯಿರೀ ಇದು ಮನುಷ್ಯತ್ವದ ಪರೀಕ್ಷೆಯಿದೆ.

ವತ್ಸಲೆಯು ಹಾಡುತ್ತಿದ್ದಳು. ನಾಗಾನಂದನು ಕೊಳಲು ಊದ ತ್ತಿದ್ದನು. ಕೃಷ್ಣೆಯು ಬಂದು ಕುಣಿಯ ಹತ್ತಿದಳು. ಕಾರ್ತೀಕನೂ ಬಂದನು. ಎಲ್ಲರೂ ಬಂದರು, ಎಲ್ಲರೂ ಕುಣಿಯಹತ್ತಿದರು. ಎಲ್ಲರೂ ಹಾಡಹತ್ತಿದರು. ಆ ರಾಜಪುರುಷರೆಲ್ಲಿ ? ಆ ಸೈನಿಕರೆಲ್ಲಿ ? ಆ ಪಂಜು ಎಲ್ಲಿ ? ಬೆಂಕಿಯು ಆರಿತು. ಪ್ರೇಮವು ಪಸರಿಸಿತು.

ಹಾಡು "ನಿಂತಿತು. ಬಾರಿಸುವದೂ ಬಂದಾಯಿತು. ವತ್ಸಲೆಯು ಮಾತನಾಡಹತ್ತಿದಳು. ಈ ಊರು ನನ್ನದು. ಆಸ್ತಿಕನ ಸಂದೇಶವನ್ನು ತೆಗೆದುಕೊಂಡು ನಾನು ನನ್ನ ಊರಿಗೆ ಬಂದಿದ್ದೇನೆ. ಭಗವಾನ್ ಆಸ್ತಿಕರು ಸ್ತ್ರೀಯರಿಗೆ ಒಂದು ಪವಿತ್ರವಾದ ಕರ್ತವ್ಯವನ್ನು ಉಪದೇಶಿಸಿದ್ದಾರೆ. ಸ್ತ್ರೀ ಯರೇ ಹೊಸ ಮಕ್ಕಳನ್ನು ಜಗತ್ತಿಗೆ ಕೊಡುತ್ತಾರೆ. ಈ ದುಃಖಮಯವಾದ ಸಂಸಾರದಲ್ಲಿ ಅವರೇ ಹೊಸ ಸೃಷ್ಟಿಯನ್ನು ತರುತ್ತಾರೆ. ಭಗವಾನ್ ಆಸ್ತಿ ಕರು ನಮ್ಮಿಂದ ಹೊಸ ದಿವ್ಯತೆಯನ್ನಪೇಕ್ಷಿಸುತ್ತಾರೆ. ಮಾಂಡಲೀಕ ರಾಜರು ಸೈನ್ಯಸಮೇತರಾಗಿ ಜನಮೇಜಯನ ಕಡೆಗೆ ಹೊರಟಿದ್ದಾರೆ. ಆ ಸೈನ್ಯದೆದು ರಿಗೆ ನಾವೆಲ್ಲ ಹೆಣ್ಣುಮಕ್ಕಳು ಹೋಗೋಣ. ಅವರನ್ನು ಪರಾವೃತ್ತಗೊಳಿ ಸೋಣ. ಈ ಯುದ್ಧದಿಂದ ಹೆಚ್ಚು ದುಃಖವಾಗುವದು ಹೆಂಗಸರಿಗೇ. ನಮ್ಮ ಪತಿಗಳು, ಅಣ್ಣತಮ್ಮಂದಿರು, ಎಲ್ಲರೂ ಸಾಯುವರು. ಅಳುವದು ಮಾತ್ರ ನಮ್ಮ ಪಾಲಿಗೆ ಉಳಿಯುವದು. ನಾವು ಇಂಥಹ ಸಂಹಾರವನ್ನು ಸುಮ್ಮನೆ ಏಕೆ ಆಗಗೊಡಬೇಕು ? ಈ ಜನರಿಗೆ ಧ್ಯೇಯವಿಲ್ಲ ಧರ್ಮವಿಲ್ಲ. ಇದೆಲ್ಲವೂ ದ್ವೇಷದ ಪ್ರಚಾರವಿದೆ. ಪುರುಷರು ಹಾದಿಯನ್ನು ಬಿಟ್ಟರೆ, ಸ್ತ್ರೀ.

ಯರು ಸತ್ಪಥವನ್ನು ತೋರಿಸಬೇಕು. ನಾವೂ ಕಠೋರರಾಗೋಣ. ಶುಷ್ಕರಾದರೆ ಎಲ್ಲವೂ ಮುಗಿಯಿತು. ನಮ್ಮ ಸ್ತ್ರೀತ್ವವನ್ನು ಮುಂದೆ ಮಾಡಿಕೊಂಡು ಸಾಗೋಣ. ನಾವು ಹೊರಡೋಣ. ನಾವು ಪ್ರೇಮದಿಂದ ದ್ವೇಷವನ್ನು ಗೆದೆಯೋಣ. ನನ್ನ ಸಂಗಡ ಬರುವಿರಾ? ದಾರಿಯಲ್ಲಿ ನಮಗೆ ಅಸಂಖ್ಯಾತ ಸ್ತ್ರೀಯರು ಭೆಟ್ಟಿಯಾಗುವರು ಸ್ತ್ರೀರಾಜ್ಯದಿಂದ ನೂರಾರು ಸ್ತ್ರೀಯರು ಶಾಂತಿಪಥಕಗಳನ್ನು ತೆಗೆದುಕೊಂಡು ಬರುವರು. ಅನೇಕ ಪ್ರವಾಹಗಳು ನಡುವೆ ಬಂದು ಕೂಡುವವು. ಸ್ತ್ರೀಯರ ಶಾಂತಿಗಂಗೆಯು ದ್ವೇಷದ ಬೇಗೆಯನ್ನು ಆರಿಸಲು ಹೊರಡುವಳು. ಭಗೀರಥನು ಮಾನವರ ಉದ್ಧಾರಕ್ಕಾಗಿ ಗಂಗೆಯನ್ನು ತಂದನು. ಆದರೆ ಮಾನವರ ನಿಜವಾದ ಉದ್ಧಾರವು, ಯಾವ ಗಂಗೆಯಿಂದಾಗುವದು? ಸ್ತ್ರೀಯರ ಹೃದಯದಲ್ಲಿಯ ಗಂಗೆಯು ಹೊರಗೆ ಬರಬೇಕು. ಅದು ಸಂಘಟಿತವಾಗಿ 'ಧೋ' ಎಂದು ಧ್ವನಿಗೈಯುತ್ತ ಹೊರ ಹೊರಡಬೇಕು. ಆ ಸಮಯದಲ್ಲಿಯೇ ನಿಜವಾದ ಉದ್ಧಾರವಾಗುವದು"

ಕಾರ್ತೀಕನ ತಾಯಿಯು "ವತ್ಸಲೆ ನಾನು ನಿನ್ನೊಡನೆ ಬರುವೆ" ಎಂದಳು.

ಕೃಷ್ಣೀ ಹಾಗೂ ಸುಶ್ಮಿತೆ ನಾವೂ ಬರುವೆವೆಂದರು. ಅನೇಕ ಸ್ತ್ರೀಯರು ಹೊರಟರು ಅನೇಕ ಕನ್ಯೆಯರು ಹೊರಟರು. ಸ್ತ್ರೀಯರ ಶಾಂತಿಪಥಕವು ಸಿದ್ಧವಾಯಿತು.

"ಗಂಡಸರಾದ ನಾವು ಇಲ್ಲಿದ್ದು ಮಾಡುವದೇನು? ನಾವೂ ಪ್ರೇಮಧರ್ಮದ ಹಾಡನ್ನು ಹಾಡುತ್ತ ಹೋಗುವಾ. ಆರ್ಯ ಹಾಗೂ ನಾಗರ ಸಹಕಾರದ ಹಾಡನ್ನು ಹಾಡುವಾ. ಭಾರತದ ಭವಿತವ್ಯದ ಹಾಡನ್ನು ಹಾಡುತ್ತ ಹೊರಡುವಾ" ಎಂದನು ನಾಗಾನಂದ.

"ನಾನು ಸಿದ್ಧನಿರುವೆ. ಅಪೂರ್ವ ದಿವಸ! ಅಪೂರ್ವ ಪ್ರಯೋಗ! ಅಪೂರ್ವ ಸಂಧಿ! ನಡೆಯಿರಿ ಎಲ್ಲರೂ ಹೊರಡೋಣ." ಎಂದನು ಕಾರ್ತೀಕ

ಮುಖ್ಯ ರಾಜದೂತನು, "ನಾವೂ ನಿಮ್ಮೊಡನೆ ಬರುತ್ತಿದ್ದೆವು. ಆದರೆ ಬೇಡ. ನಾವು ಎರಡನೆಯ ರಾಜ್ಯಕ್ಕೆ ಹೋಗುತ್ತೇವೆ. ಎಲ್ಲವೂ ಶಾಂತ

ವಾದ ನಂತರ ತಿರುಗಿ ಬರುವೆವು. ನಿಮ್ಮ ಊರು ನಮಗೆ ಹೊಸ ಜೀವ ನವನ್ನು ಕೊಟ್ಟಿತು. ಧನ್ಯವಿದೆ ಈ ಊರು. ಭಗವಾನ್ ಆಸ್ತಿಕರ ಇಚ್ಛೆಯೂ ಸಫಲವಾಗುವದು. ಆಸ್ತಿಕರ ಆಶ್ರಮದಿಂದ ಹೊರಬಿದ್ದ ತರುಣರು ಸುಮ್ಮನೇ ಕುಳಿತಿಲ್ಲ. ಎಲ್ಲೆಡೆಯಲ್ಲಿ ಅವರು ನವಧರ್ಮವನ್ನು ಹಬ್ಬಿರುತ್ತಿದ್ದಾರೆ. ಈ ಎಲ್ಲ ವೇದನೆಗಳಿಂದ ಮಂಗಳವೇ ಹೊರಬೀಳುವದು." ಎಂದನು.

ರಾಜದೂತರೂ ಸೈನಿಕರೂ ಹೊರಟು ಹೋದರು. ಸುಶೃತೆ, ವತ್ಸಲಾ ಹಾಗು ನಾಗಾನಂದರು ಮನೆಗೆ ಬಂದರು. ಕಾರ್ತೀಕ ಹಾಗೂ ಕೃಷ್ಣೆಯರು ಬಂದರು.

ಕಾರ್ತೀಕ "ವತ್ಸಲೇ, ಇವಳೇ ನನ್ನ ಕೃಷ್ಣಿ"

ವತ್ಸಲೆ "ಎಷ್ಟು ದೊಡ್ಡವಳಾಗಿರುವೆ. ಇಷ್ಟು ದಿನ ನೀನು ಏಕೆ ಅಡಗಿದ್ದೆ ?"

ಕೃಷ್ಣಿ "ವೇಳೆಗೆ ಬರುವದಕ್ಕಾಗಿ"

ಸುಶೃತೆ "ಕೃಷ್ಣೇ ನಿನ್ನ ಕೈನೋಡೋಣ. ಗುಳ್ಳೆಗಳೆಷ್ಟು ಎದ್ದಿವೆ ? ನಿಜವಾದ ಶೂರಳು ನೀನು"

ನಾಗಾನಂದ "ಎಂಥಹ ಗುಳ್ಳೇ ?"

ಕಾರ್ತೀಕ "ರಾಜದೂತರು ಪಂಜವನ್ನು ಹಿಡಿದು ನಿಮ್ಮನ್ನು ಸುಡುವೆವು ಎಂದು ಬೆದರಿಸಿದರು. ಕೃಷ್ಣೆಯು ಅದನ್ನು ಕಸಿದುಕೊಂಡು ಗಟ್ಟಿಯಾಗಿ ಹಿಡಿದು, ಯಾರಿಗೆ ಬೆದರಿಸುವಿರಿ? ಸತಿ ಹೋಗುವ ಸ್ತ್ರೀಯರು ಬೆಂಕಿಗೆ ಅಂಜುವದಿಲ್ಲ. ಬೆಂಕಿಯನ್ನು ಹೂವಿನಂತೆ ಉಡಿಯಲ್ಲಿ ಧರಿಸುವರು."

ವತ್ಸಲಾ ಕೃಷ್ಣೆಯನ್ನು ಅಪ್ಪಿಕೊಂಡು "ನಿಜವಾದ ನಾಗಕನ್ಯೆ. ನಾಗಪೂಜೆಯಿಂದ ಇಂಥ ಧೈರ್ಯವು ಬರುತ್ತಿದ್ದರೆ, ಯಾರು ತ್ಯಾಜ್ಯವೆಂದಾರು"

ಕಾರ್ತೀಕ "ಇಂದು ಎಲ್ಲವೂ ಸರಿಯಾಯಿತು. ಊರಲ್ಲಿಯ ಒಡಕು ಅಳಿಯಿತು. ಕೃಷ್ಣಿಯು ಸ್ವತಃ ಕೈಯ್ಯಲ್ಲಿ ಅಗ್ನಿಯನ್ನು ಹಿಡಿದಳು. ಮತ್ತು

ಊರಲ್ಲಿಯ ದ್ವೇಷದ ಮೇಲೆ ಅಗ್ನಿಯನ್ನಿಟ್ಟಳು. ನನ್ನ ತಾಯಿಯು ನಿಮ್ಮೊಡನೆ ಬರಲು ಸಿದ್ಧಳಾದಳು. ನಮ್ಮ ಅಪ್ಪನೂ ನಮ್ಮೊಡನೆ ಬರುವ"

ಕೃಷ್ಣಿ "ನಾವು ನಮ್ಮ ಮನೆಗೆ ಹೋಗುವಾ. ಹಿರಿಯರ ಆಶೀರ್ವಾದವನ್ನು ತೆಗೆದು ಕೊಳ್ಳುವಾ"

ಸುಶ್ರುತಾ "ಇದೇನು ಎರಡನೆಯವರ ಮನೆಯಲ್ಲ"

ಕೃಷ್ಣಿ "ನಾನು ಹಾಗೆ ಅನ್ನಲಿಲ್ಲ. ಅಜ್ಜೀ ನಾನು ನಿನ್ನವಳು. ನಾವು ನಿಮ್ಮವರೇ ಇರುತ್ತೇವೆ"

ಕಾರ್ತೀಕ ಹಾಗು ಕೃಷ್ಣಿಯರು ಕಾರ್ತೀಕನ ಮನೆಗೆ ಹೋದರು. ಕಾರ್ತೀಕನು ತನ್ನ ತಾಯಿಯನ್ನು ಕುರಿತು. "ಅವ್ವಾ ಇವಳು ನಿನ್ನ ಸೊಸೆ. ನಿನ್ನ ಮನ್ಸಿಗೆ ಬರುವದೋ ಇಲ್ಲೋ ಹೇಳು." ಎಂದನು ತಾಯಿಯು ಆಕೆಯನ್ನು ಎದೆಗೆ ಅವಚಿಕೊಂಡು, "ನೀನು ಧನ್ಯಳಾಗಿರುವೆ." ಎಂದಳು

ಆ ಮೇಲೆ ಇಬ್ಬರೂ ತಂದೆಗೆ ನಮಸ್ಕರಿಸಿದರು.

"ಅಪ್ಪಾ, ಹುಡುಗರ ಮೇಲೆ ಸಿಟ್ಟಾಗಬೇಡಿರಿ" ಎಂದನು ಕಾರ್ತೀಕ

'ನೀವು ಹುಡುಗರೇ ಚೆನ್ನಾಗಿದ್ದೀರಿ. ನಮಗೆ ಮುಂದಿನದೆಲ್ಲವೂ ಕಾಣಿಸುತ್ತದೆ. ನಮಗೆ ಹತ್ತರವಿದ್ದದ್ದು ಕಾಣದಂತಾಗುತ್ತದೆ. ನಿಜವಾಗಿಯೂ ನಾವು ಕುರುಡರಾಗಿದ್ದೇವೆ. ನಿಮಗೆ ಆಶೀರ್ವಾದವಿರಲಿ. ನೀವು ಸಾಯಲು ಹೊರಟಾಗ ಸಾಯುತ್ತಿರುವ ನಾವೇಕೆ ಮನೆಯಲ್ಲಿ ಇರಬೇಕು ? ನಿಜವಾಗಿ ನಾವು ಮುದುಕರೆಲ್ಲ ಆ ಜನಮೇಜಯನ ಹೋಮ ಕುಂಡವನ್ನು ತುಂಬಿ ಬಿಡಬೇಕು. ನೀವು ಸುಖದಸಂಸಾರವನ್ನು ಕಿತ್ತೊಗೆದು, ಅಗ್ನಿಗೆ ಆಹುತಿಯಾಗಲು ಹೊರಟಿರುವಿರಿ ಮಕ್ಕಳೇ ನೀವು ಧನ್ಯರು ! ನಿಮ್ಮ ಹತ್ತಿರವೇ ನಿಜವಾದ ಧರ್ಮವಿದೆ ! ದೇವರಿದ್ದಾನೆ ! ಮುದುಕರಾದ ನಾವು ಸುಮ್ಮನೆ ಗೊಳ್ಳುಕೊಚ್ಚುವೆವು. ಆಶೀರ್ವಾದ. ನಿಮಗೆ ಶತಾಶೀರ್ವಾದಗಳು. ಈ ಹುಡಿಗಿಯು ಕೈಯ್ಯಲ್ಲಿ ಬೆಂಕಿಯನ್ನು ಹಿಡಿದಾಗ. ನನ್ನ ಹೃದಯದದಲ್ಲಿಯೇ ಬೆಂಕಿಯನ್ನು ಸುರುವಿದಂತಾಯಿತು. ಇಂಥ ರತ್ನಗಳಿಗೆ ನಾವು ನಾಗರೆಂದು ಕೀಳು ಬಗೆಯುತ್ತೇವೆ. ನಿಜವಾಗಿಯೂ ನಾವೇ ಕೀಳರು. ಕೃಷ್ಣೇ, ಧನ್ಯರು ನಿನ್ನ ತಂದೆ ತಾಯಿಗಳು. ನಿನ್ನ ಕೈ ಹಿಡಿದ

ಕಾರ್ತೀಕನು ಧನ್ಯನು.' ಎಂದನು. ಕಾರ್ತೀಕನು ತಾಯಿಯನ್ನುದ್ದೇಶಿಸಿ
' ನಾವು ಸ್ವಲ್ಪಹೋಗಿ ಬರುತ್ತೇವೆ ' ಎಂದನು.

ತಾಯಿ " ಹೋಗಿ ಬೇಗ ಬನ್ನಿರಿ. ಊಟ ತೀರಿಸಿಕೊಂಡು ಹೋಗಿರಿ " ಎಂದಳು.

ಕಾರ್ತೀಕ ಹಾಗೂ ಕೃಷ್ಣೆಯರು ಹೊರಬಿದ್ದರು. ಹೊಲಕ್ಕೆ ಹೋದರು. ಕಾರ್ತೀಕನು ಕೃಷ್ಣೆಯ ಸುಟ್ಟ ಕೈಯ್ಯನ್ನು ಹೃದಯದ ಮೇಲೆ ಇಟ್ಟು ಕೊಂಡಿದ್ದನು. ಯಾರೂ ಮಾತನಾಡುತ್ತಿದ್ದಿಲ್ಲ. ಇಬ್ಬರೂ ಕಲ್ಲಿನ ಮೇಲೆ ಕುಳಿತಿದ್ದರು.

' ನಾನು ಹಾಲು ಹಿಂಡುತ್ತೇನೇ ' ಎಂದನು ಕಾರ್ತೀಕ

" ಹಿಂಡಿರಿ ನಾನು ಕೋಣೆಯಲ್ಲಿ ಮಲಗುವೆ " ಎಂದಳು.

ಕಾರ್ತೀಕನು ಹಿಂಡಲು ಹೋದನು. ಕೃಷ್ಣೆಯು ಕಾರ್ತಿಕನ ಮಂಚದ ಮೇಲೆ ಮಲಗಿದಳು. ಆಕೆಯು ಅಳುತ್ತಿದ್ದಳು. ಆಕೆಗೆ ದುಃಖವನ್ನು ಸಹನ ಮಾಡುವದಾಗಲಿಲ್ಲ. ಕಾರ್ತೀಕನು ಬಂದನು. ಅಳುವದನ್ನು ಕೇಳಿದನು. ಆಕೆಯ ಹತ್ತರ ಬಂದು ಕುಳಿತನು. ಆಕೆಯ ತಲೆಯನ್ನು ತೊಡೆಯಮೇಲಿಟ್ಟು ಕೊಂಡನು. ಕಣ್ಣೀರನ್ನು ಒರೆಸಿದನು. ಆದರೆ ಅವು ನಿಲ್ಲುವ ಬಗೆ ಹೇಗೆ? ಸಮುದ್ರಕ್ಕೆ ಒಡ್ಡು ಹಾಕುವವರಾರು ?

" ಕೃಷ್ಣೆ ಏನಾಗಿದೆ ? " ಎಂದು ವಿಚಾರಿಸಿದನು.

" ಏನು ಹೇಳಲಿ. ನಾವಿಬ್ಬರೂ ಕೂಡಿ ಇನ್ನೂ ಎರಡು ದಿನಗಳಾಗಿಲ್ಲ. ನೀವು ಹೊರಟಿರಿ. ನಾವಿಬ್ಬರು ಇನ್ನು ಭೆಟ್ಟಿಯಾಗುವದೆಲ್ಲಿ ? ಬೆಂಕಿಯಲ್ಲಾದರೂ ಕೂಡಲೇ ನಮ್ಮನ್ನು ಒಗೆಯುವರೇನು ? ನಮ್ಮನ್ನು ಬಂಧಿಸುವರು. ಒಯ್ಯುವರು. ಛಲಿಸುವರು, ಸುಡುವರು. ನಿಮ್ಮ ತೊಡೆಯಮೇಲೆ ಒಂದು ದಿನವೂ ತಲೆಯನ್ನು ಇಡಲಿಲ್ಲ. ನಾನು ನಿಮಗೆ ಏನು ಕೊಟ್ಟೆ ? ಸಾವು. ಕಾರ್ತೀಕ, ನಾನು ಅಕಸ್ಮಾತ್ತಾಗಿ ಬಂದೆ. ನಿಮ್ಮನ್ನು ಬೆಂಕಿಯಲ್ಲಿ ಹಾಕಿದೆ. ಏನು ಮಾಡಲಿ ? ನಾವು ಓಡಿ ಏಕೆ ಹೋಗಲಿಲ್ಲ ? ಅಡವಿಯಲ್ಲಿ ಇರುತ್ತಿದ್ದೆವು. ಎಲೆಗಳನ್ನು ತಿನ್ನುತ್ತಿದ್ದೆವು. ಸುಖವಾಗಿ ವಾಸಿಸುತ್ತಿದ್ದೆವು. ಪಕ್ಷಿಗಳ ಕಿಲಕಿಲಾಟವನ್ನು ಕೇಳುತ್ತಿದ್ದೆವು. ಚಿಗುರೆಲೆಗಳ ಮೃದುವಾದ ಹಾಸಿಗೆಯನ್ನು ಮಾಡುತ್ತಿದ್ದೆವು. ಪ್ರೇಮಜೀವನವನ್ನು ನಡೆಸುತ್ತಿದ್ದೆವು.

ಆದರೆ ಈಗೇನು ? ನೀವು ಪ್ರಚಾರಕ್ಕಾಗಿ ಹೋಗುವಿರಿ. ನಾವೂ ಹೋಗುವೆವು. ನಾನು ಜೀವಂತವಿದ್ದೂ ಇಲ್ಲದಂತೆ. ನಿಮಗೆ ಸುಖವನ್ನು ಕೊಡಲಿಲ್ಲ. ನಿಮ್ಮ ಮುಖವನ್ನು ಕೂಡ ಹೊಟ್ಟೆ ತುಂಬ ನೋಡಲಿಲ್ಲ. ' ಎಂದು ಅಳಹತ್ತಿದಳು.

' ಕೃಷ್ಣೆ, ನೀನು ಎಲ್ಲವನ್ನು ಕೊಟ್ಟಿರುವಿ. ಜೀವನವನ್ನು ಕೃತಾರ್ಥ ಮಾಡಿರುವಿ. ಜೀವನದ ಅನಂತತ್ವವನ್ನು ತೋರಿಸಿರುವಿ. ಮರಣವನ್ನು ಮಿತ್ರನೆಂದು ತಿಳಿಯಲು ಕಲಿಸಿರುವಿ. ಅಳಬೇಡ. ಎರಡೇ ದಿವಸಗಳಲ್ಲಿಯೆ ಸಾಕಷ್ಟು ಸುಗಂಧವನ್ನು ನನ್ನ ಜೀವನಕ್ಕೆ ಎರೆದಿರುವಿ. ಅದು ನಾನು ಜೀವಂತವಿರುವವರೆಗೆ ಸಾಕಾಗುವದು. ಅಳಬೇಡ. ನಗು. ನೀನು ಈಗ ಒಬ್ಬಳೇ ಇಲ್ಲ. ನಾನೂ ಒಬ್ಬನೇಯಿಲ್ಲ. ನಮ್ಮನ್ನು ಅಗಲಿಸುವವರಾರು? ನಡೆ ಹೋಗೋಣ. ನಮ್ಮ ಕ್ಷುದ್ರಸುಖದ ವಿಚಾರವೀಗೇಕೆ ? ಹೊಸ ಧರ್ಮವನ್ನು ನಾವು ನಿರ್ಮಿಸುತ್ತಿರುವೆವು. ಬಿತ್ತುವ ಮೊದಲು ಭೂಮಿಯನ್ನು ಸುಡಬೇಕಾಗುತ್ತದೆಂದು ಅತ್ತ ಕಡೆಯ ಜನ ಹೇಳುತ್ತಾರೆ. ಅದರಂತೆ ನವಧರ್ಮದ ಬೀಜಗಳನ್ನು ಬಿತ್ತುವ ಮೊದಲು, ಬಲಿದಾನವನ್ನು ಮಾಡಬೇಕಾದೀತು. ಅಂದರೆ ಸುಂದರ ಅಂಕುರಗಳು ಹುಟ್ಟ್ಯಾವು. ನಮ್ಮ ಜೀವನವು ಧನ್ಯವಾದೀತು. ಈ ಧನ್ಯಜೀವನವನ್ನು ನನಗೆ ನೀನು ಕೊಡುತ್ತಿರುವಿ. ನಾನು ಅಂಜುಬುರುಕನಿದ್ದೆ. ನನ್ನನ್ನು ನೀನು ವೀರನನ್ನಾಗಿ ಮಾಡಿದೆ. ಊರಲ್ಲಿಯ ಸರ್ವ ಸ್ತ್ರೀಪುರುಷರಲ್ಲಿ ನವಸ್ಫೂರ್ತಿಯನ್ನು ತುಂಬಿದೆ. ಸರ್ವರಲ್ಲಿ ನವಜೀವನವನ್ನು ಉಂಟುಮಾಡಿದೆ. ಅಳಬೇಡ. ನಮ್ಮ ಸಂಸಾರವು ಕೃತಾರ್ಥವಾಯಿತು. ನವಧ್ಯೇಯದ ಮಗುವನ್ನು ಎಲ್ಲರಿಗೂ ಬೆಳೆಸಲು ಕೊಟ್ಟೆ. ಇದು ನಿಜವಲ್ಲವೇ ? " ಎಂದು ಅವಳ ಕೈಯನ್ನು ಹಿಡಿದು ಮಾತನಾಡಿದನು.

ಆಕೆಯು ಸುಮ್ಮನೆ ಮಲಗಿದ್ದಳು.

ಕೈ ಉರಿಯುತ್ತದೇನು ? ಎಂದನು.

" ನೀವು ಹೃದಯದ ಮೇಲೆ ಇಟ್ಟುಕೊಂಡಿರುವಿರಿ. ಅಂದ ಮೇಲೆ ಉರಿಯು ಆರಲಾರದೇ ? ನಿಮ್ಮ ಹೃದಯವೆಂದರೆ ಪ್ರೇಮಸಿಂಧು" ಎಂದಳು.

‘ ಅಂದು ನೀನು ನನ್ನ ಮುಟ್ಟಿ ಬಟ್ಟೆನ್ನು ಒಮ್ಮೆಲೆ ಬಾಯಿಯಲ್ಲಿಟ್ಟು ಕೊಂಡೆ. ಹೆಂಗಸರಲ್ಲಿ ಎಷ್ಟು ಪ್ರೇಮ! ಗಂಡಸರಲ್ಲಿ ಕಡಿಮೆ. ಏನೇ ಅಂದರೂ ಗಂಡಸರಲ್ಲಿ ಪ್ರೇಮವು ಕಡಿಮೆಯೇ ಸರಿ ’ ಎಂದನು

“ ಹಾಗೆನ್ನಬೇಡಿರಿ. ಪುರುಷರು ಸಂಯಮಿಗಳಿರುವರು. ನಿಮ್ಮಲ್ಲಿ ಪ್ರೇಮ ಕಡಿಮೆಯಂದಲ್ಲ ” ಎಂದಳು.

‘ ನಡೆ ನಾವು ಹೋಗೋಣ ’ ಎಂದನು.

‘ ನಡೆಯಿರಿ ಹೋಗೋಣ ದಾರೀ ಕಾಯುತ್ತಿರಬಹುದು ’ ಎಂದಳು.

೧೬

ವತ್ಸಲೆಯು ಸ್ತ್ರೀಯರ ಶಾಂತಿಪಥಕವನ್ನು ತೆಗೆದುಕೊಂಡು ಹೊರಟಳು. ಊರೂರಿಗೆ ಪ್ರಚಾರ ನಡೆಯಿತು. ಪ್ರೇಮಧರ್ಮದ ಉಪನಿಷತ್ತನ್ನು ಹಾಡುತ್ತ ಅವರು ಹೋಗುತ್ತಿದ್ದರು. ಸ್ತ್ರೀಯರ ಶಕ್ತಿಯು ಅಪೂರ್ವವಾಗಿದೆ. ಅವರು ಒಮ್ಮೆ ಜಾಗ್ರತರಾದರೆ, ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡುತ್ತಾರೆ. ಹೆಂಗಸರು ಸಿಟ್ಟಾದರೆ, ಅವರು ಬೇಗನೆ ಮರೆಯುವದಿಲ್ಲ.

ಕಾಮರೂಪದೇಶದಲ್ಲಿ ಸ್ತ್ರೀರಾಜ್ಯವಿದ್ದಿತು. ಅಲ್ಲಿಂದಲೂ ಒಂದು ಪಥಕ ಬಂದಿತು. ಎಲ್ಲರಿಗೂ ಆಶ್ಚರ್ಯ. ದೊಡ್ಡ ಜಾತ್ರೆಯೇ ನಡೆಯಿತು. ಸತ್ಯಧರ್ಮದ, ಪ್ರೇಮದ, ವಿಶ್ವೈಕ್ಯದ, ಹಾಡುಗಳು ಆಕಾಶವನ್ನು ತುಂಬಿದವು. ವಕ್ರತುಂಡನ ವಕ್ರಧರ್ಮವನ್ನು ಕೇಳುವವರೇ ಇಲ್ಲ.

ಜನಮೇಜಯನೆಡೆಗೆ ಒಬ್ಬ ರಾಜನ ಸೈನ್ಯವು ನಡೆದಿತ್ತು. ಆ ಸೈನಿಕರಲ್ಲಿ ಉತ್ಸಾಹವಿದ್ದಿಲ್ಲ. ದಾರಿಯಲ್ಲಿ ಸ್ತ್ರೀಯರ ಈ ಶಾಂತಿಪಥಕವು ಸೈನಿಕರೆದುರು ಬಂದು ನಿಂತಿತು. ಸಂಸಾರದ ಆಪತ್ತುಗಳನ್ನು ಎದುರಿಸುವಂಥ, ಸ್ತ್ರೀಯರು ಸತ್ಯದ ವಿಜಯಾರ್ಥವಾಗಿ ಧೈರ್ಯದಿಂದ ನಿಂತಿದ್ದಾರೆ. ಅವರ ಕೈಯಲ್ಲಿ 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂಬ ಪವಿತ್ರ ಶಬ್ದಗಳನ್ನು ಬರೆದ ಪತಾಕೆಗಳಿದ್ದವು. ನಾಗ ಹಾಗು ಆರ್ಯರು ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವ ಚಿತ್ರಗಳಿದ್ದ ಧ್ವಜಗಳನ್ನು ಹಿಡಿದಿದ್ದರು. 'ಮಾನವ ಧರ್ಮಕ್ಕೆ ವಿಜಯವಾಗಲಿ.' 'ಸತ್ಯಧರ್ಮಕ್ಕೆ ಜಯವಾಗಲಿ' ಎಂದು ಆ ಸ್ತ್ರೀಯರು ಘೋಷಿಸುತ್ತಿದ್ದರು.

ಆ ಸೈನ್ಯದ ಮುಖಂಡನು ಮುಂದೆ ಬಂದನು. 'ನಿಮಗೆ ಏನು ಬೇಕು?' ಎಂದು ಕೇಳಿದನು.

ವತ್ಸಲೆಯು, "ನಮಗೆ ವಿವೇಕ ಬೇಕು. ಮನುಷ್ಯತ್ವವು ಬೇಕು. ಸ್ತ್ರೀಯರಾದ ನಾವು ಅಧರ್ಮ ಮಾಡಗೊಡುವದಿಲ್ಲ. ಗಂಡಸರಿಗೆ ಸುಪಥವು ಕಾಣಿಸದಿದ್ದರೆ ನಾವು ತೋರಿಸುವೆವು. ಮನೆಯನ್ನು ನಾವು ಬೆಳಗಿಸುತ್ತೇವೆ. ಇನ್ನು ಜಗತ್ತನ್ನು ಬೆಳಗಿಸುವೆವು. ಬೆಳಕನ್ನು ತೋರಿಸುವದೇ ಸ್ತ್ರೀಯರ ಕೆಲಸ. ನೀವೆಲ್ಲ ಕತ್ತಲೆಯಲ್ಲಿ ಸುತ್ತುತ್ತಲಿರುವಿರಿ. ನೀವು ಎಲ್ಲಿಗೆ ಹೊರಟಿರಿ? ಜನಮೇಜಯನಿಗೆ ಸಹಾಯಮಾಡಲು ಹೊರಟಿರುವಿರಾ? ಅವನಲ್ಲಿರುವ ನಾಗರನ್ನು ಕೊಲ್ಲಲಿಕ್ಕಷ್ಟೇ? ಇಂದ್ರ ಮೊದಲಾದ ದೊಡ್ಡ ರಾಜರೊಡನೆ ಯುದ್ಧ ಮಾಡಲು ಹೊರಟಿರಾ? ನೀವು ಕೊಲ್ಲಲು ಹೋಗುತ್ತಿದ್ದರೆ, ಮೊದಲು ನಮ್ಮನ್ನು ಕೊಲ್ಲಿರಿ. ಈ ಸೈನಿಕರಿಗೆ ಯುದ್ಧಕ್ಕೆ ಹೋಗುವ ಇಚ್ಛೆ ನಿಜವಾಗಿಯೂ ಇಲ್ಲ. ನಮ್ಮ ಪತಿಗಳನ್ನೂ, ಅಣ್ಣತಮ್ಮಂದಿರನ್ನೂ ಹುಡುಗರನ್ನೂ ವ್ಯರ್ಥವಾಗಿ ರಣಾಂಗಣಕ್ಕೇಕೆ ಒಯ್ಯುವಿರಿ? ಕುರುಕ್ಷೇತ್ರದಲ್ಲಿ ಏನಾಯಿತು? ೧೮ ಅಕ್ಷೋಹಿಣಿ ಸೈನ್ಯದಲ್ಲಿ ೭ ಅಕ್ಷೋಹಿಣಿ ಸೈನ್ಯವಮಾತ್ರ ಉಳಿಯಿತು. ಆದರೆ ಲಕ್ಷಾಂತರ ಸ್ತ್ರೀಯರು ನಿರಾಧಾರರಾದರು. ಅದನ್ನೇ ಈಗ ಮತ್ತೆ ಮಾಡುವಿರಾ? ಈ ಸೈನಿಕರ ಮನಸ್ಸಿನಲ್ಲಿ ಯಾರ ವಿಷಯವಾಗಿಯೂ ದ್ವೇಷಭಾವನೆಗಳಿಲ್ಲ. ಅವರಿಗೆ ನಾಗಜಾತಿಯ ಗೆಳೆಯರಿರಬಹುದು. ಆಪ್ತರಿರಬಹುದು. ನಾಗರು ಕೆಡುಕರಲ್ಲ. ನಮ್ಮ ಸ್ತ್ರೀಯರಲ್ಲಿ ಅನೇಕರು ನಾಗರನ್ನು ಮದುವೆಯಾಗಿರಬಹುದು. ನಾಗರು ದೊಡ್ಡ ಮನಸ್ಸಿನವರಿದ್ದಾರೆ. ಮೊನ್ನೆ ಜನಮೇಜಯನ ಅಧಿಕಾರಿಗಳು ನಮ್ಮೂರಿಗೆ ಬಂದು, ನಮ್ಮನ್ನು ಸುಡುವೆನೆಂದು ಅಂಜಿಸುತ್ತಲಿರುವಾಗ ನಮ್ಮಲ್ಲಿಯ ಒಬ್ಬ ಶೂರ ನಾಗಕನ್ಯೆಯು ನಗುತ್ತ, ಕೈಯಲ್ಲಿ ಪಂಜನ್ನು ಹಿಡಿದು ಮಾತನಾಡಿದಳು. 'ಸ್ತ್ರೀಯರಿಗೆ ಸತಿ ಹೋಗುವ ರೂಢಿಯಿರುವದರಿಂದ ನಾವು ಬೆಂಕಿಗೆ ಅಂಜುವದಿಲ್ಲ. ಬೆಂಕಿಯೆಂದರೆ ನಮ್ಮ ಮನೆಯವನೇ ಇದ್ದಾನೆ' ಇದೋ ನೋಡಿರಿ, ಆ ಶೂರ ಸ್ತ್ರೀಯನ್ನು! ಇವಳ ಲಗ್ನವಾಗಿ ಹತ್ತು ದಿನಗಳು ಕೂಡ ಆಗಿಲ್ಲ. ಅಂದಮೇಲೆ ಇವಳನ್ನು ಕೊಲ್ಲುವದು ಹೇಗೆ? ಯಾವ ಪಾಪವನ್ನು ಇವಳು ಮಾಡಿದ್ದಾಳೆ? ಕೆಂಪು ಹಾಗೂ ಕಪ್ಪು ಬಣ್ಣಗಳ ಭೇದವನ್ನೆಣಿಸುವಿರೇಕೆ? ಕಪ್ಪು, ರಾತ್ರಿಯಲ್ಲಿ ಚಂದ್ರನೊಡನೆ ಲಗ್ನವಾಗುತ್ತಲಿದೆ. ಆ ಸಮಯದಲ್ಲಿ ಸಾವಿರಾರು ನಕ್ಷತ್ರಗಳ ಅಕ್ಷತೆಯು ಅದರ ಮೇಲೆ ಬೀಳುತ್ತಿರುತ್ತದೆ. ಅಂದಮೇಲೆ ಕಪ್ಪು ಬಣ್ಣವು ಕೆಡುಕು

ಹೇಗೆ ? ' ಅಂತರ್ಮುಖನಾಗು ' ಎಂದು ವೇದವು ಹೇಳುತ್ತದೆ. ಕರ್‍ರಗಿದ್ದ ಕವಳೀ ಹಣ್ಣುಗಳು ಕಹಿಯಿರುವವೇನು ? ಮಧುರವಾಗಿದ್ದವುಗಳನ್ನು ಒಗೆದರೆ ಮೂರ್ಖರೆನ್ನುವರು. ಈ ಕಪ್ಪು ನಾಗಕನ್ಯೆಯರೆಂದರೆ ಮಂಜುಳ ವೈನಾಕ ಪಕ್ಷಿಗಳೂ ಕೋಕಿಲೆಗಳೂ ಆಗಿದ್ದಾರೆ. ಪ್ರೇಮ ಸಂಗೀತವನ್ನು ಅವರ ಬಾಯಿಂದಲೇ ಕೇಳಬೇಕು. ತ್ಯಾಗದ ಶ್ರುತಿಯನ್ನು ಜಗತ್ತಿಗೆ ಅವರೇ ಹೇಳಬೇಕು. ನೀವು ರಾಜನಿಗೆ ನೆರವಾಗಲು ಹೋಗುವಿರಿ. ನಾಗರನ್ನು ಶಿಕ್ಷಿಸುವದಕ್ಕಾಗಿ ಹೋಗುತ್ತಿರುವಿರಿ. ನಮ್ಮನ್ನು ಮೊದಲು ಶಿಕ್ಷಿಸಿರಿ. ನಾವು ಅಪರಾಧಿಗಳಿದ್ದೇವೆ. ನಾವು ನಾಗರನ್ನು ಪ್ರೀತಿಸುತ್ತೇವೆ. ಅವರನ್ನು ತಿರಸ್ಕರಿಸುವದಿಲ್ಲ. ನಾವೀರ್ವರೂ ಒಂದೇ ಎಂದು ತಿಳಿಯುತ್ತೇವೆ. ನಾವು ರಾಜಶಾಸನವನ್ನು ಮುರಿದಿದ್ದೇವೆ. ಕೊಲ್ಲಿರಿ ನಮ್ಮನ್ನು. ಎಲೋ ಸೈನಿಕರೇ, ನೀವು ಯುದ್ಧಕ್ಕೇಕೆ ಹೋಗುವಿರಿ ? ಅದರಲ್ಲಿ ನಿಮ್ಮ ಹಿತವೇನಿದೆ ? ಅದರಲ್ಲಿ ನ್ಯಾಯವಿದೆಯೋ, ಧರ್ಮವಿದೆಯೋ? ರಾಜನು ಕರೆದನು, ನೀವು ನಡೆದಿರಿ. ಮನುಷ್ಯನು ಸದಸದ್ವಿವೇಕವನ್ನು ದೂರಬಾರದು. ರಾಜನು ನಮ್ಮನ್ನು ಕುರುಡರನ್ನಾಗಿ ಮಾಡಲು ಯತ್ನಿಸಿದರೆ, ನಾವು ಬಲಿಬೀಳಬಾರದು. ಬೌದ್ಧಿಕ ಶಕ್ತಿಯನ್ನು ಕಳೆದುಕೊಳ್ಳುವದು ಎಲ್ಲಕ್ಕಿಂತಲೂ ಮಹತ್ಪಾಪ. ಆರ್ಯರಾದ ನಾವು ವೇದಧರ್ಮವನ್ನು ಮನ್ನಿಸುತ್ತೇವೆ. ವೇದಧರ್ಮವೆಂದರೆ ವಿಚಾರಧರ್ಮ. ಗಾಯತ್ರಿ ಮಂತ್ರವು " ಬುದ್ಧಿಯನ್ನು ಜಾಗೃತವಿಡು " ಎಂದು ಹೇಳುತ್ತದೆ. ನೀವು ವಿಚಾರ ಮಾಡಿದ್ದೀರಾ ? ಅವಿಚಾರದಿಂದ ಅವಸರಪಡಬೇಡಿರಿ. " ರಾಜನು ಕೊಡುತ್ತಾನೆ. ನಾವು ಹಣದ ದಾಸರು " ಎಂದು ನೀವು ಅನ್ನಬಹುದು. ಆದರೆ ರಾಜನು ಆ ಹಣವನ್ನು ಎಲ್ಲಿಂದ ತರುತ್ತಾನೆ ? ನಮ್ಮ ಧಾನ್ಯದಲ್ಲಿಯ ಧಾನ್ಯವನ್ನು ತಕ್ಕೊಳ್ಳುತ್ತಾನೆ. ನಮ್ಮ ಆಕಳುಗಳಲ್ಲಿಯ ಆಕಳುಗಳನ್ನು ತಕ್ಕೊಳ್ಳುತ್ತಾನೆ. ರಾಜನಲ್ಲಿ ಲಕ್ಷಾವಧಿ ಆಕಳು ಇರುತ್ತವೆ. ಅವೆಲ್ಲ ಎಲ್ಲಿಂದ ಬಂದವು ? ಅವು ನಾವು ಕೊಟ್ಟ ಆಕಳುಗಳೇ ? ರಾಜನ ಕೋಶವನ್ನು ನಾವೇ ತುಂಬಿದ್ದೇವೆ. ಅದರಿಂದಲೇ ನಿಮಗೆ ಹಣ ಸಿಗುವದು. ಸಾವಿರಾರು, ಅದೇಕೆ ಲಕ್ಷಾವಧಿ ನಾಗರು ಆರ್ಯರಿಗಿಂತ ಹೆಚ್ಚು ಶ್ರಮಬಡುತ್ತಾರೆ. ಅವರ ಈ ದುಡಿತದಿಂದ ನಿಮಗೆ ಧನ ಧಾನ್ಯಗಳು ಸಿಗುತ್ತವೆ. ಇಂಥವರನ್ನು ನೀವು ಕೊಲ್ಲುವಿರಾ ? ಇದು

ಅಧರ್ಮ, ಇದು ಕೃತಘ್ನತೆ. ಪ್ರಜೆಗಳ ಮಾತನ್ನು ಕೇಳದೆ, ರಾಜನ ಮಾತನ್ನೇ ಕೇಳುವದು ಮೂರ್ಖತನ. ಪ್ರಜೆಗಳ ಮತ ಕೇಳದಿರುವ ರಾಜನು ರಾಜನೇ ಅಲ್ಲ, ಅವನು ಕಳ್ಳ. ಅವನ ಮಾತನ್ನು ಕೇಳುವದೆಂದರೆ ಕಳ್ಳನಿಗೆ ಸಹಾಯವಿತ್ತಂತೆ. ಇದು ಆರ್ಯಧರ್ಮವೇ ? ಊರೂರಿಗೆ ಹೋಗಿ ನೋಡಿರಿ. ಅಲ್ಲಿ ನಾಗ ಹಾಗೂ ಆರ್ಯರು ಪ್ರೇಮದಿಂದಲೇ ಇರುವರು. ಒಂದೇ ಜೋಕಾಲಿಯಲ್ಲಿಯೇ ಆರ್ಯ ಹಾಗೂ ನಾಗರ ಮಕ್ಕಳು ತೂಗಾಡುತ್ತಿರುತ್ತಾರೆ. ಆದರೆ ಕೆಲವು ದೊಡ್ಡವರ ಮನಸ್ಸಿನಲ್ಲಿ ದ್ವೇಷವು ಹುಟ್ಟಿತು. ಅವರು ಅಡ್ಡ ಬಂದರು, ಅವರಿಗೆ ಆಟ, ಜನರಿಗೆ ಪ್ರಾಣ ಸಂಕಟ. ಜನಮೇಜಯನಿಗೆ ನಾಗರು ಸೇರುವದಿಲ್ಲವಂತೆ! ನಾಗರನ್ನು ಕಂಡರೆ ಮುಖ ಮುದಡುವನಂತೆ ಆ ವಕ್ರತುಂಡ! ಹೀಗಿದ್ದರೆ ಅವರಿಗೆಸ್ವರ್ಗಕ್ಕೆ ಹೋಗ ಹೇಳಿರಿ. ಈ ಜಗತ್ತಿನಲ್ಲೆಲ್ಲ ನಾವೇ ಇರುವೆವು. ಒಬ್ಬ ರನ್ನೊಬ್ಬರು ಪ್ರೀತಿಸುವೆವು. ಯಾಕೆ ಸೈನಿಕರೇ ? ಮಾತಾಡಿರಿ. ನಿಮ್ಮ ಮನಸ್ಸಿನಲ್ಲಿ ನಾಗರ ದ್ವೇಷವಿದೆಯೇ ? ಹೇಳಿರಿ. (ಇಲ್ಲ, ಇಲ್ಲವೆನ್ನುತ್ತಾರೆ.) ಇಲ್ಲದಿದ್ದರೆ ಹೋಗುವಿರೆಲ್ಲಿ ? ಅನಾಥರನ್ನು ರಕ್ಷಿಸುವದೇ ಕ್ಷತ್ರಿಯಧರ್ಮ. ಇಂದು ನಾಗರು ಅನಾಥರು. ಅವರ ಬೆನ್ನು ಕಟ್ಟಿರಿ. ಇಂದ್ರನಿಗೆ ನೆರವೀಯಲು ಹೋಗಿರಿ. ಅವನು ನಾಗರಿಗೆ ಅಭಯನ್ನಿತ್ತಿದ್ದಾನೆ. ಸತ್ಯದ ಪಕ್ಷವನ್ನು ನೀವು ಹಿಡಿಯಿರಿ. ನಿಜವಾದ ಧರ್ಮದ ಪಕ್ಷವನ್ನು ಹಿಡಿಯಿರಿ. ಸತ್ಯವೇ ನಮ್ಮ ರಾಜ. ಜನಮೇಜಯನಲ್ಲ. ಹಿಂದಕ್ಕೆ ಹೋಗಿರಿ, ಸತ್ಯಧರ್ಮದ ಸೈನಿಕರಾಗಿರಿ. ಅಸತ್ಯಕ್ಕೆ ನೆರವಾಗುವದಿದ್ದರೆ, ನಮ್ಮ ಹೆಣವನ್ನು ತುಳಿದು ಹೋಗಿರಿ. ನೋಡಿರಿ, ನಿಮ್ಮೆದುರಿಗೆ ನಿಮ್ಮ ಅಕ್ಕತಂಗಿಯರು ನಿಂತಿದ್ದೇವೆ. ನಡೆಯಲಿ ನಿಮ್ಮ ಕತ್ತಿಯ ಚಳಕು. ಬಾಣಗಳನ್ನು ಬಿಡಿರಿ, ಭಾಲೆಗಳನ್ನು ಒಗೆಯಿರಿ! ನಮ್ಮ ಬಲಿದಾನವಾಗಲಿ " ಎಂದಳು.

ಆ ಸೈನಿಕರೆಲ್ಲ ಗರ್ಜಿಸಹತ್ತಿದರು. ಹಿಂದಿರುಗಿದರು. ' ನಾವು ಸತ್ಯ ವನ್ನು ತಿಳಿಯೋಣ, ನಾಗರು ನಮ್ಮ ಅಣ್ಣತಮ್ಮಂದಿರು. ಈ ರಾಜನು ನಮ್ಮನ್ನು ಮೋಸ ಮಾಡಹತ್ತಿದ್ದಾನೆ. ಕಪಟಿಯಾದ ರಾಜನು. ಧನ್ಯ! ಸ್ತ್ರೀ ಯರೇ ನೀವು ಧನ್ಯ! ನೀವು ನಿಜವಾದ ಧರ್ಮವನ್ನು ತೋರಿಸಿದಿರಿ. ಜ್ಞಾನ

ಜ್ಯೋತಿಯನ್ನು ಬೆಳಗಿಸಿದಿರಿ. ಪ್ರೇಮದ ವಿಜಯವಾಗಲಿ! ನಿಜವಾದ ಶಾಂತಿಗೆ ಜಯವಾಗಲಿ ' ಎಂದು ಗರ್ಜಿಸುತ್ತ, ಸೈನಿಕರು ಹಿಂದಿರುಗಿದರು.

ಈ ಸುದ್ದಿಯು ಕ್ಷಣದಲ್ಲಿ ಎಲ್ಲೆಡೆಗೆ ಹಬ್ಬಿತು. ಸೈನಿಕರು ಗುಂಪು ಗುಂಪಾಗಿ ಹೋಗುವದು ನಿಂತಿತು. ಎಲ್ಲ ರಾಜರಿಗೂ ಕ್ರಾಂತಿಯಾಗುವ ದೆಂಬ ಭೀತಿಯು ಹುಟ್ಟಿತು. ಇಂದ್ರನು ಆನಂದಭರಿತನಾದನು. ಸಾವಿ ರಾರು ಸೈನಿಕರು ಸ್ವೇಚ್ಛೆಯಾಗಿ ಇಂದ್ರನ ಕಡೆಗೆ ಬರತೊಡಗಿದರು. ಜನಮೇ ಜಯನ ಮೋರೆ ಕಪ್ಪಿಟ್ಟಿತು. ಅವನು ಚಿಂತೆಗೊಳಗಾದನು. ತನ್ನ ಸ್ವಂತದ ಸಾಮ್ರಾಜ್ಯವೇ ಅಲ್ಲಾಡಬಹುದು. ಊರೂರಿಗೆ ಸ್ವತಂತ್ರ ರಾಜ್ಯಗಳಾಗ ಬಹುದು. ಎಂದು ಅವನಿಗೆ ಅನಿಸಹತ್ತಿತು.

“ ರಾಜನೆ ಧೈರ್ಯ ಬಿಡಬೇಡ. ನಾಗಾನಂದ ಹಾಗು ಅವನ ಪತ್ನಿ ವತ್ಸಲೆಯರು ಇಷ್ಟೆಲ್ಲ ಚಳವಳಿಯನ್ನು ನಡಿಸಿದ್ದಾರೆ. ಅವರಿಬ್ಬರನ್ನು ಹಿಡಿದು ತಂದರೆ, ಈ ಚಳವಳಿಯು ನಿಲ್ಲುವದು. ಎಲ್ಲವೂ ಸರಳವಾಗುವದು ಎಂದನು ವಕ್ರತುಂಡ.

“ ಬೇರೆ ಸ್ತ್ರೀಯರು ಮುಂದೆ ಬರುವರು. ಅಲ್ಲದೆ ಈ ಆರ್ಯಸ್ತ್ರೀ ಯರನ್ನು ನಾನು ಛಲಿಸುವದೆಂತು ? ನಾಗರಂತೂ ಒಂದು ಕಡೆಗೆ ಉಳಿದರು. ಆರ್ಯಮಾತೆಯರ ಮೇಲೆ ನಾನು ಕತ್ತಿಯನ್ನು ಹಿರಿಯಲಾ ? ” ಎಂದನು ಜನಮೇಜಯ.

“ ರಾಜಾ ! ಈ ಸ್ತ್ರೀಯರು ಆರ್ಯರೇ ಅಲ್ಲ. ನಾಗರನ್ನು ಪ್ರೀತಿಸು ವವರು ಆರ್ಯರೇ ಅಲ್ಲ. ನಾಗರೆಂದರೇ ತಿಳಿಯಬೇಕು. ಸ್ತ್ರೀಯರಿರಲಿ ಪುರುಷನಿರಲಿ ಅಪರಾಧಿಯನ್ನು ದಂಡಿಸುವದು ರಾಜನ ಕರ್ತವ್ಯ. ಅಬಲೆಯ ರೆಂದು ಬಿಟ್ಟು ಬಿಡಬೇಡ. ಅಬಲೆಯರಿದ್ದರೆ ಮನೆಯಲ್ಲಿರುತ್ತಿದ್ದರು. ಹೊರಬಂದರೆಂದ ಮೇಲೆ, ಎಲ್ಲರಿಗೂ ಒಂದೇ ನಿಯಮ. ರಾಜಾ ! ಕಾರುಣ್ಯ ವಂತನಾಗಬೇಡ. ಕ್ಷತ್ರಿಯರಿಗೆ ಅಸ್ಥಾನದಲ್ಲಿ ಕರುಣವು ಶೋಭಿಸುವದಿಲ್ಲ. ಧರ್ಮಕ್ಕಾಗಿ ಕಠೋರನಾಗು ! ಆರ್ಯಧರ್ಮವನ್ನು ನಿರ್ಮಲವಿಡಬೇಕು” ಎಂದು ವಕ್ರತುಂಡನು ವಿಷ ಕುಡಿಸಹತ್ತಿದನು.

“ ಆರ್ಯಧರ್ಮವೆಂದರೇನು ? ” ಎಂದನು ರಾಜ.

" ಆರ್ಯಧರ್ಮವೆಂದರೆ, ಅನಾರ್ಯರನ್ನು ನಾಶಪಡಿಸುವದು. ಅಥವಾ ಅವರಿಗೆ ಆರ್ಯಧರ್ಮದ ದೀಕ್ಷೆಯನ್ನು ಕೊಡುವದು. ಅನಾರ್ಯರ ವೈಶಿಷ್ಟ್ಯವನ್ನು ನಷ್ಟಮಾಡಿ ಆರ್ಯತ್ವವನ್ನು ಅವರಲ್ಲಿ ಸ್ಥಾಪಿಸುವದು " ಎಂದನು ವಕ್ರತುಂಡ.

" ಪ್ರಸಂಗವು ಮಾತ್ರ ಕಠಿಣವಾಗುತ್ತ ನಡೆಯಿತು " ಎಂದನು ಜನಮೇಜಯ.

" ರಾಜನೆ, ನಾನು ವತ್ಸಲೆ ಹಾಗು ನಾಗಾನಂದರನ್ನು ಕಟ್ಟಿತರುತ್ತೇನೆ. ಅವರದೇ ಈ ಚೇಷ್ಟೆ " ರಾಜನು, ರಾಜನೇ ಅಲ್ಲ. ಆ ಜನಮೇಜಯನು ದರೋಡೆಖೋರನಿದ್ದಾನೆ, ಕಳ್ಳನಿದ್ದಾನೆ. " ಹೀಗೆ ಹೇಳುತ್ತಿದ್ದಾರೆ. ಅವರ ನಾಲಿಗೆಯನ್ನು ಕಿತ್ತಬೇಕು. ಹೋಳಿಯಲ್ಲಿ ಒಗೆಯಬೇಕು " ಎಂದನು ವಕ್ರತುಂಡ.

" ಹೋಗು ಅವರನ್ನು ಕಟ್ಟಿ ತಕ್ಕೊಂಡು ಬಾ. ಇಷ್ಟುದಿನ ತಡೆಯುತ್ತ ಬಂದೆ. ಆದರೆ ನನ್ನ ಈ ಸಂಯಮವನ್ನು ಹೇಡಿತನವೆಂದು ಅವರು ತಿಳಿದಿದ್ದಾರೆ. ಹೋಳಿಯನ್ನೇ ಮಾಡುವಾ. ತಗೊಂಡುಬಾ. ಆರ್ಯನಿರಲಿ, ನಾಗರಿರಲಿ. ಸ್ತ್ರೀಯರಿರಲಿ, ಪುರುಷರಿರಲಿ. ಕಟ್ಟಿ ತೆಗೆದುಕೊಂಡು ಬಾ. ನನ್ನ ಆಜ್ಞೆಯನ್ನು ಮುರಿಯುವ ಅಪರಾಧಿಗಳನ್ನೆಲ್ಲ ತನ್ನಿರಿ. ಆಜ್ಞೆಯನ್ನು ಮೀರಿದ ಹೊಟ್ಟೆಯ್ಯ ಮಗನನ್ನು ಸಹ ಹಂಸಧ್ವಜ ರಾಜನು ತಪ್ತವಾದ ಎಣ್ಣೆಯಲ್ಲಿ ಒಗೆಸಿದನು. ಈಗ ನಾನು ಕಠೋರನಾಗಲೇಬೇಕು. ವಕ್ರತುಂಡನೇ ಹೋಗು. ಆ ಉದ್ಧಟರನ್ನು ಹೆಡಮುರಿಗಿಕಟ್ಟಿ ತಕ್ಕೊಂಡು ಬಾ." ಎಂದು ಸಂತಪ್ತನಾಗಿ ಹೇಳಿದನು.

" ಒಳ್ಳೇದು ಮಹಾರಾಜ. ಆರ್ಯಧರ್ಮಕ್ಕೆ ಜಯವಾಗಲಿ " ಎಂದು ವಕ್ರತುಂಡನು ಹೊರಟು ಹೋದನು.

—:XXX●XXX:—

೧೭

ಆಶ್ರಮದಲ್ಲಿ ಮಗು ಶಶಾಂಕನು ಜ್ವರದಿಂದ ಬಳಲುತ್ತಿದ್ದನು. ಆಸ್ತಿಕನು ಹತ್ತಿರ ಕುಳಿತಿದ್ದನು. ನಾಗಾನಂದ ಹಾಗು ವತ್ಸಲೆಯರು ಪ್ರಚಾರಕ್ಕೆ ಹೋಗಿದ್ದರು. ಅವರಿಗೆ ಸುದ್ದಿ ಕಳಿಸಲ್ಪಟ್ಟಿತು. ಆದರೆ ಅದು ಅವರಿಗೆ ಯಾವಾಗ ಮುಟ್ಟುವದು?

'ಶಶಾಂಕಾ ನಿನಗೆ ಸಮಾಧಾನವೆನಿಸುವದೇ ?' ಎಂದು ಆಸ್ತಿಕನು ತಲೆಯ ಮೇಲೆ ಕೈಯಿಟ್ಟು ವಿಚಾರಿಸಿದನು.

'ಭಗವಾನ್ ನಿಮಗೇಕೆ ತೊಂದರೆ. ನೀವು ಅತ್ತಕಡೆಗೆ ಹೋಗಿ, ಹುಡುಗರಿಗೆ ಏನಾದರೂ ಹೇಳಿರಿ. ನನ್ನ ಸಲುವಾಗಿ ಅವರಿಗೇಕೆ ಪಾಠವಿಲ್ಲ ?' ಎಂದನು.

'ಶಶಾಂಕಾ, ಆಶ್ರಮದಲ್ಲಿ ಎರಡನೆಯದನ್ನು ಏನು ಕಲಿಯುವದಿದೆ ? ಎರಡನೆಯವರ ಸುಖದುಃಖದಲ್ಲಿ ಭಾಗಿಯಾಗುವದೇ ನಿಜವಾದ ಶಿಕ್ಷಣ. ನಿನ್ನ ಸೇವೆಯೇ ನಿಜವಾದ ಶಿಕ್ಷಣ. ನಾನು ನಿನ್ನ ಸೇವೆ ಮಾಡುವಾಗ ಉಳಿದವರೆಲ್ಲ, ತಮ್ಮ ಕಾರ್ಯದಲ್ಲಿ ನಿರತರಾಗುವದೇ ಶಿಕ್ಷಣ. ಶಿಕ್ಷಣವೆಂದರೆ ಒಂದು ಬಗೆಯ ದೃಷ್ಟಿ. ಅದು ಬಂದರೆ ತೀರಿತು. ನೀನು ಮನಸ್ಸಿಗೆ ಏನೂ ಹಚ್ಚಿಕೊಳ್ಳಬೇಡ. ಹಣೆಯ ಮೇಲೆ ಭಸ್ಮ ಬೆರೆತ ಮಸರನ್ನು ಹಾಕಲಾ? ತಂಪು ಎನಿಸೀತು?' ಎಂದು ಪ್ರೇಮದಿಂದ ಆಸ್ತಿಕನು ನುಡಿದನು.

'ಹಾಕಿರಿ. ನೀವೇ ಹಾಕಿರಿ. ನಾಗೇಶನು ಹಾಕಿದಾಗ ಕಣ್ಣಲ್ಲಿ ಬಿತ್ತು. ನಾನು ಏನೂ ಮಾತಾಡಲಿಲ್ಲ. ಅವನು ನನ್ನನ್ನು ಪ್ರೀತಿಸುವ. ಅವನು ನನಗೆ ಸೇರುವ' ಎಂದನು ಶಶಾಂಕ.

' ಆವನೇ ಸೇವೆಯನ್ನು ಮಾಡಲಿ. ನಿನಗೆ ಹಾಲು ಕೊಟ್ಟನಷ್ಟೆ ? ' ಎಂದರು.

ಆಸ್ತಿಕರು ಒಂದು ದೊನ್ನೆಯಲ್ಲಿ ಬೂದಿಯನ್ನು ಕಲಿಸಿದ ಮೊಸರನ್ನು ತಂದರು. ಅವನ ಹಣೆಗೆ ಹಾಕಿದರು. ಬಾಯಿಂದ ಸುಂದರ ವೇದಮಂತ್ರಗಳನ್ನು ಅನ್ನುತ್ತಿದ್ದರು. ನಡು ನಡುವೆ ಉಪನಿಷತ್ತುಗಳನ್ನನ್ನುತ್ತಿದ್ದರು. ಆದು ಮಂಗಳಕಾರಕವೆನಿಸುತ್ತಿತ್ತು.

' ಎಂತಹ ಸುಂದರವಿವೆ ಈ ಮಂತ್ರ? ಎಷ್ಟು ಮಧುರ! ' ಎಂದನು ಶಶಾಂಕ

' ಅಹುದು. ಈ ಮಂತ್ರದೃಷ್ಟಾರರ ದೃಷ್ಟಿಯು, ಸೃಷ್ಟಿಯ ಅಂತರಂಗವನ್ನು ಭೇದಿಸಿದೆ. ಅವರಿಗೆ ಸರ್ವತ್ರ ಮಧು ಕಾಣಿಸುತ್ತಿದೆ. ಮಧುಸಾಗರರೂಪಿ ಪರಮಾತ್ಮನು ಕಾಣಿಸುತ್ತಿದ್ದಾನೆ. ಆ ಋಷಿಗಳಿಗೆ ಉಷಾ, ನಿಶಾ, ಎಲ್ಲವೂ ಸವಿ. ಇಷ್ಟೇ ಅಲ್ಲ. ' ಮಧುಮತ್ ಪಾರ್ಥಿವಂ ರಜಃ ' ಮಣ್ಣಿನಕಣವೂ ಅವರಿಗೆ ಸವಿ. ಮಣ್ಣಿನಕಣ ಕ್ಷುದ್ರವೇ. ಮಳೆ ಬಿದ್ದೊಡನೆ, ಆದರಿಂದ ಸುಗಂಧವು ಹೊರಬೀಳುತ್ತದೆ. ಹಸಿರು ಹುಲ್ಲು ಹುಟ್ಟುತ್ತದೆ. ಹಣ್ಣು ಹಂಪಲಗಳ, ಹೂಗಳ, ಅನಂತ ಬಣ್ಣ ಹಾಗೂ ರಸಗಳು ಎಲ್ಲಿಂದ ಹೊರಬಿದ್ದವು? ಆ ಮಣ್ಣಿನಕಣದಿಂದಲ್ಲವೇ? ಎಂತಹ ದೊಡ್ಡ ದೃಷ್ಟಿ! ' ಎಂದು ಆಸ್ತಿಕನು ' ಮಧುವಾತಾಋತಾಯತೇ ' ಎಂಬ ಮಂತ್ರವನ್ನು ಅನ್ನುತ್ತ ಶಶಾಂಕನ ತಲೆ ತಟ್ಟಹತ್ತಿದರು. ಅವನಿಗೆ ನಿದ್ದೆ ಹತ್ತಿತು.

' ನೀವು ಹೋಗಿರಿ. ನಾನು ಕೂಡುವೆ. ' ಎಂದನು ನಾಗೇಶ.

' ಎಲ್ಲರ ಊಟವಾಯಿತೇ? ನೀನು ಉಂಡೆಯಾ? ' ಎಂದು ನಗುತ್ತ ಕೇಳಿದರು.

' ನನಗೆ ಎಲ್ಲರೂ ಚೇಷ್ಟೆ ಮಾಡುವರು. ಆದುದರಿಂದ ಸ್ವಲ್ಪೇ ಉಂಡಿದ್ದೇನೆ. ಎಲ್ಲರೂ ನನ್ನನ್ನು ರೇಗಿಸುವರು. ' ಎಂದನು ನಾಗೇಶ.

' ನೀನು ನನ್ನೊಡನೆ ಊಟಮಾಡು. ಅವರು ರೇಗಿಸಿದರೆ ನೀನೂ ಅವರನ್ನು ರೇಗಿಸಬೇಕು. ' ಎಂದರು

ಆಸ್ತಿಕರು ಹೋದರು. ಇಂದು ಆಶ್ರಮಕ್ಕೆ ಋಷಿಗಳು ಬರುವವರಿದ್ದರು. ಸಧ್ಯಸ್ಥಿತಿಯ ವಿಚಾರವಿನಿಮಯವಾಗುವದಿತ್ತು. ಆಸ್ತಿಕರು ಅಂಗಳದಲ್ಲಿ ಅತ್ತಿತ್ತ ಅಡ್ಡಾಡಹತ್ತಿದರು.

ಆಸ್ತಿಕ! ಎಂತಹ ಮಂಗಲ ನಾಮ! ಮಾನವ್ಯದ ಮೇಲೆ ವಿಶ್ವಾಸ ವಿಡುವವರೇ ನಿಜವಾದ ಆಸ್ತಿಕರು. ದೇವಧರ್ಮದ ಮೇಲೆ ವಿಶ್ವಾಸವಿಟ್ಟು ಮನುಷ್ಯರನ್ನು ತಿರಸ್ಕರಿಸುವವರು ಆಸ್ತಿಕರೇ?' ತಾವೇ ಶ್ರೇಷ್ಠರು, ತಮ್ಮ ಜಾತಿಯೇ ಶ್ರೇಷ್ಠ, ತಮ್ಮ ರಾಷ್ಟ್ರವೇ ಶ್ರೇಷ್ಠ ಎಂದು ತಿಳಿದು, ಉಳಿದವರನ್ನು ಕೀಳುಬಗೆಯುವವರು ಆಸ್ತಿಕರೇ?

ಆಸ್ತಿಕರು ಅಂಗಳದಲ್ಲಿ ವಿಚಾರ ಮಗ್ನರಾಗಿ ಓಡಾಡುತ್ತಿದ್ದರು. ಅವರಿಂದ ಶ್ರದ್ಧಾ, ತ್ಯಾಗಗಳು ಭಾರತವರ್ಷದಲೆಲ್ಲ ಹರಡುತ್ತಿದ್ದವು ಅಲ್ಲಿಂದಲೇ ನವತರುಣರಿಗೆ ಸ್ಫೂರ್ತಿದೊರೆಯುತ್ತಿತ್ತು. ನವನಾರಿಯರಿಗೆ ನವಜೀವನವು ಸಿಗುತ್ತಿತ್ತು. ಹೊಸ ಕಲ್ಪನೆಗಳಿಗೆ ಅವರೇ ಆಧಾರ. ಸರ್ವರ ಅಂತಃಕರಣವನ್ನು ತಣಿಸುವ ಶಕ್ತಿಯೇ ಅವರು. ಎಲ್ಲರಿಗೂ ಬೆಳಕನ್ನು ಕೊಡುವ ಸೂರ್ಯರವರು.

ಪ್ರತಿಯುಗದಲ್ಲಿಯೂ ಇಂಥ ವಿಭೂತಿಗಳು ಹುಟ್ಟುತ್ತಿರುತ್ತಾರೆ. ಈ ವಿರಾಟ ಸಂಸಾರವನ್ನು ಮೆಲ್ಲಗೆ ವಿಕಾಸಗೊಳಿಸುತ್ತಾರೆ. ಒಂದೊಂದು ಪಕಳಿ ಅರಳಲು ಒಂದೊಂದುಯುಗ ಬೇಕು. ಹೊಸ ಯುಗವು ಹಳೆಯದನ್ನು ಕಳಚಿ ಒಗೆದು, ಮಾಂಗಲ್ಯಮಯವಾದ ಹೊಸ ಬೆಳಕನ್ನು ಜಗತ್ತಿಗೆ ತೋರಿಸುವದು. ಹೀಗೆಯೇ ಅದರ ವಿಕಾಸ. ಆಯಾ ಶತಕಗಳಲ್ಲಿಯ ದುಷ್ಟ ರೂಢಿಗಳು ಹಿಂದೆ ಬಿದ್ದು, ಹೊಸ ಸಾಂಪ್ರದಾಯಗಳು ಮುಂದೆ ಬರುತ್ತವೆ.

ಈ ಮಾನವಿ ಸಮಾಜರೂಪಿ ತತ್ತಿಗೆ, ಒಂದೇ ಸವನೇ ಶಿಕೆ ಕೊಡಲ್ಪಡುತ್ತದೆ. ಸಜ್ಜನರ ತಪಸ್ಸಿನಿಂದ ಅದಕ್ಕೆ ಶಕೆ ದೊರೆಯುತ್ತದೆ. ಕೋಳಿಯ ಮೊಟ್ಟೆಯು ಸ್ವಲ್ಪ ಶಿಕೆಯಿಂದ ಒಡೆದು ಮರಿಯು ಹೊರಬರುತ್ತದೆ. ಆದರೆ ಅದಕ್ಕೆ ಹಾರಲು ಬರುವದಿಲ್ಲ. ಪಕ್ಷಿರಾಜನಾದ ಗರುಡನ ತತ್ತಿಗೆ ಅವನ ತಾಯಿಯಾದ ವಿನತಾತಾಯಿಯು ಸಾವಿರ ವರುಷ ಶಿಕೆ ಕೊಟ್ಟಳಂತೆ. ಆಗ ಆ ಪ್ರತಾಪೀ ಗರುಡನು ಹೊರಬಿದ್ದನು. ವಿಶ್ವವ್ಯಾಪಿಯಾದ ಪರಮಾತ್ಮನನ್ನೇ

ಹೊತ್ತು ಕುಣಿದನು. ಆ ಗರುಡನಾರು ? ಆ ಮಹಾತ್ಮನು ಎಲ್ಲಿಯವನು ? ವಿನತಾತಾಯಿಯಾರು ?

ಮಾನವೀಜೀವನವೇ ಗರುಡ. ಪೂರ್ಣತ್ವವನ್ನು ಪಡೆಯಲು ಅಪೇಕ್ಷಿಸುವ ಜೀವ. ಆ ಗರುಡನಾಗಬೇಕಾದರೆ ದಾರಿಯನ್ನು ಕಾಯ ಬೇಕು. ವಿನತಾ ತಾಯಿಯಂದರೆ, ವಿನಮ್ರವೃತ್ತಿ. ನಮ್ರತೆಯಿಂದ ಕಾರ್ಯವಾಗುವದು. ವಿನಮ್ರರಾಗಿ ಧ್ಯೇಯದಲ್ಲಿ ಶ್ರದ್ಧೆಯನ್ನಿಟ್ಟು ತಪ ಮಾಡಬೇಕು.

ಇಂತಹ ತಪಸ್ವಿಗಳು ಮಾನವನ ಪರಿಪೂರ್ಣತೆಗೆ ಶಿಕೆಯನ್ನು ಕೊಡು ತ್ತಾರೆ. ಅಂಥ ತಪಸ್ವಿಗಳಲ್ಲಿ ಈ ಆಸ್ತಿಕರೊಬ್ಬರು.

ಇಷ್ಟರಲ್ಲಿ, ಆಶ್ರಮಕ್ಕೆ ಋಷಿಗಳು ಬಂದರು. ಆಸ್ತಿಕರು ಬರಮಾಡಿ ಕೊಂಡರು. ಕುಶಲ ಪ್ರಶ್ನೆಗಳನ್ನು ಕೇಳಿದರು. ಪಾದಪ್ರಕ್ಷಾಲನೆಯನ್ನು ಮಾಡಿದರು. ಸ್ವಲ್ಪ ಉಪಹಾರವನ್ನು ಕೊಟ್ಟರು. ಹುಡುಗರೆಲ್ಲ ಮಲಗಿ ದ್ದರು. ಎಲ್ಲ ವ್ಯವಸ್ಥೆಯನ್ನು ಆಸ್ತಿಕರೇ ಮಾಡಿದ್ದರು. ನಂತರ ಎಲ್ಲ ಋಷಿಗಳು ಅಂಗಳದಲ್ಲಿ ಬಂದು ಕುಳಿತರು. ಬಕುಲ ವೃಕ್ಷವು ಸುಗಂಧವನ್ನು ಬೀರುತ್ತಿತ್ತು.

' ಹೂಗಳ ಪರಿಮಳವು ಬರುತ್ತಿದೆ ' ಎಂದನು ಹಾರೀತ

' ಆಯಾ ಋತುಗಳಲ್ಲಿ ಆಯಾ ಹೂಗಳು. ಸೃಷ್ಟಿಯ ವಿವಿಧತೆಯು ಅಪೂರ್ವವಿದೆ. ವಿವಿಧತೆಯಲ್ಲಿ ಆನಂದವಿದೆ. ಜೀವನಕ್ಕೆ ಒಂದು ಬಗೆಯ ನಾವೀನ್ಯತೆಯನ್ನು ಕೊಡುತ್ತದೆ " ಎಂದನು ದಧೀಚಿ

" ಆದರೆ ಈ ವಿವಿಧತೆಯು ಇಂದು ಬೇಡವಾಗಿದೆ. ಯಾವದು ಭಾಗ್ಯವೋ ಅದು ದುರ್ಭಾಗ್ಯವೆನಿಸಹತ್ತಿದೆ. ಆರ್ಯರಿಗೆ ನಾಗರು ಬೇಡವಾಗಿ ದ್ದಾರೆ. ಜನಮೇಜಯನು ಹಟ ಹಿಡಿದಿದ್ದಾನೆ. ಇದಕ್ಕೇನು ಉಪಾಯ ? ಮತ್ತೆ ಯುದ್ಧವಾಗುವದೇ ? ಏನೂ ತಿಳಿಯಲೊಲ್ಲದು. " ಎಂದನು ಯಜ್ಞ ಮೂರ್ತಿ.

" ಪ್ರಾಚೀನ ಕಾಲದಲ್ಲಿ ದಧೀಚಿಯು ಮಾಡಿದಂತೆ ನಾವೂ ಇಂದು ತ್ಯಾಗ ಮಾಡೋಣ ಬನ್ನಿ. ತಪೋಮೂರ್ತಿ ದಧೀಚಿಯು ತನ್ನ ಬಲಿ

ದಾನವನ್ನು ಮಾಡಿದ. ಅವನ ಎಲುವುಗಳನ್ನು ತೆಗೆದುಕೊಂಡು ಇಂದ್ರನು ವಜ್ರಾಯುಧವನ್ನು ಮಾಡಿದ. ಇದರ ಅರ್ಥವೇನು ? ಆ ಮುಷ್ಟಿಯಷ್ಟಿರುವ ಎಲುವಿನಲ್ಲಿ ಇಂದ್ರನ ವಜ್ರಕ್ಕಿಂತಲೂ ಹೆಚ್ಚು ಸಾಮರ್ಥ್ಯವಿದ್ದಿತೇ ? ಅಹುದು. ಅದರಲ್ಲಿ ಅನಂತ ತ್ಯಾಗವಿದ್ದಿತು. ಮಾನವಜಾತಿಯ ಬಗ್ಗೆ ಪ್ರೇಮ ತುಂಬಿದ್ದಿತು. ಹುತಾತ್ಮಾ ದಧೀಚಿಯ ಆ ಎಲುಬನ್ನು ನೋಡಿದೊಡನೆಯೇ ವೃತ್ರಾಸುರನು ನೆಲಕ್ಕೇ ಬಿದ್ದನು. ಈ ಅಂಜಿಕೆಯಿಂದಲೇ ಅವನು ಪ್ರಾಣವನ್ನೇ ಬಿಟ್ಟನು. "ತ್ಯಾಗೇನ ಏಕೇನ ಅಮೃತತ್ವಮಾನಶುಃ" ತ್ಯಾಗದಿಂದ ಎಲ್ಲವೂ ಸಿಗುವದು. ತನ್ನ ಜೀವವನ್ನರ್ಪಿಸುವದಕ್ಕಿಂತ ಹೆಚ್ಚಿನ ತ್ಯಾಗವೇನಿದೆ ? "ಜನಮೇಜಯನ ಎದುರಿಗೆ ಹೋಗಿ ನಿಲ್ಲಬೇಕು. ಅವನು ನಾಗರನ್ನು ಅಗ್ನಿಯಲ್ಲಿ ಹಾಕಹತ್ತಿದ್ದಾನೆ. ಅದಕ್ಕೆ ಸರ್ಪಸತ್ರವೆಂದು ಹೆಸರಿಟ್ಟಿರುವನು. ನಾಗಜನಾಂಗವು ಸರ್ಪ ? ಛೀ ? ಇವರನ್ನು ಕೊಲ್ಲುವದರಿಂದ ದೇವರು ತುಷ್ಟನಾಗುವನೇ ? ಅವನ ಅಹಂಕಾರವು ಶಾಂತವಾದೀತು. ಜನಮೇಜಯನ ಕಣ್ಣು ತೆರೆಯುವದಕ್ಕಾಗಿ, ನಾವು ನಮ್ಮ ಪ್ರಾಣಗಳನ್ನು ಹೋಮಿಸೋಣ ಬನ್ನಿ. ಅವನ ನರಮೇಧದಲ್ಲಿ ಆಹುತಿಯಾಗೋಣ ಬನ್ನಿ. ಆಶ್ರಮದಲ್ಲಿಯ ಅನೇಕ ವಿದ್ಯಾರ್ಥಿಗಳೂ ನನ್ನೊಡನೆ ಬರುವವರಿದ್ದಾರೆ. ಆದರೆ ಅವರನ್ನು ಮೊದಲು ಅವರ ತಂದೆತಾಯಿಗಳಿಗೆ ಒಪ್ಪಿಸುತ್ತೇನೆ. ಮುಂದೆ ಅವರು ಬೇಕಾದದ್ದನ್ನು ಮಾಡಲಿ. ಎಂದು ಹೇಳುವವನಿರುವೆ. ನನಗಂತೂ ಹೋಗಬೇಕೆನಿಸಿದೆ. ದಾರಿಯಲ್ಲಿ ಸಮಾನ ಧರ್ಮಿಗಳು ಸಿಗಬಹುದು. ಇದರಿಂದ ಜನಮೇಜಯನ ಮೇಲೆ, ದೊಡ್ಡ ಪರಿಣಾಮವಾಗುವದು. ನಿಸ್ವಾರ್ಥ ಬಲಿದಾನದಲ್ಲಿ ಪರ್ವತವನ್ನು ಕೂಡ ಒಡೆಯುವ ಸಾಮರ್ಥ್ಯವಿದೆ. ನಾವಾಗಿಯೇ ಮಾಡಿದ ಪ್ರಾಣಾರ್ಪಣವು ಅಪೂರ್ವವಾದುದು" ಎಂದು ನನ್ನ ಮನಸ್ಸಿನಲ್ಲಿ ವಿಚಾರಗಳು ಬರುತ್ತವೆ ಎಂದು ಆಸ್ತಿಕರು ಮಾತನಾಡಿದರು.

"ಇಂದ್ರನು ದಂಡೆತ್ತಿ ಬರುವನೆಂದು ಕೇಳುತ್ತೇವೆ. ಜನಮೇಜಯನು ಅವನಿಗೆ ಅಪಮಾನಕಾರಕ ಪತ್ರ ಬರೆದಿರುವನಂತೆ." ಎಂದನು ಹಾರೀತ.

“ ಎರಡೂ ಕಡೆಯ ಸಾವಿರಾರು ಸೈನಿಕರು ಪ್ರಾಣ ಕಳೆದುಕೊಳ್ಳುವ ಮೊದಲೇ, ನಾವು ಈ ಪ್ರಯೋಗವನ್ನು ಮಾಡೋಣ. ತಪಸ್ವಿಗಳಾದ ನಾವು ಈ ಅಗ್ನಿಯಲ್ಲಿ ದೇಹವನ್ನು ಹೋಮಿಸುವ ತಪವನ್ನಾಚರಿಸೋಣ. ಅಂದರೆ ಇಂದ್ರನಿಗೆ ಯುದ್ಧ ಮಾಡುವ ಪ್ರಸಂಗವೇ ಬರಲಿಕ್ಕಿಲ್ಲ. ಪ್ರೇಮ ಹುಟ್ಟಬೇಕು. ದ್ವೇಷಾಸೂಯಗಳು ಶಮನವಾಗಬೇಕೆಂದು ನಾವು ಆತ್ಮಾರ್ಪಣೆಯನ್ನು ಮಾಡಿದರೆ ಅದು ವ್ಯರ್ಥವಾಗುವದೇ ! ಅದು ವ್ಯರ್ಥವಾದರೆ, ಯುದ್ಧ ಮಾಡುವವರು ಮಾಡೇ ಮಾಡುವರು. ಆದರೆ ಜಗತ್ತಿನಲ್ಲಿ ಯಾವದೂ ವ್ಯರ್ಥ ಹೋಗುವದಿಲ್ಲವೆಂಬುದನ್ನು ಮರೆಯಬಾರದು. ಕೊನೆಗೆ ನಮ್ಮ ಬಲಿದಾನವು ವಿಚಾರ ಮಾಡಲಿಕ್ಕೆ ಹಚ್ಚುವದು. ಮನುಷ್ಯನು ಎಷ್ಟೇ ದುಷ್ಟನಾದರೂ ಅವನ ಅಂತಃಕರಣದೊಳಗೆ ಸ್ವಲ್ಪಾದರೂ ಒಳ್ಳೇತನವಿದ್ದೇ ಇರುತ್ತದೆ. ಭೂಗರ್ಭದಲ್ಲಿ ಶಿಲೆಗಳಿವೆ. ಮೇಲಿನ ಕಲ್ಲು ಮಣ್ಣುಗಳನ್ನು ತೆಗೆದರೆ, ಹರಿಯುವ ನೀರು ಕಂಡಿತು. ಮನುಷ್ಯನ ಸತ್ವವೃತ್ತಿಯ ಮೇಲೆ, ಅಹಂಕಾರದ ದುಷ್ಟ ಆಕಾಂಕ್ಷೆಗಳ ಕಲ್ಲು ಮಣ್ಣುಗಳಿದ್ದು, ನಮ್ಮ ಬಲಿದಾನದಿಂದ ಅವುಗಳನ್ನು ಸರಿಸಲು ಯತ್ನಿಸೋಣ. ನಾವು ದಿನಾಲು ಅಗ್ನಿಯನ್ನು ಪೂಜಿಸುತ್ತೇವೆ. ಸಮಿಧಗಳನ್ನು ಅರ್ಪಿಸುತ್ತೇವೆ. ಆದರೆ ಒಂದು ದಿನ ಕೆಳಗಿನ ವಿಚಾರಗಳು ಬಂದವು. ಧೈರ್ಯಸಿದ್ಧಿಗಾಗಿ ದೇಹಾರ್ಪಣ ಮಾಡುವದೇ ನಿಜವಾದ ಅಗ್ನಿಪೂಜೆ. ಈ ಕಟ್ಟಿಗಗಳನ್ನು ಸುಡುವುದರಿಂದ ನಮಗೆ ಬೆಳಕು ದೊರೆಯಲಾರದು. ಜೀವನದಲ್ಲಿ ಜ್ಞಾನಾಗ್ನಿಯು ಬೆಳಗಲಾರದು. ದೇಹದ ಸಮಿಧವನ್ನು ಅರ್ಪಿಸೋಣ. ನಮ್ಮ ಆಸಕ್ತಿ, ಕ್ಷುದ್ರವಾಸನಾ ವಿಕಾರಗಳ ಸಮಿಧವನ್ನು ಹೋಮಿಸಿದರೇ ಜ್ಞಾನಾಗ್ನಿಯು ಪ್ರಜ್ವಲಿತವಾಗುವದು. ಇಂದಿನ ಅಜ್ಞಾನಾಂಧಃಕಾರದಲ್ಲಿ ವಿಚಾರಾಗ್ನಿಯನ್ನು ಹೊತ್ತಿಸಬೇಕಾಗಿದೆ. ದ್ವೇಷವು ಥೈ ಥೈ ಕುಣಿಯುತ್ತಿರುವಾಗ ಪ್ರೇಮಜ್ಯೋತಿಯನ್ನು ಬೆಳಗಿಸಬೇಕಾಗಿದೆ. ಇದಕ್ಕೆ—ಆತ್ಮ ಹೋಮ ಒಂದೇ ಉಪಾಯ. “ ಏಷ ಏವ ಪಂಥಾ ವಿದ್ಯತೆ ಅಯನಾಯ ನಾನ್ಯಃ ಪಂಥಾ ” । ಎಂಬ ಒಂದೇ ದಾರಿ. ಯುದ್ಧ ಮಾಡಬಹುದು. ಆದರಿಂದ ದ್ವೇಷವು ಇನ್ನೂ ಹೆಚ್ಚಬಹುದು. ಮುಂದಿನ ಸಂತತಿಗೂ ಈ ವೈರವನ್ನು ಮುಟ್ಟಿ

ಸುವದು. ಈ ಎಲ್ಲವುಗಳಿಗಿಂತ ನಿರ್ವೈರವಾಗುವ ಮಾರ್ಗವನ್ನು ಅವಲಂಬಿಸೋಣ ಬನ್ನಿ. ಆತ್ಮನೇ ಯಜಮಾನ, ಶ್ರದ್ಧೆಯೇ ಪತ್ನಿ, ಈ ದೇಹವೇ ಹವಿಸ್ಸು, ಇಂತ ದಿವ್ಯ ಯಜ್ಞವನ್ನು ಮಾಡೋಣ ಬನ್ನಿ. ತಮಗೆಲ್ಲ ಏನೆನಿಸುವದು ?" ಎಂದನು ಆಸ್ತಿಕ.

"ತಮ್ಮ ವಿಚಾರಗಳು ಯೋಗ್ಯವಾಗಿವೆ. ಭರತಖಂಡಕ್ಕೆ ಯಾವಾಗಲೂ ಪ್ರಕಾಶವನ್ನು ಕೊಡುವ, ಮಾರ್ಗದರ್ಶಕ ಮಾಡುವ, ಪವಿತ್ರವಾದ ಪ್ರೇಮ ಜ್ಯೋತಿಯೊಂದನ್ನು ಹೊತ್ತಿಸೋಣ. ನನ್ನ ಹೆಸರು ಯಜ್ಞಮೂರ್ತಿ. ನಿಮ್ಮೊಡನೆ ನನ್ನ ಹೆಸರನ್ನೂ ಸಾರ್ಥಕ ಮಾಡಗೊಡಿರಿ." ಎಂದನು ಯಜ್ಞಮೂರ್ತಿ.

'ನನ್ನ ಹೆಸರು ದಧೀಚಿ. ಆ ಮಹಋಷಿಯ ಹೆಸರಿನ ಕೀರ್ತಿ ಉಳಿಯುವಂತೆ ನನಗೂ ಅವಕಾಶ ಕೊಡಿರಿ.' ಎಂದನು ದಧೀಚಿ.

ನನ್ನ ಹೆಸರು ಹಾರೀತ. ಸರ್ವಸೃಷ್ಟಿಯನ್ನು ಹಸರು ಮಾಡುವವನು ಹಾರೀತನೇ ? ಜೀವನದಲ್ಲಿ ಹಸಿರು ಉಂಟು ಮಾಡುವವನು ಹಾರೀತನೇ ? ಇಂದು ಜೀವನವು ನೀರಸವಾಗಿದೆ. ಶುಷ್ಕವಾಗಿದೆ. ಸಹಾನುಭೂತಿಯು ಸಂಪುಷ್ಟಕ್ಕೆ ಬಂದಿದೆ. ಮಾನವೀ ಜೀವನಕ್ಕೆ ಜೀವಕಳೆಯನ್ನು ಕೊಡುವ ಎಲ್ಲ ಕಲೆಗಳು ಬತ್ತಿ ಹೋಗಿವೆ. ಹೀಗೆ ಮಾನವ ಸಮಾಜವು ಭಣಗುಟ್ಟುತ್ತಲಿದೆ. ಇಂತಹ ಸಮಯದಲ್ಲಿ ಕೊನೆಯ ಯಜ್ಞವನ್ನು ನನಗೆ ಮಾಡಗೊಡಿರಿ. 'ಯಜ್ಞಾತ್ ಭವತಿ ಪರ್ಜನ್ಯಃ' ಎಂದು ಕೃಷ್ಣ ಹೇಳಿದ್ದಾನೆ. ನಾವು ಬಲಿದಾನಮಾಡೋಣ. ಅಂದರೆ ಎರಡನೆಯವರ ಹೃದಯದಲ್ಲಿ ಪ್ರೇಮದ ಮಳೆಯಾದೀತು. ಅವರ ಕಣ್ಣುಗಳಿಂದ ಪ್ರೇಮದ ಮಳೆ ಬಂದೀತು. ನಿಜವಾಗಿಯೂ 'ಯಜ್ಞಾತ್ ಭವತಿ ಪರ್ಜನ್ಯಃ ಎಂಬ ಚರಣದ ಅರ್ಥವು ಈಗ ನನಗೆ ಹೊಳೆಯಿತು. ಗಂಭೀರವಾದ ಅರ್ಥ. ಆಕಾಶದ ಮಳೆಗಾಗಿ ಹೊರಗಿನ ಸಮಿಧೆಗಳು. ಜೀವನದಲ್ಲಿಯ ಮಳೆಗಾಗಿ ದೇಹವೇ ಸಮಿಧೆ." ಎಂದನು ಹಾರೀತ.

"ಏನೇನು ಬೇಕೋ ಅದೆಲ್ಲವೂ ಯಜ್ಞದಿಂದ ದೊರೆಯುವದೆಂದು ಭಗವಂತನು ಮೊದಲೇ ಹೇಳಿದ್ದಾನೆ. ಯಜ್ಞವೆಂದರೆ ಕಾಮಧೇನು, ಕಲ್ಪ

ವೃಕ್ಷ. ನಾವೂ ಯಜ್ಞವನ್ನು ಮಾಡೋಣ. ಜ್ಞಾನದೀಪವನ್ನು ಹಚ್ಚೋಣ." ಎಂದನು ಆಸ್ತಿಕ.

' ಗುರುದೇವ! ಶಶಾಂಕನು ನಿಮ್ಮನ್ನು ಕರೆಯುವನು." ಎಂದನು ನಾಗೇಶ.

" ನಾನು ಸ್ವಲ್ಪ ಹೋಗಿಬರುವೆ. ನೀವು ವಿಚಾರ ಮಾಡಿರಿ. ಶಶಾಂಕ ಜೇನೆ ಬಿದ್ದಿರುವ. ವತ್ಸಲಾ ನಾಗಾನಂದರ ಮಗ. ನೀವೂ ಅವರ ಹೆಸರನ್ನು ಕೇಳಿರಬೇಕು. ಪವಿತ್ರವಾದ ಹೆಸರುಗಳು "ಎನ್ನುತ್ತ ಆಸ್ತಿಕನು ಒಳಗೆ ಹೋದನು.

ಶಶಾಂಕನು ತಳಮಳಿಸುತ್ತಿದ್ದನು. ಆಸ್ತಿಕರು ಅವನ ಕೈಹಿಡಿದು ನೋಡುತ್ತಾರೆ ಬೆಂಕಿಯಾಗಿದೆ, ತಲೆಯಮೇಲೆ ಪ್ರೇಮದಿಂದ ಕೈಯಾಡಿಸಿದರು. ಜ್ವರದಿಂದ ಕುದಿಯುತ್ತದೆ ಮೈ.

' ಮಗು ಹೇಗೆನಿಸುತ್ತಿದೆ ? ' ಎಂದನು ಆಸ್ತಿಕ.

''ನೀವು ಕೈಯಾಡಿಸಿದರೆ ನನಗೆ ಸಮಾಧಾನವೆನಿಸುತ್ತದೆ. ನಿಮ್ಮ ಕೈಯು ತಾಯಿಯದಿದ್ದಂತಿದೆ. ನೀವು ಜಗತ್ತಿನ ತಾಯಿ. ತಾಯಿಯ ಕೈಗಿಂತಲೂ ಪ್ರೇಮದ ಕೈ ನಿಮ್ಮದು. ನೀವು ಎಲ್ಲಿ ಹೋಗಿದ್ದಿರಿ ? ಈಗ ಇಲ್ಲಿಯೇ ಕೂಡಿರಿ. ನಾಗೇಶ ಮಲಗಲಿ. ತಾತಾ, ನೀವು ಏನುಮಾಡುತ್ತಿದ್ದೀರಿ ?" ಎಂದು ಶಶಾಂಕನು ಪ್ರೇಮದ ದೃಷ್ಟಿಯಿಂದ ನೋಡಿದನು.

" ಹಾರೀತ ಮೊದಲಾದ ಮಹರ್ಷಿಗಳು ಆಶ್ರಮಕ್ಕೆ ಬಂದಿದ್ದಾರೆ. ಜನಮೇಜಯನ ದ್ವೇಷಾಗ್ನಿಯನ್ನು ಹೇಗೆ ಕಡಿಮೆ ಮಾಡಬೇಕೆಂದು ವಿಚಾರಿಸುತ್ತಿದ್ದೆವು." ಎಂದನು ಆಸ್ತಿಕ

"ನನ್ನ ತಂದೆಯ ಕೊಳಲು ಶಾಂತ ಮಾಡುವದು. ಎಂತಹ ಸವಿ ಆ ಕೊಳಲು. ಅಲ್ಲವೆ ತಾತ ?" ಎಂದನು ಶಶಾಂಕ.

" ಅಹುದು. ನಿಮ್ಮ ತಂದೆಯ ಜೀವನವೇ ಅಂತಹ ಪ್ರೇಮಮಯ. ಆದುದರಿಂದ ಆ ಕೊಳಲು ಹಾಗೇ ನುಡಿಯುತ್ತದೆ. ಅವನು ತನ್ನ ಜೀವನವನ್ನು ಮಧುರಗೊಳಿಸಿದ್ದಾನೆ. ಯಾರ ಜೀವನದ ಕೊಳಲಲ್ಲಿ ಅಪಸ್ವರವಿಲ್ಲವೋ ಅವರ ಕೊಳಲು ಮಧುರ ನುಡಿಯುತ್ತದೆ." ಎಂದನು ಆಸ್ತಿಕ

"ನೀವು ಇಲ್ಲಿಂದ ಏಕೆ ಹೋಗುವಿರಿ? ನನ್ನನ್ನು ಬಿಟ್ಟು ಹೋಗಬೇಡಿರಿ. ಅಂದು ನೀವು ಅನ್ನುತ್ತಿದ್ದಂತೆ, ಹೋಮಕುಂಡದಲ್ಲಿ ನಿಮ್ಮೊಡನೆ ನಾನು ಹಾರುವೆ, ನಾಗೇಶನು ಹತ್ತರವಿದ್ದರೆ, ಗಂಗೆಯಲ್ಲಿ ಜಿಗಿಯುವೆ. ನೀವು ಹತ್ತರವಿದ್ದರೆ, ಅಗ್ನಿಯಲ್ಲಿ ಧುಮುಕುವೆ, ನನ್ನನ್ನು ಕರೆದೊಯ್ಯುವಿರಷ್ಟೇ?" ಎಂದು ತೊಡೆಯ ಮೇಲೆ ತಲೆಯಿಟ್ಟು ವಿಚಾರಿಸಿದನು.

"ನಿನ್ನ ತಲೆ ಎಷ್ಟು ಸುಡುತ್ತದೆ! ದೇವರು ಮೊದಲು ನಿನ್ನನ್ನು ಶುದ್ಧ ಮಾಡುವಂತೆ ಕಾಣುತ್ತದೆ. ಶಶಾಂಕಾ! ನಾನು ಸ್ವಲ್ಪ ಹೋಗಿಬರಲಾ! ಅಲ್ಲಿ ಕಾದು ಕೂತಿದ್ದಾರೆ." ಎಂದನು ಆಸ್ತಿಕ.

"ಹೋಗಿರಿ! ನಡನಡುವೆ ಬನ್ನಿರಿ. ನಿಮ್ಮನ್ನು ನೋಡಬೇಕೆನಿಸುತ್ತದೆ ತಾತಾ!" ಎಂದನು.

"ಇಲ್ಲಿ ನಾಗೇಶನಿರುವನು," ಎಂದು ಆಸ್ತಿಕನು ಹೊರಟನು.

ಇತ್ತ ಋಷಿಗಳ ಚರ್ಚೆಯು ಸಾಗಿತ್ತು,

"ಆಶ್ರಮವಾಸಿಗಳ ಮೇಲೆ ಆಸ್ತಿಕರದು ಎಷ್ಟು ಪ್ರೇಮ!" ಎಂದನು ದಧೀಚಿ.

"ಇವರ ಆಶ್ರಮದಿಂದ ಹೊರಬಿದ್ದವರೆಲ್ಲರೂ ದೊಡ್ಡದೊಡ್ಡ ಕಾರ್ಯಗಳನ್ನು ಮಾಡುತ್ತಿದ್ದಾರೆ. ಆಸ್ತಿಕನೆಂದರೆ ಸೇವಾಮೂರ್ತಿ. ಪ್ರೇಮಮೂರ್ತಿ. ಜ್ಞಾನಮೂರ್ತಿ. ನಾನು ಹಿಂದೊಮ್ಮೆ ಬಂದಿದ್ದೆ. ಆಸ್ತಿಕರು ಒಬ್ಬ ಹುಡುಗನ ಹಲ್ಲನ್ನು ತಿಕ್ಕುತ್ತಿದ್ದರು. ಸಿಟ್ಟಿನಿಂದಲ್ಲ, ಪ್ರೇಮದಿಂದ. ನನಗೆ ಆಶ್ಚರ್ಯವಾಯಿತು." ಎಂದನು ಯಜ್ಞಮೂರ್ತಿ.

"ನಾನು ಇಲ್ಲಿಗೆ ಒಮ್ಮೆ ಬಂದಿದ್ದೆ. ಕಟ್ಟಿಗೆಯನ್ನು ತರುವದಕ್ಕೆ ಎಲ್ಲ ಹುಡುಗರ ಸಂಗಡ ಹೋಗಿದ್ದೆ. ಕೆಲವು ಹುಡುಗರು ಹಸಿರು ಟೊಂಗೆಯನ್ನು ಮುರಿಯಹತ್ತಿದರು. ಆಗ ಆಸ್ತಿಕರೆಂದರು 'ಒಣ ಕಟ್ಟಿಗೆ ಬೇಕಾದಷ್ಟಿವೆ. ಹಸಿರು ಟೊಂಗೆಯನ್ನೇಕೆ ಮುರಿಯುವಿ? ಒಣ ಕಟ್ಟಿಗೆಗಳಿಲ್ಲದಿದ್ದಾಗ ಹಸಿ ಕಟ್ಟಿಗೆಯನ್ನು ಒಯ್ಯಬೇಕು. ಒಣಗಿದ ಕಟ್ಟಿಗೆಗಳನ್ನು ಮೊದಲು ಒಯ್ಯುವಾ' ಅವರ ದೃಷ್ಟಿ ಇಂತಹದು. ನಾನು ಆಶ್ಚರ್ಯಚಕಿತನಾದೆ. ಗಿಡದ ಟೊಂಗೆಗಳನ್ನು ಮುರಿದು ಸುಮ್ಮ ಸುಮ್ಮನೆ ಗಿಡಕ್ಕೆ ಯಾಕೆ

ದುಃಖಕೊಡಬೇಕೆನ್ನುವ ಪ್ರೇಮುಲ ದೃಷ್ಟಿಯುಃ ಅವರದಿದೆ. ಜನಮೇಜಯ ನೆದುರಿಗೆ ಹೋಗಿ ಅವರು ನಿಂತರೆ, ಅವನ ಸ್ಥಿತಿಯೇನಾದೀತು? ಅವರು ಹೋಗುವಾಗ ಮಾರ್ಗದಲ್ಲಿಯು ಲಕ್ಷಾಂತರ ಜನರಿಗೆ ಅವರನ್ನು ನೋಡಿ ಏನೆನಿಸಬಹುದು? ಲಕ್ಷಾಂತರ ಜನರೇನು ಸುಮ್ಮನಿರುವರೋ? ಅವರು ಅವರ ಬೆನ್ನಹತ್ತಬಹುದು. ಇಂದ್ರನ ಸೈನ್ಯ ನಾಶವಾಗಬಹುದು. ಆದರೆ ಈ ಶಾಂತಿ ಸೈನ್ಯವು ಹೇಗೆ ನಾಶವಾದೀತು? ನಾವು ಭೂಮಿಯನ್ನು ಹಸಿರು ಹಸಿರಾಗಿ ಮಾಡುವಾ, ಜೀವನಸೃಷ್ಟಿ, ಭಾರತೀಯ ಸೃಷ್ಟಿ! ಸುಂದರ ವಾದ ಈ ಭಾರತ ಭೂಮಿಯಲ್ಲಿರುವ ಜೀವನವು ಸಹ ಸುಂದರವಾದೀತು.! ಭಾರತ ವರ್ಷದಲ್ಲಿ ತೇಜಸ್ವಿಗಳೂ, ಶಾಂತರೂ ಇದ್ದರೆ! ಇಲ್ಲಿಯ ಜನತೆ ಯಲ್ಲಿ ನಿರ್ಮಲವಾದ ಜ್ಞಾನಸೂರ್ಯನಿರಲಿ; ಮಧುರ ಪ್ರೇಮದ, ಶಾಂತ ಭಾವನೆಗಳ ಚಂದ್ರನು ಬೆಳಗಲಿ. ಸುಂದರವಾದ ಬಾಲಸೃಷ್ಟಿ, ಸುಂದರ ಅನಂತಸೃಷ್ಟಿ! ಆಸ್ತಿಕರು ಮಾರ್ಗವನ್ನು ತೋರಿಸುವರು." ಎಂದನು ಹಾರೀತ

ಈ ಪ್ರಕಾರ ಅವರ ಮಾತುಗಳು ನಡೆದಿದ್ದವು. ಆಸ್ತಿಕರು ಬಂದರು.

"ತಡವಾಗಲಿಲ್ಲವಷ್ಟೇ?" ಎಂದು ನಮ್ರತೆಯಿಂದ ಕೇಳಿದರು.

"ತಡವಾದರೆ ಏನು ಆಗುತ್ತಿತ್ತು? ಹುಡುಗನು ನೆಟ್ಟಗಿರುವನೆ?" ಎಂದನು ಯಜ್ಞಮೂರ್ತಿ.

"ಅವನಿಗೆ ನನ್ನ ಹುಚ್ಚು ಹಿಡಿದಿದೆ. ಎಷ್ಟು ಜಾಣ ಹುಡುಗ! ಇವನ ತಂದೆಯು ಅಲ್ಲಿ ಕೊಳಲೂದುತ್ತ ದ್ವೇಷವನ್ನು ಶಾಂತಗೊಳಿಸುತಿ ದ್ದಾನೆ. ಈ ಹುಡುಗನ ಮಾತುಗಳು ಕೊಳಲ ಧ್ವನಿಯಂತೆ ಇಂಪಾಗಿವೆ." ಎಂದು ಆಶ್ಚರ್ಯದಿಂದ ಆಸ್ತಿಕರು ಅಂದರು.

"ಒಬ್ಬ ರಾಜನ ಸೈನ್ಯವನ್ನು ಹೆಂಗಸರು ದಾರಿಯಲ್ಲಿಯೇ ತಡೆದು, ಅದನ್ನು ಹಿಂದಕ್ಕೆ ಕಳಿಸಿದರಂತೆ. ನೂರಾರು ಸ್ತ್ರೀಯರು ಶಾಂತಿಸೂಕ್ತ ಪಠಿ ಸುತ್ತ, ಪ್ರೇಮಗೀತಗಳನ್ನು ಹಾಡುತ್ತ ನಡೆದಿದ್ದರು. ಆ ರಾಜನ ಸೈನ್ಯದೆ ದುರು ಇವರು ನಿಂತರು. "ನಮ್ಮನ್ನು ಕೊಂದು, ಆ ಮೇಲೆ ಮುಂದೆ ಹೋಗಿರಿ. ನಮ್ಮನ್ನು ಆಳಲಿಕ್ಕಾಗಿ ಇಡಬೇಡಿರಿ" ಎಂದು ಅವರು ಅಂದರು.

ಈ ಸ್ತ್ರೀಸೈನ್ಯಕ್ಕೆ ವತ್ಸಲೆಯೇ ಮುಖಂಡಳು. ಅವಳು ಈ ಹುಡುಗನ ತಾಯಿಯಲ್ಲವೇ ?" ಎಂದನು ಹಾರೀತ.

' ಹೌದು ' ಎಂದರು ಆಸ್ತಿಕರು

' ಮತ್ತು ಒಬ್ಬ ನಾಗಕನ್ಯೆಯು ಕೈಯಲ್ಲಿ ಪಂಜನ್ನು ಹಿಡಿದು ರಾಜ ಪುರುಷರಿಗೆ ' ಹೋಮಕುಂಡಕ್ಕೆ ಹೆಂಗಸರು ಹೆದರುವದಿಲ್ಲ ' ಎಂಬುದನ್ನು ತೋರಿಸಿ ಕೊಟ್ಟಳಂತೆ. ರಾಜನ ಅಧಿಕಾರಿಗಳು ಅಲ್ಲಿಂದ ಓಡಿ ಹೋದರಂತೆ. ಆ ಊರಲ್ಲಿಯ ದ್ವೇಷವು ಶಾಂತವಾಗಿ ಸ್ವರಾಜ್ಯ ಸ್ಥಾಪನೆಯಾಗಿದೆಯಂತೆ. ಎಲ್ಲವೂಆಶ್ಚರ್ಯಕರವೇ ' ಎಂದನು ದಧೀಚಿ

' ಇದು ಹೊಸಯುಗವು ಬರುವ ಲಕ್ಷಣ. ಎಲ್ಲ ಸ್ತ್ರೀಪುರುಷರ ಹೃದಯದಲ್ಲಿ ಒಂದೇ ಭಾವನೆ. ಜಾಗೃತವಾಗಿದೆ. ಸ್ತ್ರೀಪುರುಷರಲ್ಲಿ ಅಡಗಿದ್ದ ಶಕ್ತಿಯನ್ನು ಜಾಗೃತಗೊಳಿಸಿದ ಶ್ರೇಯಸ್ಸು ಜನಮೇಜಯರಾಜನಿಗೆ ಸಲ್ಲುವದು.' ಎಂದರು ಆಸ್ತಿಕರು.

' ಹಾಗಾದರೆ ಏನು ನಿಶ್ಚಯವಾಯಿತು ? ' ಎಂದನು ಯಜ್ಞಮೂರ್ತಿ

' ಒಂದು ದಿವಸ ಹೊರಡೋಣ. ಆಸ್ತಿಕರು ಹೊರಡುವ ದಿವಸವನ್ನು ತಿಳಿಸಲಿ. ' ಎಂದನು ದಧೀಚಿ

' ದೊಡ್ಡಯಜ್ಞವಾಗುವದೇನು ? ' ಎಂದರು ಆಸ್ತಿಕರು

' ಹೌದು ' ಎಂದನು ಹಾರೀತ

' ಹಾಗಾದರೆ ನೀವು ಈಗ ಪ್ರಚಾರ ಮಾಡಿರಿ. ಹೋಗುವ ದಿವಸವನ್ನು ನಾನು ತಿಳಿಸುವೆನು, ' ಎಂದರು ಆಸ್ತಿಕರು

' ಒಳ್ಳೇದು ' ಎಂದು ಎಲ್ಲರೂ ಅಂದರು

ಋಷಿಗಳೆಲ್ಲ ನಸುಕಿನಲ್ಲಿ ಬೇಗನೆದ್ದು ಹೊರಟು ಹೋದರು. ಅವರೆಲ್ಲ ಹೋದರು. ಮತ್ತು ವತ್ಸಲಾ ಹಾಗೂ ನಾಗಾನಂದರು ಬಂದರು. ಬಂದು ಶಶಾಂಕನ ಹತ್ತರ ಕುಳಿತರು.

' ಅವ್ವಾ, ಇಷ್ಟೇಕೆ ತಡಮಾಡಿದೆ ? ' ಎಂದನು ಶಶಾಂಕ

‘ ನನ್ನಗಿಂತ ಹಿತದವರು ಇಲ್ಲಿದ್ದಾರೆ ಎಂದು ನಾನು ಬರಲಿಲ್ಲ. ಮಗುವೇ, ಈಗಲೂ ನಾನು ಇರುವಂತಿಲ್ಲ. ನಿನಗೆ ಭೆಟ್ಟಿಯಾಗಿ ಹೋಗುವೆ. ಸ್ತ್ರೀಶಾಂತಿಸೇನೆಯೊಡನೆ ನಾನು ಪ್ರಚಾರಕ್ಕೆ ಹೊರಟಿರುವೆ. ತಮ್ಮ ಮಕ್ಕಳು ಮರಿಗಳನ್ನು ಬಿಟ್ಟು, ಅಕ್ಕತಂಗಿಯರು ನನ್ನೊಡನೆ ಬಂದಿದ್ದಾರೆ. ಅಂದಮೇಲೆ ನಾನು ಹೇಗೆ ಇರಲಿ ?” ಅದು ಮೋಹ ಹಾಗೂ ಆಸಕ್ತಿ ಎಂದು ಅನಿಸುವದಿಲ್ಲವೆ ? ಅವರು ಕೂಡ, ಪುರುಷರ ತಂಡವನ್ನು ತೆಗೆದು ಕೊಂಡು ತಿರುಗುತ್ತಿದ್ದಾರೆ. ತಮ್ಮ ಕೊಳಲಿನಿಂದ ಪ್ರೇಮದ ಹುಚ್ಚು ಹಿಡಿಸುತ್ತಿದ್ದಾರೆ. ನಿನ್ನ ಭೆಟ್ಟಿಗಾಗಿ ಬಂದಿದ್ದೇವೆ. ಬೇಗನೆ ನೆಟ್ಟಗಾಗು ’ ಎಂದಳು ವತ್ಸಲೆ.

‘ ಅವ್ವಾ, ನಾನು ನೆಟ್ಟಗಾದೊಡನೆ ತಾತನಕೂಡ ಹೋಗುವೆ. ಅವರು ಒಂದು ವೇಳೆ ಯಜ್ಞಕುಂಡದಲ್ಲಿ ಹಾರಿದರೆ, ನಾನೂ ಅವರೊಡನೆ ಹಾರುವೆ. ಪ್ರಲ್ಹಾದನು ಅಳಲಿಲ್ಲ. ಸುಧನ್ವನು ಶೋಕಿಸಲಿಲ್ಲ. ನಾನು ಕೂಡ ಅಳುವದಿಲ್ಲ. ನಗುತ್ತ ಅಗ್ನಿಯಲ್ಲಿ ಹಾರುವೆ. ನೀನು ಅಳಬೇಡ. ಇದೇನು ಅಳುತ್ತೀಯೇಕೆ ? ’ ಎಂದನು.

“ ನೀನು ಒಬ್ಬನೇ ಇರುವಿ. ಎಂದು ಅಳು ಬಂದಿತು. ” ಎಂದಳು

‘ ನಾನೊಬ್ಬನೇ ಬದುಕುವೆನೆ ? ಬದುಕಿದರೂ ಮುಂದೆ ಸಾಯುವೆ. ಈ ಬೇನೆಯಲ್ಲಿಯೇ ಸತ್ತರೆ ? ಅವ್ವಾ ! ನಾನು ಸಾಯುವದಿಲ್ಲ. ಜನರು ನನ್ನನ್ನು ಅಮರನನ್ನಾಗಿ ಮಾಡುವರು. ನಿನ್ನ ಶಶಾಂಕನು ಅನೇಕ ದಿನ ಗಳ ವರೆಗೆ ಜನರ ನಾಲಿಗೆಯಲ್ಲಿ ನಲಿಯುವನು. ಅವರ ಹೃದಯದಲ್ಲಿ ವಾಸಿಸುವನು. ಶಶಾಂಕನು ಚಿರಂಜೀವಿಯಾಗುವನು ’ ಎಂದನು.

“ ಮಗುವೆ ನೀನು ಒಬ್ಬನೇ ಹೋಗುವಿಯಲ್ಲ, ಎಂದು ದುಃಖವಾಗಿಲ್ಲ. ಈ ಮಹಾಕಾರ್ಯಕ್ಕೆ ಅರ್ಪಿಸಲು ಒಬ್ಬನೇ ಇರುವಿಯಲ್ಲ ಎಂದು ದುಃಖ ವಾಗುತ್ತದೆ.” ಎಂದನು ನಾಗಾನಂದ

‘ ನನಗೂ ಹಿಂದೆ ಹೀಗೇ ಅನಿಸುತ್ತಿತ್ತು ನನಗೆ ಅಣ್ಣನಿಲ್ಲ; ತಮ್ಮನಿಲ್ಲ. ಎಂದು ಅನಿಸುತ್ತಿತ್ತು. ಆದರೆ ಈ ಆಶ್ರಮಕ್ಕೆ ಬಂದೊಡನೆ ಎಷ್ಟು ಮಂದಿ ಅಣ್ಣತಮ್ಮಂದಿರು ಸಿಕ್ಕರು ? ’ ಎಂದನು ಶಶಾಂಕ

' ನಿನಗೆ ಹಾಲು ಕೊಡಲಾ ' ಎಂದಳು ತಾಯಿ

' ಕೊಡು ' ಎಂದನು

ಆಕೆಯು ಹಾಲು ಕೊಟ್ಟಳು. ತಲೆಯ ಮೇಲೆ ಕೈಯ್ಯಾಡಿಸುತ್ತ ಕುಳಿತಳು.

' ನೀವು ಶೀತಲಾಯಿಯ ಹಾಡನ್ನು ಹಾಡುವಿರಾ ? ' ಎಂದು ಕೇಳಿದಳು.

" ನಾನು ಈಗ ಮರೆತಿದ್ದೇನೆ " ಎಂದನು ನಾಗಾನಂದ.

" ನೀವು ನನಗೆ ಅಂದು ತೋರಿಸಿದ್ದಿಲ್ಲವೇ ಹಿಂದಕ್ಕೆ ? " ಎಂದಳು.

" ಆಹುದು ನೆನಪಿದೆ. ಕಪ್ರೋತಾಕ್ಷಿಯ ತೀರದಲ್ಲಿ. ಬಂಗಾರದ ಮಳೆ ಬಿದ್ದ ದಿನವಲ್ಲವೇ ? " ಎಂದನು.

" ಬಂಗಾರದ ಮಳೆಯೇ ? " ಎಂದನು ಶಶಾಂಕ.

" ಆಹುದು ಮಗುವೇ " ಎಂದಳು ತಾಯಿ.

" ನೀವು ಸಂಗ್ರಹಿಸಲಿಲ್ಲವೇ ? " ಎಂದನು ಶಶಾಂಕ.

" ತುಂಬಾ ಸಂಗ್ರಹಿಸಿದೆವು. ಆದರಲ್ಲಿಯೇ ಮುಂದೆ ನೀನು ಸಿಕ್ಕಿ ಹಿಡಿದಿಟ್ಟ ಹೃದಯದ ಪೆಟ್ಟಿಗೆಯಲ್ಲಿ ತುಂಬಿದ ಬಂಗಾರದೊಳಗೆ ನಿನ್ನ ಮೂರ್ತಿಯು ಪ್ರಕಾಶಿಸಿತು. ಬಂಗಾರದ ಮೂರ್ತಿ ! " ಎಂದಳು ವತ್ಸಲೆ.

" ಏನು ! ನಾನು ಬಂಗಾರನೇ ? ಹಾಗಾದರೆ ಆದನ್ನು ಅಗ್ನಿಯಲ್ಲಿ ಹಾಕಿ ಪರೀಕ್ಷಿಸಿ ನೋಡೋಣವೇ ? " ಎಂದನು ಶಶಾಂಕ.

" ನೋಡು " ಎಂದಳು ತಾಯಿ.

" ಅಪ್ಪನು ನನಗೆ ಕೊಳಲೂದಲು ಕಲಿಸಲಿಲ್ಲ. ನಾನು ಇಲ್ಲಿ ಕಲಿತೆ. ನೀವು ಎಲ್ಲರ ಮುಂದೆ ಊದುವಿರಿ. ನನ್ನ ಮುಂದೇಕೆ ಊದುವದಿಲ್ಲ ? ಇಲ್ಲಿ ಊದಿರಿ. ನಾನು ಕೇಳುವೆ. ಆಶ್ರಮವಾಸಿಗಳೂ ಕೇಳುವರು " ಎಂದನು ಶಶಾಂಕ.

" ನೀನು ನೆಟ್ಟಗಾಗು. ಆ ಮೇಲೆ ಊದುವೆ, ಈಗ ಬೇಡ. " ಎಂದನು ನಾಗಾನಂದ.

“ ನೆಟ್ಟಗಾಗದಿದ್ದರೆ ? ” ಎಂದನು ಶಶಾಂಕ.

“ ಒಳ್ಳೇದು, ಊದುವೆನು ” ಎಂದನು ನಾಗಾನಂದ.

“ ಎಲ್ಲರೂ ಕೇಳಿರಿ ” ಎಂದು ಹಿಂದೆ ನಿಂತ ಆಸ್ತಿಕರು ನುಡಿದರು.

ಎಲ್ಲರೂ ಕೂಡಿದರು. ಆಸ್ತಿಕರು ಕುಳಿತರು. ನಾಗಾನಂದನು ಕೊಳಲು ನುಡಿಸಿದನು. ಎಂಥ ಸುಂದರ ಹಾಡು ! ಹುಡುಗರಿಗೆ ಸುಮ್ಮನೆ ಕೂಡುವದಾಗಲಿಲ್ಲ. ಕೈ ಕೈ ಹಿಡಿದು ಕುಣಿಯುಹತ್ತಿದರು. ಶಶಾಂಕನು ಹಾವಿನ ಹೆಡೆಯಂತೆ ಗೋಣನ್ನೆತ್ತಿ ನೋಡುತ್ತ ಕುಳಿತನು. ಕೊಳಲು ನಿಂತಿತು.

“ ನಮಗೆ ಕಲ್ಪನೆ ಬಂದಿತು. ಜನರಿಗೆ ಏಕೆ ಹುಚ್ಚು ಹಿಡಿಯುವದೆಂಬದು ತಿಳಿಯಿತು. ಕೊರಡನ್ನು ಕೊನರಿಸುವ, ಕಲ್ಲನ್ನು ಕರಗಿಸುವ ಶಕ್ತಿಯಿದೆ. ಈ ಸಂಗೀತಕ್ಕೆ ” ಎಂದರು ಆಸ್ತಿಕ

“ ಬಿದುರಿನ ಕೊಳಲಿನಲ್ಲಿ ಮಧುರ ಸ್ವರವನ್ನು ಹೊರಡಿಸುವದು ಸುಲಭ. ಆದರೆ ಜೀವನದ ಕೊಳಲಿನಲ್ಲಿ ಮಧುರಸ್ವರವು ಹೊರಟರೇ ನಿಜ. ಭಗವಾನ್, ತಮ್ಮ ಜೀವನವೇ ಅಮರವಾದ ಕೊಳಲು. ಅದು ಯಾವಾಗಲೂ ಸಂಗೀತವನ್ನು ಸ್ರವಿಸುತ್ತದೆ ” ಎಂದನು ನಾಗಾನಂದ.

ನಾಗಾನಂದ ಹಾಗೂ ವತ್ಸಲೆಯರು ಹೊರಟರು. ಶಶಾಂಕನಿಗೆ ಪ್ರೇಮಾಶ್ರುಗಳಿಂದ ಸ್ನಾನ ಮಾಡಿಸಿದರು.

“ ಭಗವಾನ್, ನಾವು ಕರ್ತವ್ಯಕ್ಕಾಗಿ ಹೊರಡುತ್ತೇವೆ ” ಎಂದನು ನಾಗಾನಂದ.

“ ನನ್ನ ಕೂಸಿಗೆ ಗುರುಮಹಾರಾಜರೇ ದೊಡ್ಡತಾಯಿ. ಈ ತಾಯಿಯ ಆವಶ್ಯಕತೆಯಿಲ್ಲ ” ಎಂದಳು ವತ್ಸಲೆ.

“ ತಾಯಿಯ ಪ್ರೇಮಸಿಂಧುವಿನ ಒಂದು ಬಿಂದುವಿನಲ್ಲಿ ಕೋಟಿ ಕೋಟಿ ಆಸ್ತಿಕರು ತೇಲಿ ಹೋಗುವರು ” ಎಂದರು ಆಸ್ತಿಕ

ಆಸ್ತಿಕರು ಕಳಿಸಲು ಹೊರಬಂದರು. ಇಬ್ಬರೂ ನಮಸ್ಕರಿಸಿದರು. ಆಸ್ತಿಕರು ಆಶೀರ್ವದಿಸಿದರು. ಜಲಾಶಯವವರೆಗೆ ಕಳಿಸಿ ಬಂದರು. ಆಶ್ರಮದ ಹುಡುಗರೆಲ್ಲ ಆಶ್ಚರ್ಯದಿಂದ ನೋಡುತ್ತ ನಿಂತಿದ್ದರು.

"ಬೇನೆ ಬಿದ್ದ ಹುಡುಗನನ್ನು ಬಿಟ್ಟು, ತಂದೆತಾಯಿಗಳು ಹೋಗುವದನು ನಾನು ಇಂದೇ ನೋಡಿದೆ!' ಎಂದನು. ಒಬ್ಬ ವಿದ್ಯಾರ್ಥಿ.

"ಇಂತಹ ಅನೇಕ ಸಂಗತಿಗಳನ್ನು ನೀನು ಬೇಗನೇ ನೋಡುವಿ" ಎಂದರು ಆಸ್ತಿಕ.

೧೮

ನಾಗಾನಂದ ಹಾಗು ವತ್ಸಲೆಯರು ಎಲ್ಲಿರುವರೆಂಬುದನ್ನು ವಕ್ರ ತುಂಡನು ಶೋಧಿಸುತ್ತಲೇ ಇದ್ದನು. ಆಸ್ತಿಕನ ಆಶ್ರಮಕ್ಕೆ ಬಂದಿರುವ ರೆಂದು ತಿಳಿಯಿತು. ಸೈನ್ಯಸಮೇತನಾಗಿ ಅವರನ್ನು ಹಿಡಿಯಲು ದಾರಿ ಯಲ್ಲಿ ಕುಳಿತಿದ್ದನು ಅವರಿಬ್ಬರನ್ನು ಬಂಧಿಸಿದನು. ಅವನಿಗೆ ಪರಮಾ ನಂದವಾಯಿತು. ರಾಜನಮುಂದೆ ಇವರನ್ನು ಯಾವಾಗ ನಿಲ್ಲಿಸುವೆನೊ ಎಂದು ಅವನಿಗಾಗಿತ್ತು.

ಹಸ್ತಿನಾಪುರಕ್ಕೆ ರಾಜಬಂದಿಗಳೊಡನೆ ಅವನು ರಾತ್ರಿಯಲ್ಲಿ ಬಂದನು. ಅವರನ್ನು ಒಂದು ಕೋಣೆಯಲ್ಲಿ ಹಾಕಿದರು. ಹತ್ತಿರದಲ್ಲಿರುವ ಕೋಣೆಗಳಲ್ಲಿ ಸಾವಿರಾರು ಸ್ಥಾನಬದ್ಧ ನಾಗರಿದ್ದರು. ಅವರಿಗೆ ನಾಗಾನಂದ ಹಾಗು ವತ್ಸಲೆಯರು ಬಂದ ಸುದ್ದಿ ತಿಳಿಯಿತು. ಕೂಡಲೆ ಅವರೆಲ್ಲರೂ ' ವತ್ಸಲಾ ನಾಗಾನಂದರಿಗೆ ಜಯ ' ಎಂದು ಜಯಘೋಷ ಮಾಡಿದರು. ಆದರೆ ನಾಗಾನಂದನು, ಪೋಲೀಸರ ಮುಖಾಂತರ ' ನನ್ನ ಜಯ ಜಯಕಾರ ವನ್ನು ಮಾಡಬೇಡಿರಿ. ಆಸ್ತಿಕರ ಜಯ ಜಯಕಾರವನ್ನು ಮಾಡಿರಿ. ಪ್ರೇಮ ಧರ್ಮದ ಹಾಗೂ ಐಕ್ಯಧರ್ಮದ ಜಯ ಜಯಕಾರ ಮಾಡಿರಿ. ". ಎಂದು ಹೇಳಿ ಕಳಿಸಿದನು.

ಎಲ್ಲ ರಾಜಬಂದಿಗಳು " ಭಗವಾನ್ ಆಸ್ತಿಕರಿಗೆ ಜಯವಾಗಲಿ ! ಪ್ರೇಮಧರ್ಮಕ್ಕೆ ವಿಜಯವಾಗಲಿ " ಎಂದು ಗರ್ಜಿಸಿದರು. ಈ ಗರ್ಜ ನೆಯು ಜನಮೇಜಯನ ಕಿವಿಗೆ ಬಿದ್ದಿತು. ಈ ಗರ್ಜನೆಯೇಕೆ ಎಂಬುದು ಅವನಿಗೆ ಹೊಳೆಯಲಿಲ್ಲ. ಅಷ್ಟರಲ್ಲಿ ವಕ್ರತುಂಡನು ಬಂದನು

"ಇಬ್ಬರನ್ನೂ ಹಿಡಿದು ತಂದಿದ್ದೇನೆ" ಎಂದು ದರ್ಪದಿಂದ ಹೇಳಿದನು.

"ಆದಕ್ಕೆಯೋ ಈ ಗರ್ಜನೆ! ಅವರನ್ನು ನೋಡಿ ಗರ್ಜಿಸುವಂತಿದೆ" ಎಂದನು ಜನಮೇಜಯ

"ಆ ಹುಚ್ಚರಿಗೆ ಮರಣವು ಸಮೀಪಿಸಿದೆ ಎಂಬುದು ಗೊತ್ತಿಲ್ಲ. ಈಗ ಗರ್ಜಿಸುವರು, ಆಗ ಅಳುವರು." ಎಂದನು ವಕ್ರತುಂಡ

"ಗರ್ಜಿಸುವ ಮೇಘವನ್ನು ಕೊನೆಗೆ ಮಿಂಚು ಸುಡುತ್ತದೆ. ಆಗ ಅದು ಅಳುತ್ತದೆ" ಎಂದನು ಜನಮೇಜಯ

"ನಾಳೆ ಬೆಳಿಗ್ಗೆ ಎಲ್ಲ ರಾಜಬಂದಿಗಳನ್ನು ಹೊರತೆಗೆಯಿರಿ. ಶೃಂಖಲೆ ಸಹಿತವಾಗಿ ತೆಗೆಯಿರಿ. ಅವರ ಎದುರು ನಾಗಾನಂದ ಹಾಗು ವತ್ಸಲೆಯರನ್ನು ಮೊದಲನೇ ಆಹುತಿಯನ್ನು ಕೊಡಿರಿ. ದಾಂಪತ್ಯದ ಸಂಯುಕ್ತ ಆಹುತಿ. ಇಂತಹ ಸಂಯುಕ್ತ ಆಹುತಿಗಳು ಎಷ್ಟು ಇವೆ ?" ಎಂದನು ಜನಮೇಜಯ

"ಎರಡು ಸಾವಿರದ ಮೇಲೆ. ಇನ್ನೂ ಬರುತ್ತಿರುವರು" ಎಂದನು ವಕ್ರತುಂಡ

ಪ್ರಭಾತವಾಯಿತು. ಇಂದು ಸೂರ್ಯನು ಕೆಂಪು ಕೆಂಡದಂತಿರುವನು ಆವನೇಕೆ ಸಂತಪ್ತನಾಗಿರುವ ? ಸಂಸಾರವನ್ನು ಸ್ಮಶಾನ ಮಾಡುವ ಮಾನವರ ಬಗ್ಗೆ ತಿರಸ್ಕಾರವೆನಿಸುತ್ತಿತ್ತೆ ? ನಾನು ಇವರ ಸಲುವಾಗಿ ಹಗಲಿರುಳು ಸುಟ್ಟುಕೊಂಡರೂ ಈ ಮಾನವ ಜಾತಿಗೆ ಒಂದು ಪೈ ಕೂಡ ಬೆಲೆಯಿಲ್ಲ ಎಂದು ಸಂತಾಪಗೊಂಡನೋ. ಶಾನೇ ದ್ವಾದಶ ನೇತ್ರವನ್ನು ತೆಗೆದು ಜಗತ್ತನ್ನೆಲ್ಲ ಭಸ್ಮ ಮಾಡಬೇಕೆಂದೆನಿಸುತ್ತಿರುವದೋ ? ದೇವರಿಗೆ ಹೀಗನಿಸುವದಿಲ್ಲ. ಅವನು ಆಶಾವಾದಿ. ಕೊನೆಗೆ ಎಲ್ಲವೂ ಒಳ್ಳೇದಾಗುವದೆಂದು ಅವನಿಗೆ ಅನಿಸುವದು.

ಪ್ರಚಂಡ ಹೋಮ ಕುಂಡವು, ಧಗ ಧಗ ಉರಿಯುತ್ತಿದೆ. ಸೈನಿಕರ ಗುಂಪುಗಳು ಅಲ್ಲಲ್ಲಿ ಸಜ್ಜಾಗಿ ನಿಂತಿವೆ. ಕಾರಾಗೃಹದಲ್ಲಿಯ ಸರ್ವ ಸ್ತ್ರೀ ಪುರುಷರನ್ನು ಹೊರತೆಗೆದರು. ಅವರನ್ನೆಲ್ಲ ಹಗ್ಗದಿಂದ ಬಂಧಿಸಿದ್ದರು.

ನಾಗಾನಂದ ಹಾಗು ವತ್ಸಲೆಯರನ್ನು ಹೊರ ತಂದರು. ಅವರನ್ನು ಒಂದೆಡೆ ನಿಲ್ಲಿಸಿದರು.

ರಾಜಧಾನಿಯಲ್ಲಿಯ ಸ್ತ್ರೀಪುರುಷರು ಬಂದಿದ್ದರು. ಎಲ್ಲರ ಕಣ್ಣುಗಳಿಂದಲೂ ನೀರು ಸುರಿಯುತ್ತಿದ್ದವು. ಈ ನಿರಪರಾಧಿ ಜನರನ್ನೇಕೆ ಅಗ್ನಿಯಲ್ಲಿ ಒಗೆಯುವರು ? ಆದಕ್ಕಾಗಿ ಈ ಹೋಮಕುಂಡವೇ ? ಅಹಹಾ ! ಧ್ಯೇಯಕ್ಕಾಗಿ ತಳಮಳಿಸುವ ಜೀವಗಳ ಆತ್ಮದಂತೆ ಆ ಕಿಡಿಗಳು ಕಾಣುತ್ತಿದ್ದವು. ಮಾನವರಲ್ಲಿ ಪ್ರೇಮವು ಹಬ್ಬಬೇಕು. ಬಂಧು ಭಾವವು ಬೆಳೆಯಬೇಕು. ಎಂದು ಚಡಪಡಿಸುವ ಜೀವರನ್ನು ಭೆಟ್ಟಿಯಾಗಿ ಪವಿತ್ರವಾಗುವದಕ್ಕಾಗಿ ಆ ಜ್ವಾಲೆಗಳು ಹಾತೊರೆಯುತ್ತಿದ್ದವು. ಧ್ಯೇಯಾರ್ಥಿಗಳಾದ ವ್ಯಕ್ತಿಗಳಿಗೆ ಧ್ಯೇಯದ ಮಾರ್ಗವನ್ನು ವಿಚಾರಿಸುವದರ ಸಲುವಾಗಿ ಆ ಕಿಡಿಗಳು ಹಾರುತ್ತಿದ್ದವು, ಆ ತೇಜಸ್ವಿಯಾದ ಸೂರ್ಯನಾರಾಯಣನ ಚರಣಗಳನ್ನು ಸೇರುವಬಗೆ ಹೇಗೆ? ಎಂದು ಆಜ್ವಾಲೆಗಳಿಗೆ ವಿಚಾರ ಮಾಡುವದಿತ್ತು. ಸೂರ್ಯನೇ ಅವುಗಳ ಧ್ಯೇಯ. ತೇಜಸ್ಸಿನ ಸಮುದ್ರದಲ್ಲಿ ಮುಳುಗಲಿಚ್ಛಿಸಿ ಅವು ಮೇಲೆ ಹೋಗಬಯಸುತ್ತಿದ್ದವು. ಪ್ರೇಮ ಸಮುದ್ರದಲ್ಲಿ ಮುಳುಗುವ ಮಾನವರೇ ತಮಗೆ ದಾರಿ ತೋರಿಸುವರೆಂದು ಅವುಗಳಿಗೆ ಅನಿಸುತ್ತಿತ್ತು. ಜ್ವಾಲೆಗಳೇ! ಮೇಲೆ ಮೇಲೆ ಹೋಗುವ ಜ್ವಾಲೆಗಳೇ! ನಡೆಯಲಿ ನಿಮ್ಮ ತಳಮಳ ! ಉತ್ತರೋತ್ತರ ಮೇಲೆ ಹೋಗುವ ತಳಮಳ!

ಜನಮೇಜಯನು ಬಂದ. ವಕ್ರತುಂಡನು ಬಂದ. ಉಳಿದ ರಾಜಪುರುಷರು ಬಂದರು. ಜನಮೇಜಯನು ಸಿಂಹಾಸನಾರೂಢನಾದನು. ಅವನ ಹೆಸರಿನಿಂದ ಜಯಜಯಕಾರ ಮಾಡಲ್ಪಟ್ಟಿತು. ಆದರೆ ಎಲ್ಲ ನಾಗ ಬಂದಿಗಳು 'ಪ್ರೇಮಧರ್ಮದ ವಿಜಯವಾಗಲಿ' ಎಂದು ಗರ್ಜಿಸಿದರು.

'ನಿಮ್ಮ ನಾಲಿಗೆಯನ್ನು ಸೀಳೇವು' ಎಂದರು ಅಧಿಕಾರಿಗಳು.

'ನಮ್ಮನ್ನು ಸುಟ್ಟರೂ ಆ ಬೂದಿಯೊಳಗಿಂದ 'ಪ್ರೇಮಧರ್ಮಕ್ಕೆ ವಿಜಯವಾಗಲಿ' ಎಂಬ ಗರ್ಜನೆಯು ಹೊರಟೀತು. ಅದು ನಿಮ್ಮ ಕಿವಿಯಲ್ಲಿ ಹೊಕ್ಕು, ಹೃದಯವನ್ನು ಭೇದಿಸೀತು. ಆ ಗರ್ಜನೆಯನ್ನು ಕೇಳದೆ ನಿಮಗೆ ಗತ್ಯಂತರವಿಲ್ಲ.' ಎಂದನು ನಾಗಾನಂದ.

ಜನಮೇಜಯನು ತಿರಸ್ಕಾರ ದೃಷ್ಟಿಯಿಂದ ಅವನ ಕಡೆಗೆ ನೋಡಿದನು. ವಕ್ರತುಂಡನು ಹುಚ್ಚನಂತೆ ನಕ್ಕನು.

' ಅವರಿಬ್ಬರನ್ನು ಮುಂದೆ ತನ್ನಿರಿ. ' ಎಂದನು ಜನಮೇಜಯ.

' ಇಬ್ಬರನ್ನೂ ಮುಂದೆ ತಂದರು.

" ನೀನು ಆರ್ಯಳಂತೆ ಕಾಣುವಿ. ಅನಾರ್ಯರೊಡನೆ ಮದುವೆ ಯೇಕೆ ಆದೆ ? ಕಸ್ತೂರಿಯು ಮಣ್ಣಿನಲ್ಲಿ ಕೂಡಬೇಕೆ ? ಪತಿಯನ್ನು ಬಿಡಲು ನೀನು ಸಿದ್ಧಳಿದ್ದರೆ, ನಿನ್ನನ್ನು ಬಿಡುವೆ. ಆರ್ಯಹತ್ಯೆಯು ನನ್ನಿಂದ ಆದಷ್ಟು ಕಡಿಮೆ ಯಾಗಲೆಂದು ನನ್ನ ಇಚ್ಛೆ. ಹೇಳು, ನೀನು ಸಿದ್ಧಳಿರುವಿಯಾ ? ಆರ್ಯಧರ್ಮದ ಸೇವೆಯನ್ನು ಮಾಡಲು ಸಿದ್ಧಳಿದ್ದೀಯಾ ? ಆರ್ಯಧರ್ಮ ವನ್ನು ನಿರ್ಮಲವಾಗಿಡಲು ಸಿದ್ಧಳಿದ್ದೀಯಾ? " ಎಂದು ವಿಚಾರಿಸಿದನು.

' ನಾನು ಬದುಕಲು ಇಚ್ಛಿಸುವದಿಲ್ಲ. ಸಾಯಲು ಬಯಸುವೆ. ಆರ್ಯಪುರುಷರಂತೆ ನಾನು ಉಲ್ಲೂ ಇಲ್ಲ. ನಾನು ಆರ್ಯಸ್ತ್ರೀ ಇರುವೆ. ಆರ್ಯಪುರುಷರು ಮನಬಂದಂತೆ ನಾಗಸ್ತ್ರೀಯರನ್ನು ಭೋಗಿಸಿ, ಅವರನ್ನು ಬಿಟ್ಟು ಬಿಟ್ಟರು. ಅಂಥಹ ಆರ್ಯಧರ್ಮವು ನನ್ನದಲ್ಲ. ಆರ್ಯ ಪುರುಷ ರಾದ ನೀವು ಸ್ತ್ರೀಯರನ್ನು ಕಸವೆಂದು ತಿಳಿದಿರಬಹುದು. ಆದರೆ ಆರ್ಯ ಸ್ತ್ರೀಯರಾದ ನಾವು ಪುರುಷರನ್ನು ಕೀಳು ಬಗೆಯುವದಿಲ್ಲ. ನಿಮ್ಮ ಅರ್ಜು ನನು ಉಲೂಪಿ, ಚಿತ್ರಾಂಗದೆಯರನ್ನು ಆಳಲು ಹಚ್ಚಿದನು. ಇದೇ ನಿಮ್ಮ ಆರ್ಯ ಧರ್ಮ ಕಾಣುತ್ತದೆ? ಆರ್ಯ ಪುರುಷರ ಧರ್ಮವು ಇದು ಇದ್ದರೆ, ಆರ್ಯ ಸ್ತ್ರೀಯರ ಧರ್ಮವು ಬೇರೆಯಾಗಿದೆ. ನಾನು ನಾಗಾನಂದನನ್ನು ಬಿಡುವದಿಲ್ಲ. ಪತ್ನಿಯನ್ನು ಬಿಟ್ಟು, ಪತಿ ಹೋಗುತ್ತಿರಬಹುದು. ಆದರೆ ಪತಿಯನ್ನು ಬಿಟ್ಟು ಪತ್ನಿಯು ಹೋಗುವದಿಲ್ಲ. ' ಗಂಡನನ್ನು ಬಿಡು ' ಎಂದು ನೀನು ಯಾವ ಬಾಯಿಂದ ಹೇಳುವಿ? ಸಾವಿತ್ರಿಯ ಕಥೆಯನ್ನು ಎಂದಾದರೂ ಕೇಳಿರುವಿಯಾ? ನದಿಯು ಸಮುದ್ರದ ಕಡೆಗೇ ಹೋಗುವದು. ಅದು ತಿರುಗಿ ಹರಿಯುವದೇ? ರಾಜಾ ! ಅಧರ್ಮವನ್ನು ಮಾಡಲು ನೀನು ಹೇಗೆ ಹೇಳುವಿ? ಇದೇ ಏನು ನಿನ್ನ ಸಂಸ್ಕೃತಿ? ಪುರುಷರಾದ ನೀವು ಸಂಸ್ಕೃತಿಯನ್ನು ಮುಳುಗಿಸಲು ಹೊರಟರೂ ಸ್ತ್ರೀಯರಾದ ನಾವು ಅದನ್ನು

ಮುಳುಗಗೊಡುವದಿಲ್ಲ. ನಾಗಜಾತಿಯು ಕೆಡುಕು ಏಕೆ ? ಅವರಲ್ಲಿ ಏನು ಕೆಡುಕಿದೆ? ಮೂಸಿ ಬಿಡುವ್ವೆ ಆರ್ಯರ ಪ್ರೇಮ ಸ್ಮರಣ ಮಾಡುತ್ತ, ಪತಿವ್ರತೆಯರಾಗಿ ಉಳಿಯುವ ಆ ನಾಗಸ್ತ್ರೀಯರ ಚರಣತೀರ್ಥವನ್ನು ತಕ್ಕೊಂಡು ನೀನು ಪವಿತ್ರನಾಗು. ನಿನ್ನಲ್ಲಿ ಹೆಚ್ಚಿನದೇನಿದೆ? ಆರ್ಯರು ಏಕೆ ಜಂಭ ಕೊಚ್ಚಬೇಕು ? ' ಎಂದು ಉಜ್ವಲವಾದ ವಾಣಿಯಿಂದ ವತ್ಸಲೆಯು ಮಾತನಾಡಿದಳು.

' ಆರ್ಯರು ಕ್ರೂರ ಸರ್ಪದ ಪೂಜೆಗೈದು ದ್ವೇಷಿಗಳಾಗುವದಿಲ್ಲ. ನಾಗರು ದ್ವೇಷಿಗಳಿರುತ್ತಾರೆ. ಮನಸ್ಸಿನಲ್ಲಿ ಕುನುಸು ಹಿಡಿದು ನನ್ನ ತಂದೆಯನ್ನು ಹೇಗೆ ಕೊಂದನೆಂಬುದನ್ನು ನೀನು ಬಲ್ಲೆಯಾ ? ಇಂತಹ ಜಾತಿಯಿದು ಆರ್ಯರು ಸೂರ್ಯನ ಉಪಾಸನೆಮಾಡುವರು. ಪರಬ್ರಹ್ಮನನ್ನು ಕಂಡುಕೊಳ್ಳುವರು. ' ಎಂದನು ಜನಮೇಜಯ

' ನಿಮ್ಮ ತಂದೆಯು ನಾಗಋಷಿಯ ಅಪಮಾನವನ್ನು ಮಾಡಿದನು. ಹಾವನ್ನು ಹೊಡೆದು ಅವನ ಕೊರಳೊಳಗೆ ಹಾಕಿದನು. ಎಂದು ಆ ನಾಗನು ನಿಮ್ಮ ತಂದೆಯನ್ನು ಕೊಂದನು. ಆದರೆ ಆ ತರುಣನು ದ್ವೇಷಿಯೆಂದು ತಿಳಿಯೋಣ. ಆದರೆ ಒಬ್ಬನ ಕೊಲೆಗೆ ಸಾವಿರಾರು ನಾಗರನ್ನು ಬಲಿ ತೆಗೆದುಕೊಳ್ಳುವ ನೀನು, ದ್ವೇಷಿ? ನಾಗಪೂಜೆಯನ್ನುಮಾಡಿ ನಾಗರು ದ್ವೇಷಿಗಳಾಗುವದಿಲ್ಲ. ನಿಮಗಿಂತಲೂ ಅವರು ಅತ್ಯಂತ ಉದಾರರಾಗಿದ್ದಾರೆ. ನಾಗಪೂಜೆಯನ್ನು ನಾಗನಂತೆ ಕ್ರೂರರಾಗಲು ಮಾಡುವದಿಲ್ಲ. ಕ್ರೂರವಿದ್ದ ನಾಗಗಳಲ್ಲಿ ಕೂಡ ಪರಬ್ರಹ್ಮನನ್ನು ಕಂಡು, ಅವನ ಉಪಾಸನೆಯನ್ನು ಮಾಡುತ್ತಾರೆ. ಸೂರ್ಯನು ತೇಜಸ್ವಿಯಿದ್ದಾನೆ. ಮಂಗಲನಿದ್ದಾನೆ. ಅವನಲ್ಲಿ ಪೂಜ್ಯಭಾವವನ್ನು ತಾಳುವದು ಸುಲಭ. ಆದರೆ ಅಂಕುಡೊಂಕುಳ್ಳ, ವಿಷವುಳ್ಳ ಸರ್ಪದಲ್ಲಿಯೂ ಮಾಂಗಲ್ಯವನ್ನು ನೋಡಲು ದೊಡ್ಡ ದೃಷ್ಟಿಯೇಬೇಕು. ಆರ್ಯರಿಗಿಂತಲೂ ಈ ದೃಷ್ಟಿಯು ವಿಶಾಲವಾಗಿದೆ. ಈ ಭಾವನೆಯಿಂದ ನಾಗಪೂಜೆಯನ್ನುಮಾಡಿ ನಾಗರು ಉದಾರಚರಿತರಾಗಿದ್ದಾರೆ. ನಮ್ಮ ಊರಲ್ಲಿ ನಾನು ನೀರಲ್ಲಿ ಮುಳುಗುವಾಗ ಒಬ್ಬ ನಾಗತರುಣನೇ ಉಳಿಸಲು ಮುಂದೆ ಬಂದನು. ಆ ತರುಣನ ಪಾದಕಮಲಗಳಲ್ಲಿ ನಾನು ಪ್ರೇಮವನ್ನು ಅರ್ಪಿಸದೆ

ಕಲ್ಲಿನಂಥ ಆರ್ಯರಿಗೆ ಅರ್ಪಿಸಲೋ ? ನಾನು ನಾಗರ ಬಗೆಗೆ ಸಹಾನು ಭೂತಿಯುಳ್ಳವಳೆಂದು ಬಗೆದು, ಊರಲ್ಲಿಯ ಒಬ್ಬ ಆರ್ಯನು ನನ್ನನ್ನು ನೀರಿನಿಂದ ಉಳಿಸಲು ಮುಂದೆ ಬರಲಿಲ್ಲ. ಇದೇಯೋ ಆರ್ಯಧರ್ಮ ? ಇದು ದ್ವೇಷ ಧರ್ಮ. ರಾಜಾ ! ಊರಲ್ಲಿ ಹುಲಿಯು ಉಪದ್ರವವಾದಾಗ ಈ ನಾಗಾನಂದನೇ ಮುಂದೆ ಬಂದು, ಆ ಸಂಕಟವನ್ನು ದೂರ ಮಾಡಿದನು. ತನ್ನ ಪ್ರಾಣವನ್ನು ಸಂಕಟದಲ್ಲಿ ನೂಕಿದನು. ಹೀಗಿರುವರು ನಾಗರು. ಆರ್ಯರಾದ ನೀವೇ ಕ್ರೂರರು. ನಿಮ್ಮ ಪೂರ್ವಜರು ಅಣ್ಣ ತಮ್ಮಂದಿರ ಕಲಹಕ್ಕಾಗಿ ಭರತಖಂಡದ ಕ್ಷತ್ರಿಯರ ನಾಶವನ್ನು ಮಾಡಿದರು. ನಮ್ಮ ಅಜ್ಜನು ನಿಮ್ಮ ಪೂರ್ವಜರ ಯುದ್ಧದಲ್ಲಿಯೇ ಸತ್ತನು. ನೀವು ನಿಮ್ಮ ಕ್ಷುದ್ರ ಜಗಳಕ್ಕಾಗಿ ಲಕ್ಷಾವಧಿ ಸ್ತ್ರೀಯರನ್ನು ಅಳಲು ಹಚ್ಚಿದಿರಿ. ಮತ್ತು ಈಗ ನೀನು ನಿನ್ನ ದ್ವೇಷಕ್ಕೋಸುಗ ಲಕ್ಷಾವಧಿ ನಿರಪರಾಧಿ ನಾಗರ ಹನನ ಹಾಗು ಹವನ ಮಾಡುತ್ತಿರುವಿ. ನಿಮ್ಮ ಧರ್ಮವು ಇದನ್ನೆ ಹೇಳುವದೇ ? ನಿಮ್ಮ ಧರ್ಮವು ಕಟುಕರ ಧರ್ಮವೇ ? ನಿಮ್ಮ ಸಂಸ್ಕೃತಿಯು ಹೀಗೆ ಅನುದಾರ ಹಾಗೂ ನೃಶಂಶವಿದ್ದರೆ, ಯಾರಿಗೆ ಇದರ ಬಗ್ಗೆ ಅಭಿಮಾನವೆನಿಸುವದು ? ನಿಮ್ಮ ಧರ್ಮವು ಕಟುಕರದೇ ಇದ್ದರೆ, ಅದನ್ನು ಪ್ರೀತಿಸುವವರಾರು ? ಇಂಥ ಸಂಸ್ಕೃತಿ ಎದುರಿಗೆ ತಲೆಬಾಗುವದಕ್ಕಿಂತ ಸಾಯುವದೇನು ಕೆಡುಕು ? ಇಂತಹ ಪಾಪದಲ್ಲಿ ಸಹಕಾರಿಯಾಗುವದಕ್ಕಿಂತ ಸಾಯುವದೇ ಲೇಸು. ರಾಜಾ, ಸುಟ್ಟು ಬಿಡು. ಸತ್ಯವನ್ನು, ಪ್ರೇಮವನ್ನು, ತಪಶ್ಚರ್ಯವನ್ನು, ಸತೀತ್ವವನ್ನು ಪಾವಿತ್ರವನ್ನು, ಹಾಗೂ ನಿರಪರಾಧಿತನವನ್ನು ಸುಟ್ಟು ಬಿಡು. ತಾಯಿಂದಿರನ್ನು ಮಕ್ಕಳೊಡನೆ ಸುಡು. ಪತಿಯನ್ನು ಪತ್ನಿಯೊಡನೆ ಸುಡು. ಮಿತ್ರರನ್ನು ಮಿತ್ರರ ಸಂಗಡ ಸುಡು. ಆರ್ಯಧರ್ಮದ ಈ ದ್ವೇಷದ ಧ್ವಜವನ್ನು ಹಾರಿಸು. ಸೂರ್ಯನ ಉಪಾಸನೆಯನ್ನು ಮಾಡುವ ಆರ್ಯರು ನೀವು. ಸೂರ್ಯನಂತೆ ಸರ್ವರ ಜೀವನವನ್ನು ಸಮೃದ್ಧಗೊಳಿಸುವದು, ಪ್ರಕಾಶಮಾನವಾಗಿ ಮಾಡುವದು, ಆನಂದಮಯವಾಗಿ ಮಾಡುವದು ಇವೆ ನಿಜವಾದ ಸೂರ್ಯೋಪಾಸಕರ ಧರ್ಮ. ನೀವು ವಿಷ್ಣು ಪೂಜಕರು. ಅಂತರ್ಯಾಮಿಯಾದ ಆ ತೇಜೋಮಯನನ್ನು ನೋಡುವವರು, ಸರ್ವಸ್ಥಗಳಲ್ಲಿ

ಪ್ರಕಾಶವನ್ನು ನೋಡುವದೂ ಪಾವಿತ್ರ್ಯವನ್ನೂ ಕಾಣುವದೂ ಮಾಂಗಲ್ಯವನ್ನು ನೋಡುವದೂ ಅಂದರೆ ಪರಬ್ರಹ್ಮನ ಪ್ರಾಪ್ತಿ. ರಾಜಾ! ದ್ವೇಷದಿಂದ ದೇವರ ದರ್ಶವಾಗುವದಿಲ್ಲ. ಮೋರೆಯನ್ನೇಕೆ ಕೆಳಗೆ ಹಾಕುವಿ? ನಿನ್ನ ದ್ವೇಷಾಗ್ನಿಯನ್ನು ಶಾಂತಗೊಳಿಸಲು ನಿನ್ನ ಅಕ್ಕತಂಗಿಯರಾದ ನಾವು ಇಲ್ಲಿ ಎದುರಿಗೆ ನಿಂತಿದ್ದೇವೆ. ಮೊದಲು ನಮ್ಮಿಬ್ಬರನ್ನು ಬಲಿಗೊಡು. ಪ್ರೇಮ ಪೂರ್ಣ ಜೀವನಗಳ ಆಹುತಿಯನ್ನು ಕೊಡು.' ಎಂದಳು ವತ್ಸಲೆ.

'ರಾಜಾ, ಇವರನ್ನು ಅರ್ಪಣ ಮಾಡೋಣವೇ?' ಎಂದೆನು ವಕ್ರತುಂಡ.

ರಾಜನು ಮಾತನಾಡಲಿಲ್ಲ. ತಲೆ ಕೆಳಗೆ ಹಾಕಿಕೊಂಡು ಸುಮ್ಮನೆ ಕುಳಿತಿದ್ದನು.

'ರಾಜಾ, ಏನಿದೆ ನಿನ್ನ ಅಜ್ಞೆ?' ಎಂದು ಮತ್ತೆ ಕೇಳಿದನು ವಕ್ರತುಂಡ

'ಇಂದು ಎಲ್ಲರನ್ನು ತೆಗೆದುಕೊಂಡು ಹೋಗಿರಿ. ವಿಚಾರಮಾಡಲು ಅವರಿಗೆ ಸಂಧಿಯನ್ನು ಕೊಡಿರಿ. ವತ್ಸಲೇ, ಇನ್ನೂ ವಿಚಾರಮಾಡಲು ಅವಧಿಯನ್ನು ಕೊಟ್ಟಿದ್ದೇನೆ. ಎಷ್ಟು ಎಂಬುದನ್ನು ಈಗ ಹೇಳುವದಿಲ್ಲ. ಇವರೆಲ್ಲರನ್ನು ಕರೆದುಕೊಂಡು ಹೋಗಿರಿ' ಎಂದು ಆಜ್ಞಾಪಿಸಿದನು.

ಎಲ್ಲರಿಗೂ ಹಾಯ್ ಎನಿಸಿತು. ಎಲ್ಲರೂ ದೇವರಿಗೆ ಧನ್ಯವಾದಗಳನ್ನರ್ಪಿಸಿದರು. ಅವರ ಹೃದಯವು ತುಂಬಿ ಬಂದಿತ್ತು.

—:XXX●XXX:—

೧೯

ಇಂದು ಆಶ್ರಮದಲ್ಲಿ ಮಹತ್ವದ ಸಭೆಗೂಡಿತ್ತು. ವಾತಾವರಣವು ಗಂಭೀರವಾಗಿತ್ತು. ಹೊಸ ಹಳೆ ವಿದ್ಯಾರ್ಥಿಗಳೆಲ್ಲ ಬಂದಿದ್ದರು. ತ್ಯಾಗ ವೀರರ ಅಗಮ್ಯವಾದ ಒಂದು ಸೈನ್ಯದಂತೆ ಆ ಗುಂಪು ಕಾಣುತ್ತಿತ್ತು. “ನಾಳೆ ಸೂರ್ಯೋದಯವಾದೊಡನೆಯೆ ನಾವು ಹೊರಡಬೇಕು. ಕತ್ತಲೆಯಲ್ಲಿ ಬೆಳಕನ್ನು ತರುವದಕ್ಕಾಗಿ, ಜನಮೇಜಯನ ಕ್ರೋಧಾಗ್ನಿಯನ್ನು ಶಾಂತಗೊಳಿಸುವದಕ್ಕಾಗಿ ನಾವು ಹೊರಡೋಣ. ನಮ್ಮ ಪ್ರೇಮಮಯ ಜೀವನದಿಂದ ಸಮಾಜದಲ್ಲಿಯ ದ್ವೇಷಮಯ ಜೀವನವನ್ನು ಶುದ್ಧಗೊಳಿಸುವದಕ್ಕಾಗಿ ಹೊರಡೋಣ. ನಾವು ದೊಡ್ಡ ದೊಡ್ಡ ಮಾತುಗಳನ್ನಾಡುತ್ತೇವೆ. ಆ ವಾಕ್ಯಗಳನ್ನು ನಮ್ಮ ಜೀವನದಲ್ಲಿ ತರೋಣ. ನೀವು ತಂದೆ ತಾಯಿಗಳ ಆಜ್ಞೆಯನ್ನು ಪಡೆದು ಬಂದಿರುವಿರಿ. ದೇಶಕ್ಕೆ ಯಾವಾಗಲೂ ಸ್ಫೂರ್ತಿಯನ್ನೀಯುವಂಥ ಅಮರವಾದ ಅಗ್ನಿಯನ್ನು ಹೊತ್ತಿಸೋಣ. ರಾಷ್ಟ್ರದಲ್ಲಿ ಮುಂದಿನ ಜನಾಂಗಕ್ಕೆ ಸಂಕುಚಿತವೃತ್ತಿ, ಸ್ವಾರ್ಥ ಹಾಗೂ ದ್ವೇಷಗಳು ಯಾವ ಯಾವ ವೇಳೆಯಲ್ಲಿ ಮುತ್ತುವವೋ ಆ ಆ ಸಮಯದಲ್ಲೆಲ್ಲ ಅವರಿಗೆ ನವಜೀವನವನ್ನು ಈ ಬಲಿದಾನವು ಕೊಡುವಂತೆ ಮಾಡೋಣ. ಧ್ಯೇಯವನ್ನು ಸಾಧಿಸಿಯೇ ತೀರಬೇಕೆಂದು ಯಾರ ಅಂತಃಕರಣವು ಉಕ್ಕೇರುತ್ತಿದೆಯೋ ಅವರೆಲ್ಲ ನನ್ನೊಡನೆ ಬರಲಿ. ನನ್ನಲ್ಲಿಯೂ ನಾಗರಕ್ತವಿದೆ. ಜನಮೇಜಯನು ನನ್ನನ್ನೇಕೆ ಬಂಧಿಸುವದಿಲ್ಲ? ನಾನಾಗಿಯೇ ಹೋಗುವೆ. ಹೋಮಕುಂಡದಲ್ಲಿ ದೇಹವನ್ನು ಅರ್ಪಿಸುವೆ. ನನ್ನೊಡನೆ ಈ ಮಹರ್ಷಿಗಳು ಬರುತ್ತಲಿದ್ದಾರೆ. ಅವರಲ್ಲಿ ಅನೇಕರು ಆರ್ಯರೂ ನಾಗರೂ ಇದ್ದಾರೆ. ಕೆಲವರು

ಸಂಮಿಶ್ರರಿದ್ದಾರೆ. ಎಲ್ಲರೂ ಹೊರಡುವ ನಿಶ್ಚಯವನ್ನು ಮಾಡಿದ್ದೇವೆ. ನಮ್ಮ ಆಶ್ರಮವು ಕೃತಾರ್ಥವಾಯಿತು. ಪವಿತ್ರವಾಯಿತು. ಇಂದಿನಿಂದ ಆಶ್ರಮವು ಪ್ರತಿಯೊಬ್ಬರ ಹೃದಯದಲ್ಲಿ ನಿರ್ಮಾಣವಾಗುವದು. ಈ ಆಶ್ರಮವು ಮಾಯವಾದೀತು. ಆದರೆ ಸರ್ವರ ಹೃದಯದಲ್ಲಿ ಅಮರವಾಗುವದು." ಎಂದರು ಆಸ್ತಿಕರು.

"ನಾವೆಲ್ಲ ನಿಮ್ಮೊಡನೆ ಬರುವೆವು" ಎಂದರು ತರುಣರು

"ಶಶಾಂಕ ಹಾಗು ನಾನು ಇಬ್ಬರು ಕೈ ಹಿಡಿದುಕೊಂಡು ಹಾರುವೆವು. ನಾಗ ಹಾಗು ಆರ್ಯರಲ್ಲಿ ಸ್ಥಿರವಾದ ಐಕ್ಯವನ್ನು ನಿರ್ಮಿಸುವೆವು." ಎಂದನು ನಾಗೇಶ

'ಅಗ್ನೆ ನಯ ಸುಪಥಾ ರಾಯೇ ಅಸ್ಮಾನ್' ಎಂಬ ಮಂತ್ರವನ್ನುಚ್ಚರಿಸುತ್ತ ನಾನು ಹಾರುವೆ," ಎಂದನು ಪದ್ಮನಾಭ

ರಾತ್ರಿಯಲ್ಲಿ ಎಲ್ಲರೂ ಮಲಗಿದರು. ದೊಡ್ಡ ಬೆಳಗಿನಲ್ಲಿ ಆಸ್ತಿಕನೆದ್ದನು. ಸರ್ವ ಋಷಿಗಳೆದ್ದರು. ಎಲ್ಲರೂ ಎದ್ದರು. ಗಂಗೆಯಲ್ಲಿ ಸ್ನಾನಮಾಡಿ ಬಂದರು. ಸೂರ್ಯನು ಮೇಲೆ ಬರುವವನಿದ್ದ. ಭಾರತದ ಭಾಗ್ಯವು ಮೇಲೆ ಬರುತ್ತಲಿತ್ತು. ಅಪೂರ್ವ ತೇಜವು ಜನ್ಮತಾಳುತ್ತಿತ್ತು. ಭಗವಾನ್ ಆಸ್ತಿಕರು "ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ" ಈ ವಿಷಯದ ಮೇಲೆ ಎರಡು ಶಬ್ದಗಳನ್ನು ಮಾತಾಡಿದರು.

"ನಾವು ಆಶ್ರಮದಲ್ಲಿ "ಅಸತ್ಯದಿಂದ ನಮ್ಮನ್ನು ಸತ್ಯದ ಕಡೆಗೆ ಒಯ್ಯಿರಿ, ಮೃತ್ಯುವಿನಿಂದ ಅಮೃತತ್ವದ ಕಡೆಗೆ ಒಯ್ಯಿರಿ, ಕತ್ತಲೆಯಿಂದ ಪ್ರಕಾಶದ ಕಡೆ ಒಯ್ಯಿರಿ" ಎಂದು ದಿನಾಲು ಪ್ರಾರ್ಥಿಸುತ್ತೇವೆ. ಆ ಪ್ರಾರ್ಥನೆಯ ಫಲವು ಇಂದು ಸಿಗುತ್ತಿದೆ. ಇಂದು ದೇಹದ ಮೇಲೆ ಏರಿ ಹೋಗುವವರಿದ್ದೇವೆ. ಈ ದೇಹವು ಧ್ಯೇಯದ ಸಾಧನವೆಂದು ಯಾರು ತಿಳಿದಿರುವರೋ ಅವರು ಅಮೃತತ್ವವನ್ನು ಪಡೆದಿರುವರು. ಕಟ್ಟಿಗೆಯನ್ನು ಒಲೆಯಲ್ಲಿ ಹಾಕುವಂತೆ, ಧ್ಯೇಯಕ್ಕಾಗಿ ಈ ದೇಹವನ್ನು ಅಗ್ನಿಯಲ್ಲಿ ಹಾಕುವದಿರುತ್ತದೆ. ನಾವು ಇಂದು ಅದನ್ನೇ ಮಾಡುತ್ತಿದ್ದೇವೆ. ಹೀಗೆ ಮಾಡುವದರಿಂದ ಕತ್ತಲೆಯಿಂದ ಪ್ರಕಾಶ ಹೊರಬರುತ್ತದೆ. ಪ್ರಕಾಶವೆಂದರೆ

ಜ್ಞಾನ, ಸತ್ಯತೆ. ದೇಹದ ಆಶಕ್ತಿಯನ್ನು ಬಿಡುವದೆಂದರೆ, ಅಸತ್ಯದಿಂದ ಸತ್ಯದ ಕಡೆಗೆ ಹೋಗುವದು. ಈ ಮೂರು ವಚನಗಳ ಅರ್ಥವು ಒಂದೇ ಇದೆ. ಈ ಮೂರು ವಾಕ್ಯಗಳನ್ನು ಇಂದು ಸಾಕ್ಷಾತ್ಕರಿಸಿಕೊಳ್ಳಬೇಕಾಗಿದೆ. ಈ ಸಾಕ್ಷಾತ್ಕಾರದ ಆನಂದವು ಯಾರ ಕಣ್ಣೆದುರಿಗಿದೆಯೋ ಅವರಿಗೆ ಚಿಂತೆ ಇಲ್ಲ. ಭೀತಿಯಿಲ್ಲ. ಅವರು ಧ್ಯೇಯ ಪ್ರಾಪ್ತಿಯ ಆನಂದದಿಂದ ಮತ್ತರಿರುತ್ತಾರೆ.

ಜನಮೇಜಯನ ಬಗೆಗೆ ನಮ್ಮಲ್ಲಿ ದ್ವೇಷ ಮತ್ಸರಗಳು ಬೇಡ. ನಮ್ಮ ಜ್ಞಾನ ಪರೀಕ್ಷೆಗಾಗಿ ಅವನು ನಿಮಿತ್ತನಾಗಿದ್ದಾನೆ. ಪೂರ್ವದಲ್ಲಿ ವಿಶ್ವಾಮಿತ್ರನು ವಶಿಷ್ಠನ ಪರೀಕ್ಷೆಯನ್ನು ಹೀಗೇ ತೆಗೆದುಕೊಂಡನು. ಅವನ ಮಕ್ಕಳನ್ನೆಲ್ಲ ವಿಶ್ವಾಮಿತ್ರನು ಕೊಂದರೂ ವಶಿಷ್ಠನು ಶಾಂತವಾಗಿಯೇ ಉಳಿದನು. ಅರುಂಧತಿಯು ಬಂದು ಬೆಳದಿಂಗಳು 'ಹೇಗೆ ಬಿದ್ದಿದೆ' ಎಂದು ವಿಚಾರಿಸಿದಾಗ ಆ ಮಹಾತ್ಮನು 'ವಿಶ್ವಾಮಿತ್ರನ ತಪಸ್ಸಿನ ಹಾಗಿದೆ ಈ ಬೆಳದಿಂಗಳು' ಎಂದನು. ತನ್ನ ನೂರು ಮಕ್ಕಳನ್ನು ಕೊಂದ ವಿಶ್ವಾಮಿತ್ರನ ಬಗೆಗೆ ವಶಿಷ್ಠರ ಉದ್ಗಾರವೆಂತಹದು! ಈ ಪರಂಪರೆಯನ್ನು ನಾವು ಕಾಯೋಣ.

ಈ ಸೃಷ್ಟಿಯನ್ನು ನಿರ್ಮಿಸಿ ದೇವರು ಸಾಧನವೆಂದು ಯಜ್ಞವನ್ನು ನಮಗೆ ಕೊಟ್ಟಿದ್ದಾನೆ. ಈ ಯಜ್ಞದಿಂದ ಎಲ್ಲವನ್ನು ಸಂಪಾದಿಸಿರೆಂದು ಆಶೀರ್ವದಿಸಿದ್ದಾನೆ. ಈ ಯಜ್ಞ ಸಾಧನವನ್ನು ಕಾಯ್ದು ಕೊಂಡಿರುವರೋ ಇಲ್ಲವೊ ಎಂಬುದನ್ನು ನಡುನಡುವೆ ಪರೀಕ್ಷಿಸುತ್ತಾನೆ. ಮಾನವರ ಶ್ರದ್ಧೆಯು ಸ್ಥಿರವಾಗಿದೆಯೋ ಇಲ್ಲವೋ ಎಂಬುದನ್ನು ನೋಡುತ್ತಾನೆ. ಇಂದು ಕತ್ತಲೆ ಕಾಣುತ್ತಿದೆ. ದ್ವೇಷವು ಪೂರ್ಣವಾಗಿ ಹಬ್ಬಿದೆ. ಉಪಾಯವೇನು? ಬಲಿದಾನ! ಸ್ವೇಚ್ಛೆಯ ಬಲಿದಾನ. ಯಜ್ಞ ಸಾಧನವನ್ನು ನಾವು ಜೀವಂತವಿಟ್ಟಿರುವೆ ಎಂಬುದನ್ನು ತೋರಿಸೋಣ. ಆ ಉಪಾಸನೆಯು ನಮ್ಮಲ್ಲಿ ಇನ್ನೂ ಇದೆ. ದೇವರು ನೋಡಿ ಪ್ರಸನ್ನನಾಗಬಹುದು. ಜನಮೇಜಯನ ಹೃದಯವು ಪುನಃ ಕರಗಬಹುದು. ಉಜ್ವಲ ಭವಿಷ್ಯವು ಪ್ರಾರಂಭವಾಗಬಹುದು. ನಡೆಯಿರಿ, ನಾವು ಯಾತ್ರಿಕರಿದ್ದೇವೆ. ಸತ್ಯದೇವನ ಯಾತ್ರಿಕರು. ಮಾನವ

ಜಾತಿಯ ಈ ಮಹಾನ್ ಯಾತ್ರೆಯು ಎಂದೋ ಪ್ರಾರಂಭವಾಗಿದೆ. ಎಂದು ಮುಗಿಯುವದೆಂಬುದನ್ನು ನಾನು ಹೇಗೆ ಹೇಳಲಿ ? ಆದರೆ ನಾವು ಈ ಸತ್ಯ ದೇವನ ಯಾತ್ರೆಯಲ್ಲಿ ಭಾಗಿಗಳಾಗಿದ್ದೇವೆಂದು, ಪ್ರತಿಯೊಬ್ಬರಿಗೆ ತಿಳಿದರೆ ಎಷ್ಟು ಸುಂದರವಾದೀತು !

" ಎಲ್ಲರೂ ಸಿದ್ಧರಾಗಿರಿ. ನಮ್ರರಾಗಿರಿ. ನಿರಹಂಕಾರಿಗಳಾಗಿರಿ. ಪ್ರೇಮದಿಂದ, ಭಕ್ತಿಯಿಂದ, ಧ್ಯೇಯಾನಂದದಿಂದ ಮತ್ತರಾಗಿ, ಅನಾಸಕ್ತ ರಾಗಿ, ಕಲ್ಪನೆಯಿಂದ ಕುಣಿದು, ಹೃದಯವು ಉಕ್ಕೇರಿ, ನಿರ್ಭಯರಾಗಿ ಪ್ರಯಾಣಕ್ಕೆ ಸಿದ್ಧರಾಗಿರಿ. ಓಂ ಶಾಂತಿಃ ಶಾಂತಿಃ ಶಾಂತಿಃ "

ಆಶ್ರಮದಲ್ಲಿ ಎಲ್ಲವನ್ನು ನೋಡಿಕೊಳ್ಳಲು, ವೃದ್ಧ ನಕುಲನು ಇರುವವ ನಿದ್ದ.

' ನಕುಲಾ, ನನ್ನ ಚಿಗರೆಯನ್ನು ಹೊಡೆಯಬೇಡ. ಅದು ನನ್ನನ್ನು ಅತ್ತಿತ್ತ ಹುಡುಕೀತು. ಎಲ್ಲಿಯಾದರೂ ಹೋದೀತು. ಎಲ್ಲಿಯಾದರೂ ಹುಲಿಗಿಲಿಯು ತಿಂದೀತು. ನನ್ನ ನೆನಪು ಅದಕ್ಕೆ ಆಗದಂತೆ ಮಾಡು. ಅದು ಹುಲ್ಲನ್ನು ತಿನ್ನಲಿಕ್ಕಿಲ್ಲ. ಶಶಾಂಕನು ಹೇಳಿದನೆಂದು ಹೇಳು ಅಂದರೆ ತಿನ್ನು ವದು ಎಂದನು. ನಾನು ಹಚ್ಚಿದ ಈ ಪುನ್ನಾಗಕ್ಕೆ ನೀರು ಹಾಕು. ಅದು ಎಷ್ಟು ಸುಂದರವಿದೆ ನೋಡು! ' ಎಂದನು ಶಶಾಂಕ.

' ನನ್ನ ನವಿಲನ್ನು ಜಪ್ಪಿಸು. ನನ್ನ ಹೆಸರು ಹೇಳು ಅಂದರೆ ಅದು ಕುಣಿಯುವದು ' ಎಂದನು ನಾಗೇಶ.

' ಆ ರತ್ನಿಯ ಕರುವಿಗೆ ಹೊಟ್ಟೆ ತುಂಬ ಹಾಲು ಬಿಡು ' ಎಂದನು ರತ್ನಾಕರ.

ಹೀಗೆಯೇ ಹೇಳುವದು ನಡೆಯಿತು. ಗಿಡಗಳಿಂದ ಪಟಪಟ ಹನಿ ಗಳುದುರುತ್ತಿದ್ದವು. ಅವು ಇಬ್ಬನ್ನಿಯ ಹನಿಗಳೊ ಅಥವಾ ಪ್ರೇಮಾಶ್ರು ಗಳೊ. ಗಾಳಿಯಲ್ಲಿ ಒಮ್ಮೆಲೆ ಅತಿಶಯವಾದ ಸುಗಂಧವು ಬಂದಿತು. ಆಶ್ರಮದಲ್ಲಿಯ ಹೂಗಳು ತಮ್ಮ ಸುಗಂಧವನ್ನೆಲ್ಲ ಕೊಟ್ಟು ಬಿಟ್ಟವೇ ? ನವಿಲು ಒದರ ಹತ್ತಿತು. ಆಕಳುಗಳು ಅಂಬಾ ಎಂದು ಒದರ ಹತ್ತಿದವು.

ಬೆಕ್ಕು ಆಸ್ತಿಕರ ಕಾಲಲ್ಲಿ ಓಡಾಡಹತ್ತಿತು. ಚಪಲವಾದ ಹರಿಣವು ದೀನವಾಗಿ ನೋಡುತ್ತ ನಿಂತಿತ್ತು. ಪಕ್ಷಿಗಳು ಗಿಡದ ಮೇಲೆ ನಿಸ್ತಬ್ಧವಾಗಿ ಕುಳಿತಿದ್ದವು. ಇನ್ನು ಮೇಲೆ ನಮಗೆ ಕಾಳನ್ನು ಹಾಕುವವರಾರೆಂದು ಚಿಂತಿಸುತ್ತಿದ್ದವೊ? ಆಸ್ತಿಕನ ಪ್ರೇಮಲ ಹಸ್ತದಿಂದ ಇನ್ನು ನಮಗೆ ಕಾಳು ಸಿಗುವವೇ? ಎಂದು ಅವುಗಳಿಗೆ ಅನಿಸಿತೆ. ಸೃಷ್ಟಿಯೆಲ್ಲ ತುಂಬಿ ಬಂದಿತ್ತು. ಆಶ್ರಮದಲ್ಲಿಯ ಪಶು ಪಕ್ಷಿಗಳ, ವೃಕ್ಷ ವನಸ್ಪತಿಗಳ ರೋಮ ರೋಮಗಳಲ್ಲಿ ಒಂದು ಬಗೆಯ ತೀವ್ರ ಸಂವೇದನೆಯು ತುಂಬಿತ್ತು.

ಆಸ್ತಿಕರು ಆಶ್ರಮದಲ್ಲಿಯ ವೃಕ್ಷ ಹಾಗೂ ಹೂಗಳನ್ನು ಕುರಿತು ಮಾತನಾಡ ಹತ್ತಿದರು. ನಾವು ಹೋಗಿ ಬರುತ್ತೇವೆ. ನೀವು ನಮ್ಮ ಸದ್ಗುರು. ಪ್ರೇಮಳ ವೃಕ್ಷಗಳೇ ನಮಗೆ ಆಶೀರ್ವಾದಗಳನ್ನು ಕೊಡಿರಿ. ನೀವು ಸರ್ವ ಜಗತ್ತಿಗೆ ಹೂ, ಹಣ್ಣು ಹಂಪಲ, ನೆರಳನ್ನು ಕೊಡುವಿರಿ. ನಿಮ್ಮನ್ನು ಮುರಿಯುವವರಿಗೂ ನೆರಳನ್ನೀಯುವಿರಿ. ದುಷ್ಟರಿರಲಿ ಶಿಷ್ಟರಿರಲಿ, ಅವರನ್ನು ಹತ್ತರ ಕರೆದು ಕೊಳ್ಳುವಿರಿ. ಕಲ್ಲು ಒಗೆಯುವವರಿಗೆ ಒಳ್ಳೇ ಹಣ್ಣುಗಳನ್ನು ಕೊಡುವಿರಿ. ನಿಮ್ಮ ಬೇರುಗಳು ಹಗಲು ರಾತ್ರಿ ಭೂಗರ್ಭದಲ್ಲಿ ಶ್ರಮಿಸುತ್ತಿವೆ. ಆದರೆ ಈ ಶ್ರಮದಿಂದ ಸಿಗುವ ಸರ್ವ ಸಂಪತ್ತನ್ನು ಜನಕ್ಕೆ ಕೊಡುವಿರಿ. ನೀವು ನಮ್ಮ ಸಲುವಾಗಿ ಚಳಿ, ಬಿಸಿಲುಗಳಲ್ಲಿ, ಮಳೆಯಲ್ಲಿ ನಿಂತಿರುವಿರಿ. ನಮ್ಮ ಸಲುವಾಗಿ ತ್ಯಾಗ ಮಾಡುವಿರಿ. ನಿಮ್ಮ ಜೀವನವೇ ನಮ್ಮ ಸಲುವಾಗಿ. ನಿಮ್ಮಂತೆಯೆ ಅಗ್ನಿಯಲ್ಲಿ ಪ್ರವೇಶಿಸಲು ನಮಗೆ ಧೈರ್ಯ ಬರಲಿ. ಸ್ವಂತದ ಸರ್ವಸ್ವವನ್ನು ನಮ್ರದಿಂದ ಮಾತನಾಡದೆ, ಜಗತ್ತಿಗೆ ಅರ್ಪಿಸುವ ಇಚ್ಛೆ ಬರಲಿ.

ಆಶ್ರಮದಲ್ಲಿರುವ ಹೂಗಳೇ, ನಿಮ್ಮಂತೆಯೇ ನಮ್ಮ ಜೀವನವು ನಿರ್ಮಲ, ಸುಂದರ ಹಾಗೂ ಸುಗಂಧಯುಕ್ತವಾಗಲಿ. ನಿಮ್ಮ ಜೀವನವು ಚಿಕ್ಕದು. ಆದರೆ ಎಷ್ಟು ಪರಿಪೂರ್ಣ! ಎಷ್ಟು ಕೃತಕೃತ್ಯ! ನೀವು ಸೃಷ್ಟಿಯ ಅಂತರಂಗ! ಸೃಷ್ಟಿಯ ಮೌನ ಸಂಗೀತ. ನಾವು ಹೋಗಿ ಬರುವೆವು. ಮುಳ್ಳಿನ ಮೇಲೆ ನೀವು ಎದ್ದು ನಿಂತು ನಗುತ್ತ ಸುಗಂಧವನ್ನು ಬೀರುವಿರಿ. ನಮಗೂ ಅಗ್ನಿಯಲ್ಲಿ ಪ್ರವೇಶಿಸುವಾಗ ನಗೆ ಬರಲಿ. ಜಗತ್ತಿಗೆ ಸುಗಂಧವನ್ನು ಕೊಡಗೊಡಿರಿ.

ಆಶ್ರಮದಲ್ಲಿರುವ ಪಕ್ಷಿಗಳೇ ! ನಿಮ್ಮ ಪ್ರೇಮವೆಷ್ಟು ! ನಾವು ಒಂದು ಹಿಡಿ ಕಾಳನ್ನು ಒಗೆದರೆ, ನೀವು ದಿನವೆಲ್ಲ ನಮಗೆ ಸಂಗೀತವನ್ನು ಕೇಳಿಸುವಿರಿ. ನಮ್ಮ ಹೆಗಲ ಮೇಲೆ ಬಂದು ಕೂಡುವಿರಿ. ಕೈಯ್ಯಲ್ಲಿಯ ಕಾಳನ್ನು ತಿನ್ನುವಿರಿ. ನಿಮಗೆ ಪ್ರೇಮವು ತಿಳಿಯುವದು. ಮಾನವಗೇಕೆ ತಿಳಿಯಬಾರದು ? ನಮ್ಮ ರತ್ನ ಆಕಳು ಧ್ವನಿಯನ್ನು ಗುರುತಿಸುತ್ತದೆ. ಪ್ರೇಮದ ಕೈಗಳು ಕೆಚ್ಚಲಕ್ಕೆ ಹಾಕಿದರೆ, ಹೆಚ್ಚು ಹಾಲು ಕರೆಯುತ್ತದೆ. ಈ ಚಿಗರಿಯು ಎಷ್ಟು ಪ್ರೇಮದಿಂದ ಹತ್ತರ ಬರುತ್ತದೆ. ನವಿಲು ಪ್ರೇಮದ ಮನುಷ್ಯರನ್ನು ನೋಡಿ, ತನ್ನ ಗರಿಯನ್ನು ಪಸರಿಸುತ್ತದೆ. ಎಂತಹ ನಿಮ್ಮ ಮನಸ್ಸು ! ಹಾಗೂ ಈ ಬೆಕ್ಕು ನಿನ್ನಿನಿಂದ ಮೆಂವ್ ಮೆಂವ್ ಎಂದು ಕರೆಯುತ್ತಿದೆ. ನಾನು ಬರಲ್ಯಾ ಎಂದು ಕೇಳುತ್ತಿದೆ.

ಪ್ರೇಮಳ ಮಾನವೇತರ ಪಶುಪಕ್ಷಿಗಳ ಸೃಷ್ಟಿಯಿದು. ಮಾನವನಿಗೂ ಕೂಡ ಕೃತಜ್ಞತೆಯ ಪ್ರೇಮ ಹಾಗು ಸ್ನೇಹದ ಪಾಠವನ್ನು ಕಲಿಸುವ ಸೃಷ್ಟಿ. ಇದಕ್ಕೆ ನಮ್ಮ ನಮಸ್ಕಾರ. ಈ ಸೃಷ್ಟಿ ನಮಗೆ ಆಶೀರ್ವಾದಗಳನ್ನು ಮಾಡಲಿ.

ಆಸ್ತಿಕರು ಕ್ಷಣ ಹೊತ್ತು ಕಣ್ಣು ಮುಚ್ಚಿದರು. ಪುನಃ ಅವರು ಗಂಭೀರರಾದರು. ಹೊರಟರು. ಋಷಿ ಮುನಿಗಳು ಬೆನ್ನು ಹತ್ತಿದರು ಅವರ ಹಿಂದೆ ತರುಣರಿದ್ದರು. ತ್ಯಾಗಮೂರ್ತಿಗಳಾದ ಅವರು ಹೊರಟರು. 'ಭಗವಾನ್ ಆಸ್ತಿಕರು ಹೊರಡುವರು, ಹೊರಡುವರು' ಎಂಬ ಸುದ್ದಿಯನ್ನು ಹಾರೀತ, ಯಜ್ಞಮೂರ್ತಿ, ದಧೀಚಿಯರು ಮೊದಲೇ ಪ್ರಚಾರ ಮಾಡಿದ್ದರು. ಅವರು ದಾರಿಯಲ್ಲಿ ಬಂದು ಕೂಡಿದರು. ಪ್ರಾಣಯಜ್ಞಕ್ಕೆ ಸಿದ್ಧರಾಗಿ ಅನೇಕ ಜನರು ಬಂದು ಕೂಡಿದರು. ಅಲ್ಲಿ ನೋಡಿರಿ ಕಾರ್ತೀಕನು ಬರುತ್ತಿದ್ದಾನೆ. ಕಾರ್ತೀಕನು ಆಸ್ತಿಕರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಅವರು ಅವನನ್ನು ಅಪ್ಪಿಕೊಂಡರು.

"ನಿನ್ನ ಹೆಂಡತಿಯಲ್ಲವೇ ಕೈಯಲ್ಲಿ ಪಂಜು ಹಿಡಿದವಳು ? ನೀನು ಧನ್ಯನಿರುವಿ. ನಿಮ್ಮ ಜೋಡು ಧನ್ಯವಾದುದು !" ಎಂದು ಆಸ್ತಿಕರ ಬೆನ್ನ ಮೇಲೆ ಕೈಯಾಡಿಸಿದರು.

ಭಕ್ತರು ಬೆನ್ನಮೇಲೆ ಕೈಯಾಡಿಸಿದರೆ ಎಂಥ ಸುಖವಾಗುವದು. ಅದು ದೇವರ ಮಂಗಳ ಸ್ಪರ್ಶವೇ ಇರುತ್ತದೆ. ಆ ಸ್ಪರ್ಶದಿಂದ ಶರೀರದಲ್ಲಿಯ ಅಣುರೇಣುಗಳು ಪವಿತ್ರವಾಗುತ್ತವೆ. ಪುಲಕಿತವಾಗುತ್ತವೆ.

ಸ್ವಲ್ಪ ಮುಂದೆ ಸ್ತ್ರೀಯರ ಶಾಂತಿಸೇನೆಯು ಬಂದು ಕೂಡಿತು. ಕೈಯಲ್ಲಿ ಶಾಂತಿಧ್ವಜ, ಬಗಲಲ್ಲಿ ಕೂಸುಗಳನ್ನೆತ್ತಿಕೊಂಡು ಹೋಗುವ ಮಾತೆಯರು. ಜಗತ್ತಿಗೆ ಪ್ರೇಮಧರ್ಮವನ್ನು ತಾಯಂದಿರು ಕಲಿಸದೆ ಯಾರು ಕಲಿಸಬೇಕು.? ಆ ಎಲ್ಲ ಸ್ತ್ರೀಯರು ಒಬ್ಬರಹಿಂದೊಬ್ಬರು ಬಂದು ಆಸ್ತಿಕರಿಗೆ ನಮಸ್ಕರಿಸಿದರು. ಆಸ್ತಿಕರ ಕಣ್ಣುಗಳಿಂದ ಪಾವಿತ್ರ್ಯ ಹಾಗೂ ಮಂಗಲವು ಹರಿಯುತ್ತಿತ್ತು. ಈ ದೃಶ್ಯವನ್ನು ಕಂಡು ಅವರ ಅಂತಃಕರಣವು ತುಂಬಿ ಬಂದಿತು.

"ಇವರು ಕಾರ್ತೀಕನ ತಾಯಿ. ಆವಳು ಹೆಂಡತಿ? ಎಂದು ಒಬ್ಬರು ಪರಿಚಯ ಮಾಡಿಕೊಟ್ಟರು.

"ಇನ್ನೂ ಕೈಯಲ್ಲಿಯ ಗುಳ್ಳೆಗಳು ಮಾದಿಲ್ಲವೆಂದು ತೋರುತ್ತದೆ. ಹೂವಿನಂಥ ಕೋಮಲ ಕೈಗಳಲ್ಲಿ ಎಂಥ ಅದ್ಭುತ ಶಕ್ತಿ!" ಎಂದರು ಆಸ್ತಿಕರು.

ತ್ರಿವೇಣೀ ಸಂಗಮ ಮುಂದೆ ನಡೆಯಿತು. ಲಕ್ಷಾವಧಿ ಸ್ತ್ರೀ ಪುರುಷರು ಹಳ್ಳಿ ಹಳ್ಳಿಗಳಿಂದ ಈ ಅಮರ ಯಾತ್ರೆಯನ್ನು ನೋಡಲು ಹೊರಟರು. ಇಡೀ ದೇಶವೇ ನಡುಗಿತು. ಭರತಖಂಡದ ಹೃದಯವೇ ತುಂಬಿಬಂದಿತು. ಹಿಮಾಲಯವು ಕರಗಿ ಹರಿಯಹತ್ತಿತು. ಸಮುದ್ರವು ಉಕ್ಕೇರಿ ಕುಣಿಯಹತ್ತಿತು. ನದಿಗಳು ಹೊರಸೂಸಿದವು. ಅದು ಅಪೂರ್ವವಾದ ಕ್ಷಣವಿದ್ದಿತು.

೨೦

ಜನಮೇಜಯನು ಸಿಟ್ಟಿನಿಂದ ಕುದಿಯುತ್ತಿದ್ದನು. ಎಲ್ಲ ಕಡೆಗೂ ಅವನಿಗೆ ಛೀ. ಥೂ. ಅನ್ನಹತ್ತಿದ್ದರು. ಇಂದು ಕೈದಿಗಳನ್ನೆಲ್ಲ ಹೊರತೆಗೆದಿದ್ದಾರೆ. ಹಗ್ಗದಿಂದ ಎಲ್ಲರನ್ನೂ ಬಿಗಿದಿದ್ದಾರೆ. ಗಂಡಹೆಂಡಿರನ್ನು ಜೋಡಿ ಜೋಡಿಯಾಗಿ ನಿಲ್ಲಿಸಿದ್ದಾರೆ. ಎಷ್ಟೋಜನರ ಕೈಯಲ್ಲಿ ಮಕ್ಕಳಿವೆ. ಹೋಮಕುಂಡವು ಪ್ರಜ್ವಲಿಸುತ್ತಲಿದೆ. ಆ ಜ್ವಾಲೆಗಳು ನಾಲಿಗೆ ಚಾಚುತ್ತಲಿವೆ.

" ಎಲ್ಲಿರುವಳು ಆ ವತ್ಸಲೆ ? ' ಜನಮೇಜಯನು ರಾಜನೇ ಅಲ್ಲ. ಪ್ರಜೆಗಳನ್ನು ಮನ್ನಿಸದವನು ರಾಜನು ಹೇಗೆ ? ಅವನು ಕಳ್ಳ. ಸುಲಿಗೆಗಾರ, ಎಂದು ಅವಳು ಅಂದಿಲ್ಲವೇ ? ತನ್ನಿರಿ ಆಕೆಯನ್ನಿಲ್ಲಿ. ಆಕೆಯ ಗಂಡನನ್ನು ಎಳೆಯಿರಿ. " ಎಂದು ಗರ್ಜಿಸಿದನು.

ಇಬ್ಬರನ್ನೂ ಬಂಧಿಸಿ ಎದುರಿಗೆ ತಂದು ನಿಲ್ಲಿಸಿದರು.

' ವತ್ಸಲೇ, ವಿಚಾರ ಮಾಡಿದೆಯಾ ? ಈ ಗಂಡನನ್ನು ಬಿಡು. ಕ್ಷಮೆ ಕೇಳು, ಪ್ರಾಣಬೇಡವಾಗಿದ್ದರೆ ಸಿದ್ಧಳಾಗು. ಬೇಕಿದ್ದರೆ. ಆಜ್ಞೆಮನ್ನಿಸು. ' ಎಂದನು.

' ಕಡುಪಾಪಿಯೇ, ಹೋಗು ! ನಿನ್ನ ಮೋರೆ ನೋಡಲು ಕೂಡ ನನಗೆ ಇಚ್ಛೆಯಿಲ್ಲ. ನಿನ್ನ ಅಪವಿತ್ರ ಶಬ್ದ ಕೇಳಲೂ ಇಚ್ಛೆಯಿಲ್ಲ. ನಿನ್ನಂಥ ಪಾಪಾತ್ಮರು ಇರುವ ಭೂಮಿಯನ್ನೇ ತ್ಯಜಿಸಲು ನಾನು ಉತ್ಸುಕಳಾಗಿದ್ದೇನೆ. ದೇವಲೋಕಕ್ಕೆ ಹೋಗುವೆ. ಗಂಡನನ್ನು ಬಿಟ್ಟು ಹೆಂಡತಿಯು ಇರುವದು ಶಕ್ಯವಿಲ್ಲೆಂದು ಎಷ್ಟುಸಲ ನಿನಗೆ ಹೇಳಬೇಕು? ಪ್ರಭೆಯು ಪ್ರಭಾಕರನನ್ನು

ಬಿಡುವದಿಲ್ಲ. ಬೆಳದಿಂಗಳು ಚಂದ್ರನನ್ನು ಬಿಟ್ಟಿರುವದೇ? ನಾಗರು ಪವಿತ್ರರು. ನೀನು ಮಾತ್ರ ಧರ್ಮಭ್ರಷ್ಟ. ಸಾವಿರಾರು ಜನ ಸ್ತ್ರೀಪುರುಷರ, ಮಕ್ಕಳುಮರಿಗಳ ಹವನಮಾಡುವ ನೀನು ಮನುಷ್ಯನೇ? ನೀನು, ವೃಕ. ವ್ಯಾಘ್ರನಿರುವಿ. ವೃಕ,ವ್ಯಾಘ್ರವೂ ಬೇಕು. ಅವು ರಕ್ತಕ್ಕೆ ಇಷ್ಟು ಹಪಾಪಿಸಿರುವದಿಲ್ಲ. ನಿನ್ನ ಪಶುತ್ವಕ್ಕೆ, ದುಷ್ಟತನಕ್ಕೆ ತುಲನೆಯೇ ಇಲ್ಲ. ನನಗೆ ಧರ್ಮವನ್ನು ಕಲಿಸುವಿಯಾ! ಈ ನಿನ್ನ ರಕ್ತಲಾಂಛಿತ ಧರ್ಮವು, ಧರ್ಮವೇ? ನಿರಪರಾಧಿಗಳ ರಕ್ತ ಹರಿಸುವದು ಧರ್ಮವೇ? ಇದು ಧರ್ಮವಲ್ಲ. ಇದು ನಿನ್ನ ಉನ್ಮತ್ತತನ. ದ್ವೇಷದ ಉರಿ. ವಿಷದ ತೆರೆ. ಈ ನಿನ್ನ ರಾಜ್ಯದಲ್ಲಿ ಕ್ಷಣವೂ ಕೂಡ ಬದುಕಲು ಇಚ್ಛೆಯಿಲ್ಲ, ಎಲ್ಲಿ ಸರ್ವರ ವಿಕಾಸಕ್ಕೆ ಅವಕಾಶ ವಿಲ್ಲವೋ ಅದು ಕೇವಲ ಪಾಪದ ರಾಜ್ಯ. ನಿಮ್ಮ ಕಟ್ಟಳೆ, ನಿಮ್ಮ ಸಂಸ್ಥೆಗಳು ಸರ್ವರ ವಿಕಾಸಕ್ಕೆ ಎಷ್ಟು ಉಪಯೋಗ ಬೀಳುವವೋ ಅದರ ಮೇಲೆ ನಿಮ್ಮ ರಾಜ್ಯದ ಹಾಗು ಧರ್ಮದ ಪ್ರತಿಷ್ಠೆಯು. ನಿನ್ನ ರಾಜ್ಯವೂ ಬೇಡ. ನಿನ್ನ ಧರ್ಮವೂ ಬೇಡ. ನಮಗೆ ಬೇಗ ಹೋಗಬೇಕಾಗಿದೆ. ಯಾವ ಕುಂಡದಲ್ಲಿ ಹಾರಲಿ ಹೇಳು. ನಾವಿಬ್ಬರೂ ಕೈ ಕೈ ಹಿಡಿದುಕೊಂಡು ಪ್ರವೇಶಮಾಡುವೆವು. ನೋಡು, ಆ ಜ್ವಾಲೆಗಳು ನಮ್ಮನ್ನು ಕಾಣಲು ಕುಣಿಯುತ್ತಿವೆ. ಎಲ್ಲಿ ಹಾರೋಣ ಹೇಳು, ನಮ್ಮ ಶರೀರಗಳು ಸುಡುವದನ್ನು ನೋಡಿ, ನಿನ್ನ ಕಣ್ಣುಗಳು ಕೃತಾರ್ಥವಾಗಲಿ. ನಿನ್ನ ಆರ್ಯಧರ್ಮವು ಸಫಲವಾಗಲಿ. ನಮ್ಮ ಮಾಂಸವು ಚುರು ಚುರು ಸುಡುವದನ್ನು ಕಂಡು, ನಿನ್ನ ಶರೀರದ ಮೇಲೆ ಮಾಂಸವು ಹೆಚ್ಚಾಗಲಿ. ನಮ್ಮ ಸಾವಿರಾರು ಜನರ ಆಹುತಿಯಿಂದ ನಿನ್ನ ಸಿಟ್ಟು ಶಾಂತವಾದರೆ ಎಷ್ಟೋ ಒಳ್ಳೇದಾಗುವದು. ಸೂರ್ಯನು ಹುಟ್ಟುವಾಗ ಪೂರ್ವದಿಕ್ಕೆಲ್ಲ ಕೆಂಪು, ಕೆಂಪಾಗಿರುತ್ತದೆ. ಬರಬರುತ್ತ ಅದು ಕಡಿಮೆಯಾಗುತ್ತದೆ. ಬಾಲ ಸೂರ್ಯನು ಮೇಲೇರುತ್ತಾನೆ. ನಿನ್ನ ಜೀವನದಲ್ಲಿ ಜ್ಞಾನರವಿಯು ಉದಯವಾಗಲೆಂದು ನಾವು ಸಾವಿರಾರು ಹಿರಿಕಿರಿಯರೆಲ್ಲರೂ ನಮ್ಮ ರಕ್ತವನ್ನು ಚೆಲ್ಲಲು ಸಿದ್ಧರಾಗಿ ನಿಂತಿದ್ದೇವೆ. ಹೇಳು! ರಾಜಾ ಹೇಳು........"

ವತ್ಸಲೆಯು ಇತ್ತ ಮಾತಾಡುತ್ತಿರುವಾಗ ಅತ್ತ ಪ್ರಚಂಡ ಜಯಜಯಕಾರವು ಕಿವಿಗೆ ಬಿದ್ದಿತು. 'ಭಗವಾನ್ ಆಸ್ತಿಕರಿಗೆ ಜಯವಾಗಲಿ, ಐಕ್ಯದ

ವಿಜಯವಾಗಲಿ' ಎಂಬ ಗರ್ಜನೆ. ಸಸೈನ್ಯವಾಗಿ ಇಂದ್ರನು ಬಂದನೇ? ಆಸ್ತಿಕರ ಜಯಜಯಕಾರವೇಕೆ ? ಆಸ್ತಿಕರು ಬಂದರೇ ? ಈ ಸುದ್ದಿ ನನಗೇಕೆ ಹತ್ತಲಿಲ್ಲ ? ವಕ್ರತುಂಡನೇಕೆ ಹೇಳಲಿಲ್ಲ ? ಎಂದು ಜನಮೇಜಯನು ವಿಚಾರ ಮಗ್ನನಾದ. ರಾಜನು ಎದ್ದು ನಿಂತು ನೋಡುತ್ತಾನೆ. ರಾಜ್ಯದಲ್ಲಿ ಎಲ್ಲ ಪ್ರಜೆಗಳು ಬರುತ್ತಿರುವಂತೆ ಕಂಡಿತು. ಲಕ್ಷಾವಧಿ ಸ್ತ್ರೀಪುರುಷರು ಸಮುದ್ರದಂತೆ ಬರುತ್ತಿದ್ದಾರೆ. ಕೈಯಲ್ಲಿ ಹಳದೀ ಬಣ್ಣದ ಶಾಂತಿಧ್ವಜಗಳು ಕಾಣುತ್ತಲಿವೆ.

ಬಾಲಕನಾದ ಶಶಾಂಕನ ಕೈ ಹಿಡಿದುಕೊಂಡು ಆಸ್ತಿಕರು ಎಲ್ಲಕ್ಕೂ ಮುಂದೆ ಇದ್ದರು. ಹಿಂದೆ ಜನತೆ. ಜನಮೇಜಯನು ಎದ್ದು ನಿಂತನು. ಆಸ್ತಿಕರೂ ಶಾಂತಿಧ್ವಜದೊಡನೆ ಎದುರು ಬಂದು ನಿಂತರು. ಶಶಾಂಕನು ತಂದೆ ತಾಯಿಗಳನ್ನು ನೋಡಿದೊಡನೆಯೇ ಓಡಿ ಹೋಗಿ ತಾಯಿಯನ್ನು ಅಪ್ಪಿಕೊಂಡನು. ಸೈನಿಕರು ಆವನನ್ನು ಜಗ್ಗಹತ್ತಿದರು.

" ನಿಲ್ಲಿರಿ ಜಗ್ಗಬೇಡಿರಿ. ಇವಳು ನನ್ನ ತಾಯಿ. ಇವಳೊಡನೆ ನಾನು ಅಗ್ನಿಯಲ್ಲಿ ಜಿಗಿಯುವೆ. ಅಪ್ಪಾ! ನನ್ನದೊಂದು ಕೈಯನ್ನು ನೀನು ಹಿಡಿ. ಇನ್ನೊಂದನ್ನು ಅಪ್ಪನು ಹಿಡಿಯಲಿ. ನಾವೆಲ್ಲರೂ ಹಾರೋಣ. ಎಲ್ಲಿದೆ ಹೋಮಕುಂಡ ?' ಎಂದನು ಶಶಾಂಕ.

ಶಶಾಂಕನ ಈ ತೇಜಸ್ವಿ ನುಡಿಗಳನ್ನು ಕೇಳಿ, ಜನತೆಗೆ ಆಶ್ಚರ್ಯವಾಯಿತು. ಜನಮೇಜಯನು ತಲೆ ಕೆಳಗೆ ಹಾಕಿದನು. ಆದರೆ ಸಹಸ್ರಾರು ಜನರ ಮೋರೆಗಳು ಅಭಿಮಾನದಿಂದ ಮೇಲಕ್ಕೆದ್ದವು.

" ರಾಜಾ ! ಸಪ್ರೇಮ ಪ್ರಣಾಮಗಳು, " ಎಂದರು ಆಸ್ತಿಕರು

" ಭಗವಾನ್ ನನ್ನನ್ನು ನಾಚಿಸಬೇಡಿರಿ. ತಮ್ಮ ಪಾದಧೂಳಿಯಿಂದ ನಾವು ಪಾವನರಾಗುವೆವು" ಎಂದು ರಾಜನು ಸಾಷ್ಟಾಂಗವಾಗಿ ಪಾದಕೆ ಎರಗಿದನು. ಆಸ್ತಿಕರು ಅವನನ್ನು ಎಬ್ಬಿಸಿ ಅಪ್ಪಿಕೊಂಡರು.

ರಾಜನು ಬದ್ಧಾಂಜಲಿಯಾಗಿ, " ತಾವು ಎಲ್ಲಿಂದ ಬರೋಣವಾಯಿತು ? ಬಂದ ಉದ್ದೇಶವೇನು ? ತಮ್ಮಂತಹ ಪುಣ್ಯವಂತರ್ಷಿಗಳ, ಮಹರ್ಷಿಗಳ

ದರ್ಶನವು ದುರ್ಲಭವು. ನನ್ನ ನೂರು ಜನ್ಮದ ಪುಣ್ಯವು ಫಲಕೊಡಲು ಬಂದುದರಿಂದಲೇ ತಮ್ಮ ದರ್ಶನವಾಯಿತು," ಎಂದು ನುಡಿದನು.

"ರಾಜಾ! ಸುಮ್ಮನೆ ಔಪಚಾರಿಕವಾಗಿ ಮಾತನಾಡುವದರಲ್ಲಿ ಅರ್ಥ ವಿಲ್ಲ. ಇದು ವೇಳೆಯೂ ಅಲ್ಲ. ನಾನು ನನ್ನ ಬಲಿದಾನ ಮಾಡಲು ಬಂದಿದ್ದೇನೆ. ನಾನು ಹಾಗು ನನ್ನ ಎಲ್ಲ ಆಶ್ರಮವಾಸಿಗಳು ಮತ್ತು ಎಲ್ಲ ಋಷಿ, ಮುನಿಗಳು ನಿನ್ನ ಹೋಮಕುಂಡದಲ್ಲಿ ಪ್ರವೇಶಿಸಲು ಬಂದಿದ್ದೇವೆ. ದಾರಿಯಲ್ಲಿ ಸಹಸ್ರಾರು ಜನ ಬಂದು ಕೂಡಿದ್ದಾರೆ. ನೀನು ಪ್ರಾರಂಭಿಸಿದ ಈ ನರಮೇಧದಲ್ಲಿ ನಮ್ಮ ಆಹುತಿಯೂ ಆಗಿ, ನಿನ್ನ ನಾಗದ್ವೇಷಾಗ್ನಿಯು ಶಾಂತವಾಗಲಿ. ಈ ಶಶಾಂಕ, ನಾಗೇಶ, ಪದ್ಮನಾಭ, ಮೊದಲಾದ ವರ ಆಹುತಿಯಾಗಲಿ, ನಿರ್ಮಲರಾದ ಈ ಕುಮಾರರ ಬಲಿಯಾಗಲಿ, ವತ್ಸಲಾ, ಕೃಷ್ಣೆಯರಂಥ ದೊಡ್ಡ ಪತಿವ್ರತೆಯರನ್ನು ಬಲಿಕೊಡು. ಅಲ್ಲಿ ನೋಡು, ವೃದ್ಧಳಾದ ಸುಶ್ರುತೆ ಅಜ್ಜಿಯನ್ನು. ಆಕೆಯೂ ನಿನ್ನ ದ್ವೇಷಾ ಗ್ನಿಯನ್ನು ಶಾಂತಗೊಳಿಸಲು ಬಂದಿದ್ದಾಳೆ. ರಾಜಾ ನನ್ನಲ್ಲಿಯೂ ಕೂಡ ನಿನ್ನ ದೃಷ್ಟಿಯಿಂದ ಅಪವಿತ್ರವಾದ ನಾಗರಕ್ತವಿದೆ. ಈ ಅಪವಿತ್ರ ದೇಹ ವನ್ನು ಅಗ್ನಿಗೆ ಅರ್ಪಿಸು. ನಿನ್ನ ಧರ್ಮವು ಬೆಳಗಲಿ. ಪೃಥ್ವಿಯು ಪಾವನವಾಗಲಿ," ಎಂದರು ಆಸ್ತಿಕರು.

"ತಪೋಧನರೇ! ನಿಮ್ಮ ಅಸ್ತಿತ್ವದಿಂದಲೇ ಪಾವಿತ್ರ್ಯವು ಪವಿತ್ರವಾಗು ವದು. ಧರ್ಮವು ಸನಾಥವಾಗುವದು. ನೀವೇಕೆ ಹೀಗೆ ಮಾತನಾಡುವಿರಿ? ನಾನು ಎಂದಾದರೂ ನಿಮ್ಮನ್ನು ಅಪಮಾನಗೊಳಿಸಿರುವೆನೆ? ನಿಮ್ಮ ಆಶ್ರ ಮಕ್ಕೆ ಸೈನ್ಯ ಕಳಿಸಿರುವೆನೇ? ತಮ್ಮ ಬಗೆಗೆ ನನ್ನಲ್ಲಿ ಅತ್ಯಂತ ಪೂಜ್ಯಬುದ್ಧಿ ಯಿದೆ" ಎಂದನು ಜನಮೇಜಯ.

"ರಾಜಾ! ನನಗಿಂತಲೂ ದೊಡ್ಡ ವ್ಯಕ್ತಿಗಳನ್ನು ಬೆಂಕಿಯಲ್ಲಿ ಒಗೆ ಯಲು ನಿಲ್ಲಿಸಿರುವಿ. ಈ ಸಹಸ್ರಾರು ತಾಯಿಗಳಲ್ಲಿ ದಿವ್ಯತೆಯಿಲ್ಲವೆ? ಇಲ್ಲಿ ನಿಂತ, ಈ ಪುರುಷರಲ್ಲಿ ಪುಣ್ಯವಿಲ್ಲವೆ? ನೀನು ಕಟ್ಟಿ ನಿಲ್ಲಿಸಿದ ಈ ನೂರಾರು ಮಕ್ಕಳಿಗಿಂತ, ನಿರ್ಮಲರು ಯಾರಿರುವರು? ಈ ಪೃಥ್ವಿಯಲ್ಲಿ ಏನಾದರೂ ಪಾವಿತ್ರ್ಯ ಹಾಗು ಮಧುರತೆಯಿದ್ದರೆ, ಏನಾದರೂ ಅಲ್ಪ ಸ್ವಲ್ಪ

ಶಾಂತಿ ಸುಖಗಳು ದೊರೆಯುತ್ತಿದ್ದರೆ ಅದು ಈ ಅಕಪಟ ಮಕ್ಕಳಿಂದ. ಮಕ್ಕಳೆಂದರೆ ಸಂಸಾರವೃಕ್ಷದ ಹೂಗಳು. ಈ ಎಲ್ಲ ಜನರನ್ನು ಬಲಿಗೊಟ್ಟು ನನ್ನನ್ನು ಉಳಿಸುವೆಯಾ ? ಎಂತಹ ಭಯಂಕರ ಆಸುರಿ ಸಂಹಾರವನ್ನು ಪ್ರಾರಂಭಿಸಿರುವೆ! ನಾವಿದನ್ನು ನೋಡುವದೆಂತು ? ರಾಜಾ ! ನನ್ನನ್ನೂ ಬಲಿಗೊಡು. ಯಾವ ಹೋಮಕುಂಡದಲ್ಲಿ ಪ್ರವೇಶಿಸಲಿ ? ಗುರುಗಳು ಮಾರ್ಗದರ್ಶನ ಮಾಡಬೇಕು. ನಾನು ಮೊದಲು ಪ್ರವೇಶಿಸುವೆ. ನಂತರ ಈ ಶಿಷ್ಯವರ್ಗವು ಬರುವದು " ಎಂದು ಶಾಂತ ರೀತಿಯಿಂದ ಆಸ್ತಿಕರು ನುಡಿದರು.

" ಭಗವಾನ್, ನಾನು ನಾಗರನ್ನು ಕಂಡು ಏಕೆ ಸಿಟ್ಟಾಗಬಾರದು ? ನನ್ನ ತಂದೆಯನ್ನು ಇವರಲ್ಲಿಯ ಒಬ್ಬನು ಕೊಲ್ಲಲಿಲ್ಲವೇ ? ಈ ಜನರು ದುಷ್ಟರಲ್ಲವೆ ? " ಎಂದನು ರಾಜ.

" ರಾಜಾ ಅರ್ಜುನನು ತಕ್ಷಕರ ವಸಹಾತನ್ನೇ ಪೂರ್ಣವಾಗಿ ಸುಟ್ಟನು. ಅದರಲ್ಲಿ ಸಾವಿರಾರು ನಾಗರು ಸುಟ್ಟು ಭಸ್ಮವಾದರು. ಅಲ್ಲಿಂದ ಓಡಿ ಹೋಗುವವರನ್ನು ಎಳೆದುತಂದು ಬೆಂಕಿಯಲ್ಲಿ ಒಗೆದರು. ಒಬ್ಬ ತರುಣನು ಮಾತ್ರ ಉಳಿದ. ನಿನ್ನ ತಂದೆಯಂತೂ ಋಷಿಯ ಅಪಮಾನ ಮಾಡಿದ್ದು ನಿನಗೆ ಗೊತ್ತಿದೆ. ಆರ್ಯರಾದ ನೀವು ನಾಗರನ್ನು ಹುರಿದು ಬಿಟ್ಟಿರುವಿರಿ. ನಾಗರಿಗೆ ಆದ ಅನ್ಯಾಯಕ್ಕೆ ಶಾಸನವನ್ನೇ ಮಾಡುವದಾದರೆ, ನಿಮ್ಮ ಆರ್ಯರನ್ನೆಲ್ಲ ಸಾಸಿವೆ ಕಾಳಿನಷ್ಟು ಕಡಿದು ತುಂಡು ಮಾಡಬೇಕು. ಅವರನ್ನು ಛಲಿಸಿದಿರಿ, ಸುಟ್ಟಿರಿ. ಅವರ ಮನೆಮಾರುಗಳನ್ನು ಸೂರೆಗೊಂಡಿರಿ. ಅವರನ್ನು ದೂರ ಅಟ್ಟಿದಿರಿ. ಅವರ ಸ್ತ್ರೀಯರನ್ನು ಉಪಯೋಗಿಸಿಕೊಂಡು ಬೀಸಾಡಿದಿರಿ. ಇಷ್ಟಾದರೂ ಅವರು ಶಾಂತರಿದ್ದರು. ಅವರ ಮೂರ್ತಿಗಳನ್ನು ಕಿತ್ತೊಗೆಯಹತ್ತಿದಕೂಡಲೆ ನಿಮ್ಮ ಸಹಸ್ರಾರು ಅಪರಾಧಗಳನ್ನು ಹೊಟ್ಟೆಯಲ್ಲಿ ಹಾಕಿಕೊಂಡ ಅವರು ರೊಚ್ಚಿಗೆದ್ದರೆ ಅವರು ಕ್ರೂರರೋ ? ನೀವೋ, ? ಜೇತೃಗಳಿಗೆ ತಮ್ಮ ಕ್ರೂರತನವು ಕಾಣಿಸುವದಿಲ್ಲ. ಸೋತವರನ್ನು ಕೊಲ್ಲುವದೇ ಅವರ ಮೇಲೆ ಕರುಣೆಯೆಂದು ತಿಳಿಯುವರು. ಅವರನ್ನು ಸುಲಿಯುವದರಲ್ಲಿಯೇ ಅವರ ಹಿತವದೆ. ಅವರನ್ನು ದಾಸ

ರನ್ನಾಗಿ ಮಾಡುವದೆಂದರೇ ಅವರಿಗೆ ಸಂಸ್ಕೃತಿಯನ್ನು ಕೊಟ್ಟಂತೆ ಎಂದು ಭಾವಿಸುತ್ತಾರೆ. ಖಡ್ಗವೆಂದರೆ ಸಂಸ್ಕೃತಿಯಲ್ಲ. ಎರಡನೆಯವರ ಗುಡಿ ಸಲಗಳನ್ನು ಸುಟ್ಟು, ಅರಮನೆಗಳನ್ನು ಕಟ್ಟುವದು ಸುಧಾರಣೆಯಲ್ಲ. ಯಾವುದರಿಂದ ಮನುಷ್ಯತ್ವವು ಬೆಳೆಯುವದೋ ಅದು ಸುಧಾರಣೆ. ನನಗೆ ಇದರಲ್ಲಿ ಹೀನವೃತ್ತಿಯು ಕಾಣಿಸುತ್ತಿದೆ. ಕೇವಲ ದ್ವೇಷವು ಕಾಣುತ್ತದೆ ನಾಗರೆಂದರೆ ಕ್ರೂರರು. ನಾಗರೆಂದರೆ ಕೆಡುಕು ಯಾಕೆ? ದೇವರು ವಿಶಿಷ್ಟ ಜಾತಿಯು ಕ್ರೂರವೆಂದು ಹುಟ್ಟಿಸಿರುವನೇ? ಒಳ್ಳೇ ಕೆಟ್ಟ ಜನರು ಎಲ್ಲರಲ್ಲಿಯೂ ಇದ್ದಾರೆ. ಆರ್ಯರಲ್ಲಿ ಅತ್ಯಂತ ದುಷ್ಟರಿದ್ದರೆ, ನಾಗರಲ್ಲಿ ಮಹಾತ್ಮರೂ ಸಿಗುವರು. ಯಾರೂ ಯಾರಿಗೂ ನಗಬಾರದು. ಬೆಳಕು ಕತ್ತಲೆಗಳು ಎಲ್ಲೆಡೆಯಲ್ಲಿವೆ. ಕೇವಲ ಪವಿತ್ರ, ನಿಸ್ವಾರ್ಥ, ನಿಷ್ಕಲಂಕ ಜ್ಯೋತಿಯು ಯಾವುದಿದೆ? ಸರ್ವಸುಂದರನು ಪರಮಾತ್ಮನೊಬ್ಬನೇ ನಾವು ಒಬ್ಬರಿಗೊಬ್ಬರು ಗುಣಗಳನ್ನು ತಕ್ಕೊಳ್ಳುತ್ತ, ದೋಷಗಳನ್ನು ದೂರ ಮಾಡುತ್ತ ಮುಂದೆ ಸಾಗಬೇಕು. ಎರಡನೆಯವರ ಕೊಲೆ ಮಾಡುವವರಿಗೆ ದೇವ ರಾಜ್ಯದಲ್ಲಿ ಪ್ರವೇಶವಿಲ್ಲ.

ನಾಗರಮೇಲೆ ನೀನು ಸುಮ್ಮನೆ ಸಿಟ್ಟಿಗೆದ್ದಿರುವಿ. ಹಳ್ಳಿಹಳ್ಳಿಗಳಲ್ಲಿ ನೋಡಿ ದರೆ ಇಬ್ಬರಲ್ಲಿಯೂ ಒಳ್ಳೆ ಸಂಬಂಧವು ಬೆಳೆಯುತ್ತ ನಡೆದಿತ್ತು. ಅದಕ್ಕೆ ಮತ್ತೆ ಖೋ ಹಾಕಿದಿ. ಕೆಲವು ನಾಗರು ಇಂದ್ರನ ಕಡೆಗೆ ಹೋಗಿದ್ದಾರೆ. ಅವರೊಡನೆ ಯುದ್ಧ ಮಾಡುವಿಯಾ? ಮತ್ತೆ ರಕ್ತದ ಕಾಲುವೆ ಹರಿ ಸುವಿರಾ? ನಾವೆಲ್ಲ ಗಂಗಾ, ಯಮುನಾ, ಸಿಂಧು, ಕಾವೇರಿ ಮೊದಲಾದ ನದಿ ಗಳಿಂದ ಪವಿತ್ರಳಾದ ಈ ಭಾರತಮಾತೆಯ ಮಕ್ಕಳಲ್ಲವೇ ? ತನ್ನ ಮಕ್ಕಳ ರಕ್ತದ ಕಾಲುವೆ ಹರಿಯುವದನ್ನು ಯಾವ ತಾಯಿಗೆ ನೋಡುವದಾದೀತು? ಈ ಭಾರತಮಾತೆ ಪಾತಾಳಕ್ಕೆ ಹೋದಾಳು? ಅನ್ನವು ನಿಮ್ಮನಷ್ಟೇ ಪವಿತ್ರಗೊಳಿಸಿ, ನಾಗರನ್ನು ಅಪವಿತ್ರರನ್ನಾಗಿ ಮಾಡುವದೋ? ಇದೆಲ್ಲವೂ ಅಹಂಕಾರ.

" ರಾಜನೆ, ದ್ವೇಷದಿಂದ ದ್ವೇಷವು ಶಾಂತವಾಗುವದಿಲ್ಲ. ಮತ್ಸರ ದಿಂದ ಮತ್ಸರವು ಸಾಯುವದಿಲ್ಲ. ಆರ್ಯರಲ್ಲಿ ಕೆಲವು ಸುಂದರ

ಗುಣಗಳಿದ್ದಂತೆ ನಾಗರಲ್ಲಿಯೂ ಒಳ್ಳೆಯ ನಡತೆಗಳಿವೆ. ಇಬ್ಬರೂ ಒಂದಾದರೆ ಧರ್ಮಕ್ಕೆ ಮತ್ತಿಷ್ಟು ಕಳೆ ಬಂದೀತು. ಹಿಮಾಲಯವು ಅನೇಕ ಶಿಖರಗಳಿಂದ ಶೋಭಿಸುತ್ತದೆ. ಭಾರತೀಯ ಧರ್ಮದಲ್ಲಿ ನೂರಾರು ಸುಂದರ ವಿಚಾರ ಆಚಾರಗಳ ಶಿಖರಗಳು ಕಾಣಲಿ. ವಿವಿಧತೆಯು ಒಂದು ಬಗೆಯ ವೈಭವವೇ. ಆದರೆ ವೈಭವದ ಹಿಂದೆ ಐಕ್ಯತೆ ಮಾತ್ರ ಇರಬೇಕು. ಒಂದೇ ಗಿಡದ ಟೊಂಗೆಗಳಂತೆ, ಒಂದೇ ನದಿಯ ಪ್ರವಾಹಗಳಂತೆ, ಆಕಾಶದಲ್ಲಿಯ ನಕ್ಷತ್ರಗಳಂತೆ.

ರಾಜಾ, ಆರ್ಯರ ವಿಷ್ಣುವೂ ಈ ನಾಗರ ಸಾವಿರಹೆಡೆಯ ನಾಗನೂ ಒಂದೆಡೆಯಲ್ಲಿ ಸೇರಲಿ. ದೇವರು ಬಂದರೆ ಭಕ್ತರೂ ತಾವಾಗಿಯೇ ಒಂದಾಗುವರು. ಶೇಷಶಾಹಿಯಾದ ಪರಮಾತ್ಮನನ್ನು ನಾವು ನಿರ್ಮಿಸೋಣ. ದೇವರ ಸಂಪತ್ತನ್ನು ಬೆಳೆಸೋಣ, ಶೇಷಶಾಹಿ ವಿಷ್ಣುವೆಂದರೆ ನಾಗರ ಆಧಾರದಿಂದ ಜೀವಿಸುವ ಆರ್ಯರು. ನಾಗರು ಮೂಲವಾಸಿಗಳು. ಅವರ ಸಹಾಯ ಪಡೆಯಿರಿ. ಸಹಕಾರವನ್ನು ಮಾಡಿರಿ. ಇಬ್ಬರೂ ಪ್ರೀತಿಯಿಂದ ಬಾಳಿರಿ. ಆರ್ಯ ಹಾಗೂ ನಾಗರ ಸಂಸ್ಕೃತಿಗಳು ಒತ್ತಟ್ಟಿಗೆ ಸೇರಲಿ. ಇಬ್ಬರೂ ಸೇರಿ ಹೊಸದಾದ ಒಂದು ಸಂಮಿಶ್ರ ಸಂಸ್ಕೃತಿಯು ಹೊರಬರಲಿ. ಶುಭ್ರವಾದ ಗಂಗೆಯಲ್ಲಿ ಕಪ್ಪಾದ ಯಮುನೆಯು ಸೇರಲಿ. ಪ್ರವಾಹವು ವಿಶಾಲವಾಗಲಿ. ಗಂಭೀರವಾಗಲಿ. ಮುಂದಿನ ಜನಾಂಗಕ್ಕೆ ಆದರ್ಶವಾಗಲಿ.

ರಾಜನೆ, ಪವಿತ್ರ ಹಾಗು, ಸುಂದರವಾದ ಸಮೃದ್ಧ ಹಾಗೂ ಸಸ್ಯಶಾಮಲೆಯಾದ ಈ ಭೂಮಿಯಲ್ಲಿ ಅನೇಕ ಜಾತಿ ಪಂಥಗಳು ಇರುತ್ತವೆ. ಆರ್ಯರಾದ ನೀವು ಬಂದಂತೆ, ಬೇರೆಯವರು ಬರಬಹುದು. ಈ ಭೂಮಿಯ ಪ್ರೇಮದಿಂದ ಬೇರೆ ಬೇರೆ ಧರ್ಮಗಳು ಬರಬಹುದು. ದರಿದ್ರ ಹಾಗು ಅನ್ನವಿಲ್ಲದ ರಾಷ್ಟ್ರಗಳು ಭಾರತಮಾತೆಯ ಬಳಿಯಲ್ಲಿ ಬರಬಹುದು. ಅವಳು ಅವರನ್ನು ಸ್ವಾಗತಿಸಿ, ಪೋಷಿಸಬಹುದು. ಆದರೆ ನೀವು ಬೇರೆ ಬೇರೆಯಾಗಿದ್ದರೆ ಬಡಿದಾಡಬಹುದು; ತಾಯಿಗೆ ಕಷ್ಟಕೊಡಬಹುದು. ಮುಂದೆ ಬರಲಿರುವ ಜನಾಂಗಕ್ಕೆ ಹೇಗೆ ನಡೆದುಕೊಳ್ಳಬೇಕೆಂಬ ಉದಾಹರಣೆಯನ್ನು ನೀವು ಇಂದು ಆಚರಿಸಿ ತೋರಿಸಿರಿ.

ಒಬ್ಬರನ್ನೊಬ್ಬರು ಉಚ್ಚನೀಚರೆಂದು ತಿಳಿಯಬಾರದು. ಇಲ್ಲದ್ದನ್ನು ತೆಗೆಯಬೇಡಿರಿ. ವೇಳೆಯನ್ನು ವ್ಯರ್ಥವಾಗಿ ಕಳೆಯಬೇಡಿರಿ. ಮಾಂಗಲ್ಯ ವನ್ನು ನಿರ್ಮಿಸುವದಕ್ಕಾಗಿ ಬಾಳುವವನೇ ನಿಜವಾದ ಮನುಷ್ಯ. ಜಾತಿ ಜಾತಿ ಗಳಲ್ಲಿ ಪ್ರೇಮ ಹುಟ್ಟಿಸುವದಕ್ಕಾಗಿ ಸಾಯುವವನೇ ನಿಜವಾದ ಮನುಷ್ಯ. ತನ್ನಲ್ಲಿರುವ ಶ್ರೇಷ್ಠತೆಯನ್ನು ತಾನು ತಿಳಿದು ಅದನ್ನು ಎರಡನೆಯವರಿಗೆ ತಿಳಿ ಯುವಂತೆ ಮಾಡುವದೇ ನಿಜವಾದ ಮನುಷ್ಯತ್ವ. ಈ ಭರತ ಖಂಡದಲ್ಲಿ ಬೇರೆ ಬೇರೆ ಸಂಸ್ಕೃತಿಯ ಜನರು ಬರಬಹುದು. ದೊಡ್ಡ ಗಿಡದಲ್ಲಿ ಬೇರೆ ಬೇರೆ ಬಣ್ಣಗಳುಳ್ಳ, ಬೇರೆ ಬೇರೆ ಸ್ವರಗಳುಳ್ಳ, ಅನೇಕ ಪಾರಿವಾಳಗಳು ಬಂದು ಕೂಡಬಹುದು. ಅದು ವಿಶಾಲವಿದೆಯೆಂದೇ ಬರುವವು. ಬೇರೆ ಬೇರೆ ಜನರು ಒಂದೆಡೆ ಸೇರಿ ವಿಶ್ವಸಂಗ್ರಾಹಕವೂ ಪರಮ ಮಂಗಲವೂ ಆದ ಬೇರೊಂದು ಸಂಸ್ಕೃತಿಯನ್ನು ನಿರ್ಮಿಸಬಹುದು. ಭಾರತ ಭೂಮಿಯು ಮನುಷ್ಯತ್ವದ ತೀರ್ಥಕ್ಷೇತ್ರವಾದೀತು. ನಾನಾ ಸಂಸ್ಕೃತಿಗಳ ಸಂಮಿಶ್ರಿತ ಸಹಸ್ರದಳ ಕಮಲವೊಂದು ಅರಳೀತು.

ರಾಜನೆ, ಅಹಂಕಾರದಿಂದ ವಿಕಾಸಕ್ಕೆ ತಡೆಯಾಗುವದು. ಸಂಕುಚಿತ ವೃತ್ತಿಯು ಕಟ್ಟಕಡೆಗೆ ಸತ್ತುಹೋಗಬಹುದು. ಸಹಾನುಭೂತಿಯಿಲ್ಲದ, ಸಹಕಾರವಿಲ್ಲದ, ಜೀವನವೆಂದರೆ ಕಾಯ್ದ ಉಸುಕಿನ ಮರುಭೂಮಿ. ದೊಡ್ಡವರಾದ ನಮ್ಮ ಪೂರ್ವಜರು 'ಶೃಣ್ವಂತು ಸರ್ವೇ ಅಮೃತಸ್ಯ ಪುತ್ರಾಃ' ಎಂದು ಎಲ್ಲರನ್ನು ಕರೆದರು. 'ಅಮೃತಸ್ಯ ಪುತ್ರಾಃ ನತು ಕೇವಲಂ ಆರ್ಯಾಣಾಂ ನತು ನಾಗಾನಾಮ್ ।!' ಯಾವ ವಿಶ್ವಶಕ್ತಿಯಿಂದ ಆರ್ಯರು ಹುಟ್ಟಿದರೋ ಅದೇ ಶಕ್ತಿಯಿಂದ ನಾಗರೂ ಹುಟ್ಟಿದ್ದಾರೆ. ಯಾವ ತತ್ವವು ಆರ್ಯರಲ್ಲಿದೆಯೋ ಅದು ನಾಗರಲ್ಲಿಯೂ ಇದೆ. ಆರ್ಯರಿಗೆ ಹಸಿವೆಯನ್ನು ಹಿಂಗಿಸಲು ಅನ್ನ ಬೇಕು, ಅದರಂತೆಯೇ ನಾಗರಿಗೂ ಬೇಕು. ಇದನ್ನಾರು ನೋಡುವರೋ (ತಿಳಿಯುವರೋ) ಅವರೇ ನಿಜವಾದ ಮನುಷ್ಯರು. ಅವರೇ ಕಣ್ಣುಳ್ಳವರು. ಉಳಿದವರೆಲ್ಲ ಕುರುಡರು, ಕಣ್ಣಿದ್ದೂ ಕುರುಡರು.

ರಾಜನೆ ತಿಳಿದು ನೋಡು. ನಿರ್ಮಲ, ನಿರಹಂಕಾರ ಪ್ರೇಮಳ ದೃಷ್ಟಿ ಯಿಂದ ಶಾಂತ ಚಿತ್ತದಿಂದ ಮನಸ್ಸಿನಲ್ಲಿ ವಿಚಾರಮಾಡಿ ನೋಡು. ನನ್ನ

ಅಭಿಪ್ರಾಯವು ನಿನಗೆ ತಿಳಿದೀತು. ನೀನು ನನ್ನನ್ನು ಉಳಿಸಬೇಕೆಂದು ನಾನು ಇದನ್ನು ಹೇಳುವದಿಲ್ಲ. ಈ ನಾಗರನ್ನು ಇವರನ್ನು ಸಾಹಾನುಭೂತಿ ಯಿಂದ ನೋಡುವವರನ್ನೂ ನೀನು ಕೊಲ್ಲುವಿಯಾದರೆ ನನ್ನನ್ನೂ ಕೊಲ್ಲು. ನಾಗ ಜಾತಿಯು ಸಮೂಲವಾಗಿ ನಷ್ಟವಾಗುತ್ತಿರುವಾಗ ಆದಾವನು ಆಶ್ರಮ ದಲ್ಲಿ ಜಪ ತಪ ಮಾಡುತ್ತ ಕೂಡುವನು ? ದೇವರ ಸಹಸ್ರಾವಧಿ ಮಕ್ಕಳ ಅಮಾನುಷ ಛಲವು ನಡೆದಿರುವಾಗ ಯಾರು ಸುಮ್ಮನಿದ್ದಾರು ? ಇಂದ್ರನಂತೆ ನಿನ್ನೊಡನೆ ಶಸ್ತ್ರಾಸ್ತ್ರಗಳಿಂದ ಯುದ್ಧ ಮಾಡುವರು. ಕೈಯಲ್ಲಿ ಖಡ್ಗಹಿಡಿದು ಯುದ್ಧ ಮಾಡುವದು ನನ್ನ ಕೆಲಸವಲ್ಲ. ನನ್ನಂಥ ತಪೋನಿಷ್ಠನು ಖಡ್ಗ ದೆದುರು ಶಾಂತನಾಗಿ ನಿಲ್ಲಬಹುದು. ತನ್ನನ್ನೇ ಬಲಿಕೊಟ್ಟು ಅನ್ಯಾಯ ವನ್ನು ಎದುರಿಸಬಹುದು. ಪಶುತ್ವದ ವಿರುದ್ಧವಾಗಿ ಮನುಷ್ಯತ್ವವು ಕೆಲಸ ಮಾಡೀತು. ರಾಜಾ, ಈ ಮಹಾ ತಾಯಂದಿರನ್ನು ಆಕಳುಗಳಂತೆ ನೀನು ನಿಲ್ಲಿಸಿರುವೆ. ರಾಜನೆ, ಯಾರಾದರು ನಿನ್ನ ಅಕ್ಕತಂಗಿಯರನ್ನು ತಾಯಿ ಯನ್ನು ನಿನ್ನ ಕುಟುಂಬದ ಜನರನ್ನು ಕಟ್ಟಿತಂದು ಹೀಗೆ ನಿಲ್ಲಿಸಿದ್ದರೆ, ನೀನು ಸುಮ್ಮ ನಿರುತ್ತಿದ್ದೆಯಾ ? ಪ್ರತಿಯೊಂದು ಮಾತನ್ನು ಸ್ವಂತ ವಿಚಾರದಿಂದಲೇ ಮಾಡಬೇಕು. ಎಲೊ, ಈ ತಾಯಿ ತಂಗೆಂದಿರು ನಿನ್ನವರೇ ಇದ್ದಾರೆ. ಅರ್ಜುನನು ನಾಗಕನ್ನೆಯರನ್ನು ವಿವಾಹವಾಗಿದ್ದಿಲ್ಲೇನು ? ಆ ದ್ರೌಪದಿ ದೇವಿಯಾದರು ಯಾರೆಂದು ತಿಳಿದಿರುವೆ ? ಅವಳು ನಾಗಕನ್ಯೆಯೇ ಇರ ಬಹುದೆಂದು ನನಗೆನಿಸುತ್ತದೆ. ಯಾಕಂದರೆ ಅಗ್ನಿಋಷಿಯು ಅವಳನ್ನು ದ್ರುಪದರಾಜನಿಗೆ ಕೊಟ್ಟನು. ದ್ರುಪದರಾಜನಿಗೆ ಮಕ್ಕಳಿದ್ದಿಲ್ಲ. ಅಗ್ನಿ ಋಷಿಯು ಆರ್ಯರ ವಸತಿಯನ್ನು ಬೆಳೆಸಬೇಕೆನ್ನುವವ. ಅವನು ನಾಗರನ್ನು ಛಲಿಸಿದನು. ಆದರೆ ಸುಂದರಳಾದ ನಾಗಬಾಲಿಕೆಯನ್ನು ನೋಡಿ ಅವನ ಹೃದಯವು ಕರಗಿತು. ಆ ಚಿಕ್ಕ ಮಗುವನ್ನು ದ್ರುಪದನಿಗೆ ಕೊಟ್ಟನು. ನನ್ನ ಮತದಂತೆ ಕಪ್ಪಿದ್ದವರು ಆರ್ಯರಲ್ಲನೆಂಬ ಸಿದ್ಧಾಂತವನ್ನು ಮಂಡಿಸಲು ಬರಲಾರದು. ನಾಗರಲ್ಲಿಯೂ ಎಷ್ಟೊ ಜನರು ಕೆಂಪಿದ್ದಾರೆ. ಆರ್ಯ ರಲ್ಲಿಯೂ ಕಪ್ಪು ಬಣ್ಣದವರಿದ್ದಾರೆ. ಏನೆ ಇರಲಿ. ಅಗ್ನಿಯು ದ್ರುಪದೆ ಯನ್ನು ತಂದು ಕೊಟ್ಟನೆಂಬ ಮಾತು ಸತ್ಯ. ನಾಗಮಾತೆಯಶು ಒಂದು ಬಗೆ

ಯಿಂದ ನಿನ್ನ ತಾಯಿಯರು. ಅವರ ಬಲಿದಾನವನ್ನು ಮಾಡುವದಿದ್ದರೆ ಮಾಡು.

ರಾಜನೆ, ಈ ಪೃಥ್ವಿಯಲ್ಲಿ ಶಾಂತಿಯ ರಾಜ್ಯವಿರಬೇಕೆಂದು ನಿನ್ನ ಮೊದಲಿನ ಮಹರ್ಷಿಗಳ ಇಚ್ಛೆಯಿದ್ದಿತು. ಆದುದರಿಂದಲೇ ವೇದ ಮಂತ್ರಗಳ ಕೊನೆಗೆ ಓಂ ಶಾಂತಿಃ ಶಾಂತಿಃ ಶಾಂತಿಃ ಎಂಬ ಉದಾತ್ತ ಧ್ಯೇಯವನ್ನು ತ್ರಿವಾರ ಘೋಷಿಸಿದ್ದಾರೆ. ಈ ಧ್ಯೇಯದ ಬೆಳವಣಿಗೆಯನ್ನು ಮಾಡುವದು ಮುಂದಿನ ಪೀಳಿಗೆಯ ಕರ್ತವ್ಯ. ಆದರೆ ಆ ಧ್ಯೇಯವನ್ನು ನೀನು ಮಣ್ಣು ಗೂಡಿಸುತ್ತಿರುವೆ. ನೀನು ಈ ನಾಗರನ್ನು ಬಲಿಗೊಡಲು ಸಿದ್ಧನಾದರೆ, ನಿನ್ನ ಪೂರ್ವಜರ ಧ್ಯೇಯ, ಆಶೆ ಆಕಾಂಕ್ಷೆ, ಅವರ ಸ್ವಪ್ನ ಎಲ್ಲವನ್ನು ಮಣ್ಣು ಗೂಡಿಸುವೆ. ಮನುಷ್ಯತ್ವವು ಎಲ್ಲಿದೆ ಎಂಬುದನ್ನು ತಿಳಿದುಕೋ. ಪಶುತ್ವವನ್ನು ತ್ಯಾಗಮಾಡಿ ದಿವ್ಯತ್ವದ ಕಡೆಗೆ ಸಾಗುವದೇ ಮನುಷ್ಯತ್ವವು. ನೀನು ಎತ್ತ ಸಾಗಿರುವೆ ಎಂಬುದನ್ನು ನೋಡು. ರಾಜನು ಮತಿಭ್ರಷ್ಟನಾದರೆ ರಾಷ್ಟ್ರವೇ ನಾಶವಾಗುವದು. ಭಗವಾನ್ ಶುಕಾಚಾರ್ಯರಮಾತು ಕೇಳಿ, ನಿನ್ನ ತಂದೆಯು ವಿಷಕೊಟ್ಟ ನಾಗನನ್ನು ಕ್ಷಮಿಸಲಿಲ್ಲವೇ! ಪ್ರೇಮವನ್ನು ತೋರಿಸಲಿಲ್ಲವೇ! ಇಂದು ಪರೀಕ್ಷಿತನು ಏನು ಅಂದಾನು? ಅವನು ತೋರಿದ ದಿವ್ಯತ್ವವನ್ನು ನೀನು ಹಾಳು ಮಾಡುವಿಯಾ!

ರಾಜಾ. ಇನ್ನೊಮ್ಮೆ ವಿಚಾರಮಾಡು. ನಾಗ ಹಾಗು ಆರ್ಯರ ಐಕ್ಯಕ್ಕಾಗಿ ಯತ್ನಿಸಿದ ರಾಜನೆಂದು ನಿನ್ನ ಹೆಸರು ಇತಿಹಾಸದಲ್ಲುಳಿಯಲಿ. ನಾಗರ ಹವನ ಪ್ರಾರಂಭಮಾಡಿದವನೆಂದಂತೂ ಉಳಿಯುವದು. ಅದನ್ನು ನಿಲ್ಲಿಸಿ ಇಬ್ಬರಲ್ಲಿ ಐಕ್ಯಮಾಡಿದನೆಂದೂ ಇತಿಹಾಸವು ಹೇಳಲಿ. ಇಬ್ಬರನ್ನೂ ಕೂಡಿಸು, ಈ ಪತಿವ್ರತೆಯರಿಗೂ, ಅಕ್ಕತಂಗಿಯರಿಗೂ ಆದರದಿಂದ ವಸ್ತ್ರಾಲಂಕಾರಗಳನ್ನು ಕೊಡು. ಸರ್ಪರ ಸತ್ಕಾರಮಾಡು. ನಾಗರನ್ನು ಹತ್ತರ ಕರೆ. ಪ್ರೇಮವನ್ನುಮಾಡು. ಇಂದ್ರ ಮೊದಲಾದ ಸರ್ಪರಾಜರನ್ನು ಕರೆಯಿಸು. ಭರತಖಂಡದಲ್ಲೆಲ್ಲ ಆರ್ಯನಾಗರ ಐಕ್ಯದ ಸಂದೇಶವು ಹೋಗಲಿ. ಎರಡೂ ಜಾತಿಗಳು ಒಂದೆಡೆ ಬರಲಿ. ಭಾರತದ ಮುಖ ಮುದ್ರೆಯು ನವ ತೇಜದಿಂದ ಹೊಳೆಯಲಿ. ಭಾವೀ ಪೀಳಿಗೆಯು ಉತ್ತರೋತ್ತರವಾಗಿ ಬೆಳೆಯು

ವಂತಾಗಲಿ. ಇಂದು ಆರ್ಯ ಹಾಗೂ ನಾಗರು ಒಂದು ಗೂಡಿವ ನಾಳೆ ಮತ್ತೊಂದು ಪ್ರವಾಹವು ಬಂದು ಕೂಡುವದು. ವಿಶ್ವ ಚಾಲಕನು ಮಾನವ ಜಾತಿಯ ಎಲ್ಲ ಮಾದರಿಗಳನ್ನು ಭಾರತದಲ್ಲಿ ತಂದು, ಒಂದು ಸುಂದರವಾದ ದೃಶ್ಯವನ್ನು ನಿರ್ಮಿಸಬಹುದು. ಅವನ ಈ ಇಚ್ಛೆಯನ್ನು ತಿಳಿದು ನಡೆಯೋಣ. ಈಶ್ವರ ಇಚ್ಛೆಯ ವಿರುದ್ಧವಾಗಿ ನಡೆದರೆ, ನಾವೂ ಸಾಯುವೆವು. ಮುಂದಿಯನ್ನೂ ಕೊಲ್ಲುವೆವು. ಪ್ರವಾಹದ ವಿರುದ್ಧವಾಗಿ ಹೋಗುವದರಲ್ಲಿ ಅರ್ಥವಿಲ್ಲ. ಭರತ ಖಂಡದ ಇತಿಹಾಸದ ಗತಿಯು ಮಾನವೈಕ್ಯದ ಕಡೆಗೆ ಇದೆ. ಪ್ರವಾಹವು ಆ ಕಡೆಗೆ ನಡೆದಿದೆ. ಈ ಪ್ರವಾಹವು ಧೀರ ಗಂಭೀರ ವಾಗಿ ವಿಶಾಲವಾಗಿ ಶಾಂತಿಸಾಗರಕ್ಕೆ ಕೂಡೀತು !

“ ರಾಜಾ ಈ ಆಸ್ತಿಕನು ನಿನ್ನ ಬಳಿಯಲ್ಲಿ ಪ್ರೇಮ ಭಿಕ್ಷೆಯನ್ನು ಬೇಡುತ್ತಿದ್ದಾನೆ. ಒಲ್ಲೆನೆನ ಬೇಡ. ಹಾಕು ಆ ಭಿಕ್ಷೆಯನ್ನು. ಭಾರತದ ಇತಿಹಾಸದಲ್ಲಿಯೇ ದಿವ್ಯವಾದ ಭಿಕ್ಷೆ. ರಾಜಾ ನೀನು ಕಠೋರನಿಲ್ಲ. ಜನ್ಮತಃ ಯಾರೂ ಕಠೋರರಿರುವದಿಲ್ಲ. ಕೊನೆಗೆ ಕಠೋರರಲ್ಲಿಯ ಕಠೋರತೆಯೂ ನೀರಾಗುವದು. ಕಠೋರತೆಯು ಆತ್ಮ ಚಂದ್ರನ ಮುಂದೆ ನಿಲ್ಲಲುಶಕ್ಯವಾಗುವದಿಲ್ಲ. ಕೊನೆಗೆ ಕರಗುವದು. ನೋಡು ನಿನ್ನ ಕಠೋರತೆಯು ಕರಗಿ ನೀರಾಯಿತು. ನಿನ್ನ ಕಣ್ಣುಗಳಿಂದ ನೀರು ಬರಹತ್ತಿದವು ”

‘ ಭಗವಾನ್, ನನ್ನನ್ನು ಕ್ಷಮಿಸಿರಿ. ಪಾಪಿಯಾದ ನನ್ನನ್ನೆ ಅಗ್ನಿಯಲ್ಲಿ ಹಾಕಿರಿ. ನಾನು ಅಪರಾಧಿ. ಈ ಸಾವಿರಾರು ಮಾತೆಯರ ಶಾಪದಿಂದ ನಾನು ಮೊದಲೇ ಸುಟ್ಟು ಹೋಗಿರ ಬಹುದು. ” ಎಂದು ಜನಮೇಜಯನು ಆಸ್ತಿಕನ ಪಾದಗಳಿಗೆರಗಿದನು.

“ ರಾಜಾ ಏಳು, ಏಳು. ಬಂದ ಮೋಡವು ಕರಗಿತು. ದ್ವೇಷವು ಮಾಯವಾಯಿತು. ನಿನ್ನ ಹೃದಯದಲ್ಲಿಯ ಧರ್ಮ ಸೂರ್ಯನು ಜಾಗೃತನಾದನು. ಇನ್ನೇಕೆ ಸಾಯಲು ಬಯಸುವೆ. ಈ ಸಾವಿರಾರು ತಾಯಂದಿರು ನಿನಗೆ ಆಶೀರ್ವದಿಸುತ್ತಿದ್ದಾರೆ. ನೋಡು ಅವರ ಮುಖ ಕಮಲಗಳು ಅರಳಿವೆ. ಅವರ ಕಣ್ಣುಗಳು ಪ್ರೇಮಾಶ್ರುಗಳಿಂದ ತುಂಬಿವೆ. ಅವು ಆಶೀರ್ವಾದದ ಆಶ್ರುಗಳು. ಇನ್ನು ಮರಣದ ಇಚ್ಛೆ ಮಾಡಬೇಡ. ಈಗ ನೀನು

ಚಿರಂಜೀವಿಯು. ಈಗ ನೀನು ಎಲ್ಲರಿಗೂ ಆಧಾರನು. ಈ ಐಕ್ಯವನ್ನು ಬೆಳೆಸು. ಎಲ್ಲ ಕಡೆಗೆ ತಿರುಗಾಡಿ ಈ ಐಕ್ಯ ಜೀವನಕ್ಕೆ ನೀರೆರೆ. ಮೊದಲಿನದೆಲ್ಲವನ್ನು ಮರೆತುಬಿಡು. ಕತ್ತಲೆಯಿಂದ ಪ್ರಕಾಶವು ಬರಲಿ " ಎಂದನು ಆಸ್ತಿಕ.

ಎಲ್ಲ ನಾಗ ಬಂದಿಗಳು ಮುಕ್ತ ಮಾಡಲ್ಪಟ್ಟರು. ಮಕ್ಕಳು ತಾಯಂದಿರನ್ನು ಅಪ್ಪಿದರು. ಪತ್ನಿಯರು ಪತಿಯ ಕಡೆಗೆ ಪ್ರೇಮ ದೃಷ್ಟಿಯಿಂದ ನೋಡಹತ್ತಿದರು. ಗೆಳೆಯರು ಗೆಳೆಯರನ್ನು ಭೆಟ್ಟಿಯಾದರು. ಅಲ್ಲಿ ಪ್ರೇಮ ಪ್ರವಾಹವೇ ಹರಿಯಿತು. ಜಯ ಜಯಕಾರವು ಗಗನವನ್ನು ಮುಟ್ಟಿತು. ' ರಾಜಾಧಿರಾಜ ಜನಮೇಜಯನಿಗೆ ವಿಜಯವಾಗಲಿ. ಭಗವಾನ್ ಆಸ್ತಿಕರಿಗೆ ವಿಜಯವಾಗಲಿ. ಶಾಂತಿ ಧರ್ಮದ ಹಾಗೂ ಐಕ್ಯ ಧರ್ಮದ, ಸಂಗ್ರಾಹಕ ಧರ್ಮದ ವಿಜಯವಾಗಲಿ' ಎಂದು ನಾನಾ ಬಗೆಯಾಗಿ ಜಯ ಘೋಷಗಳು ನಡೆದವು. ಹುಡುಗರು ಕುಣಿಯುತ್ತಿದ್ದರು. ಶಾಂತಿ ಧ್ವಜವು ಹಾರಹತ್ತಿತು. ನಾಗಾನಂದನು ಕೊಳಲನ್ನೂದ ಹತ್ತಿದನು. ಲಕ್ಷಾವಧಿ ಪ್ರಜೆಗಳು ಪ್ರೇಮ ಸಂಗೀತ ಸಾಗರದಲ್ಲಿ ಈಸಾಡ ಹತ್ತಿದರು.

ಜನಮೇಜಯನು ಭಾರತೀಯ ಪರಿಷತ್ತನ್ನು ಕರೆದನು. ರಾಜ ಮಹಾರಾಜರು, ಋಷಿ ಮುನಿಗಳು, ಇಂದ್ರನು ಬಂದರು. ನಾಗರ ನಾಯಕರು ನಾಗರ ರಾಜರು ಬಂದರು. ಲಕ್ಷಾವಧಿ ಆರ್ಯ ನಾಗರು ಬಂದರು. ಭವ್ಯವಾದ ದಿವ್ಯ ಸಭೆಯದು. ಈ ಮೊದಲು ಕೈದಿಯಾಗಿದ್ದವರೇ ಸರ್ವಾಲಂಕಾರಗಳಿಂದ ಸಭೆಯಲ್ಲಿ ಶೋಭಿಸುತ್ತಿದ್ದರು. ಮುಖ್ಯ ಆಸನದಲ್ಲಿ ಭಗವಾನ್ ಆಸ್ತಿಕರಿದ್ದರು. ಅವರ ಪಾದದ ಹತ್ತರ ಜನಮೇಜಯ, ಇಂದ್ರರು ಕುಳಿತಿದ್ದರು.

ಮೊದಲು ನಾಗಾನಂದನು ಕೊಳಲನ್ನೂದಿದನು. ಋಷಿಗಳು ಶಾಂತಿ ಮಂತ್ರವನ್ನು ಪಠಿಸಿದರು. ನಂತರ ಆಸ್ತಿಕರು ಮಾತಾಡಲು ಎದ್ದರು.

" ಇಂದು ಪರಮ ಮಂಗಲ ದಿವಸ. ಉಪನಿಷತ್‌ಗಳು ಇಂದು ಕೃತಾರ್ಥವಾದವು. ದೇವರು ನಮಗೆ ದಯತೋರಿಸಿ, ಈ ದಿನವನ್ನು ತಂದಿದ್ದಾನೆ. ನಾವು ನವಭಾರತದ ಇತಿಹಾಸವನ್ನು ಸುವರ್ಣಾಕ್ಷರಗಳಿಂದ

ಇಂದು ಬರೆಯುತ್ತಲಿದ್ದೇವೆ. ಭಿನ್ನ ಭಿನ್ನ ಜಾತಿಗಳು ಕುನಿಸಿಸ ಬುದ್ಧಿಯಿಂದ ಒಬ್ಬರಮೇಲೊಬ್ಬರು ಏರಿ ಹೋಗಿ ಹೊಡೆದಾಡುವದರ ಬದಲು ನಮ್ಮ ಸಂಸ್ಕೃತಿಯೇ ಶ್ರೇಷ್ಠ, ನಾವೇ ದೇವರಿಗೆ ಪ್ರೀಯರು, ಸದ್ಗುಣ ಸಂಪನ್ನರು, ಉಳಿದವರು ಶುಂಭರು ಹೀನರು, ಅಸಂಸ್ಕೃತ ಪಶುಗಳು ಎಂದು ತಿಳಿಯುವದರ ಬದಲು ಎರಡನೇ ಮಾನವ ವಂಶವನ್ನು ದಾಸರನ್ನಾಗಿ ಮಾಡಿ ಅವರನ್ನು ನಾಶ ಮಾಡುವದರ ಬದಲು, ಸರ್ವ ಮಾನವ ವಂಶದಲ್ಲಿ ದಿವ್ಯತೆ ಇದೆ. ಪ್ರತಿಯೊಂದು ಮಾನವ ಸಮಾಜದಲ್ಲಿ ಚಾರಿತ್ರ್ಯವೂ ಪ್ರತಿಭೆಯೂ ಇವೆ, ಹಾಗೂ ಆವರವರ ಸಂಸ್ಕೃತಿಯಲ್ಲಿ ವೈಶಿಷ್ಟ್ಯವಿದೆ, ಎಂಬುದನ್ನು ತಿಳಿದು, ಒಬ್ಬರಿಗೊಬ್ಬರು ಹತ್ತರಬಂದು ಮನಸ್ಸಿನಿಂದಲೂ ಬುದ್ಧಿಯಿಂದಲೂ ಹೆಚ್ಚು ಶ್ರೀಮಂತರಾಗಿ ಹೆಚ್ಚು ವಿಶಾಲರಾಗುವದು ಸರ್ವ ಮಾನವರ ಕರ್ತವ್ಯವಿದೆ. ಎಂಬ ಸಂಗತಿಯು ಭಾರತದಲ್ಲಿ ಇಂದು ಪ್ರಾಮುಖ್ಯವಾಗಿ ತಿಳಿಯಲ್ಪಡುತ್ತಿದೆ. ಇಲ್ಲಿಯ ವರೆಗೆ ಆದದ್ದನ್ನೆಲ್ಲ ಮರೆತುಬಿಡಬೇಕು. ಪರ್ವತ ಪ್ರಾಯ ಮಣ್ಣಿನಲ್ಲಿ ಒಂದು ಸುವರ್ಣದ ಕಣ ದೊರೆಯುತ್ತದೆ. ಅದನ್ನೇ ನಾವು ತೆಗೆದುಕೊಳ್ಳುತ್ತೇವೆ. ಅದರಂತೆಯೇ ಮಾನವಿ ಇತಿಹಾಸದಲ್ಲಿಯ ಅನೇಕ ಘಟನೆಗಳಲ್ಲಿ ಯಾವ ಸತ್ ಕಣ ಸಿಗುವದೋ ಅದನ್ನೇ ತೆಗೆದುಕೊಂಡು ಮುಂದೆ ಸಾಗಬೇಕು, ಅದೇ ನಮ್ಮ ಮುಂದಿನ ಮಾರ್ಗದರ್ಶಕ. ಭಾವೀ ಪೀಳಿಗೆಯ ಕೈಯಲ್ಲಿ ದ್ವೇಷದ ಹಳೆಯ ದೀವಟಿಗೆಯನ್ನು ನಾವು ಕೊಡಲಾರೆವು. ಪ್ರೇಮದ ಈ ಜ್ಯೋತಿಯನ್ನು ಕೊಡುವೆವು. ' ಈ ನಂದಾದೀಪವನ್ನು ಬೆಳೆಸುತ್ತ ನಡೆಯಿರಿ, ಎಂದು ಹೇಳುವೆವು. ನಮಗೆ ಸಿಕ್ಕ ಬಂಗಾರದ ಕಣವನ್ನು ಅವರಿಗೆ ಕೊಡೋಣ. ಹಳೆಯದನ್ನು ಕೆದರುತ್ತ ಕೂಡ್ರುವದರಲ್ಲಿ ಅರ್ಥವಿಲ್ಲ. ಅದರಲ್ಲಿಯ ಮಾಂಗಲ್ಯವನ್ನು ತೆಗೆದುಕೊಂಡು ಮುಂದೆ ಸಾಗೋಣ. ಒಬ್ಬ ಮುದುಕನ ಕಥೆಯು ನಿಮಗೆ ಗೊತ್ತಿರಬಹುದು. ಅವನಿಗೆ ಇಬ್ಬರು ಮಕ್ಕಳಿದ್ದರು ಅವರಲ್ಲಿ ಬುದ್ಧಿವಂತರು ಯಾರು ಎಂಬುದನ್ನು ನೋಡಬೇಕಾಗಿತ್ತು. ಇಬ್ಬರಿಗೂ ಎರಡು ಕೋಣೆಗಳನ್ನು ಕಟ್ಟಿಸಿಕೊಟ್ಟನು. ಅವರಿಗೆ ಸ್ವಲ್ಪ ದ್ರವ್ಯವನ್ನು ಕೊಟ್ಟು, ಯಾರು ಈ ದ್ರವ್ಯದಿಂದಲೇ ಈ ಕೋಣೆಯನ್ನು ತುಂಬಿ ತೋರಿಸುವರೊ ಅವರಿಗೆ ನನ್ನ ಸಂಪತ್ತನ್ನೆಲ್ಲ ಕೊಡುವೆನು ಎಂದನು. ಒಬ್ಬ ಹುಡುಗನು ಊರಲ್ಲಿಯ ಕಸವನ್ನೆಲ್ಲ ಅಲ್ಪ ಬೆಲೆಗೆ ತೆಗೆದು

ಕೊಂಡು ಕೋಣೆಯನ್ನು ತುಂಬಿದನು. ಇನ್ನೊಬ್ಬನು ಮಣ್ಣಿನ ಹತ್ತು ಪಣತಿಗಳನ್ನು ತೆಗೆದುಕೊಂಡು ಅವುಗಳಲ್ಲಿ ಎಂಣೆ ಹಾಕಿ ಮಂಗಲ ದೀಪ ವನ್ನು ಹಚ್ಚಿದನು. ತಂದೆಯು ಪರೀಕ್ಷೆಗೆ ಬಂದನು. ಒಂದು ಕೋಣೆ ಯಲ್ಲಿ ಕಸವನ್ನು ಇನ್ನೊಂದರಲ್ಲಿ ಮಂಗಲ ಶಾಂತ ಪ್ರಕಾಶವನ್ನು ಕಂಡನು. ನಾವು ಕೂಡಾ ಹಿಂದಿನ ಇತಿಹಾಸದಲ್ಲಿಯ ಹೊಲಸನ್ನು ಸಂಗ್ರಹಿಸದೆ, ಅದ ರಲ್ಲಿಯ ಪ್ರಕಾಶವನ್ನೇ ತೆಗೆದುಕೊಂಡು ಮುಂದೆ ಸಾಗೋಣ. ಎಲ್ಲ ರಾಜ ಮಹಾರಾಜರು, ಎಲ್ಲ ಋಷಿ ಮುನಿಗಳು, ಎಲ್ಲ ಆಶ್ರಮವಾಸಿಗಳು ಮತ್ತು ಪ್ರಜೆಗಳು ಈ ಐಕ್ಯದ ಕೂಸನ್ನು ಬೆಳೆಯಿಸಿರಿ.

" ತಕ್ಷಕ ವಂಶದ ನಾಯಕರೇ ಬನ್ನಿ. ನಿಮ್ಮ ಹಾಗು ಜನಮೇಜಯನ ಕೈಗಳನ್ನು ಕೂಡಿಸುವೆ. ಇನ್ನು ಮುಂದೆ ಈ ಕೈಗಳು ಪರಸ್ಪರರನ್ನು ಸಂರ ಕ್ಷಿಸಲಿ. ಕೈಗಳು ಪ್ರೇಮ ಸೇವೆಯನ್ನು ಮಾಡಲಿ. ಇಬ್ಬರೂ ಪರಸ್ಪರರು ಆಲಿಂಗನವನ್ನು ತೆಗೆದು ಕೊಳ್ಳಿರಿ. ಇಂದ್ರಾ, ! ನೀನು ಜನಮೇಜಯ ನನ್ನು ಅಪ್ಪಿಕೋ. ಭರತಖಂಡದಲ್ಲಿ ಇನ್ನು ಶಾಂತಿನೆಲೆಗೊಳ್ಳಲಿ. ಆನಂದವು ಹಬ್ಬಲಿ. ವಿವೇಕವು ಬೆಳೆಯಲಿ. ಜ್ಞಾನವು ಪ್ರಕಾಶಮಾನವಾಗಲಿ. ಸ್ನೇ ಹವು ದೃಢವಾಗಲಿ. ಸಹಕಾರವು ಬೆಳೆಯಲಿ. ಇಂದು ನನಗೆ ಧನ್ಯತೆ ಎನಿಸುತ್ತದೆ. ತಪೋಧನರಿಗೆ ಶಾಂತಿ ಪ್ರಕಾಶಕ್ಕಿಂತ ಹೆಚ್ಚಿನ ಆನಂದವೇ ನಿದೆ.? ನಿಜವಾದ ಧರ್ಮನಿಷ್ಠನು ಸುಮ್ಮ ಸುಮ್ಮನೆ ಕೇವಲ ಸ್ವಾರ್ಥಕ್ಕಾಗಿ ಜಗತ್ತಿನಲ್ಲಿ ಯುದ್ಧದ ಬೇಗೆಯನ್ನು ಹಬ್ಬಿಸಲಾರನು. ಈ ಬೆಂಕಿಯನ್ನು ಆರಿಸಲು ಪ್ರಯತ್ನಿಸುವನು. ತನ್ನ ಬಲಿದಾನವನ್ನು ಕೊಟ್ಟು ಪ್ರಯ ತ್ನಿಸುವನು. ಇಂದು ನೀವೆಲ್ಲರು ನಿಜವಾದ ಧರ್ಮನಿಷ್ಠರಾಗಿ ಶೋಭಿ ಸುವಿರಿ. ಇದನ್ನು ಕಂಡು ಪರಮೇಶ್ವರನಿಗೆ ಪ್ರೇಮವು ಉಕ್ಕೇರಿ ಬಂದಿರ ಬಹುದು.

ಆಸ್ತಿಕರು ಭಾವನಾಪರವಶರಾಗಿ ಕೆಳಗೆ ಮೋರೆ ಮಾಡಿ ಕುಳಿತರು. ಜನಮೇಜಯನು ಎದ್ದು ನಿಂತನು. ಮೊದಲು ಅವನ ಬಾಯಿಂದ ಮಾತುಗಳು ಹೊರಡಲಿಲ್ಲ. ಬಹಳ ಕಷ್ಟದಿಂದ ಅವನು ಮಾತನಾಡ ತೊಡಗಿದನು. " ನನ್ನನ್ನು ಕ್ಷಮಿಸಿರಿ. ನಾಗರೆಲ್ಲರು ಕ್ಷಮಿಸಿರಿ.

ಯಾರಿಗೆ ಮಾನಸಿಕ ಅಥವಾ ಶಾರೀರಿಕ ಕಷ್ಟವನ್ನು ನಾನು ಕೊಟ್ಟಿರುವೆನೋ ಅವರೆಲ್ಲರಿಗೆ ನಾನು ಕ್ಷಮೆ ಬೇಡುತ್ತೇನೆ. ಭಗವಾನ್ ಆಸ್ತಿಕರು ಇಂದು ನನಗೆ ಸನ್ಮಾರ್ಗವನ್ನು ತೋರಿಸಿದರು. ನಾವೆಲ್ಲರು ಅದೇ ಮಾರ್ಗದಿಂದ ಸಾಗುವಾ. ನಮ್ಮ ಈ ಸಂಗತಿಯು ಸ್ಮರಣಾರ್ಥವಾಗಿ ವರ್ಷದಲ್ಲಿಯ ಒಂದು ದಿವಸವನ್ನು ಗೊತ್ತುಮಾಡುವಾ. ಆಷಾಢ ಶ್ರಾವಣಗಳಲ್ಲಿ ಮಳೆ ಬಹಳ. ಮಳೆಯಾಗಿ ಅಡವಿಯಲ್ಲಿಯ ಹಾಗು ದೂರದಲ್ಲಿರುವ ಸರ್ಪಗಳ ಹುತ್ತುಗಳಲ್ಲಿ ಮಳೆ ನೀರು ತುಂಬಿತೆಂದರೆ, ಅವು ನಮ್ಮ ಆಶ್ರಯಕ್ಕಾಗಿ ಬರುವವು. ನಮ್ಮ ನಾಗ ಬಾಂಧವರು ಸರ್ಪಗಳ ಪೂಜೆಯನ್ನು ಮಾಡುತ್ತಾರೆ. ಆದ್ದರಿಂದ ನಾವು ಮಳೆಗಾಲದಲ್ಲಿ ಒಂದು ದಿವಸವನ್ನು ನಾಗ ಪೂಜೆಗಾಗಿಯೇ ಎಂದು ಗೊತ್ತು ಮಾಡೋಣ. ಶ್ರಾವಣ ಶುದ್ಧ ಪಂಚಮಿಯ ದಿವಸವೇ ನಾವು ಇದನ್ನು ಆಚರಿಸುವಾ- ಅದೇ ದಿವಸವೇ ನಾಗರ ದೊಡ್ಡ ಜಾತ್ರೆಯು ಸೇರುವದು. ಅದೇ ದಿವಸವನ್ನು ಅಖಿಲ ಭಾರತದಲ್ಲಿ ಆಚರಿಸುವಾ. ಆರ್ಯ ಹಾಗು ನಾಗರೆಲ್ಲ ಆ ದಿವಸ ನಾಗ ದೇವರ ಪೂಜೆಯನ್ನು ಮಾಡುವಾ. ಅಂದು ನಾವೆಲ್ಲ ಅಹಿಂಸೆಯನ್ನು ಪಾಲಿಸೋಣ. ಹುಳ ಹಾಗು ಇರುವೆಗಳಿಗೆ ಸಹ ದುಃಖಕೊಡಬಾರದು. ಎಲೆ ಹಾಗು ಹೂಗಳನ್ನು ಕೊಯ್ಯಬಾರದು. ಒಂದು ದಿನವಾದರೂ ಪ್ರೇಮದ ದಿವ್ಯ ದರ್ಶನವನ್ನು ತಕ್ಕೊಳ್ಳುವಾ. ಆ ದಿನ ನಾವು ನಗೋಣ, ಆಡೋಣ, ಕುಣಿಯೋಣ, ಜೋಕಾಲಿಯನ್ನಾಡೋಣ, ಕಥೆ ಹೇಳೋಣ ಈ ಗೊತ್ತುವಳಿಯು ತಮ್ಮೆಲ್ಲರಿಗೆ ಮಾನ್ಯವಿದೆಯೇ ?' ಎಂದನು.

ಎಲ್ಲ ರಾಜರು ತಲೆದೂಗಿದರು. ಋಷಿ, ಮುನಿಗಳು ಒಪ್ಪಿದರು. ನಾಗ ಜಾತಿಯ ತಕ್ಷಕ ವಂಶದ ಆ ತರುಣನು 'ನಾವು ಎಲ್ಲವನ್ನೂ ಮರೆಯೋಣ, ನಾವೆಲ್ಲ ಬಂಧುಗಳಾಗಿರೋಣ' ಎಂದನು. ವತ್ಸಲೆಯು ಅಲ್ಲಿಗೆ ಬಂದು 'ನಾನು ಮಹಾರಾಜ ಜನಮೇಜಯನಿಗೆ ಬಹಳ ಬಿರಿನುಡಿಗಳನ್ನಾಡಿದೆನು. ಅದಕ್ಕಾಗಿ ನನ್ನನ್ನು ಅವರು ಕ್ಷಮಿಸಬೇಕು' ಎಂದಳು. ಕೂಡಲೇ ಜನಮೇಜಯನು ಎದ್ದು ನಿಂತು "ನೀನು ಬಹಳ ದೊಡ್ಡ ಪತಿವ್ರತೆ. ರಾಜನ ಆಜ್ಞೆಗಿಂತ ಸದಸದ್ವಿವೇಕ ಬುದ್ಧಿಯು ಮೇಲೆಂಬುದನ್ನು ಇಂದು ನೀನು

ನಿರ್ಭಯಳಾಗಿ ಜಗತ್ತಿಗೆ ತೋರಿಸಿ ಕೊಟ್ಟಿರುವಿ. ರಾಜನ ಆಜ್ಞೆಯು ಯೋಗ್ಯ ವಿರದಿದ್ದರೆ ಅದನ್ನು ಕಾಲಲ್ಲಿ ತುಳಿಯುವದೇ ಪ್ರಜೆಗಳ ಕರ್ತವ್ಯ. ಹೀಗೆ ಮಾಡುವದರಿಂದಲೇ ರಾಜನು ಕರ್ತವ್ಯದಕ್ಷನಾಗುವನು. ರಾಜಾಜ್ಞೆಗೆ ತಲೆದೂಗುವದು ಪ್ರಜೆಗಳ ಕರ್ತವ್ಯವಲ್ಲ. ವತ್ಸಲೆಯೇ ನೀನೇ ಸದ್ಧರ್ಮದ ಮಾರ್ಗದರ್ಶಕಳು. ಆ ಸೈನಿಕರನ್ನು ಹಿಂದಕ್ಕೆ ಕಳಿಸಿ ಅವರಿಗೆ ಹೊಸ ಮಾರ್ಗವನ್ನು ತೋರಿಸಿದೆ. ಈ ಮದಾಂಧನನ್ನು ಕ್ಷಮಿಸು. ನಾನು ದೊಡ್ಡ ಅಪರಾಧಿಯು. ನನ್ನ ದುಃಖವನ್ನು ಶಮನಗೊಳಿಸಲು ನನಗೆ ನಿನ್ನ ಪಾದ ಗಳ ಮೇಲೆ ಬೀಳಗೊಡು ' ಎಂದನು.

ನಿಜವಾಗಿಯೂ ಜನಮೇಜಯನು ವತ್ಸಲೆಗೆ ನಮಸ್ಕರಿಸಿದನು. ಶಹಾ ಬಾಸ! ಶಹಾಬಾಸ! ಎಂದು ಎಲ್ಲರೂ ಕೂಗಿದರು. ' ಜನಮೇಜಯ ಹಾಗೂ ವತ್ಸಲೆಯರಿಬ್ಬರು ಒಂದೇ ದಿವಸ ಹುಟ್ಟಿದ್ದಾರೆ ಇಬ್ಬರ ಧ್ಯೇಯವು ಇಂದು ಒಂದೇ ಆಯಿತು ' ಎಂದಳು ಅಜ್ಜಿ ಸುಶ್ರುತೆ. ಉತ್ಸವವು ಮುಗಿ ಯಿತು. ಇಡೀ ಭರತಖಂಡವು ಒಂದೆಡೆ ಕೂಡಿತ್ತು. ಆನಂದದಿಂದ ಒಂದಾಗಿತ್ತು.

೨೧

ಪ್ರಯೋಗಪತಿಗೆ ಅತ್ಯಂತ ಆನಂದವಾಗಿತ್ತು ತಾನೇ ನೆಟ್ಟಗಿಡವು ಹಣ್ಣು ಕೊಡಹತ್ತಿದರೆ ಅವನಿಗೆಷ್ಟು ಆನಂದವಾದೀತು! ಎರಡನೆಯವರಿಗೆ ಆ ಆನಂದದ ಕಲ್ಪನೆಯು ಹೇಗೆ ಬಂದೀತು..? ಆರ್ಯ ಹಾಗು ನಾಗರ ಐಕ್ಯದ ಪ್ರಯೋಗವು ಯಶಸ್ವಿಯಾಗುವದೇ ಎಂಬ ಚಿಂತೆಯು ಬಾಧಿಸುತ್ತಿತ್ತು. ನಾವು ದಂಡೆಗೆ ಹತ್ತುವೆವೋ ಅಥವಾ ಬಿರುಗಾಳಿ ಎದ್ದು ಮುಳುಗುವೆವೋ? ಎಂಬ ಚಿಂತೆಯು ಹೆಚ್ಚುತ್ತಲಿತ್ತು. ಪ್ರಯೋಗಪತಿಯ ಶ್ರದ್ಧೆಯು ಪರೀಕ್ಷೆಯಿತ್ತು. ಅವನು ಪ್ರಯತ್ನವನ್ನು ನಡೆಸಿದ. ಶ್ರದ್ಧೆಗೆ ಜಯ ಸಿಕ್ಕಿತು. ಮೊದಲ ಹೆಜ್ಜೆಯನ್ನು ಇಟ್ಟನು.

ಪ್ರಯೋಗಪತಿಯು ಮಂಗಲಗೀತೆಗಳಿಂದ ಸ್ತುತಿಸಿ ಪರಮೇಶ್ವರನನ್ನು ಎಬ್ಬಿಸಿದನು. ಪ್ರಭುವು ಜಾಗ್ರತನಾದನು. ಪ್ರಯೋಗಪತಿಯ ಹಸನ್ಮುಖವನ್ನುನೋಡಿ, ಅವನಿಗೆ ಸಮಾಧಾನವೆನಿಸಿತು.

‘ ಮೊದಲನೆಯ ಪ್ರಯೋಗವು ಯಶಸ್ವಿಯಾಯಿತಷ್ಟೇ ? ’ ಎಂದನು ಪ್ರಭು

‘ ಅಹುದು ದೇವಾ ’ ಉತ್ತರವಿತ್ತನು ಪ್ರಯೋಗಪತಿ

“ ನಿಮ್ಮ ಪ್ರಯೋಗವು ಮುಂದೆ ನಡೆಯಲಿ. ಹೀರೆ ಮಾನವೀ ಪ್ರವಾಹವು ಭಾರತದಲ್ಲಿ ಬರಲಿ. ಐಕ್ಯದ ಹೆಜ್ಜೆಯು ಮುಂದೆ ಬೀಳಲಿ. ವಿವಿಧ ಧರ್ಮ, ವಿವಿಧ ಸಂಸ್ಕೃತಿಗಳು ಹತ್ತರ ಬರಲಿ. ಮೊದ ಮೊದಲು ಸ್ಪರ್ಧೆಯೊಗಬಹುದು. ಜಗಳಗಳಾಗಬಹುದು. ಕೊನೆಗೆ ಐಕ್ಯವು ಪ್ರಕಟವಾಗುವದು. ನನ್ನ ಕಣ್ಣೆದುರಿಗೆ ಎಲ್ಲ ಸಂಸ್ಕೃತಿಗಳ ಐಕ್ಯವು ಕಾಣುತ್ತಿದೆ.

ಭರತಭೂಮಿಯಲ್ಲಿ ನನ್ನ ಇಚ್ಛೆಯು ಪೂರ್ಣವಾದ ದೃಶ್ಯವನ್ನು ನಾನು ನೋಡುತ್ತಿದ್ದೇನೆ. ಆರ್ಯ ಹಾಗು ನಾಗರ ಐಕ್ಯವಾಗುವದರಲ್ಲಿ ಎಷ್ಟೋ ಅಡಚಣಿಗಳು ಬಂದವು ಆದರೆ ಮುಂದೆ ಬರುವ ಅಡೆ ತಡೆಗಳ ಮುಂದೆ ಇವು ಏನೂ ಅಲ್ಲ. ಇದಕ್ಕಿಂತ ಭಿನ್ನವಾದ ಪ್ರಶ್ನೆಗಳು ಉತ್ಪನ್ನ ವಾಗುವವು. ಆರ್ಯರು ನಾಗರ ಸಂಸ್ಕೃತಿಯನ್ನು ಅರಗಿಸಿಕೊಳ್ಳುವರು. ಆದರೆ ನಾಗರನ್ನು ಕೆಳಕೆಳಕ್ಕೆ ದೂಡುತ್ತ ಹೋಗುವರು. ಅವರನ್ನು ಅಸ್ಪೃಶ್ಯರಂತೆ ಮಾಡುವರು. ಅವರ ಹೊಲಮನೆಗಳನ್ನು ಕಸಿದುಕೊಳ್ಳುವರು. ಅವರನ್ನು ಪರಾವಲಂಬಿಗಳನ್ನಾಗಿ ಮಾಡುವರು. ಕೊನೆಗೆ ಅದು ಸ್ಪೃಶ್ಯ ಅಸ್ಪೃಶ್ಯದ ಜಗಳದಲ್ಲಿ ಪರಿಯವಸಾನವಾಗುವದು. ಅದಕ್ಕೂ ಬೆದರುವ ಕಾರಣವಿಲ್ಲ. ಎಷ್ಟೋ ಉದಾರ ಸ್ಪೃಶ್ಯರು ಅವರನ್ನು ಹತ್ತರ ಕರೆಯುವರು. ಮೆಲ್ಲ ಮೆಲ್ಲನೆ ಈ ಪ್ರಶ್ನೆಯು ಬಿಡುವದು. ಹೀಗೆಯೇ ಭಿನ್ನ ಭಿನ್ನ ಸಂಸ್ಕೃತಿಗಳಲ್ಲಿ ಜಗಳಗಳಾಗುವವು. ಆದರೆ ಮುಂದೆ ಪರಸ್ಪರರು, ಸ್ನೇಹದಿಂದಿರಲು ಕಲಿಯುವರು. ಜನರು ಎರಡೂ ಸಂಸ್ಕೃತಿಗಳ ಒಳ್ಳೇ ಗುಣಗಳನ್ನು ಸ್ವೀಕರಿಸುವರು. ಎರಡೂ ಧರ್ಮದಲ್ಲಿಯ ಸಾಧು ಸಂತರನ್ನು ಪೂಜಿಸುವರು. ಕೊನೆಗೆ ಸರ್ವರನ್ನು ಸಂರಕ್ಷಿಸುವ ಐಕ್ಯಕ್ಕೆ ವಿಜಯ ವಾಗುವದು. ಜೀವನದ ಸ್ವರೂಪವು ಸಂಹಾರವಿರದೆ, ಉಪಕಾರವಿದೆ ಎಂಬ ಮಾತು ಎಲ್ಲರಿಗೂ ಹೊಳೆಯುವದು. ದ್ವೇಷವು ಎಂದೂ ವಿಜಯಿಯಾಗುವದಿಲ್ಲ. ಆತ್ಮವು ಎಲ್ಲರನ್ನು ಭೆಟ್ಟಿಯಾಗಲು ಇಚ್ಛಿಸುತ್ತದೆ. ಸರ್ವೋದಯಕ್ಕಾಗಿ ನಿರಪೇಕ್ಷ ಬುದ್ಧಿಯಿಂದ ಸರ್ವಸ್ವವನ್ನು ತ್ಯಾಗ ಮಾಡುವ ಜನರ ಸುತ್ತಲೂ ಮಾನವೀ ಸಮಾಜವು ತಿರುಗಹತ್ತುತ್ತದೆ. ಈ ಬಗೆಯಾಗಿ ವಿರೋಧದೊಳಗಿಂದ ವಿಕಾಸವು ವಿಜಯಿಯಾಗಿ ಹೊರ ಬರುತ್ತದೆ. ಆದುದರಿಂದ ನೀನು ನಿರಾಶನಾಗಬೇಡ. ಕೊನೆಗೆ ಸತ್ಯಕ್ಕೆ ಜಯವಾಗುವದು ಎಂಬುವದರಲ್ಲಿ ಶ್ರದ್ಧೆಯನ್ನಿಡು. ಸತ್ಪ್ರವೃತ್ತಿಗಳಲ್ಲಿ ವಿಶ್ವಾಸವನ್ನಿಡು. ಪ್ರೇಮದಿಂದ ಮಾನವರು ಹತ್ತರ ಬರುವಂತೆ ಮಾಡು. ಪರಸ್ಪರರಲ್ಲಿಯ ಒಳ್ಳೆಯದನ್ನೇ ನೋಡಲು ಜನರಿಗೆ ಕಲಿಸು. ಈ ವಿಶಾಲವಾದ ಸುಂದರವಾದ ಭಾರತದೇಶದಲ್ಲಿ ಮಾನವತೆಯ ಐಕ್ಯದ ಪ್ರಯೋಗವು

ಸಂಪೂರ್ಣ ಯಶಸ್ವಿಯಾಗಲಿ. ಆದು ಯಶಸ್ವಿಯಾಗುವದೆಂಬುದನ್ನು ನಾನು ನೋಡುತ್ತಲೂ ಇದ್ದೇನೆ.'

"ಪ್ರಭೋ! ನಾವು ಪ್ರಯತ್ನಿಸುವೆವು. ಮಾನವರ ಅಂತರ್ಯಾಮಿಯು ಒಬ್ಬನೇ ಇರುವನೆಂದು ತಿಳಿದು ಜನರಿಗೆ ಆನಂದವಾದೀತು. ನೀನು ನಿನ್ನ ಧ್ಯಾನದಲ್ಲಿ ಮಗ್ನನಾಗು. ನಾವು ಶ್ರದ್ಧಾಪೂರ್ವಕವಾಗಿ ಪ್ರಯೋಗವು ಪರಿಪೂರ್ಣವಾಗುವಂತೆ ಯತ್ನಿಸುವೆವು. ಈ ದೇಶದಲ್ಲಿ ಆ ಪ್ರಯೋಗವು ಯಶಸ್ವಿಯಾದೊಡನೆಯೇ ನಿನ್ನನ್ನು ಕರೆಯುವೆವು. ಪ್ರಯೋಗದ ಫಲಗಳನ್ನು ನಿನ್ನ ಚರಣಗಳಲ್ಲಿ ಅರ್ಪಿಸುವೆವು" ಎಂದನು ಪ್ರಯೋಗಪತಿ.

ಪ್ರಭುವು ಧ್ಯಾನದಲ್ಲಿ ಮಗ್ನನಾದನು. ಪ್ರಯೋಗಪತಿಯು ಮಾನವೈಕ್ಯದ ಪ್ರಯೋಗದಲ್ಲಿ ತಲ್ಲೀನನಾದನು.

ಸಮಾಪ್ತ

ಮಿಂಚಿನಬಳ್ಳಿಯ ಪ್ರಕಟನೆಗಳಲ್ಲಿ ಈಗ ದೊರೆಯುವ ಪುಸ್ತಕಗಳು

೧	ಮಿಂಚಿದ ಮಹಿಳೆಯರು		೨-೦-೦
೨	ಜಾಗ್ರತ ಚೀನ		೨-೦-೦
೩	ರಾಷ್ಟ್ರಪತಿಗಳು		೪-೦-೦
೪	ಕಂನಾಡ ಸಾಹಿತ್ಯಜ್ಞರ ಆತ್ಮಕಥನ		೨-೦-೦
೫	ಗಾಂಧೀಜಿಯವರ ರಾಜಕೀಯ ಪತ್ರಗಳು		೨-೦-೦
೬	ಮಹಾತ್ಮರ ಸ್ವತಂತ್ರ ಭಾರತದ ರಾಜ್ಯಘಟನೆ		೧-೪-೦
೭	ಬೆಳಕಿನ ಬಾಳು		೨-೮-೦
೮	ಬಂಡಾಯದ ಇತಿಹಾಸ (೧೮೫೭)		೫-೦-೦
೯	ಬುದ್ಧ ಜಾತಕಗಳು		೨-೦-೦
೧೦	ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ		೧-೮-೦
೧೧	ಗಾಂಧೀ ಸೂತ್ರಗಳು		೨-೮-೦
೧೨	ಸಮಾಜ ದರ್ಶನ		೧-೮-೦
೧೩	ಮಾರ್ಕ್ಸವಾದ		೨-೦-೦
೧೪	ಗಾಂಧಿಯವರ ದಕ್ಷಿಣಯಾತ್ರೆ		೨-೪-೦
೧೫	ಆಹಾರ ವಿಜ್ಞಾನಸಾರ		೧-೪-೦
೧೬	ಭಕ್ತಿ ಸುಮನಾಂಜಲಿ	೩-೦-೦	೨-೮-೦
೧೭	ಕಲ್ಕಿ	೧-೮-೦	೧-೦-೦
೧೮	ಪಶ್ಚಿಮದ ಪ್ರತಿಭೆ ೧ನೆಯ ಭಾಗ	೨-೮-೦	೨-೦-೦
೧೯	ಬ್ಯಾಂಕ ವ್ಯವಸಾಯದ ಕೈಪಿಡಿ	೨-೮-೦	೨-೦-೦
೨೦	ಪಶ್ಚಿಮದ ಪ್ರತಿಭೆ ೨ನೆಯ ಭಾಗ	೨-೦-೦	೧-೮-೦
೨೧	ಆದರ್ಶರಾಜ್ಯ	೨-೮-೦	೨-೦-೦
೨೨	ಶ್ರೀ ಸಾನೆಗುರೂಜಿಯವರ ಚರಿತ್ರೆ ಹಾಗು ಅವರ ಕೃತಿಗಳು	೮-೦-೦	೬-೮-೦
೨೩	ಸೆರೆಮನೆಯ ಶೂರ		೨-೮-೦
೨೪	ಪ್ರಾರ್ಥನೆ (ಪ್ರಾರ್ಥನೆಯ ಬಗೆಗೆ ಗಾಂಧೀಜಿಯವರ ವಿಚಾರಗಳು)		೦-೮-೦
೨೫	ಹಾಸ್ಯ ಪ್ರಬಂಧಗಳು	೨-೮-೦	೨-೦-೦
೨೬	ಛತ್ರಪತಿ ಶಿವಾಜಿ		೦-೪-೦
೨೭	ವಿನೋಬಾ ಭಾವೆ		೦-೮-೦
೨೮	ಅಪೂರ್ವ ತ್ಯಾಗ (ಕಥಾಸಂಕಲನ)		೦-೧೨-೦
೨೯	ಆಸ್ತಿಕ		೩-೮-೦

ವ್ಯವಸ್ಥಾಪಕ, ಮಿಂಚಿನಬಳ್ಳಿ, ಧಾರವಾಡ.